ಕನಕಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ

(ಕನಕಪುರ ಪಟ್ಟಣವನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ
ವಿಭಾಗಕ್ಕೆ ಸಾದರಪಡಿಸುತ್ತಿರುವ ಎಂ.ಫಿಲ್. ಸಂಪ್ರಬಂಧ)

ಸಂಶೋಧಕರು
ರಾಮಕೃಷ್ಣಯ್ಯ ಡಿ.ಸಿ.

ಮಾರ್ಗದರ್ಶಕರು
ಡಾ. ರಮೇಶ ನಾಯಕ
ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

ಕನಕಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ

(ಕನಕಪುರ ಪಟ್ಟಣವನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ
ವಿಭಾಗಕ್ಕೆ ಸಾದರಪಡಿಸುತ್ತಿರುವ ಎಂ.ಫಿಲ್. ಸಂಪ್ರಬಂಧ)

ಸಂಶೋಧಕರು
ರಾಮಕೃಷ್ಣಯ್ಯ ಡಿ.ಸಿ.

ಮಾರ್ಗದರ್ಶಕರು
ಡಾ. ರಮೇಶ ನಾಯಕ
ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೬

ಪ್ರಮಾಣ ಪತ್ರ

ಕನಕಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ(ಕನಕಪುರ ಪಟ್ಟಣವನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು ಡಾ. ರಮೇಶ ನಾಯಕ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Ramakrishna

ದಿನಾಂಕ : 28/07/2016

ಸ್ಥಳ : ವಿದ್ಯಾರಣ್ಯ

ರಾಮಕೃಷ್ಣಯ್ಯ ಡಿ.ಸಿ.
ಎಂ.ಫಿಲ್. ಸಂಶೋಧನಾ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಕನಕಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ(ಕನಕಪುರ ಪಟ್ಟಣವನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ **ರಾಮಕೃಷ್ಣಯ್ಯ ಡಿ.ಸಿ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 28/07/2016
ಸ್ಥಳ : **ವಿದ್ಯಾರಣ್ಯ**

R Naik

ಡಾ. ರಮೇಶ ನಾಯಕ
ಸಹ ಪ್ರಾಧ್ಯಾಪಕರು ಹಾಗೂ
ಮಾರ್ಗದರ್ಶಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪರಿವಿಡಿ

ಅಧ್ಯಾಯ : ಒಂದು

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪. ಅಧ್ಯಯನದ ಸಮೀಕ್ಷೆ

೧.೫. ಅಧ್ಯಯನದ ಸ್ವರೂಪ

ಅಧ್ಯಾಯ : ಒಂದು

ಪ್ರಸ್ತಾವನೆ

ಪ್ರಸ್ತಾವನೆ

ಭಾರತದ ಚರಿತ್ರೆಯ ಬರವಣಿಗೆಯಲ್ಲಿ ಕೇವಲ ಹಲವು ರಾಜಮನೆತನಗಳ ಮತ್ತು ಸಾಮಂತರುಗಳ ಸಂಗತಿಗಳೇ ಹೆಚ್ಚು ದಾಖಲಾಗಿವೆ. ಮುಖ್ಯವಾಗಿ ಮೇಲುಸ್ತರದ ಪ್ರಭುತ್ವಕೇಂದ್ರಿತ ಅಂಶಗಳನ್ನೇ ಹೆಚ್ಚಿನ ಪ್ರಮಾಣದಲ್ಲಿ ಪ್ರತಿಬಿಂಬಿಸಲಾಗಿದೆ. ಈ ರೀತಿಯ ಚರಿತ್ರೆ ಬರವಣಿಗೆಯ ಕ್ರಮದಿಂದ ಕರ್ನಾಟಕ ಚರಿತ್ರೆಯೂ ಕೂಡ ಹೊರತಾಗಿಲ್ಲ. ಕೆಳಸ್ತರದ, ಜನಸಾಮಾನ್ಯರ ಹಾಗೂ ಸಮಾಜದ ಅಂಚಿನಲ್ಲಿರುವ ಇಂತಹ ಹತ್ತು ಹಲವು ಅಂಶಗಳು ಚರಿತ್ರೆ ಬರವಣಿಗೆಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಅವುಗಳಲ್ಲಿ ಸ್ಥಳೀಯ ಚರಿತ್ರೆಯೂ ಒಂದಾಗಿದೆ. ಚರಿತ್ರೆ ಪ್ರಭಾವಿ ಬರಹಗಳು ಸ್ಥಳೀಯ ಚರಿತ್ರೆಯನ್ನು ರಚಿಸಲು ಅನುವು ಮಾಡಿಕೊಡದಿರುವುದು ವಿಶಾಲ ವ್ಯಾಪ್ತಿಯ ಅಧ್ಯಯನಗಳಿಗೆ ತೊಡಕಾಗಿಯೂ ಪರಿಣಮಿಸಿವೆ. ಈ ಹಿನ್ನೆಲೆಯಲ್ಲಿ ಒಂದು ಪ್ರದೇಶದ ಕುರಿತಾದ ಎಲ್ಲಾ ಆಯಾಮಗಳನ್ನು ಒಳಗೊಂಡ ಅಧ್ಯಯನಗಳ ಅವಶ್ಯಕತೆ ಹೆಚ್ಚಾಗಿ ಕಂಡು ಬರುತ್ತವೆ.

ಮಾನವನ ಹುಟ್ಟಿನಿಂದ ಅವನ ಸರ್ವ ವಿಕಾಸಗಳ ವೈಶಿಷ್ಟ್ಯತೆ ಮತ್ತು ಸತ್ಯಾಸತ್ಯತೆಯಿಂದ ಕೂಡಿದ ಘಟನಾವಳಿಗಳನ್ನು ವಾಸ್ತವಕ್ಕೆ ಹತ್ತಿರವಾಗಿ ರೂಪಿಸುವುದು ಒಂದು ಪ್ರಮಾಣಬದ್ಧ ದಾಖಲೆಯಾಗಿದೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈಗಾಗಲೇ "ಒಪ್ಪಿತವಾದ" ಚರಿತ್ರೆಯು ಪ್ರಭುತ್ವದ ವೈಭವೀಕೃತ ಇತಿಹಾಸವನ್ನು ರಚಿಸುವಲ್ಲಿ ಆದ್ಯತೆ ನೀಡಿರುವುದು ಅವರ ಬರವಣಿಗೆಯ ಕ್ರಮಗಳಿಂದ ಕಂಡುಬರುತ್ತದೆ. ಅಂತಹ ಕೊರತೆ ನೀಗಿಸಲು ಸ್ಥಳೀಯ ಮತ್ತು ಗ್ರಾಮಚರಿತ್ರೆಯ ವಿವರಗಳನ್ನು ವಿಶಾಲ ತಳಹದಿ ಚರಿತ್ರೆ ಅಧ್ಯಯನಗಳಿಗೆ ಕೇಂದ್ರೀಕರಿಸಿ ಕಟ್ಟಿಕೊಡುವ ಪ್ರಯತ್ನಗಳು ಇತ್ತೀಚಿನ ದಿನಗಳಲ್ಲಿ ನಡೆಯುತ್ತಿವೆ. ಈವರೆಗೂ ರಾಜಮನೆತನಗಳ, ಸಾಮಂತರ, ಪ್ರಬಲ ವರ್ಗದವರ, ಅಧಿಕಾರಿ ವರ್ಗಗಳ ಸಂಗತಿಗಳೇ ಪ್ರಧಾನವಾಗಿ ಚರಿತ್ರೆಯಲ್ಲಿ ಕೇಂದ್ರೀಕೃತವಾಗಿರುವುದನ್ನು ಕಾಣುತ್ತೇವೆ. ಇಂತಹ ಪರಿಣಾಮಗಳಿಂದಾಗಿ ಸಮಾಜದ ಅಂಚಿನಲ್ಲಿರುವ ಜನಸಾಮಾನ್ಯರ ಚರಿತ್ರೆ ವಿವರಗಳನ್ನು ದೂರವಿಡಲಾಗಿದೆಯೆಂದು ಅಭಿಪ್ರಾಯಿಸ ಬಹುದು. ಅಲ್ಲದೇ ಅದೇ ವೇಳೆಗೆ ಇಂತಹ ಬಹುಮುಖ್ಯವಾದ ತೊಡಕುಗಳನ್ನು ನಿವಾರಿಸಲು

ಇತ್ತೀಚಿನ ದಿನಗಳಲ್ಲಿ ಇತಿಹಾಸದ ಬರವಣಿಗೆಯ ಕ್ರಮಗಳು ಬದಲಾಗುತ್ತಿವೆ ಎಂಬುದು ಅಷ್ಟೇ ಆರೋಗ್ಯಕರವಾದುದು. ಇಂತಹ ಉದ್ದೇಶಗಳನ್ನಿಟ್ಟುಕೊಂಡೇ ಪ್ರಸ್ತುತ ಅಧ್ಯಯನ ಪೂರೈಸುವ ಪ್ರಯತ್ನ ಮಾಡಲಾಗಿದೆ.

ಬದಲಾವಣೆಗೊಂಡ ಕಾಲಘಟ್ಟಗಳಲ್ಲಿ ರಾಜಪ್ರಭುತ್ವದ ಆಳ್ವಿಕೆ, ಅವರ ಜೀವನ ಮತ್ತು ಸಾಧನೆಗಳನ್ನೇ ಉಜ್ವಲಿಸಿದ ರಾಷ್ಟ್ರದ, ರಾಜ್ಯದ ಘಟನೆಗಳೆಂಬಂತೆ, ಅವುಗಳೇ ಸಾರ್ವಕಾಲಿಕ ಸತ್ಯ ಎಂಬಂತೆ ಚರಿತ್ರೆಯಲ್ಲಿ ನಿರೂಪಿಸಲಾಗಿದೆ. ಅಲ್ಲದೆ ಮೇಲುಸ್ತರದ ಸಂಸ್ಕೃತಿಗಳ ಕುರಿತಿರುವ ಬರವಣಿಗಳಲ್ಲಿ ಸ್ಥಳೀಯ ಸಂಸ್ಕೃತಿ ಹಾಗೂ ಚರಿತ್ರೆಯ ಸೂಕ್ಷ್ಮ ಘಟನೆಗಳನ್ನು ಪ್ರಸ್ತುತದಲ್ಲಿ ನೋಡಬೇಕಾಗಿದೆ. ಇತಿಹಾಸ ಅಧ್ಯಯನದ ಚೌಕಟ್ಟಿನೊಳಗೆ ಚರಿತ್ರೆಯನ್ನು ಹೊಸದಾಗಿ ಕಟ್ಟುವುದು ಇತಿಹಾಸಕಾರನ ಮೇಲಿರುವ ಮುಖ್ಯ ಜವಾಬ್ದಾರಿಯಾಗಿದೆ. ಈ ಹಿನ್ನೆಲೆಯಲ್ಲಿ ನಿರ್ಲಕ್ಷ್ಯಕ್ಕೆ ಒಳಪಟ್ಟಿರುವ ಕನಕಪುರ ಪರಿಸರದ ಚರಿತ್ರೆಯನ್ನು ಕಟ್ಟುವ ಅವಶ್ಯಕತೆಯಿದ್ದು "ಕನಕಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯಡಿಯಲ್ಲಿ ಸ್ಥಳೀಯ ಚರಿತ್ರೆಯ ವಿವಿಧ ಆಯಾಮಗಳ ಮೂಲಕ ಕನಕಪುರ ಪಟ್ಟಣವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಈ ಪರಿಸದ ಸುತ್ತಮುತ್ತಲಿನ ಸ್ಥಳಗಳಲ್ಲಿ ಕಂಡುಬರುವ ಪ್ರಾಗಿತಿಹಾಸ ಕಾಲಕ್ಕೆ ಸೇರಿದ ಶಿಲಾಯುಗದ ಹೊಸ ನೆಲೆಗಳ ಶೋಧಗಳನ್ನು ಸಹ ಪ್ರಸ್ತುತ ಅಧ್ಯಯನ ಸಂದರ್ಭದಲ್ಲಿ ನಡೆಸಲಾಗಿದೆ.

ಕರ್ನಾಟಕದ ಈ ಜಿಲ್ಲೆಯು ರೇಶ್ಮೆನಾಡು ಎಂದು ಪ್ರಸಿದ್ಧಿಯಾಗಿರುವ ರಾಮನಗರ ಜಿಲ್ಲೆಯಲ್ಲಿ ಕನಕಪುರ ಪರಿಸರವು ಕೇಂದ್ರೀಕೃತವಾಗಿದೆ. ಈ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಕನಕಪುರ ಒಂದಾಗಿದೆ. ಕನಕಪುರ ತಾಲೂಕಿನ ಕೇಂದ್ರಸ್ಥಾನ ಕನಕಪುರ ಪಟ್ಟಣವಾಗಿದೆ. ಈ ಪಟ್ಟಣವು ರಾಜಧಾನಿ ಬೆಂಗಳೂರಿನಿಂದ ದಕ್ಷಿಣ ದಿಕ್ಕಿಗೆ ಸುಮಾರು ೫೬ ಕಿ.ಮೀ. ದೂರದಲ್ಲಿದೆ. ಈ ಪ್ರದೇಶದ ಸುತ್ತಮುತ್ತ ಬಾಣಂತಿ ಮಾರಮ್ಮನಬೆಟ್ಟ, ಬಿಳಿಕಲ್ಲುಬೆಟ್ಟ, ಪತ್ರದಾರಿಬೆಟ್ಟ, ಗಂಗಾಧರಬೆಟ್ಟ ಮುಂತಾದ ಬೆಟ್ಟಸಾಲುಗಳಿವೆ. ದಟ್ಟವಾಗಿರುವ ಅರಣ್ಯಪ್ರದೇಶವು ಈ ಪರಿಸರದ ಪ್ರಕೃತಿಯ ಸೌಂದರ್ಯವನ್ನು ಇನ್ನಷ್ಟು ಹೆಚ್ಚಿಸಿದೆ. ಇಲ್ಲಿನ ಭೌಗೋಳಿಕ ಪರಿಸರವು ಅರೆಮಲೆನಾಡೆಂದು ಪ್ರಸಿದ್ಧಿಯಾಗಿದ್ದು ಬೆಲೆಬಾಳುವ ಗಿಡ-ಮರಗಳು, ಖನಿಜಸಂಪತ್ತು ಮತ್ತು ಗ್ರಾನೈಟ್ ಶಿಲೆಗಳಿಂದ ಆವರಿಸಿದೆ. ಈ ಪ್ರದೇಶದ ಜನರು ವಾಣಿಜ್ಯ ಕೃಷಿ ಬೆಳೆಯಾದ ರೇಶ್ಮೆ ಬೆಳೆಯ ಮೇಲೆ ಹೆಚ್ಚು ಅವಲಂಬಿತವಾಗಿದ್ದು ಇದು ಇಲ್ಲಿನ ಜನರ ಆರ್ಥಿಕತೆಯ ಅಭಿವೃದ್ಧಿಗೆ ಸಹಾಯಕವಾಗಿದೆ.

ಪ್ರಸ್ತುತ ದಿನಗಳಲ್ಲಿ ನಮ್ಮ ಸ್ಥಳೀಯ ಪರಂಪರೆಯ ಚರಿತ್ರೆಯನ್ನು ಅಧ್ಯಯನ ಮಾಡುವುದಕ್ಕೆ ಐತಿಹಾಸಿಕ ಪ್ರಜ್ಞೆ ಅವಶ್ಯಕವಾಗಿದೆ. ಈ ರೀತಿಯಾದ ಸ್ಥಳೀಯ ಚರಿತ್ರೆಯ ಅಧ್ಯಯನದಿಂದ ಕನಕಪುರ ಪರಿಸರದ ಇತಿಹಾಸವನ್ನು ಕ್ರಮಬದ್ಧವಾಗಿ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ. ಕನಕಪುರದ ಇತಿಹಾಸ ರಚನೆಗೆ ಪ್ರಾಕ್ತನಶಾಸ್ತ್ರಗಳಾದ ಶಾಸನಗಳು, ಸ್ಮಾರಕಗಳು, ವೀರಗಲ್ಲುಗಳು,

ಕೋಟೆ-ಕೊತ್ತಲುಗಳು, ದೇವಾಲಯಗಳು, ಮಸೀದಿಗಳು ಮತ್ತು ಚರ್ಚ್‌ಗಳು ಆಕರಗಳಾಗಿ ನಿಲ್ಲುತ್ತವೆ.

ಕನಕಪುರ ಪರಿಸರವು ಪ್ರಾಗಿತಿಹಾಸ ಕಾಲಕ್ಕೆ ಸೇರಿದ ನವಶಿಲಾಯುಗದ ಮಾನವನ ವಸತಿನೆಲೆಯಾಗಿತ್ತೆಂದು ತಿಳಿದುಬರುತ್ತದೆ. ಈ ತಾಲೂಕಿನ ಸಂಬಾಪುರ ಪರಿಸರದಲ್ಲಿ ದೊರೆತಿರುವ ಪ್ರಾಚ್ಯಾವಶೇಷಗಳಾದ ಕೈಗೊಡಲಿ, ಕೈಬಾಚಿ ಇತ್ಯಾದಿ ಪರಿಕರಗಳಿಂದ ನವಶಿಲಾಯುಗದ ಕಾಲವನ್ನು ಗುರುತಿಸಬಹುದಾಗಿದೆ. ಬೃಹತ್ ಶಿಲಾಯುಗ ಕಾಲಕ್ಕೆ ಸೇರಿದ ಹಲವಾರು ಅವಶೇಷಗಳು ಈ ತಾಲೂಕಿನ ಹರಿಹರ, ಸಂಬಾಪುರ, ತಿಗಳರಹೊಸಹಳ್ಳಿ, ಗುತ್ತಲಹುಣಸೆ, ಬನವಾಸಿ ಮತ್ತು ಉದಾರಹಳ್ಳಿ, ತೆಂಗಿನಕಲ್ಲು ಮುಂತಾದ ಪ್ರದೇಶಗಳಲ್ಲಿ ಕಂಡುಬರುತ್ತವೆ. ಮುಖ್ಯವಾಗಿ ಬೃಹತ್ ಶಿಲಾಗೋರಿಗಳು ಮತ್ತು ಮಡಕೆ ಚೂರುಗಳು ದೊರಕಿವೆ. ಶವದ ಜೊತೆಯಲ್ಲಿ ಇಡುತ್ತಿದ ದಿನನಿತ್ಯ ಬಳಕೆಯ ಕೆಲವು ವಸ್ತುಗಳ ಅವಶೇಷಗಳು ಸಹ ಈ ಪ್ರವೇಶದ ಬೃಹತ್‌ಶಿಲಾ ಗೋರಿಗಳಲ್ಲಿ ದೊರೆತಿವೆ. ಅಲ್ಲದೇ ಸೂಳೆಕಲ್‌ಮಠದ ಬೆಟ್ಟದಲ್ಲಿರುವ ಗುಹಾಚಿತ್ರಗಳು ಕ್ರಿ. ಪೂ. ೮೦೦ರ ಕಾಲದ್ದು ಎಂಬುದಾಗಿ ಅಂದಾಜಿಸಲಾಗಿದೆ. ಇಂಥ ವಿವರಗಳ ಕುರಿತು ಸಂಪ್ರಬಂಧದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಕನಕಪುರ ಪರಿಸರದ ಚಾರಿತ್ರಿಕ ಹಿನ್ನೆಲೆಯನ್ನು ಕಂಡುಕೊಳ್ಳುವಲ್ಲಿ ಅಲ್ಲಿನ ಶಾಸನಗಳು ಮತ್ತು ಸಾಹಿತ್ಯಾಧಾರಗಳು ಅನುಕೂಲವಾಗಿದ್ದು. ಶಾಸನಗಳಲ್ಲಿ ಕನಕಪುರ ಪರಿಸರದ ಸ್ಥಳನಾಮವು 'ಕಾಣೆಕಾರನಹಳ್ಳಿ' 'ಕಾಣಿಕಾರನಹಳ್ಳಿ' 'ಕಾನಕಾನಹಳ್ಳಿ' 'ಸಿಗಲನಾಡು' 'ಮುದಗೊಂಡ ಚೋಳಮಂಡಲ' ಎಂಬ ಉಲ್ಲೇಖಗಳಿಂದ ದಾಖಲೆಗೊಂಡಿವೆ. ಈ ವಿವರಗಳ ಕುರಿತು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಕನಕಪುರ ಪರಿಸರದ ರಾಜಕೀಯ ಇತಿಹಾಸ ಗಂಗರ ಕಾಲದಿಂದ ಆರಂಭಗೊಳ್ಳುತ್ತದೆ. ಇದು ಗಂಗವಾಡಿ ೯೬.೦೦೦(ತೊಂಬತ್ತಾರು ಸಾವಿರ) ಸೀಮೆಗೆ ಸೇರಿತ್ತು. ನಂತರದಲ್ಲಿ ಚೋಳರ, ಹೊಯ್ಸಳ, ವಿಜಯನಗರ ಅರಸರ, ಪಾಳೇಗಾರರ, ಮೈಸೂರು ಒಡೆಯರ ಆಳ್ವಿಕೆಗೊಳಪಟ್ಟಿತ್ತು. ಹೀಗೆ ಈ ಪರಿಸರವು ಚರಿತ್ರೆಯಲ್ಲಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಈ ಮೇಲಿನ ರಾಜಮನೆತನಗಳ ಆಡಳಿತಾವಧಿಯಲ್ಲಿ ಕನಕಪುರ ಪಟ್ಟಣದಲ್ಲಿ ನಿರ್ಮಾಣಗೊಂಡಿರುವ ದೇವಾಲಯ ಮತ್ತು ಮೂರ್ತಿಶಿಲ್ಪಗಳು, ಕೋಟೆ-ಕೊತ್ತಲಗಳು, ಕೆರೆಕಟ್ಟೆಗಳು, ಶಾಸನಗಳು ಹಾಗೂ ಮೌಖಿಕ ಆಕರಗಳನ್ನು ಸಂಗ್ರಹಿಸಿ ವಿಶ್ಲೇಷಿಸುವ ಮೂಲಕ ಕನಕಪುರ ಪರಿಸರದ ಸಾಂಸ್ಕೃತಿಕ ಅಧ್ಯಯನದ ಚರಿತ್ರೆಯನ್ನು ಕಟ್ಟುವ ಪ್ರಯತ್ನ ಮಾಡಲಾಗಿದೆ.

ವಸಾಹತು ಕಾಲದಲ್ಲಿ ಕಾವೇರಿ ನದಿ ಹರಿವಿನ ಪ್ರದೇಶವಾದ ಶಿವನ ಸಮುದ್ರದ ಬಳಿ ಏಷ್ಯಾದಲ್ಲಿಯೇ ಮೊಟ್ಟ ಮೊದಲಿಗೆ ೧೯೦೨ರಲ್ಲಿ ಜಲವಿದ್ಯುತ್ತನ್ನು ಉತ್ಪಾದಿಸಿ, ಕನಕಪುರದಲ್ಲಿರುವ ವಿದ್ಯುತ್ ಕೇಂದ್ರದಲ್ಲಿ ಅದನ್ನು ಸಂಗ್ರಹಿಸಿ ಅಲ್ಲಿಂದ ವಸಾಹತು ಕರ್ನಾಟಕದ ಭೌಗೋಳಿಕ ಎಲ್ಲೆಗೊಳಪಟ್ಟಿದ್ದ ಚಿನ್ನದ ಗಣಿಯಾದ ಕೋಲಾರಕ್ಕೆ ಮತ್ತು ಬೆಂಗಳೂರಿನ ಕಾರ್ಖಾನೆಗಳಿಗೆ

ಸರಬರಾಜು ಮಾಡಲಾಗುತ್ತಿತ್ತು. ಭಾರತದ ಸ್ವಾತಂತ್ರ್ಯ ಹೋರಾಟ ಚಳುವಳಿ ಹಾಗೂ ಕರ್ನಾಟಕದ ಏಕೀಕರಣ ಚಳುವಳಿಗಳಲ್ಲಿಯೂ ಕನಕಪುರ ಮಹತ್ವದ ಪಾತ್ರ ವಹಿಸಿದ್ದು ಮಹಾತ್ಮಗಾಂಧಿಯವರು ೭ನೇ ಆಗಸ್ಟ್ ೧೯೨೭ ಹಾಗೂ ೧೯೩೪ರ ೬ನೇ ಜನವರಿಯಂದು ಕಾನಕಾನಹಳ್ಳಿಗೆ(ಕನಕಪುರ) ಭೇಟಿ ನೀಡಿ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿ ಜನರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವಂತೆ ಹುರಿದುಂಬಿಸಿದರು. ಇವರ ಪ್ರಭಾವಕ್ಕೆ ಒಳಗಾದ ಎಸ್.ಕರಿಯಪ್ಪನವರು, ಡಿ.ವಿ. ಸುಬ್ರಹ್ಮಣ್ಯ ಅಯ್ಯರ್, ಗುರಿಕಾರ್ ರಂಗೇಗೌಡರು, ಹೆಚ್.ಎಸ್. ದೊರೆಸ್ವಾಮಿ, ಅಜರ್ ಆಲಿ, ಚಿಕ್ಕಸಿದ್ದಯ್ಯ, ಕೆ.ಎಸ್. ನರಸಿಂಹಶಾಸ್ತ್ರಿಗಳು, ಸೀತಾರಾಂ ಮುಂತಾದವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕನಕಪುರವು ಐತಿಹಾಸಿಕ ಕಾಲಘಟ್ಟದಿಂದಲೂ ಹಲವು ಧರ್ಮಗಳು, ವಿವಿಧ ಜನಸಮುದಾಯಗಳು ಮತ್ತು ಬಹುಸಂಸ್ಕೃತಿಯನ್ನು ತನ್ನೊಡಲಿನಲ್ಲಿಟ್ಟುಕೊಂಡು ಪೋಷಿಸಿ ಬೆಳೆಸುತ್ತಾ ಬಂದಿರುವ ಗಮನಾರ್ಹವಾದ ಪ್ರದೇಶವಾಗಿದೆ. ಈವರೆಗೂ ಕನಕಪುರ ಪರಿಸರವನ್ನು ಅನುಲಕ್ಷಿಸಿ(ತಾಲೂಕನ್ನು) ಸಮಗ್ರವಾದ ಹಲವು ಅಧ್ಯಯನಗಳು ನಡೆದಿದ್ದರೂ ಅವುಗಳಲ್ಲಿ ಕನಕಪುರ ಪಟ್ಟಣವನ್ನೇ ಕೇಂದ್ರೀಕರಿಸಿ ಇಲ್ಲಿಯವರೆಗೂ ಅಧ್ಯಯನಗಳು ರೂಪಗೊಂಡಿರುವುದು ವಿರಳಾತಿ ವಿರಳ. ಅಂತಹ ಕೊರತೆಯನ್ನು ನೀಗಿಸುವಲ್ಲಿ ಸ್ಥಳೀಯ ಚರಿತ್ರೆಯ ಹಿನ್ನೆಲೆಯಲ್ಲಿ ಕನಕಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ ಮಾಡಲು ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದು ಪಟ್ಟಣ ಪರಿಸರಕ್ಕೆ ಸಂಬಂಧಿಸಿದ ಬಹು ಆಯಾಮವುಳ್ಳ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ನಿಷ್ಕರ್ಷಿಸುವ ಮುಖ್ಯ ಉದ್ದೇಶ ಹೊಂದಿದೆ.

೧.೧. ಅಧ್ಯಯನದ ಉದ್ದೇಶ

ಪ್ರಸ್ತುತ ಕಾಲದಲ್ಲಿ ಚರಿತ್ರೆಯ ಗ್ರಹಿಕೆಗಳಿಂದ ಮಾನವನ ಗ್ರಹಿಕೆಗಳು ಕೂಡ ಬದಲಾಗುತ್ತಿವೆ. ಪ್ರತಿಯೊಂದು ಪ್ರದೇಶಕ್ಕೂ ತನ್ನದೇ ಆದ ವಿಶಿಷ್ಟವಾದ ಚರಿತ್ರೆ ಇದ್ದೇ ಇರುತ್ತದೆ. ಸ್ಥಳೀಯ ಚರಿತ್ರೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಉತ್ತಮ ಫಲಿತಾಂಶಗಳು ವ್ಯಕ್ತವಾಗುವುದಲ್ಲದೆ, ಅವುಗಳ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ನಿಚ್ಚಳವಾಗಿ ಕಂಡುಬರುತ್ತವೆ. ಇಂತಹ ಇತಿಹಾಸದ ಅಧ್ಯಯನ ಕೈಗೊಳ್ಳುವಾಗ ಚಾರಿತ್ರಿಕ ದೃಷ್ಟಿಯಿಂದ ಪರಿಶೀಲಿಸುವುದು ಉಪಯುಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವೂ ಕೆಳಕಂಡ ಉದ್ದೇಶಗಳನ್ನು ನಿರೂಪಿಸಲು ಪ್ರಯತ್ನಿಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಕನಕಪುರದ ಪರಿಸರದ ಒಟ್ಟಾರೆ ಸಾಂಸ್ಕೃತಿಕ ಸಂಗತಿಗಳನ್ನು ವ್ಯವಸ್ಥಿತವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಈ ಪರಿಸರದಲ್ಲಿ ಲಭ್ಯವಿರುವ ಪುರಾತತ್ವ ಆಕರಗಳನ್ನು ಸಂಗ್ರಹಿಸಿ ಅವುಗಳನ್ನು ವಿಶ್ಲೇಷಿಸಿ ವಿವರಗಳನ್ನು ಅಧ್ಯಯನಗಳಲ್ಲಿ ದಾಖಲಿಸಲಾಗಿದೆ. ಈ ಹಿನ್ನೆಲೆಯಲ್ಲಿ "ಕನಕಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯಡಿಯಲ್ಲಿ ಇಲ್ಲಿನ ಸ್ಥಳೀಯ ಚರಿತ್ರೆ ಕಟ್ಟಿಕೊಡಲಾಗಿದೆ. ಪ್ರಾಗಿತಿಹಾಸದ ಕಾಲದಿಂದಲೂ ಕನಕಪುರ

ಪ್ರದೇಶದ ಸುತ್ತಮುತ್ತಲಿನ ಸ್ಥಳಗಳಲ್ಲಿ ಶಿಲಾಯುಗದ ಜನವಸತಿ ನೆಲೆಗಳು ಕಂಡುಬಂದಿವೆ. ಇದಕ್ಕೆ ಪುರಾವೆಯಾಗಿ ಕೆಲವು ಪ್ರಾಚ್ಯಾವಶೇಷಗಳು ದೊರೆತಿವೆ. ಈ ಹಿನ್ನೆಲೆಯಿಂದ ಅಧ್ಯಯನದ ಅವಧಿಯಲ್ಲಿ ಪ್ರಾಗಿತಿಹಾಸ ಕಾಲದ ಹೊಸ-ಹೊಸ ನೆಲೆಗಳ ಶೋಧನೆ ಮಾಡುವ ಪ್ರಯತ್ನ ಮಾಡಲಾಗಿದೆ. ಕೆಳಸ್ತರದ ಮತ್ತು ಅಂಚಿನಲ್ಲಿರುವ ವಿವಿಧ ಸಮುದಾಯಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಕೇಂದ್ರೀಕರಿಸಲಾಗಿದೆ. ಈ ಪ್ರದೇಶವು ಹಲವು ರಾಜಮನೆತನಗಳ ಆಳ್ವಿಕೆಗೊಳಪಟ್ಟು ಅವರ ಅಧೀನದಲ್ಲಿದ್ದ ಸಾಮಂತರ, ಪಾಳೇಗಾರರು ಹೊಂದಿದ್ದ ಇತಿಹಾಸವನ್ನು ಲಭ್ಯವಿರುವ ವಿವಿಧ ಆಕರಗಳನ್ನು ಅನ್ವಯಿಸಿಕೊಂಡು ಪರಿಶೀಲಿಸಲಾಗಿದೆ. ಕನಕಪುರದ ಪರಿಸರದಲ್ಲಿ ಜೈನ, ವೈಷ್ಣವ, ಶೈವ ಇತ್ಯಾದಿ ಪಂಥಗಳ ಕುರುಹುಗಳು ಲಭ್ಯವಿದ್ದು ಈವರೆಗೂ ಅವುಗಳ ಕುರಿತಂತೆ ಬಿಡಿಬಿಡಿ ಲೇಖನಗಳು ಬಂದಿರುವುದನ್ನು ಕಾಣಬಹುದಾಗಿದೆ. ಇವೆಲ್ಲವನ್ನು ಸಮಷ್ಟೀಕರಿಸುವ ಪ್ರಯತ್ನದಿಂದ ಈ ಪ್ರದೇಶದಲ್ಲಿ ಪರಿವರ್ತನೆಗೆ ಕಾರಣವಾದ ಪ್ರಭಾವಿ ಅಂಶಗಳಾಗಿರುವ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳ ಬದಲಾವಣೆ ಹಾಗೂ ಬೆಳವಣಿಗೆಗಳನ್ನು ಕುರಿತು ವಿವರವಾಗಿ ಚರ್ಚಿಸಲಾಗಿದೆ. ಕಾನಕಾನಹಳ್ಳಿಯಿಂದ ಕನಕಪುರ ಪಟ್ಟಣವಾಗಿ ಇಂದು ನಗರಸಭೆಯಾಗಿ ನಗರೀಕರಣ ಪ್ರಕ್ರಿಯೆಯಲ್ಲಿ ತೀವ್ರವಾದ ಬೆಳವಣಿಗೆಗೊಂಡು ಇತಿಹಾಸದಲ್ಲಿ ಹೇಗೆ ಮುಖಾಮುಖಿಯಾಗುತ್ತಿದೆ ಎಂಬುದನ್ನು ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಕನಕಪುರ ಪರಿಸರದ ಕ್ಷೇತ್ರಕಾರ್ಯ ಕೈಗೊಂಡು ಈ ಪ್ರದೇಶದಲ್ಲಿರುವ ಐತಿಹ್ಯಗಳು ಹಾಗೂ ಮೌಖಿಕ ಕಥನಗಳನ್ನು ದಾಖಲಿಸಿಕೊಂಡು ಅವುಗಳನ್ನು ಪರಿಶೀಲಿಸಿ ವಿಶ್ಲೇಷಣೆಗೊಳಪಡಿಸಿ ಕನಕಪುರ ಪಟ್ಟಣ ಪರಿಸರದ ಸಾಂಸ್ಕೃತಿಕ ಚರಿತ್ರೆಯನ್ನು ಸಮಗ್ರತೆಯಿಂದ ರಚಿಸಲಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಈ ಅಧ್ಯಯನದಲ್ಲಿ ಕನಕಪುರ ಪರಿಸರದ ಸಾಂಸ್ಕೃತಿಕ ಅಧ್ಯಯನದ ವಿಷಯವನ್ನು ಭೌಗೋಳಿಕ ವಿಸ್ತಾರ ಮತ್ತು ಕಾಲಾವಧಿಯ ಹಿನ್ನೆಲೆಯಲ್ಲಿ ಸೀಮಿತ ವ್ಯಾಪ್ತಿಗೊಳಪಡಿಸಲಾಗಿದೆ. ಅಲ್ಲದೆ ಭೌಗೋಳಿಕವಾಗಿ ಪಟ್ಟಣ ಪರಿಸರವನ್ನು ಸೀಮಿತ ಮಾಡಿಕೊಂಡಿದ್ದರೂ, ಸಾಂದರ್ಭಿಕವಾಗಿ ಕನಕಪುರ ತಾಲೂಕಿನಲ್ಲಿರುವ ಕೆಲವು ಪ್ರದೇಶಗಳನ್ನು ವಿಷಯ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ. ಕಾಲಾವಧಿಯನ್ನು ಗಂಗರಿಂದ ಕರ್ನಾಟಕದ ಏಕೀಕರಣದ ಅವಧಿಯವರೆಗಿನ ವ್ಯಾಪ್ತಿಯನ್ನು ಅಧ್ಯಯನದ ದೃಷ್ಟಿಯಿಂದ ಸೀಮಿತಪಡಿಸಿಕೊಳ್ಳಲಾಗಿದೆ.

೧.೩. ಅಧ್ಯಯನದ ವಿಧಾನ

ಪ್ರಸ್ತುತ ಈ ಅಧ್ಯಯನವು ಮುಖ್ಯವಾಗಿ ಕ್ಷೇತ್ರಕಾರ್ಯಾಧಾರಿತವಾಗಿದೆ. ಅಧ್ಯಯನದ ವ್ಯಾಪ್ತಿಗೊಳಪಡುವ ಪ್ರದೇಶಗಳಿಗೆ ನೇರವಾಗಿ ಭೇಟಿ ನೀಡಿ ದೊರೆಯುವ ಆಕರಗಳನ್ನು ಸಂಗ್ರಹಿಸಿಕೊಂಡು ಪರಿಶೀಲಿಸಿ ದಾಖಲಿಸಿಕೊಂಡು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಮೌಖಿಕ ಕಥನಗಳು ಮತ್ತು ಐತಿಹ್ಯಗಳ ಪರಿಚಯವಿರುವ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ವಿಷಯ ಸಂಗ್ರಹಿಸಿಕೊಳ್ಳಲಾಗಿದೆ. ಅಧ್ಯಯನಕ್ಕೆ ಪೂರಕವಾಗಿ ದೊರೆಯುವ ಪ್ರಾಥಮಿಕ ಮತ್ತು

ಆನುಷಂಗಿಕ ಆಕರಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಪ್ರಸ್ತುತದಲ್ಲಿರುವ ಇತಿಹಾಸಕ್ಕೆ ಸಂಬಂಧಿಸಿದ ಅಧ್ಯಯನಗಳ ಸುಧಾರಿತ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಚಾರಿತ್ರಿಕ ಮತ್ತು ಸಾಂಸ್ಕೃತಿಕ ಆಕರಗಳನ್ನು ಸಂಗ್ರಹಿಸಿ ವಿಷಯಾನುಸಾರ ಮತ್ತು ಕಾಲಾನುಸಾರ ವಿಶ್ಲೇಷಿಸಿ ಸಂಯೋಜಿಸುವ ಮೂಲಕ ಫಲಿತಾಂಶಗಳನ್ನು ಕಂಡುಕೊಂಡು ಬರುವ ಫಲಿತಾಂಶಗಳಿಂದ ವೈಜ್ಞಾನಿಕವಾದ ಮತ್ತು ವೈಚಾರಿಕವಾದ ವಿಧಾನಗಳಿಂದ ಈ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವ ಪ್ರಯತ್ನ ಮಾಡಲಾಗಿದೆ.

೧.೪. ಅಧ್ಯಯನದ ಸಮೀಕ್ಷೆ

ಕನಕಪುರ ತಾಲೂಕಿಗೆ ಸಂಬಂಧಿಸಿದಂತೆ ಈವರೆಗೆ ಕೆಲವು ಕೃತಿಗಳು, ಬಿಡಿಲೇಖನಗಳು, ಪಿಎಚ್.ಡಿ. ಮಹಾಪ್ರಬಂಧಗಳು, ಸ್ಮರಣಸಂಚಿಕೆಗಳು ಬಂದಿವೆ. ಅವುಗಳನ್ನು ಪರಿಶೀಲಿಸುವುದರ ಮೂಲಕ ಅಧ್ಯಯನವನ್ನು ವಿಸ್ತರಿಸಿಕೊಳ್ಳಲಾಗಿದೆ.

ಟಿ.ವಿ. ವೆಂಕಟಾಚಲಶಾಸ್ತ್ರಿ ಅವರ 'ಕನಕಪುರ ಎಂಬ ಕಾನಕಾನಹಳ್ಳಿ ಚರಿತ್ರೆ'(೨೦೦೭) ಎಂಬ ಕೃತಿಯಲ್ಲಿ ಕಾನಕಾನಹಳ್ಳಿಯು ಇಂದಿನ ಕನಕಪುರವಾಗಿ ಪರಿವರ್ತನೆಗೊಂಡಿರುವ ಚಾರಿತ್ರಿಕ ಇತಿಹಾಸವನ್ನು ವಿವರಿಸಿದ್ದಾರೆ. ಅಲ್ಲದೆ ಈ ಪರಿಸರದಲ್ಲಿ ಕಂಡುಬರುವ ದೇವಾಲಯಗಳು, ವೀರಗಲ್ಲುಗಳು, ಶಾಸನಗಳು ಮತ್ತು ವಿಶಿಷ್ಟ ಸಾಂಸ್ಕೃತಿಕ ಆಚರಣೆಗಳ ಕುರಿತು ನಿರೂಪಿಸಿದ್ದಾರೆ.

ಕೆ.ಬಿ. ಶಿವತಾರಕ್ ಅವರ 'ಕರ್ನಾಟಕದ ಪುರಾತತ್ವ ನೆಲೆಗಳು'(೨೦೦೧) ಎಂಬ ಕೃತಿಯಲ್ಲಿ ಕನಕಪುರ ತಾಲೂಕಿನಲ್ಲಿ ಕಂಡುಬರುವ ಬೃಹತ್ ಶಿಲಾಯುಧ ಕೆಲವು ನೆಲೆಗಳನ್ನು ಉಲ್ಲೇಖಿಸಿದ್ದಾರೆ.

ಅಂಕನಹಳ್ಳಿ ಪಾರ್ಥ ಅವರ 'ರಾಮನಗರ: ಒಂದು ಸಾಂಸ್ಕೃತಿಕ ಅಧ್ಯಯನ'(೨೦೦೮) ಎಂಬ ಕೃತಿಯಲ್ಲಿ ಕನಕಪುರ ಪ್ರದೇಶಗಳ ಪುರಾತತ್ವ ಇತಿಹಾಸವನ್ನು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ.

ಮುನಿರಾಜಪ್ಪ ಅವರ 'ಮಾಗಡಿ ಸೀಮೆ ಇತಿಹಾಸ ಮತ್ತು ಸಂಸ್ಕೃತಿ'(೨೦೦೫) ಎಂಬ ಕೃತಿಯು ಗಂಗರ ಆಳ್ವಿಕೆಯ ಕಾಲದಲ್ಲಿ ಕಾನಕಾನಹಳ್ಳಿ ಗಂಗವಾಡಿ ೯೬೦೦೦ ಸೀಮೆಗೆ ಒಳಪಟ್ಟಿದ್ದ ಇತಿಹಾಸವನ್ನು ಈ ಕೃತಿಯು ತಿಳಿಸುತ್ತದೆ.

ಮುತ್ತುರಾಜು ಅವರ 'ಮುತ್ತತ್ತಿ: ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಮುತ್ತತ್ತಿ ಗ್ರಾಮದ ಪುರಾತತ್ವ, ಚಾರಿತ್ರಿಕ ಇತಿಹಾಸ ತಿಳಿಸುವುದರ ಜೊತೆಗೆ ಈ ಪ್ರದೇಶದಲ್ಲಿನ ಮುತ್ತತ್ತಿರಾಯನ(ಆಂಜನೇಯ) ದೇವಾಲಯ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನು ಕುರಿತು ಸಮಷ್ಟೀಕರಿಸಲಾಗಿದೆ.

ನಟರಾಜ್ ಡಿ.ಕೆ. ಅವರ 'ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ' ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧದಲ್ಲಿ ರಾಮನಗರ ಜಿಲ್ಲೆಯ ಸ್ಥಳನಾಮಗಳನ್ನು ತಾಲೂಕುವಾರು ವಿಂಗಡಿಸಿಕೊಂಡು ಕನಕಪುರ ತಾಲೂಕಿನ ಸ್ಥಳನಾಮಗಳ ಹಿನ್ನೆಲೆಯನ್ನು ಸ್ಥೂಲವಾಗಿ ಪರಿಚಯಿಸಿದ್ದಾರೆ.

ಬಸವರಾಜು ಬಿ. ಅವರ 'ಕಬ್ಬಾಳು: ಸಂಕಥನ' ಎಂಬ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಕಬ್ಬಾಳು ಗ್ರಾಮದ ಚಾರಿತ್ರಿಕತೆ ಹಾಗೂ ಸಂಪ್ರದಾಯ, ಆಚರಣೆ, ಬಲಿಗಳನ್ನು ಜಾನಪದ ಅಧ್ಯಯನ ಹಿನ್ನೆಲೆಯಲ್ಲಿ ನಿರೂಪಿಸಿದ್ದಾರೆ.

ಇತಿಹಾಸ ದರ್ಶನ ಸಂಪುಟ-೧೧ರಲ್ಲಿ ಮಂಜುನಾಥ ಎಂ.ಜಿ. ಅವರು 'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬೃಹತ್ ಶಿಲಾ ನಿವೇಶನಗಳು' ಎಂಬ ಸಂಶೋಧನಾ ಲೇಖನದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪರಿಸರದಲ್ಲಿ ಹನ್ನೆರಡು ಬೃಹತ್ ಶಿಲಾಯುಗದ ನಿವೇಶನಗಳನ್ನು ಪತ್ತೆ ಹಚ್ಚಿ ದೊರೆತ ಅವಶೇಷಗಳು ಮತ್ತು ಅವುಗಳ ಲಕ್ಷಣಗಳನ್ನು ತಿಳಿಸಿಕೊಟ್ಟಿದ್ದಾರೆ.

ಇತಿಹಾಸ ದರ್ಶನ ಸಂಪುಟ-೧೧ರಲ್ಲಿ ಮುತ್ತುರಾಜು ಅವರು 'ಕನಕಪುರ ತಾಲೂಕಿನ ಕೆಲವು ಬೃಹತ್ ಶಿಲಾಯುಗದ ಗೋರಿಗಳು ಹೊಸ ಶೋಧ' ಎಂಬ ಸಂಶೋಧನಾ ಲೇಖನದಲ್ಲಿ ಕನಕಪುರ ತಾಲೂಕಿನ ಗೊಟ್ಟಿಗೆಹಳ್ಳಿಯಲ್ಲಿ ಇರುವ ಸುಮಾರು ೩೦೦ ಶಿಲಾಗೋರಿಗಳಲ್ಲಿ ಪ್ರಮುಖವಾದ ಕೆಲವನ್ನು ಪರಿಶೀಲಿಸಿ ವಿವರಿಸಿರುವುದನ್ನು ಕಾಣುತ್ತೇವೆ.

ಫ್ರಾನ್ಸಿಸ್ ಬುಕಾನನ್ ಅವರ "ಎ ಜರ್ನಿ ಫ್ರಮ್ ಮದ್ರಾಸ್ ತ್ರೂ ದಿ ಕಂಟ್ರೀಸ್ ಆಫ್ ಮೈಸೂರು ಆ್ಯಂಡ್ ಮಲಬಾರ್"(೧೮೭೦) ಕೃತಿಯಲ್ಲಿ ಎರಡು ಶತಮಾನಗಳ ಹಿಂದಿನ ಕಾನಕಾನಹಳ್ಳಿಯ ವಿದ್ಯಮಾನಗಳನ್ನು ಹಾಗೂ ಪ್ರಮುಖವಾಗಿ ಇಲ್ಲಿನ ಕೃಷಿ ಚಟುವಟಿಕೆಯ ಪಾತ್ರವನ್ನು ದಾಖಲಿಸಿದ್ದಾರೆ.

ಅಲೆಗ್ಸಾಂಡರ್ ಬೀಟ್ಸ್ ಅವರ "ಎ ವ್ಯೂ ಆಫ್ ದಿ ಆರಿಜನ್ ಆ್ಯಂಡ್ ಕಂಡಕ್ಟ್ ದಿ ವಾರ್ ವಿಥ್ ಟಿಪ್ಪುಸುಲ್ತಾನ್"(೧೮೦೦) ಎಂಬ ಕೃತಿಯಲ್ಲಿ ಬ್ರಿಟಿಷ್ ಕಂಪನಿ ಮತ್ತು ಟಿಪ್ಪು ನಡುವಿನ ಯುದ್ಧದ ಪೂರ್ವಾಪರ ವಿಚಾರಗಳನ್ನು ದಾಖಲಿಸಲಾಗಿದೆ.

ಈ ಮೇಲಿನ ಕೃತಿಗಳಲ್ಲದೆ "ಕರ್ನಾಟಕ ಗ್ಯಾಸೆಟಿಯರ್"(೧೯೮೪) ಮತ್ತು ಸೂರ್ಯನಾಥ ಯು. ಕಾಮತ್ (ಪ್ರ.ಸಂ.) ಅವರ "ಬೆಂಗಳೂರು ರೂರಲ್ ಡಿಸ್ಟ್ರಿಕ್ ಗ್ಯಾಸೆಟಿಯರ್" (೧೯೮೯) ಬಿ.ಎಲ್. ರೈಸ್ ಅವರ "ಎಪಿಗ್ರಫಿ ಆಫ್ ಕರ್ನಾಟಿಕ" ಸಂಪುಟ-೯ರಲ್ಲಿ ಕನಕಪುರ ತಾಲೂಕಿನಲ್ಲಿ ಕಂಡುಬರುವ ಕೆಲವು ಶಾಸನಗಳನ್ನು ಸಂಗ್ರಹಿಸಿ ಅವುಗಳ ಅರ್ಥವಿವರಣೆಯನ್ನು ನೀಡಿದ್ದಾರೆ. ವಿವರಿಸಿರುವ ಆಕರಗಳನ್ನೆಲ್ಲ ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ ಹಾಗೂ ಇವು ಹೆಚ್ಚಿನ ಪ್ರಮಾಣದಲ್ಲಿ ನನ್ನ ಅಧ್ಯಯನಕ್ಕೆ ಪೂರಕವಾದ ಆಕರಗಳಾಗಿ ಬಳಕೆಯಾಗಲ್ಪಟ್ಟಿವೆ.

೧.೫. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಅಧ್ಯಯನದ ಅನುಕೂಲದ ದೃಷ್ಟಿಯಿಂದ ಈ ಕೆಳಕಂಡಂತೆ ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸಮೀಕ್ಷೆ ಮತ್ತು ಸ್ವರೂಪಗಳನ್ನು ಒಳಗೊಂಡಿದೆ. ಇಲ್ಲಿ ಒಟ್ಟಾರೆ ಅಧ್ಯಯನದ ರೂಪುರೇಷೆಯನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕನಕಪುರ ಪಟ್ಟಣದ ಭೌಗೋಳಿಕ ಲಕ್ಷಣಗಳು, ಇಲ್ಲಿಯ ಪ್ರಾಗಿತಿಹಾಸ ಹಾಗೂ ಈ ಪ್ರದೇಶದಲ್ಲಿ ಕಂಡುಬರುವ ಕುರುಹುಗಳು ಮತ್ತು ದಾಖಲೆಗಳ ಆಧಾರಗಳಿಂದ ಇಲ್ಲಿ ಆಳ್ವಿಕೆ ಮಾಡಿದ ರಾಜಮನೆತನಗಳ ರಾಜಕೀಯ ಇತಿಹಾಸವನ್ನು ಕಟ್ಟಿಕೊಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಅಧ್ಯಯನದ ಪ್ರದೇಶದಲ್ಲಿರುವ ಸಾಮಾಜಿಕ ವರ್ಗಗಳನ್ನು ಕುರಿತು ತಿಳಿಸಲಾಗುವುದು ಮತ್ತು ಅವರ ಸಾಮಾಜಿಕ, ಧಾರ್ಮಿಕ, ಶೈಕಣಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕನಕಪುರ ಪಟ್ಟಣ ಪರಿಸರದಲ್ಲಿ ಕಂಡುಬರುವ ಪ್ರಾಚೀನ ಮತ್ತು ವಿಜಯನಗರ ಹಾಗೂ ವಿಜಯನಗರೋತ್ತರ ಕಾಲಾವಧಿಯಲ್ಲಿನ ದೇವಾಲಯಗಳನ್ನು ಗುರುತಿಸಿ ಅಧ್ಯಯನ ಮಾಡಲಾಗಿದೆ. ಅಲ್ಲದೆ ಈ ಪಟ್ಟಣದ ವ್ಯಾಪ್ತಿಯಲ್ಲಿ ಕಂಡುಬರುವ ಮಸೀದಿಗಳು ಹಾಗೂ ಚರ್ಚ್‌ಗಳನ್ನು ವಾಸ್ತುಶಿಲ್ಪದ ದೃಷ್ಟಿಯಿಂದ ಚರ್ಚಿಸಲಾಗುವುದು. ಇಲ್ಲಿಯ ನದಿ, ಕೆರೆ, ಬಾವಿಗಳನ್ನು ಸಹ ವಿವರಿಸಲಾಗಿದೆ.

ಐದನೆಯ ಅಧ್ಯಾಯನದಲ್ಲಿ ಪಾರಂಪರಿಕವಾಗಿ ನಡೆದುಕೊಂಡು ಬಂದಿರುವ ಸಂಪ್ರದಾಯಗಳ ಅನುಸಾರ ಪ್ರಸ್ತುತ ಆಚರಣೆಯಲ್ಲಿರುವ ಹಬ್ಬ-ಹರಿದಿನಗಳು ಮತ್ತು ಜಾತ್ರೆಗಳು ಹಾಗೂ ಐತಿಹ್ಯಗಳ ಕುರಿತು ವಿಸ್ತರಿಸಲಾಗಿದೆ.

ಆರನೆಯ ಅಧ್ಯಾಯವು ಸಮಾರೋಪವಾಗಿದ್ದು ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ತಿಳಿಸಲಾಗಿದೆ. ಅಧ್ಯಯನದ ವಿಷಯಕ್ಕೆ ಪೂರಕವಾಗಿ ಭೇಟಿ ನೀಡಿ ವಕ್ತೃಗಳ ವಿವರ, ನಕ್ಷೆಗಳು ಹಾಗೂ ಕ್ಷೇತ್ರಕಾರ್ಯದಲ್ಲಿ ತೆಗೆದಿರುವ ಪ್ರಮುಖ ಛಾಯಾಚಿತ್ರಗಳನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

❖❖

ಅಧ್ಯಾಯ : ಎರಡು

ಭೌಗೋಳಿಕ ಪರಿಸರ ಹಾಗೂ ಐತಿಹಾಸಿಕ ಹಿನ್ನೆಲೆ

ಅಧ್ಯಾಯ : ಎರಡು

ಭೌಗೋಳಿಕ ಪರಿಸರ ಹಾಗೂ ಐತಿಹಾಸಿಕ ಹಿನ್ನೆಲೆ

೨.೧. ಭೌಗೋಳಿಕ ಪರಿಸರ

ಇತಿಹಾಸ ಮತ್ತು ಭೂಗೋಳ ಶಾಸ್ತ್ರಗಳು ಪರಸ್ಪರ ನಿಕಟ ಸಂಬಂಧ ಹೊಂದಿರುವುದರಿಂದ ಭೌಗೋಳಿಕ ಅಂಶಗಳು ಚರಿತ್ರೆ ಅಧ್ಯಯನಕ್ಕೆ ಪೂರಕವಾದ ಮೂಲ ಆಕರಗಳಾಗಿವೆ. ಒಂದು ನಿರ್ದಿಷ್ಟ ಪ್ರದೇಶದ ಅಧ್ಯಯನ ಕೈಗೊಳ್ಳುವ ಸಂದರ್ಭದಲ್ಲಿ ಆ ಪರಿಸರದ ಬಗೆಗಿನ ಕೆಲವು ಹಿನ್ನೆಲೆಗಳನ್ನು ತಿಳಿಯುವುದು ಅವಶ್ಯಕ. ಇತಿಹಾಸ ಮತ್ತು ಪುರಾತತ್ವ ಮಾದರಿಯ ಅಧ್ಯಯನಗಳಂತು ಆಯಾ ಪ್ರದೇಶದ ಭೌಗೋಳಿಕ ವ್ಯಾಪ್ತಿಯಲ್ಲಿರುವ ಭೂರಚನೆ, ಹವಾಗುಣ, ನದಿಗಳು, ಬೆಟ್ಟಗುಡ್ಡಗಳು, ಕಲ್ಲು, ಮಣ್ಣು ಹಾಗೂ ನೈಸರ್ಗಿಕ ಸಂಪತ್ತಿನ ಬಗೆಗಿರುವ ಗುಣಾವಗುಣಗಳನ್ನು ಅರಿತುಕೊಳ್ಳುವುದು ಬಹುಮುಖ್ಯ. ಇಂಥ ಮೂಲ ವಿವರಗಳನ್ನು ತಿಳಿದುಕೊಂಡಾಗಲೇ ಮಾನವನ ಜೀವನದ ಸಾಂಸ್ಕೃತಿಕ ಬೆಳವಣಿಗೆಯ ವಿವಿಧ ಹಂತಗಳನ್ನು ಸೂಕ್ಷ್ಮವಾಗಿ ಗ್ರಹಿಸಬಹುದು. ಈ ಹಿನ್ನೆಲೆಯಲ್ಲಿ ಆಯಾ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಗಳ ವಿಕಾಸದಲ್ಲಿ ಅಲ್ಲಿನ ಭೌಗೋಳಿಕ ಪರಿಸರದ ಸಂಪತ್ತು ಮತ್ತು ವೈಶಿಷ್ಟ್ಯತೆಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಅಧ್ಯಯನ ಕೈಗೊಳ್ಳುವ ಸಂದರ್ಭದಲ್ಲಿ ಭೌಗೋಳಿಕ ಪರಿಸರದ ವೈಶಿಷ್ಟ್ಯತೆಗಳನ್ನು ಮರೆತು ನಡೆಸುವ ಅಧ್ಯಯನ ಅಪೂರ್ಣವಾಗುತ್ತದೆ.

ಭೂರಚನೆ

ಕನಕಪುರ ಪರಿಸರ ಹಸಿರು ಬೆಟ್ಟಗುಡ್ಡಗಳ ನಿಸರ್ಗದತ್ತ ಚೆಲುವಿನಿಂದ ಕೂಡಿ 'ಅರೆಮಲೆನಾಡು' ಎಂದು ಪ್ರಸಿದ್ಧಿಯಾಗಿದೆ. ರಾಜಧಾನಿ ಬೆಂಗಳೂರಿನಿಂದ ದಕ್ಷಿಣ ದಿಕ್ಕಿನಲ್ಲಿ ಸುಮಾರು ೫೬ ಕಿ.ಮೀ. ದೂರದಲ್ಲಿ ಅರ್ಕಾವತಿ ನದಿ ಬಲದಂಡೆಯ ಮೇಲಿರುವ ಈ ಪಟ್ಟಣ, ಹಿಂದೆ 'ಕಾನಕಾನಹಳ್ಳಿ' ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಇಲ್ಲಿನ ಭೌಗೋಳಿಕ ಅಂಶಗಳು ಮಾನವನ ಬದುಕಿನ ರೀತಿ ನೀತಿಯ ಎಳೆಗಳನ್ನು ತೆರೆದಿಡುತ್ತವೆ. ಮಾನವನ ಜೀವನದ ಆಚಾರ, ವಿಚಾರ, ಉಡುಗೆ, ತೊಡುಗೆ, ಕಸುಬು ಮುಂತಾದ ಲಕ್ಷಣಗಳು ಆಯಾ ಪರಿಸರದ ಅಂಶಗಳಿಂದ ನಿರ್ಧರಿತವಾಗುತ್ತವೆ. ವ್ಯಾಪಾರ, ಗಣಿಗಾರಿಕೆ, ಇದ್ದಿಲು(ಇಜ್ಜಿಲು) ಉತ್ಪಾದನೆ

ಮತ್ತು ಮಾರಾಟ ಹಾಗೂ ವ್ಯವಸಾಯ ಇಲ್ಲಿನ ಬಹುಸಂಖ್ಯಾತ ಜನರ ಮೂಲ ಕಸುಬುಗಳು. ರಾಮನಗರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಕನಕಪುರ ತಾಲೂಕು ಒಂದಾಗಿದ್ದು, ವಿಸ್ತೀರ್ಣ ಹಾಗೂ ಜನಸಂಖ್ಯೆಯಲ್ಲಿ ಉಳಿದ ಮೂರು ತಾಲೂಕುಗಳಿಗಿಂತ ದೊಡ್ಡದಾಗಿದೆ. ಈ ತಾಲೂಕು ೨೦೦೭ಕ್ಕೂ ಮೊದಲು ಬೆಂಗಳೂರು ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಆಡಳಿತ ವ್ಯಾಪ್ತಿಯಾಗಿ ಒಳಪಟ್ಟಿದ್ದರಿಂದ ಭಾರತದಲ್ಲೇ ದೊಡ್ಡ ಲೋಕಸಭಾ ಕ್ಷೇತ್ರವೆಂಬ ಹೆಗ್ಗಳಿಕೆಯಿದ್ದು ಕರ್ನಾಟಕದಲ್ಲೇ ಎರಡನೆಯ ಅತಿದೊಡ್ಡ ತಾಲೂಕಾಗಿದೆ. "ಕನಕಪುರ ಪಟ್ಟಣವು ಈ ತಾಲೂಕಿನ ಕೇಂದ್ರ ಭಾಗವಾಗಿದ್ದು, ಉತ್ತರ ದಿಕ್ಕಿಗೆ ರಾಮನಗರ, ಬೆಂಗಳೂರು ಗ್ರಾಮಾಂತರ ಹಾಗೂ ಆನೇಕಲ್ ತಾಲೂಕು, ದಕ್ಷಿಣಕ್ಕೆ ಕಾವೇರಿನದಿ, ಪಶ್ಚಿಮದಲ್ಲಿ ಚನ್ನಪಟ್ಟಣ, ಪೂರ್ವದಲ್ಲಿ ತಮಿಳುನಾಡಿನ ಗಡಿಯಿದೆ. ತಾಲೂಕಿನ ಭೌಗೋಳಿಕ ವ್ಯಾಪ್ತಿ ೧೫೫೪ ಚ.ಕಿ.ಮೀ. ಆಗಿದೆ. ಕರ್ನಾಟಕದ ಚರಿತ್ರೆಯಲ್ಲಿ ತನ್ನದೇ ಆದ ಅಸ್ತಿತ್ವ ಪಡೆದುಕೊಂಡಿರುವ ಕನಕಪುರ ಪಟ್ಟಣವು ಒಟ್ಟಾರೆಯಾಗಿ ೭.೮೦ ಕಿಮೀ. ವ್ಯಾಪ್ತಿಯನ್ನು ಒಳಗೊಂಡಿದೆ. ೨೦೧೧ರ ಜನಗಣತಿಯ ಪ್ರಕಾರ ಈ ಪಟ್ಟಣದಲ್ಲಿ ಒಟ್ಟು ೫೪.೦೧೪ ಜನರು ವಾಸವಾಗಿದ್ದಾರೆ ಎಂದು ಹಾಗೂ ಕನಕಪುರ ಪಟ್ಟಣದಲ್ಲಿ ನಗರಸಭೆ ಆಡಳಿತವಿದ್ದು ಸುಮಾರು ೨೭ ವಾರ್ಡ್‌ಗಳು ಕಂಡು ಬರುತ್ತವೆ".[೧]

ಬೆಟ್ಟಗಳು

ಕನಕಪುರ ಪರಿಸರದಲ್ಲಿನ ಬೆಟ್ಟಗಳು ಈ ಪ್ರದೇಶದ ಸೌಂದರ್ಯವನ್ನು ಹೆಚ್ಚಿಸುವುದರ ಜೊತೆಗೆ ನೈಸರ್ಗಿಕ ಗೋಡೆಯಂತೆ ಸುತ್ತುವರಿದು ಪಟ್ಟಣಕ್ಕೆ ರಕ್ಷಣೆ ನೀಡುತ್ತಿವೆ. ನೆಲಮಂಗಲದ ಪಶ್ಚಿಮ ಕಡೆಯಿಂದ ಬರುವ ಬೆಟ್ಟ ಸಾಲುಗಳು ಮಾಗಡಿ, ರಾಮನಗರ ತಾಲೂಕುಗಳನ್ನು ಹಾಯ್ದು ಕನಕಪುರ ತಾಲೂಕನ್ನು ಉತ್ತರ ದಿಕ್ಕಿನಲ್ಲಿ ಪ್ರವೇಶಿಸಿ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಕವಚದಂತೆ ಒತ್ತೊತ್ತಾಗಿ ಹಬ್ಬಿಕೊಂಡಿವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ ಪಶ್ಚಿಮದಲ್ಲಿ ಬಾಣಂತಿ ಮಾರಮ್ಮನ ಬೆಟ್ಟ(ಸಮುದ್ರಮಟ್ಟದಿಂದ ೧೦೪೩ ಮೀಟರ್ ಎತ್ತರ) ಹಸಿರು ಬೆಟ್ಟ, ಭೀಮನ ಕಿಂಡಿ, ಮುದವಾಡಿಯ ನರಸಿಂಹ ದೇವರ ಬೆಟ್ಟ, ಆಗ್ನೇಯದಲ್ಲಿ ದೇವರ ಬೆಟ್ಟ, ಬರಿಕಲ್ಲು ಬೆಟ್ಟ ಮತ್ತು ಕೊಪ್ಪ ಬೆಟ್ಟ(೮೨೦ ಮೀ. ಎತ್ತರ), ನೈರುತ್ಯದಲ್ಲಿ ಪತ್ರಧಾರಿ ಬೆಟ್ಟ, ಪೂರ್ವದಲ್ಲಿ ಬಿಳಿಕಲ್ಲು ಬೆಟ್ಟ(೧೦೦೦ ಮೀ. ಎತ್ತರ), ಉತ್ತರದಲ್ಲಿ ಗಂಗಾಧರ ಬೆಟ್ಟ ಸಾಲುಗಳಿವೆ".[೨] ಕನಕಪುರ ಪರಿಸರದ ಈ ಬೆಟ್ಟಗಳು ಪ್ರವಾಸಿಗರನ್ನು ಆಕರ್ಷಿಸುವ, ಸಾಹಸ ಪ್ರಿಯರನ್ನು ಸಾಹಸಕ್ಕೆ ಉತ್ತೇಜಿಸುವ ರಮ್ಯತಾಣಗಳಾಗಿವೆ. ಬಿಳಿಕಲ್ಲು ಬೆಟ್ಟ ಗಿರಿಧಾಮದಂತೆ ಪ್ರವಾಸಿಗರನ್ನು ಆಕರ್ಷಿಸಿದರೆ, ಬಾಣಂತಿ ಮಾರಮ್ಮನ ಬೆಟ್ಟ, ಗುಂಡಪ್ಪನ ಬೆಟ್ಟ, ನರಸಿಂಹಸ್ವಾಮಿ ಬೆಟ್ಟ, ರಾಮದೇವರ ಬೆಟ್ಟ ಚಾರಣದ ಸಾಹಸಿಗರನ್ನು ಸಾಹಸಕ್ಕೆ ಪ್ರೇರೇಪಿಸುತ್ತವೆ. ಈ ಪರಿಸರವು ಸಾಮಾನ್ಯವಾಗಿ ಸಮತಟ್ಟಾದ ನೆಲ ಹೊಂದಿದ್ದರೂ ಉತ್ತರದಿಂದ ದಕ್ಷಿಣಕ್ಕೆ ಕಾವೇರಿ ನದಿ ಕಣಿವೆಯ ಕಡೆ ಇಳಿಜಾರಿನ ಪ್ರದೇಶವಾಗಿದೆ.

ಖನಿಜ ಸಂಪತ್ತು

ಕನಕಪುರ ಪರಿಸರ ಸಂಪೂರ್ಣವಾಗಿ ಅಗ್ನಿಶಿಲೆಯಿಂದ ಆವೃತವಾಗಿರುವ ಪ್ರದೇಶವಾಗಿರುವುದರಿಂದ ಖನಿಜಗಳು ಹೆಚ್ಚು ಪ್ರಮಾಣದಲ್ಲಿ ದೊರೆಯುವುದಿಲ್ಲ. ಅಂತೆಯೇ ಇಲ್ಲಿ ದೊರೆಯುವ ಖನಿಜ ತೀರಾ ಅತ್ಯಲ್ಪ ಪ್ರಮಾಣದ್ದಾಗಿದೆ ಎಂದು ಹೇಳಬಹುದು.

ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯಲ್ಲಿ ಕಂಡುಬರುವ 'ಸುಣ್ಣಕಲ್ಲಿನ' ನಿಕ್ಷೇಪಗಳು ಕನಕಪುರದ ಪಟ್ಟಣದ ಅಕ್ಕ-ಪಕ್ಕದ ಸ್ಥಳಗಳಲ್ಲಿ ದೊರೆತಿವೆ. ಹಾರೋಹಳ್ಳಿಯ ಸಮೀಪದ ನೇರಳೇ ಮರದ ದೊಡ್ಡಿಯಲ್ಲಿ 'ಪೆಲ್ಡ್‌ಸ್ಪರ್' ನಿಕ್ಷೇಪಗಳು ಮತ್ತು ವಿರಳವಾಗಿ ಸಿಗುವ ಕಬ್ಬಿಣದ ಅದಿರಿನ ಲಭ್ಯತೆಯಿದೆ.[೬] ಸಾಲುಹುಣಸೆ ಹಾಗೂ ಮರಳವಾಡಿ ಬಳಿ 'ಪದ್ಮರಾಗ ಶಿಲೆ'ಯು ದೊರೆಯುತ್ತದೆ.

ಕನಕಪುರ ಪರಿಸರದಲ್ಲಿ ದೊರೆಯುವ ಅತ್ಯಂತ ಬೆಲೆಬಾಳುವ ಗ್ರಾನೈಟ್ ಶಿಲೆಗಳಿಗೆ ಮಾರುಕಟ್ಟೆಯಲ್ಲಿ ಅತ್ಯಧಿಕ ಬೇಡಿಕೆಯಿದೆ. ಹಣ ಗಳಿಸುವ ದುರಾಸೆಯಿಂದ ಇತ್ತೀಚಿನ ದಿನಗಳಲ್ಲಿ ಮಿತಿ ಮೀರಿ ಬೆಳೆಯುತ್ತಿರುವ ಗ್ರಾನೈಟ್ ಗಣಿಗಾರಿಕೆ ಇಲ್ಲಿನ ಪ್ರಕೃತಿಯನ್ನು ವಿಕೋಪಗಳಿಗೆ ಹತ್ತಿರವಾಗಿಸುತ್ತಿದ್ದು ನಿಸರ್ಗದ ಹುಚ್ಚಾಟಕ್ಕೆ ಮದ್ದಿಲ್ಲದಂತಾಗುತ್ತದೆ. ಈ ಪಟ್ಟಣದ ನೈರುತ್ಯದಲ್ಲಿ 'ಚಾರ್ನೈಟ್ ಶಿಲಾಪದರ'ಗಳಿದ್ದರೆ ಉಳಿದ ಕಡೆಗಳಲ್ಲಿ ಬೆಣಚುಕಲ್ಲಿನ ಗ್ರಾನೈಟ್ ಶಿಲಾಪದರ ಹರಡಿದೆ.

'ಕ್ಲೋಸ್‌ಪೇಟ್' ಗ್ರಾನೈಟ್ ಎಂದು ಹೆಸರುವಾಸಿಯಾಗಿರುವ ರಾಮನಗರ 'ಕಣಶಿಲಾ ಗ್ರಾನೈಟ್' ಕನಕಪುರದಿಂದ ಪ್ರಾರಂಭವಾಗಿ ಉತ್ತರದಲ್ಲಿ ರಾಮನಗರದ ಕಡೆ ಹರಡಿದೆ. ಚಾರ್ನೈಟ್ ಶಿಲೆಯಂತಿರುವ 'ಡೈಕ್' ಮತ್ತು 'ಹಾರ್ನ್‌ಬ್ಲೇಂಡ್' ಶಿಲಾ ಸಂಪತ್ತು ಈ ಪರಿಸರದಲ್ಲಿ ಅಧಿಕವಾಗಿ ದೊರೆಯುತ್ತದೆ. ಇಲ್ಲಿ ದೊರೆಯುವ ಶಿಲೆಯು ಶೇ. ೭೫ ಭಾಗ ಗ್ರಾನೈಟ್ 'ಜೆನಿಸಿಸ್' ಶಿಲೆಯಿಂದ ಕೂಡಿದ್ದು ೩೦ - ೧೩೦ ಮೀಟರ್ ದಪ್ಪದ ಶಿಲಾಪದರ ಹೊಂದಿದೆ.

ನದಿಗಳು

ಮಾನವ ಸಮುದಾಯ ಒಂದು ಪ್ರದೇಶದಲ್ಲಿ ನೆಲೆಸಿ ತಮ್ಮ ಕ್ರಮಬದ್ಧ ಜೀವನ ರೂಪಿಸಿಕೊಳ್ಳಲು ಆ ಪರಿಸರದ ನದಿಗಳು ಮೂಲ ಕಾರಣವಾಗಿವೆ ಎಂದರೆ ತಪ್ಪಾಗಲಾರದು. ಮಾನವನ ಜೀವನಾವಶ್ಯಕ ವಸ್ತುಗಳು ನದಿ ಬಯಲಿನಲ್ಲಿ ಸಿಗುತ್ತಿದ್ದವು. ಇದರಿಂದ ನಾಗರಿಕತೆಗಳು ನದಿ ಬಯಲಿನಲ್ಲಿ ಪ್ರಾರಂಭವಾದವು. ಸಿಂಧೂನದಿಯ ಬಯಲಿನ ಜೀವನ ಮಾಡಿ ಹೋಗಿರುವ ಸಿಂಧೂ ನಾಗರಿಕತೆ ಇದಕ್ಕೆ ಸಾಕ್ಷಿಯಾಗಿದೆ. ಮಾನವ ಒಂದು ಕಡೆ ನೆಲೆಸಿ ತನ್ನ ಜೀವನ ರೂಪಿಸಿಕೊಳ್ಳಲು ನದಿ ಬಯಲಿನಲ್ಲಿ ದೊರೆಯುವ ನೈಸರ್ಗಿಕ ಸಂಪತ್ತು ಅವನ ಮೇಲೆ ಪ್ರಭಾವ ಬೀರಿದೆ. ಇಂತಹ ನೈಸರ್ಗಿಕ ಸಂಪತ್ತಿನ ಪ್ರಭಾವದಿಂದ ಕನಕಪುರ ಪಟ್ಟಣವು ಅರ್ಕಾವತಿ ನದಿ ಬಲದಂಡೆಯ ಮೇಲೆ ನಿರ್ಮಾಣಗೊಳ್ಳಲು ಸಾಧ್ಯವಾಯಿತು.

ಕನಕಪುರ ತಾಲೂಕಿನ ಮುಖ್ಯ ನದಿ ಅರ್ಕಾವತಿಯಾಗಿದೆ ದೊಡ್ಡಬಳ್ಳಾಪುರದ ನಂದಿ ಬೆಟ್ಟದಲ್ಲಿ ಹುಟ್ಟಿ ದೊಡ್ಡಬಳ್ಳಾಪುರ, ನೆಲಮಂಗಲ, ಮಾಗಡಿ, ರಾಮನಗರ ಹಾಗೂ ಕನಕಪುರ ತಾಲೂಕುಗಳಲ್ಲಿ ಒಟ್ಟು ೧೯೦ ಕಿ.ಮೀ. ಹರಿಯುತ್ತದೆ. ವಾಯುವ್ಯ ದಿಕ್ಕಿನಿಂದ ಕನಕಪುರ ತಾಲೂಕನ್ನು ಪ್ರವೇಶಿಸಿ ಸುಮಾರು ೪೫ ಕಿ.ಮೀ. ಈ ತಾಲೂಕಿನಲ್ಲಿ ಹರಿದರೆ ಪಟ್ಟಣದ ಎಡಭಾಗದಲ್ಲಿ ಉತ್ತರದಿಂದ ದಕ್ಷಿಣಾಭಿಮುಖವಾಗಿ ಹರಿದು ೩೦ ಕಿ.ಮೀ. ದೂರದಲ್ಲಿ ಕಾವೇರಿ ನದಿಯೊಂದಿಗೆ ಸಂಗಮವಾಗಿ, ಮೇಕೆದಾಟಿನಲ್ಲಿ ಬಂಡೆಗಳನ್ನು ಸೀಳಿಕೊಂಡು ಹರಿಯುವ ಸ್ಥಳ ನಯನ ಮನೋಹರವಾಗಿದೆ. ಇತ್ತೀಚಿನ ವರ್ಷಗಳಂತೂ ಮೇಕೆದಾಟು ಮತ್ತು ಸಂಗಮ ಪ್ರದೇಶಗಳು ಪ್ರವಾಸಿಗರ ರಮ್ಯ ತಾಣಗಳಾಗಿ ದೇಶ-ವಿದೇಶಗಳಿಂದ ಪ್ರವಾಸಿಗರನ್ನು ತನ್ನ ಚೆಲುವಿನತ್ತ ಆಕರ್ಷಿಸುತ್ತಿವೆ.

ಅರ್ಕಾವತಿ ನದಿಗೆ ಕೆಲವು ಉಪನದಿಗಳಿದ್ದು ಈಶಾನ್ಯ ದಿಕ್ಕಿನಿಂದ ಹರಿದು ಬರುವ ಅಂತರಗಂಗೆ, ದೇಗುಲಮಠದ ಬಳಿ ಚಿಕ್ಕ ಹೊಳೆ, ವೃಷಭಾವತಿ, ಬಸವನಹೊಳೆ ಮತ್ತು ಕೊಟ್ಲ ಹೊಳೆಗಳು ಕನಕಪುರದಲ್ಲಿ ಚಿಕ್ಕ ಹೊಳೆ ಬಳಿ ಅರ್ಕಾವತಿ ನದಿಗೆ ಸೇರಿ ಹರಿಯುತ್ತವೆ. ಅರ್ಕಾವತಿ ನದಿ ಹರಿವಿನ ಸಂಚಾರ ಪಥವು ನಂದಿಬೆಟ್ಟದಲ್ಲಿ ಪ್ರಾರಂಭವಾಗಿ ಸಂಗಮದಲ್ಲಿ ಕಾವೇರಿ ನದಿಗೆ ಸೇರಿಕೊಳ್ಳುತ್ತದೆ.

ಮಳೆ ಮತ್ತು ಹವಮಾನ

ಈ ಪ್ರದೇಶ ಸಮುದ್ರ ಮಟ್ಟದಿಂದ ಸರಾಸರಿ ೭೦೦ ರಿಂದ ೯೦೦ ಮೀಟರ್‌ಗಳಷ್ಟು ಎತ್ತರದಲ್ಲಿದೆ. "ಇಲ್ಲಿ ಮೇ ತಿಂಗಳಿನಿಂದ ನವೆಂಬರ್ ತಿಂಗಳಿನವರೆಗೆ ನೈರುತ್ಯ ಮಾರುತಗಳಿಂದ ವಾರ್ಷಿಕವಾಗಿ ಸರಾಸರಿ ೮೯೪ ಮಿಲಿ ಮೀಟರ್ ಮಳೆಯಾಗುತ್ತದೆ. ವರ್ಷದಲ್ಲಿ ಸರಾಸರಿ ೫೬ ದಿನಗಳು ಮಳೆಯಾದ ದಾಖಲೆಯಿದೆ. ಬೇಸಿಗೆ ದಿನಗಳನ್ನು ಹೊರತು ಪಡಿಸಿದರೆ ಬಹಳಷ್ಟು ಮಟ್ಟಿಗೆ ಹಿತಕರ ವಾತಾವರಣವಿದೆ. ವಾರ್ಷಿಕ ಸರಾಸರಿ ಉಷ್ಣಾಂಶ ೩೩.೪ ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ೨೧.೨೦ ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿದೆ".[೪]

ಅರಣ್ಯಗಳು

ರಾಮನಗರ ಜಿಲ್ಲೆಯಲ್ಲೇ ಅತಿ ಹೆಚ್ಚು ಅರಣ್ಯ ಪ್ರದೇಶ ಹೊಂದಿರುವ ಕನಕಪುರ ತಾಲೂಕು ಸುಮಾರು ೪೫.೨೬೭ ಹೆಕ್ಟೇರ್ ಅರಣ್ಯ ಪ್ರದೇಶ ಹೊಂದಿದೆ. ಇದರಲ್ಲಿ ೫೩೦೦ ಹೆಕ್ಟೇರ್ ಅರಣ್ಯ ಪ್ರದೇಶ ಪಟ್ಟಣದ ಆಡಳಿತ ವ್ಯಾಪ್ತಿಗೊಳಪಟ್ಟಿದ್ದು, ಸುತ್ತಮುತ್ತಲಿನ ಬೆಟ್ಟ ಸಾಲುಗಳ ಕಣಿವೆಗಳಲ್ಲಿ ಗಿಡ, ಮರ ಹಾಗೂ ಪೊದೆಗಳಿಂದ ಕೂಡಿರುವ ಅರಣ್ಯ ಪ್ರದೇಶಗಳನ್ನು ಕಾಣಬಹುದು. ಬಾಣಂತಿ ಮಾರಮ್ಮನ ಬೆಟ್ಟ, ಬಿಳಿಕಲ್ಲು ಬೆಟ್ಟ, ಸಂಗಮ, ತೇರುಬೀದಿ, ನಾರಾಯಣಪುರ, ಚೀಲಂದವಾಡಿ ಮೊದಲಾದ ಪ್ರದೇಶಗಳಲ್ಲಿ ದಟ್ಟವಾದ ಅರಣ್ಯಗಳಿವೆ. ಈ ಅರಣ್ಯದ ಕೆಲವು ಭಾಗಗಳಲ್ಲಿ ಬೆಲೆಬಾಳುವ ಗಂಧ, ತೇಗ, ಹೊನ್ನೆ, ಬೀಟೆ, ಜಾಲರಿ,

ದಿಂಡಿಗ, ಮಾವು, ನೇರಳೆ, ಬೇವು, ಹುಣಸೆ ಮೊದಲಾದ ಜಾತಿಯ ಮರಗಳು ಹೆಚ್ಚಿನ ಪ್ರಮಾಣದಲ್ಲಿವೆ.

೨.೨. ಪ್ರಾಗಿತಿಹಾಸ ಕಾಲ

ಇತಿಹಾಸ ಕಾಲವನ್ನು ಅಧ್ಯಯನದ ದೃಷ್ಟಿಯಿಂದ ಪ್ರಾಗಿತಿಹಾಸಕಾಲ ಮತ್ತು ಇತಿಹಾಸ ಕಾಲ ಎಂದು ಗುರುತಿಸಿಕೊಳ್ಳಲಾಗಿದೆ. ಲಿಖಿತ ಆಧಾರಗಳು ದೊರೆಯುವ ಕಾಲವನ್ನು ಇತಿಹಾಸ ಕಾಲವೆಂದು ಮತ್ತು ಪ್ರಾಚ್ಯವಸ್ತು ಅವಶೇಷಗಳು ದೊರೆಯುವ ಕಾಲವನ್ನು ಪ್ರಾಗಿತಿಹಾಸ ಕಾಲವೆಂದು ಮಾಡಿಕೊಳ್ಳಲಾಗಿದೆ. ಲಿಖಿತ ಆಧಾರಗಳು ದೊರೆಯುವುದು ಕ್ರಿ.ಪೂ. ೩ನೇ ಶತಮಾನದ ಅಶೋಕನ ಕಾಲದ ಶಾಸನಗಳಿಂದ ಎಂಬುದು ಸ್ಪಷ್ಟವಾಗಿ ತಿಳಿದುಬಂದಿದೆ. ಕನಕಪುರ ಪರಿಸರದ ಇತಿಹಾಸ ಈ ಎರಡು ಕಾಲಘಟ್ಟಗಳಲ್ಲಿ ಕಂಡು ಬಂದಿದೆ. ಹಳೆಯ ಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಯಾವುದೇ ಕುರುಹುಗಳು ಈ ಪರಿಸರದಲ್ಲಿ ಈವರೆಗೂ ಕಂಡುಬಂದಿಲ್ಲ. ನವಶಿಲಾಯುಗದ ಅವಶೇಷಗಳು ಮತ್ತು ಬೃಹತ್ ಶಿಲಾಯುಗ ಗೋರಿಗಳು, ನೆಲೆಗಳು, ಅವಶೇಷಗಳು ದೊರೆತ್ತಿದ್ದು ಕನಕಪುರ ಪರಿಸರದ ಇತಿಹಾಸವನ್ನು ನವಶಿಲಾಯುಗ ಸಂಸ್ಕೃತಿಯ ಕಾಲದಿಂದ ಗುರುತಿಸಬಹುದು.

ಪ್ರಾಗಿತಿಹಾಸ ಕಾಲದ ಜನಸಮುದಾಯ ತಮ್ಮ ಜೀವನದ ಉಪಯೋಗಕ್ಕೆ ಬಳಸುತ್ತಿದ್ದ ವಸ್ತುಗಳು ಮತ್ತು ಪದಾರ್ಥಗಳ ಸ್ವರೂಪವನ್ನು ಆಧರಿಸಿ ಪ್ರಾಗಿತಿಹಾಸ ಯುಗವನ್ನು ನಾಲ್ಕು ಹಂತಗಳಾಗಿ ವಿಂಗಡಿಸಲಾಗಿದೆ.

೧. ಹಳೆಯ ಶಿಲಾಯುಗ (ಕ್ರಿ.ಪೂ. ೫೦೦,೦೦೦ ದಿಂದ ೧೦,೦೦೦ ವರ್ಷಗಳವರೆಗೆ)

೨. ಸೂಕ್ಷ್ಮ ಶಿಲಾಯುಗ (ಕ್ರಿ.ಪೂ. ೧೦,೦೦೦ - ೩,೦೦೦)

೩. ನೂತನ - ತಾಮ್ರ ಶಿಲಾಯುಗ (ಕ್ರಿ.ಪೂ. ೩,೫೦೦ - ೮೦೦)

೪. ಕಬ್ಬಿಣಯುಗ - ಬೃಹತ್ ಶಿಲಾಯುಗ (ಕ್ರಿ.ಪೂ. ೧,೦೦೦ - ೩೦೦)[೫]

ಹಳೆಯ ಶಿಲಾಯುಗ

ಹಳೆಯ ಶಿಲಾಯುಗ ಸಂಸ್ಕೃತಿ ಮಾನವನ ಜೀವನದ ಮೊದಲ ಹಂತವಾಗಿದ್ದು, ಪ್ರಾಣಿಗಳನ್ನು ಭೇಟಿಯಾಡಿ ಮತ್ತು ಗೆಡ್ಡೆ-ಗೆಣಸುಗಳನ್ನು ತಿಂದುಕೊಂಡು ಪ್ರಾಣಿಯಂತೆ ಅಲೆಮಾರಿ ಜೀವನ ಸಾಗಿಸುತ್ತಿದ್ದ. ಪ್ರಕೃತಿಯಲ್ಲಿ ದೊರೆಯುತ್ತಿದ್ದ ಶಿಲೆಯಿಂದ ಆಯುಧ ತಯಾರಿಸಿಕೊಂಡು ಬೇಟೆ ಮತ್ತು ತನ್ನ ರಕ್ಷಣೆಗೆ ಬಳಸುತ್ತಿದ್ದ ಹಾಗಾಗಿ ಶಿಲೆ ಮಾನವನ ಜೀವನದ ಪ್ರಮುಖ ಅಂಗವಾಗಿತ್ತು. ಶಿಲಾಯುಧಗಳ ಆಧಾರದ ಮೇಲೆ ಹಳೆಯ ಶಿಲಾಯುಗವನ್ನು ಮೂರು ಭಾಗ ಮಾಡಲಾಗಿದೆ.

೧. ಆದಿ ಹಳೆಯ ಶಿಲಾಯುಗ ಸಂಸ್ಕೃತಿ

೨. ಮಧ್ಯ ಹಳೆಯ ಶಿಲಾಯುಗ ಸಂಸ್ಕೃತಿ

೩. ಅಂತ್ಯ ಹಳೆಯ ಶಿಲಾಯುಗ ಸಂಸ್ಕೃತಿ

ಕರ್ನಾಟಕದ ಮಲಪ್ರಭಾ ನದಿ ತೀರ, ಕಿಬ್ಬನಹಳ್ಳಿ, ಭೀಮ ಮತ್ತು ಕೃಷ್ಣ ನದಿ ತೀರ, ಹುಣಸಗಿ ಮುಂತಾದ ಪ್ರದೇಶಗಳಲ್ಲಿ ಹಳೆ ಶಿಲಾಯುಗಕ್ಕೆ ಸೇರಿದ ಕೈಗೊಡಲಿ, ಸೀಳುಗತ್ತಿ, ಮಚ್ಚುಗತ್ತಿ, ಕೊರಗ, ದುಂಡಾದ ಉಪಕರಣ ಮೊದಲಾದ ಶಿಲಾಯುಗದ ಪರಿಕರಗಳು ದೊರೆತಿವೆ. ಈ ಉಪಕರಣಗಳು ಫ್ರಾನ್ಸ್ ದೇಶದ ಸೈಂಟ್ ಅಶ್ಯೂಲ್ ಮಾದರಿಯನ್ನು ಹೋಲುತ್ತವೆ.[೬]

ಮಧ್ಯ ಹಳೆಯ ಶಿಲಾಯುಗ ಸಂಸ್ಕೃತಿ ಕರ್ನಾಟಕದಲ್ಲಿ ಇತ್ತು ಎಂಬುದನ್ನು ೧೯೫೦ರಲ್ಲಿ ಆರ್.ಡಿ. ಬ್ಯಾನರ್ಜಿಯವರು ಗುರುತಿಸಿದರು. ಕೃಷ್ಣನದಿಯ ಕೆಲವು ಭಾಗ, ಸುರಪುರ ಪ್ರದೇಶದಲ್ಲಿ ಮೊದಲು ಗುರುತಿಸಲಾಯಿತು.[೭] ಬದಲಾವಣೆಯ ಹಂತಕ್ಕೆ ಚಲಿಸಿದ ಮಾನವನ ಜೀವನದ ವಿಕಾಸದ ಗುರುತಗಳನ್ನು ಆಯುಧಗಳಲ್ಲಿ ಕಾಣಬಹುದು. ಈ ಸಂಸ್ಕೃತಿಯಲ್ಲಿ ವಿಶಿಷ್ಟವಾದ ನೀಳಚಕ್ಕೆ ಹಾಗೂ ಮೊನೆ, ಕೊರೆಯುಳಿ ಮೊದಲಾದ ಶಿಲಾಯುಧಗಳನ್ನು ತಯಾರಿಸಿಕೊಂಡಿದ್ದನು. ಚಿಕ್ಕ ಕಲ್ಲುಗಳಿಂದ ಲೇವಾಲ್ವಾ, ಕ್ಲಾಕ್ಟನ್, ಮಸ್ಟೂರ್ ತಂತ್ರ ಬಳಸಿ ಶಿಲಾಯುಧಗಳನ್ನು ತನಗೆ ಬೇಕಾದ ಆಕಾರದಲ್ಲಿ ತಯಾರಿಸಿಕೊಂಡಿದ್ದಾನೆ.

ಅಂತ್ಯ ಹಳೆಯ ಶಿಲಾಯುಗ ಸಂಸ್ಕೃತಿಯ ಕುರುಹು ಮತ್ತು ನೆಲೆಗಳು ಕಡಿಮೆಯಿದ್ದು, ಮೊಟ್ಟಮೊದಲಿಗೆ ಈ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ೧೯೫೯ರಲ್ಲಿ ಸಾಲವಾಡಗಿಯಲ್ಲಿ ಉಪಕರಣ ಉತ್ಪಾದನಾ ನೆಲೆಯನ್ನು ಅ. ಸುಂದರ ಅವರು ಗುರುತಿಸಿದ್ದಾರೆ.[೮] ಈ ಸಂಸ್ಕೃತಿಯ ಶಿಲಾಯುಧಗಳನ್ನು ಮತ್ತಷ್ಟು ಹೊಸ ರೂಪದ ಕರಕುಶಲತೆಯಿಂದ ತನಗೆ ಬೇಕಾದ ಆಕಾರದಲ್ಲಿ ತಯಾರು ಮಾಡಕೊಂಡು ಬಳಸುವ ನೈಪುಣ್ಯತೆಯನ್ನು ಮಾನವ ಕಂಡುಕೊಂಡಿದ್ದ.

ಸೂಕ್ಷ್ಮ ಶಿಲಾಯುಗ ಸಂಸ್ಕೃತಿ

ಈ ಸಂಸ್ಕೃತಿಯ ಹಂತದಲ್ಲಿ ಮಾನವ ತನ್ನ ಅಲೆಮಾರಿ ಜೀವನಕ್ಕೆ ಅಂತ್ಯ ಹಾಡಿ ಒದೆಡೆ ನೆಲೆನಿಂತು, ಬೇಟೆ, ಮೀನುಗಾರಿಕೆ ಹಾಗೂ ಆಹಾರ ಸಂಗ್ರಹಣೆಯ ಜೊತೆಗೆ ಆಹಾರ ಉತ್ಪಾದನೆ ಆರಂಭಿಸಿಕೊಂಡು ಜೀವನದ ಸ್ಥಿತ್ಯಂತರದ ಕಡೆ ಮುಖ ಮಾಡಿದನು. ಶಿಲೋಪಕರಣ ಗಳನ್ನು ಕಿರುಗಾತ್ರದಲ್ಲಿ ತಯಾರಿಸುವ ವಿಶಿಷ್ಟ ಲಕ್ಷಣದ ಜೊತೆಗೆ ವೈವಿಧ್ಯ ಕ್ರಮಗಳನ್ನು ಕಂಡುಕೊಂಡನು. ನೀಳ ಚೆಕ್ಕೆ ಮಾದರಿ, ಹೆರೆ ಚೆಕ್ಕೆ ಮಾದರಿ, ಮೊನೆ ಮಾದರಿ, ಬಾಣದ ಮೊನೆ, ಕೊರಗ, ಕೊರೆಯುಳ್ಳ ಅರ್ಧಚಂದ್ರಾಕೃತಿ, ದಬ್ಬಳ ಮೊದಲಾದ ಉಪಕರಣ ಕರ್ನಾಟಕದ ಹಲವು ಕಡೆಗಳಲ್ಲಿ ದೊರೆತಿವೆ. ೧೯೪೭ರಲ್ಲಿ ಮಾರ್ಟಿಮರ್ ವ್ಹೀಲರ್‌ರವರು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯಲ್ಲಿ ಉತ್ಖನನ ಮಾಡಿ ಈ ಹಂತದ ಉಪಕರಣಗಳನ್ನು ಗುರುತಿಸಿದ್ದಾರೆ.[೯]

ನವಶಿಲಾಯುಗ ಸಂಸ್ಕೃತಿ

ನವಶಿಲಾಯುಗ ಸಂಸ್ಕೃತಿ ಬಹು ವಿಶೇಷವಾಗಿದ್ದು, ಮಾನವನ ಜೀವನ ವಿಕಾಸ ಹೊಂದಿದ ಪ್ರಮುಖ ಹಂತವಾಗಿದೆ. ಭಾರತದ ಇತರ ಪ್ರದೇಶಗಳಿಗಿಂತ ಕರ್ನಾಟಕವು ನವಶಿಲಾಯುಗದ ಮಾನವನನ್ನು ವಿಶೇಷವಾಗಿ ಆಕರ್ಷಿಸಿರುವುದು ಕಂಡು ಬರುತ್ತದೆ. ಇದಕ್ಕೆ ಮುಖ್ಯಕಾರಣವೆಂದರೆ

ನವಶಿಲಾಯುಗದ ಮಾನವನು ಆಯುಧಗಳನ್ನು ತಯಾರು ಮಾಡಲು ಬಳಸುತ್ತಿದ್ದ 'ದಖ್ಖನ್ ಟ್ರಾಪ್' ಶಿಲೆಯು ಹೇರಳವಾಗಿ ಕರ್ನಾಟಕದಲ್ಲಿ ದೊರೆಯುತ್ತಿತ್ತು.[೧೯] ನವಶಿಲಾಯುಗದ ಮಾನವ ಅಲೆಮಾರಿ ಜೀವನ ತೊರೆದು ಸ್ಥಿತ್ಯಂತರದ ಕಡೆ ಮುಖ ಮಾಡಿರುವುದು ನೆಲೆನಿಂತ ಮತ್ತು ಪಶುಪಾಲನೆ ಸಂಸ್ಕೃತಿಯ ಮೊದಲ ಹಂತವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಶಿಲಾಯುಗ ಸಂಸ್ಕೃತಿಯ ಕೆಲವು ಕುರುಹುಗಳು ಕನಕಪುರ ತಾಲೂಕಿನಲ್ಲೂ ಕೂಡ ಕಂಡು ಬಂದಿವೆ. ಕನಕಪುರ ತಾಲೂಕಿನಲ್ಲಿ ನವಶಿಲಾಯುಗ ಹಂತದ ಪ್ರಾರಂಭವನ್ನು ಮೊದಲು ಗುರುತಿಸಿರುವ **ಮುತ್ತುರಾಜು**(ಮುತ್ತುರಾಜು, ಸಂಬಾಪುರ ಪ್ರಾಗೈತಿಹಾಸಿಕ ಕಾಲದಿಂದ(ಸು.ಕ್ರಿಪೂ. ೩೦೦೦) ಇಂದಿನವರೆಗೆ ಒಂದು ಶೋಧ, ಇತಿಹಾಸ ದರ್ಶನ, ಸಂ. ೧೫, ಪು. ೩೩-೩೪). ಅವರ ಸಂಶೋಧನಾ ಕಾರ್ಯ ಶ್ಲಾಘನೀಯವಾದದ್ದು.

ಕನಕಪುರದ ಪಶ್ಚಿಮಕ್ಕೆ ಮೈಸೂರಿಗೆ ಹೋಗುವ ಮಾರ್ಗದ ಹಲಗೂರಿನ ಪಕ್ಕದಲ್ಲಿರುವ ಬಸವನ ಬೆಟ್ಟ ಅರಣ್ಯ ಪ್ರದೇಶದಲ್ಲಿ ನವಶಿಲಾಯುಗಕ್ಕೆ (ಕ್ರಿ.ಪೂ. ೩೧೦೦) ಸೇರಿದ ಇಪ್ಪತ್ತೇಳು ಕಲ್ಲಿನ ಆಯುಧಗಳು ದೊರೆತಿವೆ.[೧೯] ಇವುಗಳಲ್ಲಿ ಇಪ್ಪತ್ತಾರು ಆಯುಧಗಳನ್ನು ದಕ್ಷಿಣ ಕರ್ನಾಟಕದ 'ದಖ್ಖನ್ ಟ್ರಾಪ್' ಶಿಲೆಗೆ ಸೇರಿದ ಕರಿಯ ಟ್ರಾಪ್ ಕಲ್ಲಿನಲ್ಲಿ ಮತ್ತೊಂದನ್ನು ಗ್ರಾನೈಟ್ ಶಿಲೆಯಲ್ಲಿ ತಯಾರಿಸಲಾಗಿದೆ. ಇದೇ ಮಾರ್ಗದಲ್ಲಿರುವ ಸಂಬೇಗೌಡನ ದೊಡ್ಡಿ ಬಳಿ ಬೃಹತ್ ಶಿಲಾ ಸಮಾಧಿಗಳು ಕಂಡುಬಂದಿದ್ದವು. ಆದರೆ ಇತ್ತೀಚಿಗೆ ಮುತ್ತುರಾಜು ಅವರು ನಡೆಸಿದ ಅನ್ವೇಷಣೆಯಿಂದ ನವಶಿವಾಲಯುಗಕ್ಕೆ ಸೇರಿದ ತ್ರಿಕೋನಾಕಾರದ ಕರಿಯ ಕಲ್ಲಿನ ಆಯುಧ ಒಂದು ದೊರೆತಿದೆ. ಇದನ್ನು ದಕ್ಷಿಣ ಕರ್ನಾಟಕದ 'ದಖ್ಖನ್ ಟ್ರಾಪ್' ಮಾದರಿಯ ಶಿಲೆಯಿಂದ ತಯಾರಿಸಲಾಗಿದ್ದು ಇದರ ಉದ್ದ ೧೨ ಅಂಗುಲ ಮತ್ತು ಅಗಲ ೪ ಅಂಗುಲವಾಗಿದೆ. ಇದನ್ನು ಗಮನಿಸಿದರೆ ಈ ಪರಿಸರದಲ್ಲಿ ನವಶಿಲಾಯುಗ (ಕ್ರಿ.ಪೂ. ೨೦೦೦) ಸಂಸ್ಕೃತಿ ಜನರ ಜೀವನ ಚಟುವಟಿಕೆಗಳು ನಡೆದಿವೆ ಎಂಬುದು ಸ್ಪಷ್ಟವಾಗುತ್ತದೆ.

ಬೃಹತ್ ಶಿಲಾಯುಗ ಸಂಸ್ಕೃತಿ

ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ವಿವಿಧ ಮಾದರಿಯ ಬೃಹತ್ ಶಿಲಾಗೋರಿಗಳನ್ನು ನಿರ್ಮಿಸಿಕೊಂಡಿರುವುದು ಕುತೂಹಲಕರ ಸಂಗತಿಯಾಗಿದೆ. ಹಾಗಾಗಿ ಇದನ್ನು ಬೃಹತ್ ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗಿದೆ. ಈ ಹಂತದಲ್ಲಿ ಕಬ್ಬಿಣ ತಯಾರಿಕೆ ಮತ್ತು ಬಳಕೆ ಮಾಡಿರುವುದು ಮಾನವನ ಜೀವನದ ವಿಶೇಷ ಬದಲಾವಣೆಯಾಗಿದೆ. ಕಲ್ಗೋರಿಗಳು ಅಂದಿನ ಜನರ ಪಾರಂಪರಿಕ ಸಂಪ್ರದಾಯ ನಂಬಿಕೆಗಳ ತಳಹದಿಯ ಮೇಲೆ ರಚನೆ ಆದವುಗಳಾಗಿವೆ. ಈ ಸಂಸ್ಕೃತಿಯ ಜನರು ಜೀವಿಸುತ್ತಿದ್ದ ಪ್ರದೇಶಗಳನ್ನು ವಾಸ್ತವ್ಯದ ನೆಲೆಗಳೆಂದು ಹಾಗೂ ಶವಸಂಸ್ಕಾರದ ಪ್ರದೇಶಗಳನ್ನು ಗೋರಿ ನೆಲೆಗಳೆಂದು ಗುರುತಿಸಲಾಗಿದೆ. ಕಲ್ಗೋರಿಗಳು ನಿರ್ಮಾತೃಗಳ ಕಾಲಮಾನ, ನಿರ್ಮಾತೃಗಳ ವಸತಿಗಳು ಹಾಗೂ ಅವರ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ವ್ಯವಸ್ಥೆಯನ್ನು ತಿಳಿಸುವ ಆಧಾರಗಳಾಗಿವೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಲ್ಗೋರಿಗಳು ಮತ್ತು ವಸತಿನೆಲೆಗಳು ಕಂಡು ಬಂದಿದ್ದು ಕನಕಪುರ ತಾಲೂಕು ಪರಿಸರದಲ್ಲಿ ಕೂಡ ಈ ಸಂಸ್ಕೃತಿಯ ಹಲವು ಕುರುಹುಗಳು ಕಂಡು ಬಂದಿವೆ.

ಸಾತನೂರಿನಿಂದ ಮುತ್ತತ್ತಿಗೆ ಹೋಗುವ ಮಾರ್ಗದ ೧೧ ಕಿ.ಮೀ. ದೂರ ಅರಣ್ಯ ಪ್ರದೇಶದಲ್ಲಿರುವ ಗದ್ದೆ ಮಡಿನಕ್ಕಲು ಬೃಹತ್ ಶಿಲಾಯುಗ ಸಂಸ್ಕೃತಿಯ ವಸತಿನೆಲೆ ಮತ್ತು ಕಲ್ಗೋರಿಗಳ ನೆಲೆಯಾಗಿದೆ. ಇಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿದ ಸುಮಾರು ೧೦ ವೃತ್ತ ಶಿಲಾಗೋರಿಗಳಿವೆ.[೨] ಸ್ಥಳೀಯರು ಇವುಗಳನ್ನು ನೆಲಮೋರಿಗಳು ಎಂದು ಕರೆಯುತ್ತಾರೆ. ಅಲ್ಲದೆ ಪಾಂಡವರು ವಾಸಿಸುತ್ತಿದ್ದ ಜಾಗ ಎಂತಲೂ ನಂಬಿದ್ದಾರೆ. ಹಿಂದೊಮ್ಮೆ ಜನರು ಇವುಗಳಲ್ಲಿ ಒಂದು ಶಿಲಾಸಮಾಧಿಯನ್ನು ಅಗೆದಾಗ ಅದರೊಳಗಿರುವುದನ್ನು ವರ್ಣಿಸುವ ರೀತಿ ನೋಡಿದರೆ ಅವುಗಳು ಕೋಣೆಗೋರಿಗಳು (ಸಿಸ್ಟ್ ಚೇಂಬರ್ಸ್) ಎಂದು ಮುತ್ತುರಾಜು ಅವರು ಊಹಿಸಿದ್ದಾರೆ. ಇದು ಬೃಹತ್ ಶಿಲಾಯುಗ ಸಂಸ್ಕೃತಿಯ ವಸತಿ ನೆಲೆಯಾಗಿರುವುದರಿಂದ ಕೆಂಪು ಮತ್ತು ಕಪ್ಪು ಬಣ್ಣದ ಹೊಳಪುಳ್ಳ ಮಡಿಕೆಯ ಚೂರುಗಳು, ವಿವಿಧ ಗೆರೆಗಳುಳ್ಳ ಕೆಂಪುಬಣ್ಣದ ಮಡಿಕೆಯ ಕಂಠಗಳು, ತೆಳುವಾದ ನಯವಲ್ಲ ಕುಡಿಕೆಯ ಚೂರುಗಳು ದೊರೆತಿವೆ. ಕಬ್ಬಿಣದ ವಿವಿಧ ಗಾತ್ರದ ಕಿಟ್ಟದ ಕಲ್ಲುಗಳು ಕೂಡ ಕಂಡು ಬಂದಿವೆ. ಕಾವೇರಿ ನದಿ ದಂಡೆಯ ಮೇಲಿರುವ ಈ ನೆಲೆಯಲ್ಲಿ ಜನರು ಬೇಟೆ, ವ್ಯವಸಾಯ, ಪಶುಪಾಲನೆಯನ್ನು ಮುಖ್ಯ ಕಸುಬಾಗಿ ಅವಲಂಬಿಸಿದ್ದರು ಎನಿಸುತ್ತದೆ.

ಮರಳವಾಡಿ ಹೋಬಳಿ ಗುತ್ತಲ ಹುಣಸೆ ಗ್ರಾಮದ ಬೆಟ್ಟದ ಮೇಲಿರುವ ಭೀಮಯ್ಯ ಮತ್ತು ಹುಚ್ಚಯನವರ ಹೊಲದಲ್ಲಿ ಕಂಡುಬಂದಿರುವ ೪೫ ಬೃಹತ್ ಶಿಲಾ ಸಮಾಧಿಗಳಲ್ಲಿ ೨೫ ಸಮಾಧಿಗಳು ಸುಸ್ಥಿತಿಯಲ್ಲಿವೆ. ಉಳಿದ ಗೋರಿಗಳು ಹಾಳಾಗಿವೆ. ಈ ಬೃಹತ್ ಶಿಲಾಸಮಾಧಿಗಳು ಕಂಡು ಬಂದಿರುವ ಜಮೀನಿನಲ್ಲಿ ಸುಮಾರು ನಾಲ್ಕು ಎಕರೆ ಭೂಮಿಯ ಮಣ್ಣು ಬೂದಿ ಬಣ್ಣದ್ದಾಗಿದೆ. ಪ್ರಾಯಶಃ ಇಲ್ಲಿ ಪಶುಪಾಲನ ಸಂಸ್ಕೃತಿಯಿದ್ದು ಸಂಗ್ರಹವಾದ ಸಗಣಿಯನ್ನು ೧೨೦೦° ಸೆಂಟಿಗ್ರೇಡ್ ಶಾಖದಲ್ಲಿ ಸುಟ್ಟಿರುವುದರಿಂದ ಈ ಬೂದಿ ಮಣ್ಣು ನಿರ್ಮಾಣವಾಗಿರಬಹುದು. ಕುಡತಿನಿ (ಬಳ್ಳಾರಿ ಜಿಲ್ಲೆ) ಮತ್ತು ಹಟ್ಟಿ(ರಾಯಚೂರು ಜಿಲ್ಲೆ)ಯಲ್ಲಿ ರಾಬರ್ಟ್ ಬ್ರೂಸ್‌ಫೂಟ್‌ಅರವರು ನವಶಿಲಾಯುಗಕ್ಕೆ ಸೇರಿದ ಬೂದಿ ದಿನ್ನೆಗಳನ್ನು ಪತ್ತೆ ಹಚ್ಚಿದ್ದಾರೆ. ಗುತ್ತಲ ಹುಣಸೆ ಗ್ರಾಮದ ನಾಲ್ಕು ಎಕರೆ ಜಮೀನಿನಲ್ಲಿ ದೊಡ್ಡ ಪ್ರಮಾಣದ ಪಶುಪಾಲನೆ ಸಂಸ್ಕೃತಿ ನೆಲೆಸಿತ್ತು ಎಂದು ಇಲ್ಲಿರುವ ಅವಶೇಷಗಳಿಂದ ಇಲ್ಲೊಂದು ಬೂದಿ ದಿನ್ನೆಗಳಿದ್ದವೆಂದು ಗ್ರಹಿಸಬಹುದು. ಅಲ್ಲದೆ ಇಲ್ಲಿ ಕೆಂಪು ಮತ್ತು ಕಪ್ಪು ಬಣ್ಣದ ಮಡಿಕೆಯ ಚೂರುಗಳು ಅಧಿಕವಾಗಿ ದೊರೆತಿವೆ.[೧೩]

ಕನಕಪುರದಿಂದ ಮೇಕೆ ದಾಟಿಗೆ ಹೋಗುವ ಮಾರ್ಗದಲ್ಲಿ ಮರಳೇಗವಿ ಮಠದ ಉತ್ತರಕ್ಕೆ ಅರ್ಧ ಕಿ.ಮೀ. ದೂರದಲ್ಲಿರುವ ಮುನೇಶ್ವರನ ಬೆಟ್ಟದ ಬಳಿ ವೃತ್ತವ್ಯಾಸವಿರುವ ಸುಮಾರು ೨೦ ಬೃಹತ್ ಶಿಲಾಗೋರಿಗಳು ಕಂಡುಬಂದಿವೆ. ಇವುಗಳಲ್ಲಿ ಪೂರ್ವ ಭಾಗದ ಕಲ್ಲಿನಲ್ಲಿ ವೃತ್ತಾಕಾರದ ಒಂದು ಸಣ್ಣ ಕಿಂಡಿಯನ್ನು ಕಾಣಬಹುದು. ಮೊದಲನೇ ಶಿಲಾಗೋರಿಯ ಸುತ್ತಲು ೨೪ ದೊಡ್ಡ ಗಾತ್ರದ ದುಂಡಾಕಾರದ ಕಲ್ಲುಗಳಿಂದ ರಚಿಸಿರುವ ವೃತ್ತವಿದೆ.[೧೪] ಅದರ

ಮಧ್ಯದ ಕೋಣೆ ಗೋರಿಯ ಎರಡು ಬದಿಯಲ್ಲಿರುವ ಕಲ್ಲಿನ ಹಲಗೆಗಳನ್ನು ಮುತ್ತುರಾಜು ಅವರು ಸಂಶೋಧಿಸಿ ಅಧ್ಯಯನ ಮಾಡಿದ್ದಾರೆ. ಇದರ ಎಡಬದಿ ಹಾಗೂ ಬಲಬದಿಯಲ್ಲಿರುವ ಶಿಲಾಗೋರಿಗಳು ನಾಶಗೊಂಡಿದ್ದು ಮೇಲಿನ ಮುಚ್ಚಳಿಕೆ ಕಲ್ಲುಗಳು ಮಾತ್ರ ಉಳಿದಿವೆ. ಈ ಶಿಲಾಗೋರಿಗಳ ಅಧ್ಯಯನದಿಂದ ಸುಮಾರು ಕ್ರಿಪೂ. ೮೦೦ರಲ್ಲೇ ಮರಳೇ ಗವಿಮಠ ಪ್ರದೇಶ ಪ್ರಾಗಿತಿಹಾಸ ಕಾಲದ ಜನವಸತಿ ನೆಲೆಯಾಗಿತ್ತು ಎಂದು ತಿಳಿಯುತ್ತದೆ.

ಕನಕಪುರ ಪಟ್ಟಣಕ್ಕೆ ಸಮೀಪದ ಸುಮಾರು ೫ ಕಿ.ಮೀ. ದೂರದಲ್ಲಿ ತಿಗಳರಹೊಸಳ್ಳಿ ಗ್ರಾಮದ ಬಳಿ ಹತ್ತು ಬೃಹತ್ ಶಿಲಾಗೋರಿಗಳು ಕಂಡು ಬಂದಿವೆ. ಈ ಗ್ರಾಮಕ್ಕೆ ಸಮೀಪದಲ್ಲೇ ಇರುವ ಹುಲಿಕಲ್ಲು ಬೆಟ್ಟದಲ್ಲಿನ ಒಂದು ಬೃಹತ್ ಶಿಲಾಯುಗದ ಗೋರಿಯ ಒಳಗೆ ಉದ್ದನೆಯ ಬೂದು ಬಣ್ಣದ ಮೂರು ಕಾಲುಗಳುಳ್ಳ ಮಣ್ಣಿನ ಮಡಿಕೆಯಲ್ಲಿ ಮನುಷ್ಯರ ಮೂಳೆಗಳ ಅವಶೇಷಗಳು ದೊರೆತಿವೆ.[೧೫]

ಸಾತನೂರು ಹೋಬಳಿ ಹಲಸೂರು ಗ್ರಾಮದ ದಕ್ಷಿಣಕ್ಕೆ ಸುಮಾರು ೮ ಕಿ.ಮೀ. ದೂರದ ಅರಣ್ಯ ಪ್ರದೇಶದಲ್ಲಿ ಸೂಳೆಕಲ್‌ಮಠ ಗುಹೆಯಿದೆ. ಸೂಳೆಕಲ್ಲು ಎಂಬುದಕ್ಕೆ ಇಲ್ಲಿನ ಜನಪದರಲ್ಲಿ ಐತಿಹ್ಯವೊಂದಿದೆ. ಆದರೆ ವಾಸ್ತವದಲ್ಲಿ ಸೀಳುಕಲ್ಲನ್ನು ಸೂಳೆಕಲ್ಲು ಎಂದು ಕರೆಯಲಾಗಿದೆ. ದೊಡ್ಡದಾದ ಬಂಡೆಯಿಂದ ಬೇರ್ಪಟ್ಟು ಬಿದ್ದಿರುವ ಸೀಳು ಬಂಡೆಯ ಮೇಲೆ ಕುಳಿತು ಕಲ್ಲುಮನೆಯ ಒಳಚಾವಣಿಯಲ್ಲಿ ಚಿತ್ರಗಳನ್ನು ಬರೆದಿರುವುದು ಗಮನಾರ್ಹವಾಗಿದೆ.

ಕಲ್ಲು ಮನೆಯ (Rock Shetter) ಒಳಭಾಗ ರೂಟ್‌ಸ್ಕ್ವೇರ್ ಆಕಾರದಲ್ಲಿದ್ದು ಒಳಭಾಗದಲ್ಲಿ ೩೬ ಅಡಿ ಅಗಲ, ೨೪ ಅಡಿ ಉದ್ದವಾಗಿದೆ. ಕಲ್ಲು ಮನೆಯ ಅರ್ಧಭಾಗದಲ್ಲಿ ಒಂಬತ್ತು ಲಂಬರೇಖೆಗಳ ಮೇಲೆ ಒಂದು ಅಡ್ಡರೇಖೆಯಿಂದ ತೋರಣದ ರೀತಿಯಲ್ಲಿ ಬಿಳಿ ಬಣ್ಣದ ಚಿತ್ರ ಮೂಡಿಸಿದ್ದಾರೆ. ಇಂತಹ ಗವಿವರ್ಣ ರೇಖಾಚಿತ್ರಗಳು ಕೊಪ್ಪಳ ಜಿಲ್ಲೆಯ ಹಿರೆಬೆನಕಲ್ಲಿನ ೬ನೇ ಗುಹೆಯಲ್ಲಿ ಮೂರು ಸನಾಂತರ ಲಂಬರೇಖೆಗಳನ್ನು ಮೂರು ಸಮನಾಂತರ ಅಡ್ಡರೇಖೆಗಳಿಂದ ಛೇದಿಸಿದ ರೇಖಾಚಿತ್ರವನ್ನು ಎಲ್. ಮನ್ ಅವರು ೧೯೪೫ರಲ್ಲಿ ಶೋಧಿಸಿದ್ದಾರೆ. ಈ ರೀತಿಯ ಗವಿವರ್ಣದ ಚಿತ್ರಗಳು ಗುಡ್ನಾಪುರ, ನವಿಲುತೀರ್ಥ, ಚಿತ್ರದುರ್ಗ ಮೊದಲಾದ ಕಡೆಗಳಲ್ಲಿ ಕಂಡು ಬಂದಿವೆ.[೧೬] ಸೂಳೆಕಲ್‌ಮಠದ ರೇಖಾಚಿತ್ರಗಳನ್ನು ಶೋಧಿಸಿರುವ ಮುತ್ತುರಾಜು ಅವರು ಇದು ಧಾರ್ಮಿಕ ಆಚರಣೆಯ ನಂಬಿಕೆಯ ಸಂಕೇತವೋ ಅಥವಾ ಕುಟುಂಬ ವರ್ಗದ ಎಣಿಕೆಯೋ ಆಗಿರಬಹುದೆಂದ ಅಭಿಪ್ರಾಯ ಪಟ್ಟಿದ್ದಾರೆ. ಪ್ರಾಣಿಯೊಂದರ ಮೇಲೆ ಕುಳಿತ ಮನುಷ್ಯನ ಚಿತ್ರವಿದೆ. ಇದನ್ನು ಗಮನಿಸಿದರೆ ಈ ಜನರು ಪ್ರಾಣಿಯನ್ನು ಪಳಗಿಸಿ, ಸಾಕಿ,ಬಳಕೆ ಮಾಡುವ ಕಲೆಯನ್ನು ಅರಿತಿದ್ದರೆಂದು ತಿಳಿಯುತ್ತದೆ.

ಈ ಗುಹೆಯ ಬಳಿಯಲ್ಲೇ ಬ್ರಾಹ್ಮ ಲಿಪಿಗೆ ಹೋಲುವ ಫ್.ಕೊ.ಅ. ಅಕ್ಷರಗಳ ಬರಹದ ಕ್ರಿ.ಶ. ೬ನೇ ಶತಮಾನಕ್ಕೆ ಸೇರುವ ಶಂಖಲಿಪಿಯ ಶಾಸನವೊಂದಿದ್ದು ಅದರಲ್ಲಿ ಸೂರ್ಯ,

ಚಂದ್ರನ ಚಿತ್ರಗಳಿದ್ದು ನಾಲ್ಕು ಸಾಲುಗಳನ್ನು ಹೊಂದಿದೆ. ಕೆಂಪು ಬಣ್ಣದಿಂದ ಬರೆದ ಈ ಶಂಖ ಲಿಪಿ ಶಾಸನ ದಕ್ಷಿಣ ಕರ್ನಾಟಕದಲ್ಲಿ ಅಪರೂಪವಾಗಿ ದೊರೆತಿರುವ ಶಾಸನಗಳಲ್ಲಿ ಒಂದಾಗಿದೆ. ಈ ಮಾದರಿಯ ಶಂಖ ಲಿಪಿ ಶಾಸನ ಚಿತ್ರದುರ್ಗದ ಬಳಿ ದೋಣಿಯೊಂದರ ಮೇಲೆ ಕಂಡು ಬಂದಿದೆ.[೨] ಮಾಗಡಿಯ ದೊಡ್ಡಪಾಳ್ಯದ ಬಳಿ ಸಣ್ಣ ಗುಹೆಯೊಂದರಲ್ಲಿ ಕೆಂಪು ಬಣ್ಣದಿಂದ ರಚಿಸಿರುವ ಶಂಖ ಶಾಸನವನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಗುಹಾ ಚಿತ್ರಗಳು ನೂತನ ಶಿಲಾಯುಗದಲ್ಲಿ ಪ್ರಾರಂಭವಾಗಿ ಬೃಹತ್ ಶಿಲಾಯುಗದಲ್ಲಿ ವಿಕಾಸ ಹೊಂದಿವೆ. ದಕ್ಷಿಣ ಕರ್ನಾಟಕದಲ್ಲಿನ ಬೃಹತ್ ಶಿಲಾಯುಗದ ಕಾಲವನ್ನು ಈಗಾಗಲೇ ಕ್ರಿ.ಪೂ.ಸು. ೮೦೦ ವರ್ಷಗಳಿಂದ ಪ್ರಾರಂಭವಾಗಿದೆ ಎಂದು ನಿರ್ಧರಿಸಲಾಗಿದೆ. ಈ ಹಿನ್ನೆಲೆಯಿಂದ ಸೂಳೆಕಲ್ ಮಠದ ಗುಹಾಚಿತ್ರಗಳು ಬೃಹತ್ ಶಿಲಾಯುಗಕ್ಕೆ ಸೇರಿದವುಗಳೆಂದು ಹೇಳಬಹುದು. ಅಲ್ಲದೆ ಅದರ ಬಳಿಯಲ್ಲೇ ದೊರೆತ ಶವಗುಣಿಗಳು ಸಹ ಈ ಗುಹಾಚಿತ್ರಗಳು ಬೃಹತ್ ಶಿಲಾಯುಗಕ್ಕೆ ಸೇರಿವೆ ಎಂಬ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ.

೨.೩. ಚಾರಿತ್ರಿಕ ಕಾಲ

ಕನಕಪುರ ಪರಿಸರ ಪ್ರಾಗಿತಿಹಾಸ ಕಾಲದಿಂದಲೂ ಜನವಸತಿ ನೆಲೆಯ ಪ್ರದೇಶವಾಗಿತ್ತು. ಇದರ ಸುತ್ತಮುತ್ತ ಅನೇಕ ಸ್ಥಳಗಳಲ್ಲಿ ಸೂಕ್ಷ್ಮ ಶಿಲಾಯುಗದ ಆಯುಧಗಳು ಮತ್ತು ಕಬ್ಬಿಣ ಯುಗದ ಬೃಹತ್ ಶಿಲಾಸಮಾಧಿಗಳು ದೊರೆತಿವೆ. ತಾಲೂಕಿನ ಕಾಡಹಳ್ಳಿ, ಗೊಟ್ಟಿಗೆ ಹಳ್ಳಿ, ಮರಳೇಗವಿಮಠ, ಸೂಳೆಕಲ್‌ಮಠ ಮುಂತಾದ ಪ್ರದೇಶಗಳಲ್ಲಿ ಆದಿ ಚಾರಿತ್ರಿಕ ಕಾಲದ ನೆಲೆಗಳು ಕಂಡು ಬಂದಿವೆ.

ಈ ಪ್ರದೇಶದ ರಾಜಕೀಯ ಇತಿಹಾಸ ತಲಕಾಡಿನ ಗಂಗರ ಕಾಲದಿಂದ ಪ್ರಾರಂಭ ವಾಗುವುದರಿಂದ ಕನಕಪುರ ಗಂಗವಾಡಿ ೯೬.೦೦೦ ಸೀಮೆಗೆ ಸೇರಿತ್ತು ಎಂದು ಇಲ್ಲಿ ದೊರೆತಿರುವ ಶಾಸನಾಧಾರಗಳಿಂದ ತಿಳಿಯಬಹುದು. ಕ್ರಿ.ಶ. ೮೭೦ರ ಅವಧಿಯಲ್ಲಿ ಈ ಪ್ರದೇಶವು ಗಂಗರ ರಾಚಮಲ್ಲನ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ. ೧೦೧೬ರಲ್ಲಿ ರಾಜರಾಜ ಚೋಳನ ಮುದಿಗೊಂಡ ಚೋಳ ಮಂಡಕ್ಕೆ ಸೇರಿತ್ತು. ಕ್ರಿ.ಶ. ೧೩೯೯ರಲ್ಲಿ ಕಾಣಿಕಾರನಹಳ್ಳಿ ಎಂದು ಕರೆಯಲ್ಪಡುತ್ತಿದ್ದ ಈ ಪ್ರದೇಶವು ಹೊಯ್ಸಳರ ಮೂರನೇ ಬಲ್ಲಾಳನ ಆಳ್ವಿಕೆಗೆ ಸೇರಿತ್ತು. ಕ್ರಿ.ಶ. ೧೪೦೦ರಲ್ಲಿ ವಿಜಯನಗರ ಅರಸರ ಅಧೀನದಲ್ಲಿದ್ದ ಚನ್ನಪಟ್ಟಣದ ಪಾಳೆಯಗಾರ ಜಗದೇವರಾಯನ ಆಳ್ವಿಕೆಗೆ ಒಳಪಟ್ಟಿತ್ತು.

ಹೈದರಾಲಿ, ಟಿಪ್ಪುಸುಲ್ತಾನ್ ಕಾಲದಲ್ಲಿ ಕಾನಕಾನಹಳ್ಳಿ (ಕನಕಪುರ) ಸೈನಿಕರ ಪ್ರಮುಖ ನೆಲೆಯಾಗಿತ್ತು. ೧೭೯೩ -೧೭೯೯ರ ಕಾಲಘಟ್ಟದಲ್ಲಿ ಬ್ರಿಟೀಷ್ ಸೈನ್ಯ ಕಾನಕಾನಹಳ್ಳಿ ಮಾರ್ಗದ ಮೂಲಕ ಶ್ರೀರಂಗಪಟ್ಟಣಕ್ಕೆ ಹೋಗುತ್ತಿತೆಂದು ದಾಖಲೆಗಳಿವೆ.[೫] ಈ ಸಂದರ್ಭದಲ್ಲಿ ಬ್ರಿಟೀಷ್ ಸೈನ್ಯ ಕಾನಕಾನಹಳ್ಳಿಯ ತಂಗುತ್ತಿತ್ತು. ಇದನ್ನು ತಡೆಯಲು ಟಿಪ್ಪು ಸುಲ್ತಾನ್ ಕಾನಕಾನಹಳ್ಳಿಗೆ ಎರಡು ಬಾರಿ ಬೆಂಕಿ ಹಾಕಿ ಸುಟ್ಟನೆಂದು ಹೇಳಲಾಗುತ್ತಿದೆ. ಖಾನ್‌ಖಾನ್ ಎಂಬ ಮುಸ್ಲಿಂ

ಪಾಳೆಯಗಾರ ಇಲ್ಲಿ ಆಳ್ವಿಕೆ ಮಾಡುತ್ತಿದ್ದನು ಹಾಗಾಗಿ ಕಾನಕಾನಹಳ್ಳಿ ಎಂಬ ಹೆಸರು ಬಂದಿದೆ ಎಂಬುದು ಸಹ ಸ್ಥಳೀಯರ ಅಭಿಪ್ರಾಯವಾಗಿದೆ. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾನಕಾನಹಳ್ಳಿಯ ಪಾತ್ರವಿದ್ದು, ಮಹಾತ್ಮಗಾಂಧಿಯವರು ೧೯೨೭ ಮತ್ತು ೧೯೩೪ರಲ್ಲಿ ಈ ಪ್ರದೇಶಕ್ಕೆ ಭೇಟಿ ನೀಡಿದ್ದಾರೆ. ಇತಿಹಾಸ ಕಾಲಚಕ್ರಕ್ಕೆ ಸಿಕ್ಕಿದ ಕಾಣಿಕಾರನಹಳ್ಳಿಯು, ಕಾನಕಾನಹಳ್ಳಿಯಾಗಿ ನಂತರ ಕನಕಪುರವಾಗಿ ರೂಪುಗೊಂಡಿದೆ. ೧೯೪೯ರಲ್ಲಿ ಅಂದಿನ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯ ಮತ್ತು ಕನಕಪುರ ತಾಲೂಕಿನ ಶಾಸಕರಾಗಿದ್ದ ಎಸ್. ಕರಿಯಪ್ಪನವರ ನೇತೃತ್ವದಲ್ಲಿ 'ಕನಕಪುರ' ಎಂದು ಪುನರ್ನಾಮಕರಣಗೊಂಡಿತು.[೧೯]

ಗಂಗರು

ಕರ್ನಾಟಕದ ದಕ್ಷಿಣ ಭಾಗವನ್ನು ಸುಮಾರು ಆರು ಶತಮಾನಗಳ ಕಾಲ ಆಳಿದ ಗಂಗರು ನಮ್ಮ ನಾಡಿನ ಇತಿಹಾಸದಲ್ಲಿ ಮಹತ್ತರ ಸ್ಥಾನ ಪಡೆದಿದ್ದಾರೆ. ಕ್ರಿ.ಶ. ೩೫೦-೫೫೦ರವರೆಗೆ ಸ್ವತಂತ್ರರಾಗಿ ನಂತರ ೧೦ನೇ ಶತಮಾನದವರೆಗೆ ಚಾಳುಕ್ಯರ ಮತ್ತು ರಾಷ್ಟ್ರಕೂಟರ ಬಲಶಾಲಿ ಸಾಮಂತರಾಗಿ ಆಡಳಿತ ನಡೆಸಿದ್ದಾರೆ. ಇವರು ಆಳಿದ ರಾಜ್ಯವನ್ನು ಗಂಗವಾಡಿ ೯೬.೦೦೦ ಎಂದು ಕರೆಯಲಾಗುತ್ತಿತ್ತು. ಆರಂಭದಲ್ಲಿ ಕೋಲಾರ ನಂತರ ತಲಕಾಡು ಇವರ ರಾಜಧಾನಿಯಾಗಿದ್ದರೆ, ಚನ್ನಪಟ್ಟಣದ ಹತ್ತಿರವಿರುವ ಮಾಕುಂದ ಕೆಲಕಾಲ ಇವರ ಉಪರಾಜಧಾನಿಯಾಗಿತ್ತು.

ಕನಕಪುರ ಪರಿಸರದ ರಾಜಕೀಯ ಇತಿಹಾಸದ ಪುಟಗಳು ತೆರೆದುಕೊಳ್ಳುವುದೇ ಈ ತಾಲೂಕಿನ ಹಲವು ಪ್ರದೇಶಗಳಲ್ಲಿ ದೊರೆತಿರುವ ಗಂಗರ ಕಾಲದ ವೀರಗಲ್ಲು ಮತ್ತು ಶಾಸನಗಳ ಆಧಾರದಿಂದ. ಆದರೆ ಕನಕಪುರ ಪಟ್ಟಣದಲ್ಲಿ ಗಂಗರ ರಾಜಕೀಯ ಚಟುವಟಿಕೆ ಕಂಡು ಬರದಿದ್ದರೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದೊರೆತಿರುವ ಶಾಸನ ಮತ್ತು ವೀರಗಲ್ಲುಗಳಿಂದ ಇದು ಗಂಗವಾಡಿ ೯೬.೦೦೦ ಸೀಮೆಗೆ ಸೇರಿತ್ತು ಎಂಬುದಾಗಿ ಕಂಡುಬಂದಿದೆ. ಸಾತನೂರು ಗ್ರಾಮದಲ್ಲಿ ದೊರೆತಿರುವ ವೀರಗಲ್ಲು ಇಮ್ಮಡಿ ರಾಚಮಲ್ಲನ (೮೭೦- ೯೧೯) ೨೯ನೇ ವರ್ಷದ ಆಳ್ವಿಕೆಯ ಕಾಲದ್ದಾಗಿದೆ.[೨೦] ಸಾಂತನೆಂಬುವನು ದರೋಡೆ ಕೋರರೊಂದಿಗೆ ಹೋರಾಡಿ ಸ್ವರ್ಗಸ್ತನಾಗಿರುವ ಸಂಗತಿಯನ್ನು ಇಲ್ಲಿನ ವೀರಗಲ್ಲೊಂದರಿಂದ (ನಂ. ೪-೪೯) ತಿಳಿಯಬಹುದು. ಇದೇ ವೀರಗಲ್ಲಿನಲ್ಲಿ ಗಂಗ ದೊರೆಯನ್ನು ಎರೆಯಪ್ಪರಸರ ಮಗ ಎಂಬ ಉಲ್ಲೇಖವಿದೆ. ಎರೆಯಪ್ಪನೇ ನೀತಿಮಾರ್ಗ ಎರೆಗಂಗ ಎಂಬ ಉಲ್ಲೇಖವಿರುವ ಈ ವೀರಗಲಸ್ನು ಸತ್ತ ವೀರ ಸಾಂತನೆಂಬುನನ ನೆನಪಿಗಾಗಿ ಹಾಕಲಾಗಿದೆ.

ಕನಕಪುರದ ಸಾತನೂರು ಹೋಬಳಿ ದೂಂತೂರು ಗ್ರಾಮಕ್ಕೆ ಸೇರಿದ ಕುಂದೂರು (ಕುಂತೂರು) ದೊಡ್ಡಿಯಲ್ಲಿ ದೊರೆತಿರುವ ವೀರಗಲ್ಲು (ನಂ. ೫೨-೯೦೦) ಗಂಗರ ಸೇನೆ ಮಾರನಮಗ ಮಂದಣ್ಣ(?) ಎಂಬುವನು ಇಲ್ಲಿ ತುರುಗೋಳು ಕಾಳಗ ನಡೆದಾಗ ಹೋರಾಡಿ ಪ್ರಾಣಾರ್ಪಣೆ ಮಾಡಿರುವ ಸಂಗತಿಯನ್ನು ಒಳಗೊಂಡಿದೆ.[೨೧] ಮತ್ತೊಂದು ವೀರಗಲ್ಲು ತೇರುಬೀದಿ

ಗ್ರಾಮದಲ್ಲಿದ್ದು ಭಾಷೆಯ ಆಧಾರದಿಂದ ಗುರುತಿಸುವುದಾದರೆ ಗಂಗರ ಕಾಲದ್ದೇ ಆಗಿರಬಹುದೆಂದು ಗುರುತಿಸಲಾಗಿದೆ. ಅಲ್ಲದೆ ಇದರ ಕಾಲ ೯ನೇ ಶತಮಾನಕ್ಕಿಂತಲೂ ಹಿಂದಕ್ಕೆ ಹೋಗಬಹುದಾದ ಸಾಧ್ಯತೆಯಿದೆ. ಈ ವೀರಗಲ್ಲಿನಲ್ಲಿ ಕಂಡು ಬಂದಿರುವ ಉಲ್ಲೇಖಗಳ ಆಧಾರದಿಂದ ಕಾನಕಾನಹಳ್ಳಿ (ಕನಕಪುರ) ಪ್ರದೇಶ ಗಂಗರ ಅರಸ ಇಮ್ಮಡಿ ರಾಚಮಲ್ಲನ (೮೭೦-೯೧೯) ಆಳ್ವಿಕೆಗೆ ಒಳಪಟ್ಟಿತ್ತು. ಒಂದನೆಯ ಬೂತುಗನ ಮಗ ಎರೆಗಂಗನ(೮೬೬-೯೩೦) ಆಡಳಿತಾವಧಿಯಲ್ಲಿ ಕೂಡ ಈ ಪ್ರದೇಶ ಗಂಗರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಾಲೂಕಿನ ಹಲವು ಕಡೆ ದೊರೆತಿರುವ ಶಾಸನಾಧಾರ ಗಳಿಂದ ತಿಳಿಯಬಹುದು.[೨೨]

ಕನಕಪುರ ತಾಲೂಕು ಗಂಗವಾಡಿ ೯೬.೦೦೦ ಸೀಮೆಗೆ ಸೇರಿತ್ತು ಎಂಬುದನ್ನು ಇಲ್ಲಿ ದೊರೆತಿರುವ ವೀರಗಲ್ಲುಗಳೇ ಸೂಚಿಸುತ್ತವೆ. ಈ ಎಲ್ಲಾ ವೀರಗಲ್ಲುಗಳಲ್ಲಿ 'ತುರುಗೋಳು', 'ಕಳ್ಳರ ಏರು' ಇಂತ ಸಾಮಾಜಿಕ ಸಂದರ್ಭಗಳು ಮಾತ್ರ ಗೋಚರಿಸಿವೆ ಎಂಬುದು ಇದುವರೆಗೆ ಕನಕಪುರ ಪರಿಸರ ಕುರಿತ ಅಧ್ಯಯನಗಳಲ್ಲಿ ದಾಖಲಿಸಲಾಗಿದೆ. ಈ ಅಂಶ ಒಪ್ಪಿತವಾದರೂ ಇಲ್ಲಿನ ವೀರರ ಹೋರಾಟದಲ್ಲಿ ಸಾಮಾಜಿಕ ಸಂದರ್ಭದ ಜೊತೆಗೆ ಸ್ಥಳೀಯ ರಾಜಕೀಯ ಅಂಶ ಅಡಗಿದೆ ಎಂಬುದನ್ನು ಮರೆಯಬಾರದು. ದೊರೆತಿರುವ ವೀರಗಲ್ಲುಗಳಲ್ಲಿ ಹೆಚ್ಚು ಪಾಳೆಗಾರರ ಮತ್ತು ಮಕ್ಕಳ ಹೋರಾಟಗಳೇ ಕಂಡು ಬಂದಿವೆ. ಈ ಹಿನ್ನೆಲೆಯಲ್ಲಿ ರಾಜ್ಯದ ರಕ್ಷಣೆ ರಾಜನಿಗೆ ಎಷ್ಟು ಮುಖ್ಯವೋ ಸ್ಥಳೀಯ ಪ್ರದೇಶಗಳ ರಕ್ಷಣೆಯಲ್ಲಿ ವೀರರ ಹೋರಾಟ ಅಷ್ಟೇ ಮುಖ್ಯವಾಗಿದೆ.

ದಕ್ಷಿಣ ಭಾರತದ ತಮಿಳುನಾಡಿನಲ್ಲಿ ತಂಜಾವೂರನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದ ಚೋಳರು ಕ್ರಿ.ಶ. ೯೦೦ರ ವೇಳೆಗೆ ಪ್ರಬಲರಾಗಿ ೧೦೦೦ದಲ್ಲಿ ರಾಜ್ಯ ವಿಸ್ತರಣಾ ಕಾರ್ಯದಲ್ಲಿ ತೊಡಗಿದರು. ಕ್ರಿ.ಶ. ೧೦೦೪ರಲ್ಲಿ ರಾಜೇಂದ್ರ ಚೋಳನು ತಲಕಾಡನ್ನು ವಶಪಡಿಸಿಕೊಂಡು ಗಂಗರ ಪರಮಾಧಿಕಾರವನ್ನು ತೊಡೆದು ಹಾಕಿ ಗಂಗವಾಡಿ ೯೬.೦೦೦ ಸೀಮೆಯನ್ನು ವಶಪಡಿಸಿಕೊಂಡನು.[೨೩] ಗಂಗವಾಡಿ ೯೬.೦೦೦ ಸೀಮೆಗೆ ಸೇರಿದ್ದ ಕನಕಪುರ ಪ್ರದೇಶ ಮುದಿಗೊಂಡ ಚೋಳ ಮಂಡಲಕ್ಕೆ ಸೇರಿ ಚೋಳರ ವಶವಾಯಿತು.

ಚೋಳರು

ದಕ್ಷಿಣ ಭಾರತವನ್ನು ಆಳಿದ ಪ್ರಮುಖ ರಾಜಮನೆತನಗಳಲ್ಲಿ ಒಂದಾದ ಚೋಳ ರಾಜಮನೆತನವು ಸುಮಾರು ೮೫೦-೧೨೫೦ರವರೆಗೆ ಆಳ್ವಿಕೆ ಮಾಡಿದೆ. ತಮಿಳುನಾಡಿನ ತಂಜಾವೂರನ್ನು ರಾಜಧಾನಿಯಾಗಿ ಮಾಡಿಕೊಂಡು ದಕ್ಷಿಣ ಭಾರತದ ಹಲವು ಪ್ರದೇಶಗಳನ್ನು ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಂಡು ಆಡಳಿತ ನಡೆಸಿದ್ದಾರೆ. ಪಲ್ಲವರ ಅಧೀನದಲ್ಲಿ ಮಹಾಮಂಡಲೇಶ್ವರರಾಗಿ ಸೇವೆ ಸಲ್ಲಿಸುತ್ತಾ ಸ್ವತಂತ್ರ ಅಧಿಕಾರವನ್ನು ಕ್ರಿ.ಶ. ೮೫೦ರಲ್ಲಿ ಸ್ಥಾಪಿಸಿಕೊಂಡರು. ಸುಮಾರು ಮೂರು ಶತಮಾನಗಳವರೆಗೆ ದಕ್ಷಿಣ ಭಾರತವನ್ನು ಆಳ್ವಿಕೆ ಮಾಡಿರುವ ಚೋಳರು ಕ್ರಿ.ಶ. ೯೫೦ರ ನಂತರ ಕಾಲದಲ್ಲಿ ರಾಜ್ಯ ವಿಸ್ತರಣೆಯಲ್ಲಿ ತೊಡಗಿದರು.

ಕ್ರಿ.ಶ. ೧೦೦೪ರಲ್ಲಿ ರಾಜೇಂದ್ರ ಚೋಳ ತಲಕಾಡನ್ನು ವಶಪಡಿಸಿಕೊಂಡು ಅಲ್ಲಿದ್ದ ಗಂಗರ ಪರಮಾಧಿಕಾರವನ್ನು ತೊಡೆದು ಹಾಕಿ ಚೋಳರ ಅಧಿಪತ್ಯಕ್ಕೆ ಬುನಾದಿ ಹಾಕಿದನು. ಗಂಗವಾಡಿ ೯೬.೦೦೦ ಸೀಮೆಗೆ ಸೇರಿದ್ದ ಕರ್ನಾಟಕದ ಪ್ರದೇಶಗಳು ಚೋಳರ ಅಧಿಪತ್ಯಕ್ಕೊಳಪಟ್ಟವು.

ಕನಕಪುರ ಪಟ್ಟಣ ಪರಿಸರವೂ ಕೂಡ ಗಂಗವಾಡಿ ೯೬.೦೦೦ ಸೀಮೆಗೆ ಸೇರಿದ ಒಂದು ಭಾಗವಾಗಿದ್ದರಿಂದ ಚೋಳರ ಅಧೀನಕ್ಕೆ ಒಳಪಟ್ಟಿತ್ತು. ಕನಕಪುರ ತಾಲೂಕಿನಲ್ಲಿ ಚೋಳರು ತಮ್ಮ ರಾಜಕೀಯ ಚಟುವಟಿಕೆಗಳನ್ನು ನಡೆಸಿರುವುದಕ್ಕೆ ಸಂಬಂಧಿಸಿದಂತೆ ನಮಗೆ ತಾಲೂಕಿನ ಹಲವು ಪ್ರದೇಶದಲ್ಲಿ ಶಾಸನಗಳು ದೊರೆತಿವೆ. ಇದರಿಂದ ಈ ಪ್ರದೇಶವು ಚೋಳರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ತಿಳಿಯಲಾಗಿದೆ.

ಕರ್ನಾಟಕದಲ್ಲಿ ಹೊಯ್ಸಳರು ಪ್ರಬಲರಾಗುವವರೆಗೂ ಚೋಳರು ಗಂಗವಾಡಿಗೆ ಸೇರಿದ್ದ ಕನಕಪುರ ಪ್ರದೇಶವನ್ನು ಚಿಕ್ಕ ಪ್ರಾಂತ್ಯವಾಗಿ ಮಾಡಿಕೊಂಡ ಅಭಾದಿತವಾಗಿ ಆಡಳಿತ ಮಾಡಿದ್ದಾರೆ. ಚೋಳರ ಪ್ರಮುಖ ದೊರೆ ರಾಜರಾಜ ಚೋಳನು (ಕ್ರಿ.ಶ. ೯೮೫ - ೧೦೧೬) ಗಂಗವಾಡಿಗೆ ಮುದಿಗೊಂಡ ಚೋಳಮಂಡ ಎಂದು ಹೆಸರು ಕೊಟ್ಟನು.[೨೫] ಅನಂತರ ಚನ್ನಪಟ್ಟಣ ಸೀಮೆ ಹಾಗೂ ಅದಕ್ಕೆ ಸೇರಿದ್ದ ಕನಕಪುರದ ಪ್ರದೇಶಗಳು ಕಿಳಲೆನಾಡಿನ ಭಾಗವಾಗಿ ಮುದಿಗೊಂಡ ಚೋಳ ಮಂಡಲಕ್ಕೆ ಸೇರಿಕೊಂಡವೆಂದು ತೋರುತ್ತದೆ. ಹೊಯ್ಸಳ ವಿಷ್ಣುವರ್ಧನನ ದಂಡನಾಯಕ ಗಂಗರಾಜನು ಗಂಗವಾಡಿಯಲ್ಲಿ ಚೋಳರನ್ನು ಸೋಲಿಸಿದ್ದರಿಂದ ಕೆಲವು ಜಿಲ್ಲೆಗಳು ಮಾತ್ರ ಚೋಳರ ವಶದಲ್ಲಿ ಉಳಿದುಕೊಂಡಿದ್ದವು. ಹಿಂದೆ ಬೆಂಗಳೂರು ಜಿಲ್ಲಾ ವ್ಯಾಪ್ತಿಗೆ ಸೇರಿದ್ದ ಕನಕಪುರ ಬೆಂಗಳೂರಿನೊಂದಿಗೆ ಚೋಳರ ವಶವಾಯಿತು.

ಕನಕಪುರದ ಮರಳವಾಡಿ ಹೋಬಳಿ ಎಲಚವಾಡಿ ಗ್ರಾಮದ ಹೊನ್ನೇಗೌಡರ ಹೊಲದಲ್ಲಿ ದೊರೆತಿರುವ ಒಂದು ತಮಿಳು ಶಾಸನ (ಸಂ. ೧೨-೧೧೧೮) ವೀರಗಲ್ಲಾಗಿದೆ. ಇದು ಚಿಕ್ಕ ಗಾಮುಂಡನ ಮಗ ಶಿಂಜಗಾಮುಂಡನು ಹುಲಿಯೊಂದಿಗೆ ಹೋರಾಡಿ ಸತ್ತ ಸಂಗತಿಯಿಂದ ಕೂಡಿದೆ. ಆ ಸಂದರ್ಭದಲ್ಲಿ ಅವನ ಮಗ ಗಾಮುಂಡ ಮಗಳು ಶಿಕ್ಕವ್ವೆ (ಚಿಕ್ಕವ್ವೆ) ಎಂಬುವಳು ಸಹಗಮನ ಮಾಡಿರುವ ಉಲ್ಲೇಖವಿದೆ. ಎಲಚವಾಡಿ ಗ್ರಾಮ ತಮಿಳುನಾಡಿಗೆ ಅತೀ ಸಮೀಪದಲ್ಲಿರುವ ಪ್ರದೇಶವಾಗಿರುವುದರಿಂದ. ಕಾನಕಾನಹಳ್ಳಿಯ (ಕನಕಪುರ) ಸೀಗಲನಾಡಿಗಿಂತ ಮುಂಚೆಯೆ ಚೋಳರ ಪ್ರಭಾವ ಎಲಚವಾಡಿ ಗ್ರಾಮದ ಮೇಲೆ ಇತ್ತೆಂದು ಅಭಿಪ್ರಾಯಪಡಬಹುದು.

ಮೊದಲನೆಯ ರಾಜೇಂದ್ರ ಚೋಳನು ಗಂಗ ಸಾಮ್ರಾಜ್ಯವನ್ನು ವಶಪಡಿಸಿಕೊಂಡ ನಂತರ ಅದನ್ನು ಆಡಳಿತದ ಅನುಕೂಲಕ್ಕಾಗಿ ಚೋಳ ಸಾಮ್ರಾಜ್ಯದ ಮಾದರಿಯಲ್ಲೇ ತುಂಡು - ತುಂಡಾಗಿ ವಿಭಜಿಸಿ ವಿವಿಧ ಮಂಡಲಗಳನ್ನಾಗಿ ಮಾಡಿಕೊಂಡನು.[೨೬] ಇದರಿಂದ ಕನಕಪುರ ಪ್ರದೇಶ ಕೂಡ ಮುದಿಗೊಂಡ ಚೋಳ ಮಂಡಲಕ್ಕೆ ಸೇರಿದ್ದ ಭಾಗವಾಗಿತ್ತು. ಅದರಲ್ಲಿ ಕಿಳಲೆನಾಡು, ಮೊರಸುನಾಡು, ಸೀಗಲನಾಡು, ಹೊಮ್ಮಳಿಗೆ ನಾಡು, ಚೊಕ್ಕನಾಡು, ಅಚ್ಚಲುನಾಡು,

ರಾಜೇಂದ್ರ ಚೋಳನ ಒಳನಾಡು ಎಂಬ ಉಪ ವಿಭಾಗಗಳಿದ್ದವು. ಚೋಳ ರಾಜರ ಅಧಿಕಾರವಧಿಯಲ್ಲಿ ಕನಕಪುರದ ಸ್ಥಳೀಯ ಆಡಳಿತ ವ್ಯವಸ್ಥೆ ಪಾಳೆಯಗಾರರ ಮತ್ತು ನಾಡಪ್ರಭುಗಳ ನೇತೃತ್ವದಲ್ಲಿ ನಡೆಯುತ್ತಿತ್ತು ಎಂದು ತಿಳಿಯಬಹುದು.

ಹನ್ನೊಂದನೇ ಶತಮಾನದ ವೇಳೆಗೆ ಕರ್ನಾಟಕದಲ್ಲಿ ಹೊಯ್ಸಳರು ಪ್ರಬಲರಾದರು. ಗಂಗವಾಡಿಯನ್ನು ಚೋಳರ ಅಧಿಪತ್ಯದಿಂದ ಮುಕ್ತಿಗೊಳಿಸಲು ಹೊಯ್ಸಳರ ಅರಸ ವಿಷ್ಣುವರ್ಧನ ತನ್ನ ದಂಡನಾಯಕ ಗಂಗರಾಜನ ನಾಯಕತ್ವದಲ್ಲಿ ಸೈನ್ಯವನ್ನು ತಲಕಾಡಿಗೆ ಕಳುಹಿಸಿದನು. ಈ ಸೇನೆ ತಲಕಾಡಿನ ರಾಜ್ಯಪಾಲನಾಗಿದ್ದ ಆದಿಯಮನನ್ನು ಸೋಲಿಸಿ ತಲಕಾಡನ್ನು ವಶಪಡಿಸಿಕೊಂಡನು.

ಹೊಯ್ಸಳರು

ದಕ್ಷಿಣ ಕರ್ನಾಟಕದ ಪ್ರಸಿದ್ಧ ರಾಜಮನೆತನಗಳಲ್ಲಿ ಒಬ್ಬರಾದ ಹೊಯ್ಸಳರು ಆರಂಭದಲ್ಲಿ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿದ್ದರು. ಚಾಲುಕ್ಯರ ಅವನತಿಯ ಕಾಲದಲ್ಲಿ ಸ್ವತಂತ್ರರಾದ ಹೊಯ್ಸಳರು ೧೧ನೇ ಶತಮಾನದ ಆದಿಭಾಗದಿಂದ ೧೪ನೇ ಶತಮಾನದ ಮಧ್ಯಭಾಗದವರೆಗೆ ಮೂರು ಶತಮಾನಗಳಿಗೂ ಹೆಚ್ಚು ಕಾಲ ನಿರಂತರವಾಗಿ ದಕ್ಷಿಣ ಭಾರತದಲ್ಲಿ ಆಳ್ವಿಕೆ ಮಾಡಿದ್ದಾರೆ. ಹೊಯ್ಸಳರ ಕೊಡುಗೆಯನ್ನು ಹೆಚ್ಚು ಸಾಂಸ್ಕೃತಿಕ ಕ್ಷೇತ್ರದಲ್ಲಿ ಕಾಣುವುದರಿಂದ ವಿಶಿಷ್ಟಾದ್ವೈತ ಮತ ಹೆಚ್ಚು ಪ್ರಚಾರ ಪಡೆಯಿತು. ಇವರು ಕಟ್ಟಿಸಿದ ದೇವಾಲಯಗಳು ಅವರ ಹೆಸರನ್ನು ಚಿರಸ್ಥಾಯಿಯಾಗಿಸಿವೆ, ಅಲ್ಲದೆ ಭಾರತದ ವಾಸ್ತುಶಿಲ್ಪದ ಕ್ಷೇತ್ರದಲ್ಲಿ ಅವರದೇ ಆದ 'ಹೊಯ್ಸಳ ಶೈಲಿ' ರೂಪುಗೊಂಡಿತು.

ದಕ್ಷಿಣ ಕರ್ನಾಟಕದಲ್ಲಿ ಹೊಯ್ಸಳರ ಪ್ರಭಾವ ಮತ್ತು ವ್ಯಾಪ್ತಿ ಪ್ರಖ್ಯಾತವಾದುದು. ಚೋಳ ಮತ್ತು ಪಾಂಡ್ಯರನ್ನು ಸೋಲಿಸಿ ಕನ್ನಡ ರಾಜ್ಯವನ್ನು ವಿಸ್ತರಿಸಿದ ಕೀರ್ತಿ ಹೊಯ್ಸಳರ ವಿಷ್ಣುವರ್ಧನನಿಗೆ (೧೧೦೮-೧೧೪೨) ಸಲ್ಲುತ್ತದೆ. ಗಂಗವಾಡಿಯನ್ನು ಚೋಳರಿಂದ ವಶಪಡಿಸಿಕೊಂಡು ಅದಕ್ಕೆ ಸೇರಿದ್ದ ಕೋಲಾರ, ಬೆಂಗಳೂರು, ತುಮಕೂರು, ಮಂಡ್ಯ, ಮೈಸೂರು ಜಿಲ್ಲೆಗಳನ್ನು ತಮ್ಮ ಹಿಡಿತಕ್ಕೆ ಪಡೆದುಕೊಂಡರು.[೨೬] ಹಿಂದೆ ಕನಕಪುರ ಪ್ರದೇಶ ಕೂಡ ಹೊಯ್ಸಳರ ವಶವಾಯಿತು. ಈ ಪರಿಸರದಲ್ಲಿ ಹೊಯ್ಸಳರ ಇತಿಹಾಸ ತಿಳಿಯಲು ಶಾಸನಗಳಿಂದ ಸಾಧ್ಯವಾಗಿದ್ದು ಬೇರೆ ಆಧಾರಗಳ ಲಭ್ಯತೆಯಿಲ್ಲ. ಕನಕಪುರ ಪಟ್ಟಣದಲ್ಲಿ ಹೊಯ್ಸಳರ ಶಾಸನಗಳು ಅತೀ ವಿರಳವಾಗಿರುವುದರಿಂದ ಪ್ರಸ್ತುತ ಅಧ್ಯಯನದ ಸಮಗ್ರತೆ ದೃಷ್ಟಿಯಿಂದ ಸುತ್ತಮುತ್ತಲ ಸ್ಥಳಗಳ ಕೆಲವು ಶಾಸನಗಳಲ್ಲಿ ಕಾಣಿಕಾರನಹಳ್ಳಿ ಹೆಸರಿನ ಉಲ್ಲೇಖವಿರುವುದರಿಂದ ಅವುಗಳನ್ನು ಸಾಂದರ್ಭಿಕವಾಗಿ ಅಧ್ಯಯನದ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ.

ಕನಕಪುರ ಪರಿಸರದ ದಳವಾಯಿ ಕೋಡಿಹಳ್ಳಿಯ ಬಸವೇಶ್ವರ ದೇವಾಲಯದ ಬಳಿ ದೊರೆತಿರುವ ಎರಡು ತಮಿಳು ಶಾಸನಗಳು ೧ನೇ ನರಸಿಂಹನ(೧೧೪೨-೭೩) ಮತ್ತು ೨ನೇ ವೀರಬಲ್ಲಾಳನ(೧೧೭೩-೧೨೨೦) ಕಾಲಕ್ಕೆ ಸೇರಿದ್ದು, ಇವರಿಬ್ಬರನ್ನು ಕೆಳಲೆನಾಡಿನ ಅರಸರು

ಎಂದು ಉಲ್ಲೆಖಿಸಲಾಗಿದೆ.[೨೭] ಚನ್ನಪಟ್ಟಣ ಸೀಮೆಯ ಕೆಳಲೆನಾಡಿನ ಮೇಲೆ ಹೊಯ್ಸಳರ ಪ್ರಭಾವ ಹೆಚ್ಚಾಗಿತ್ತು ಎಂಬ ವಿಷಯ ಈ ಶಾಸನಗಳಿಂದ ಸ್ಪಷ್ಟಗೊಳ್ಳುತ್ತದೆ. ಅಲ್ಲದೆ ಎರಡು ಶಾಸನಗಳಲ್ಲಿ ಮುದಿಗೊಂಡ ಚೋಳಮಂಡಲದ ರಾಜೇಂದ್ರ ಚೋಳನ ವಳನಾಡಿನ ಉಲ್ಲೇಖ ಇರುವುದರಿಂದ ಗಂಗವಾಡಿಯನ್ನು ಕಳೆದುಕೊಂಡ ಮೇಲೂ ಕೂಡ ಚೋಳರು ಹೊಯ್ಸಳ ವೀರಬಲ್ಲಾಳನ ಕಾಲದವರೆಗೂ ಈ ಪ್ರದೇಶದಲ್ಲಿ ತಮ್ಮ ಪ್ರಭಾವ ಬೀರಿದ್ದರೆಂದು ಕಾಣುತ್ತದೆ.

ಮೂರನೇ ವೀರಬಲ್ಲಾಳನ (ಕ್ರಿ.ಶ. ೧೨೯೨-೧೩೪೩) ಕಾಲಕ್ಕೆ ಸೇರಿದ ಶಾಸನ(ನಂ. ೯೨-೧೩೦೦) ಕನಕಪುರ ಪಟ್ಟಣದ ವಾಜರ ಬೀದಿಯ ಚನ್ನದಾಸಯ್ಯ ಎಂಬುವರ ಮನೆಯ ಬಳಿ ದೊರೆತಿದೆ.[೨೮] ಇದರಲ್ಲಿ ಮೂರನೇ ವೀರಬಲ್ಲಾಳನ ಹೊಗಳಿಕೆ, ವೀರಪಾಂಚಾಳ ವೃತ್ತಿಯವರ ಆಸ್ತಿ ವ್ಯವಹಾರದ ಕಟ್ಟಳೆ ಮತ್ತು ದೇವಾಲಯವೊಂದಕ್ಕೆ ಹರಕೆ ಸಲ್ಲಿಸುವುದಾಗಿ ಒಪ್ಪಿರುವ ವಿವರಗಳು ತಿಳಿಯುತ್ತವೆ. ಈ ಕಟ್ಟಳೆಯಲ್ಲಿ ವೀರಪಾಂಚಾಳ ಆಸ್ತಿ ವೃತ್ತಿಯಾಧಾರಿತವಾಗಿದ್ದು ಅದರ ಮಾನ್ಯ(ಹಕ್ಕು) ಮಕ್ಕಳಿಗೆ ಸಲ್ಲಬೇಕು ಮಕ್ಕಳಿಲ್ಲದಿದ್ದರೆ ಅಣ್ಣ-ತಮ್ಮಂದಿರಿಗೆ ಸಲ್ಲಬೇಕು ಎಂಬ ಉಲ್ಲೇಖವಿದೆ. ಅಂದರೆ ವೃತ್ತಿಯಾಧಾರಿತವಾಗಿ ವೀರಪಾಂಚಾಳರಿಗೆ ಸೇರಿದ್ದ ಆಸ್ತಿಯನ್ನು ರಕ್ಷಣೆ ಮಾಡಬೇಕೆಂಬುದು ಇಲ್ಲಿನ ಉದ್ದೇಶವಾಗಿದೆ.

ಮುದುವಾಡಿ ಗ್ರಾಮದ ವಾಯುವ್ಯ ದಿಕ್ಕಿನಲ್ಲಿ ಕಾನಕಾನಹಳ್ಳಿ ಸುಬ್ಬಯ್ಯ ಎಂಬುವರ ಹೊಲದಲ್ಲಿ ದೊರೆತ ಶಾಸನ (ನಂ. ೧೧೦-೧೩೦೬) ಕೂಡ ಮೂರನೇ ವೀರಬಲ್ಲಾಳನ ಕಾಲದ್ದಾಗಿ ತೋರುತ್ತದೆ.[೨೯] ಇದು ವಿಶೇಷ ಶಾಸನವಾಗಿದೆ. ವಿಶ್ವಕರ್ಮ ಕುಲಸ್ಥರಿಗೆ ರಾಜಧಾನಿ ದ್ವಾರಸಮುದ್ರದ ಹಿರಿಯ ಕಮ್ಮಟ, ಬಿಟ್ಟಿಕಮ್ಮಟ ಹಾಗೂ ರಾಜ್ಯದ ಎಲ್ಲಾ ದಿಕ್ಕಿನಲ್ಲಿ ಅಕ್ಕಸಾಲಿಕೆ ನಡೆಸಲು ಸಮಸ್ತ ವೀರಪಾಂಚಾಳರಿಗೆ ಅಧಿಕಾರ ನೀಡಿರುವ ತಾಮ್ರಶಾಸನದ ಪ್ರತಿಯನ್ನು ತಂದು ಇಲ್ಲಿ ಶಿಲೆಯ ಮೇಲೆ ಬರೆಸಲಾಗಿದೆ. ಅಲ್ಲದೆ ವೀರಪಾಂಚಾಳರು ಮಾಡುವ ಕೆಲಸಕ್ಕೆ ಮರ್ಯಾದೆಯ ಸಂಬಳ ಪಡೆಯಬೇಕು ಎಂಬ ಕಟ್ಟಳೆ ಮಾಡಲಾಗಿದೆ.

ಕನಕಪುರ ಪರಿಸರದಲ್ಲಿ ದೊರೆತಿರುವ ಹೊಯ್ಸಳರ ಶಾಸನಗಳಲ್ಲಿ ವಿಶೇಷ ಮತ್ತು ಪ್ರಮುಖವಾದ ಶಾಸನ ಅಚ್ಚಲು ಗ್ರಾಮದಲ್ಲಿ ದೊರೆತಿದೆ.[೩೦] ಕನಕಪುರದ ಹಿಂದಿನ ಹೆಸರು 'ಕಾಣಿಕಾರನಹಳ್ಳಿ' ಎಂದು ಮೊದಲಿಗೆ ಉಲ್ಲೇಖಗೊಂಡಿರುವ ಶಾಸನ ಇದಾಗಿದ್ದು, ಈ ಶಾಸನ ೩ನೇ ವೀರಬಲ್ಲಾಳನ (ಕ್ರಿ.ಶ. ೧೩೧೯) ಕಾಲಕ್ಕೆ ಸೇರಿದೆ. ಅಚ್ಚಲು ಗ್ರಾಮವು ಹೊಯ್ಸಳರ ಕಾಲದಲ್ಲಿ ತಾಮ್ರದ ನಾಣ್ಯ ತಯಾರಿಕೆಯ ಕೇಂದ್ರವಾಗಿತ್ತು. ಇದಕ್ಕೆ ಸಾಕ್ಷಿಯಾಗಿ ಇಲ್ಲಿನ ಬೆಟ್ಟದ ಬುಡದಲ್ಲಿ ಹೊಯ್ಸಳ ತಾಮ್ರದ ನಾಣ್ಯಗಳು ದೊರೆತಿವೆ.

ಅಚ್ಚಲು ಗ್ರಾಮದಲ್ಲಿ ದೊರೆತಿರುವ ಮತ್ತೊಂದು ಶಾಸನ ೩ನೇ ವೀರಬಲ್ಲಾಳನ ಕಾಲದಲ್ಲಿ ಪ್ರಧಾನಿಯಾಗಿದ್ದ ಸೋಮೆಯ ದಣ್ಣಾಯಕ ಮತ್ತು ಮಾರದೇವಿ ಇಬ್ಬರು ಸೇರಿ ಅಪರಿಚಿತ ವ್ಯಕ್ತಿಗೆ ಭೂದಾನ ಕೊಟ್ಟ ವಿಷಯ ತಿಳಿಸುತ್ತದೆ. ಇದೇ ಗ್ರಾಮದ ಸಣ್ಣ ನಿಂಗೇಗೌಡನ ಮಗ ಕೆಂಪಣ್ಣ ಬೇಕುಪ್ಪೆಯಲ್ಲಿ ಅಣ್ಣ ಕಟ್ಟಿಸಿದ್ದ ಕೆರೆಯ ಜೊತೆಗೆ ಭೂಮಿಯನ್ನು ವಿರುಪಣ್ಣಯ್ಯನಿಗೆ

ದಾನ ನೀಡಿರುವ ಸಂಗತಿ ಕನಕಪುರ ಹೋಬಳಿಯ ಶ್ರೀನಿವಾಸಹಳ್ಳಿ ದೊಡ್ಡಕೆರೆಯ ಹುಟ್ಟು ಬಂಡೆ ಶಾಸನದಲ್ಲಿ(ನಂ. ೧೦೨) ಉಕ್ತವಾಗಿದೆ.

ಚೋಳ ಮತ್ತು ಹೊಯ್ಸಳರ ಕಾಲಕ್ಕೆ ಕನಕಪುರ ತಾಲೂಕಿಗೆ ಸೇರಿದ್ದ ಸಿಗಲನಾಡು, ದೇಸಿಗರನಾಡು, ನೂಲನಾಡು, ತುಂಗಣಿನಾಡು, ಕೆಳಲೆನಾಡು, ಹೊಮ್ಮಳಿಗೆ ನಾಡು, ಎಳವಲೆನಾಡು, ಅಚ್ಚಲುನಾಡು, ಚೊಕ್ಕನಾಡು, ಮಹಾನಾಡು[೫೦] ಮೊದಲಾದ ಪ್ರದೇಶಗಳು ಗ್ರಾಮಸಮುಚ್ಚಯ ಕೇಂದ್ರಗಳಾಗಿ ಆಡಳಿತ ನಿರ್ವಹಿಸಿರುವಂತೆ ಕಾಣುತ್ತದೆ. ಈ ವೇಳೆಗೆ ಕಾನಕಾನಹಳ್ಳಿ(ಕನಕಪುರ) ಅಂತ ಪ್ರಸಿದ್ಧಿಯಾದ ಪ್ರದೇಶವೇನು ಆಗಿರಲಿಲ್ಲವಾದರೂ ಇದರ ಸುತ್ತಮುತ್ತಲ ಕೆಲವು ಪ್ರದೇಶಗಳು ಅರಳಾಳು, ನಿಟ್ಟೂರು, ಮರಳವಾಡಿ, ತುಂಗಣಿ, ಅಚ್ಚಲು ಸ್ಥಳಗಳು ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಯ ಕೇಂದ್ರಗಳಾಗಿದ್ದವು ಎಂದು ಭಾವಿಸಬಹುದು. ಇವುಗಳ ಸ್ಥಳೀಯ ಆಡಳಿತದ ಮುಖ್ಯ ವ್ಯಕ್ತಿಗಳಾಗಿ ನಾಯಕರು, ನಾಡಪ್ರಭುಗಳು ಮತ್ತು ಗೌಡರು ಕಾರ್ಯ ನಿರ್ವಹಿಸುತ್ತಿದ್ದರು. ಈ ಗ್ರಾಮ ಸಮುಚ್ಚಯ ಕೇಂದ್ರಗಳಾಗಿದ್ದವು ಎಂದು ಭಾವಿಸಬಹುದು. ಇವುಗಳ ಸ್ಥಳೀಯ ಆಡಳಿತದ ಮುಖ್ಯ ವ್ಯಕ್ತಿಗಳಾಗಿ ನಾಯಕರು, ನಾಡಪ್ರಭುಗಳು ಮತ್ತು ಗೌಡರು ಕಾರ್ಯ ನಿರ್ವಹಿಸುತ್ತಿದ್ದರು. ಈ ಗ್ರಾಮ ಸಮುಚ್ಚಯ ಕೇಂದ್ರಗಳು ಹೊಯ್ಸಳರ ೧ನೇ ನರಸಿಂಹನ ಕಾಲದಿಂದ(೧೧೪೨-೭೨) ೩ನೇ ವೀರಬಲ್ಲಾಳನ ಕಾಲದವರೆಗೆ (೧೨೯೨-೧೩೪೩) ಆಳ್ವಿಕೆಗೆ ಒಳಪಟ್ಟು ಐತಿಹಾಸಿಕ ಮಹತ್ವ ಪಡೆದಿವೆ.

ಸಿಗಲನಾಡ ಪ್ರಭುಗಳು

ಚೋಳ ಮತ್ತು ಹೊಯ್ಸಳರ ಕಾಲದಲ್ಲಿ ಸಿಗಲನಾಡು, ಅಚ್ಚಲುನಾಡು, ತುಂಗಣಿನಾಡು, ನೂಲನಾಡು, ಕೆಳಲೆನಾಡು, ಹೊಮ್ಮಳಿಗೆನಾಡು, ಎಳವಲೆನಾಡು, ದೇಸಿಗರನಾಡು, ಚೊಕ್ಕನಾಡು, ಮಹಾನಾಡು ಮೊದಲಾದ ಪ್ರದೇಶಗಳು ಗ್ರಾಮ ಸಮುಚ್ಚಯ ಕೇಂದ್ರಗಳಾಗಿ ಆಡಳಿತ ನಿರ್ವಹಿಸಿವೆ. ಕ್ರಿ.ಶ. ೧೩೩೦ರ ಹೊಯ್ಸಳ ವೀರಬಲ್ಲಾಳನ ಅಧಿಕಾರದ ಅವಧಿಯ ಶಾಸನದಲ್ಲಿ ಸಿಗಲನಾಡಿನ ಹೆಸರಿನ ಉಲ್ಲೇಖ ತ್ರುಟಿತವಾಗಿದೆ.[೫೧] ಶಾಸನದ ಈ ಭಾಗವನ್ನು 'ಸಿಗ' ಎಂದು ಸೇರಿಸಿಕೊಂಡು ಓದಲಾಗಿದೆ. ಸಿಗಲನಾಡು ಒಂದು ಸಾವಿರ ಪ್ರಮಾಣ ವ್ಯಾಪ್ತಿಯುಳ್ಳ ಪ್ರದೇಶವಾಗಿತ್ತು. ಅಂದರೆ ಕಿವಿಲೆನಾಡಿನಂತೆ ಈ ನಾಡೂ ಕೂಡ ಒಂದು ಸಾವಿರ ಪ್ರಮಾಣದ ಪ್ರಾದೇಶಿಕ ವಿಭಾಗವಾಗಿತೆಂದು ಹೇಳಬಹುದು.

ಸಿಗಲನಾಡಿನ ಪ್ರಾದೇಶಿಕ ವ್ಯಾಪ್ತಿ ಕಾವೇರಿ ನದಿಯ ಉತ್ತರಕ್ಕೆ. ಅಂದರೆ ಅರ್ಕಾವತಿ ನದಿ ಕಣಿವೆ ಪ್ರದೇಶಗಳಲ್ಲಿ ಬಾಣಂತಿ ಮಾರಮ್ಮನ ಬೆಟ್ಟ, ಪಿಚ್ಚನಕೆರೆ ಬೆಟ್ಟ, ಮುದುವಾಡಿ ಬೆಟ್ಟ, ಶಿವಾಲದಪ್ಪನ ಬೆಟ್ಟ, ಮಲ್ಲದೇವರ ಬೆಟ್ಟ ಮತ್ತು ಕೊಪ್ಪ ಬೆಟ್ಟ ಗುಡ್ಡಗಳಿಂದ ಕೂಡಿರುವ ಪ್ರದೇಶವನ್ನು ಸಿಗಲ್ ನಾಡು ಎಂದು ಕರೆದಿರಬಹುದು ಎಂದು ಪಿ.ವಿ. ಕೃಷ್ಣಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ. ಚನ್ನಪಟ್ಟಣ ಪ್ರಾಂತ್ಯದ ಕೆಲವು ಹಳ್ಳಿಗಳು ಹಾಗೂ ಕಾನಕಾನಹಳ್ಳಿಯ ದಕ್ಷಿಣ ದಿಕ್ಕಿನ ಸಾತನೂರು, ಕೋಡಿಹಳ್ಳಿ, ಉಯ್ಯಂಬಳ್ಳಿ, ಮುಳಹಳ್ಳಿ, ದೊಡ್ಡಕೊಪ್ಪ, ನಾಯಕನಹಳ್ಳಿ,

ಅರಳಾಳು ಈ ಕೆಲವು ಹಳ್ಳಿಗಳ ಸಮುಚ್ಚಯ ಬಹುಶಃ ಸಿಗಲನಾಡಾಗಿತ್ತು[೩೩] ಎಂದು ತೋರುತ್ತದೆ. ಸ್ವಾಭಾವಿಕ ಬೆಟ್ಟ-ಗುಡ್ಡಗಳಿಂದ ಕೂಡಿರುವ ಕನಕಪುರ ಪರಿಸರದ ಶಾಸನಗಳಲ್ಲಿ ಸಿಯಲ್‌ನಾಡು, ಚೆಗಲ್‌ನಾಡು, ಸಿಗಲನಾಡು ಎಂದು ಕಾಲಘಟ್ಟಗಳಲ್ಲಿ ಉಲ್ಲೇಖಿಸಲಾಗಿದೆ.

ಕಾನಕಾನಹಳ್ಳಿ ಪ್ರಭುಗಳ ವಂಶವನ್ನು ಶಾಸನಾಧಾರದಿಂದ ಗುರುತಿಸುವುದಾದರೆ ಚನ್ನವೀರಯ್ಯ ಗೌಡ, ದೊಡ್ಡಯ್ಯ, ಚನ್ನ ಒಡೆಯ, ಬಸವಯ್ಯ ಎಂದು ತಿಳಿದುಬಂದಿದೆ. ದೊಡ್ಡಯ್ಯನ ನಂತರ ಆತನ ಮಕ್ಕಳು ಚನ್ನರಾಯಪಟ್ಟಣದ ಮೇಲೆ ಆಳ್ವಿಕೆ ಮುಂದುವರಿಸಿದಂತೆ ತೋರುತ್ತದೆ. ಚನ್ನರಾಯಪಟ್ಟಣದ ಶಾಸನ(ನಂ. ೧೪)ದಲ್ಲಿ ದೊಡ್ಡಯ್ಯನ ವಿಚಾರ ಹೇಳುವಾಗ, "ತುರ್ತು ರಾಜಕಾರ್ಯದಲ್ಲಿ ಕಲ್ಲ ಕೋಟೆ ಕಟ್ಟಿಸಿದರು"[೩೪] ಎಂದು ಉಲ್ಲೇಖವಿರುವುದನ್ನು ಗಮನಿಸಿದರೆ ಚನ್ನರಾಯಪಟ್ಟಣದಲ್ಲಿ ಈತ ಕೋಟೆ ಕಟ್ಟಿಸಿರಬಹುದು ಎಂದು ಕಾಣುತ್ತದೆ. ದೊಡ್ಡಯ್ಯನಿಗಿಂತಲೂ ಬಸವಯ್ಯ ಹೆಚ್ಚು ಪ್ರಭಾವಶಾಲಿಯಾಗಿ ಬೆಳೆದಿರಬಹುದು, ಇದಕ್ಕೆ ನಿದರ್ಶನವಾಗಿ ಚನ್ನರಾಯಪಟ್ಟಣದ ಸೋಮೇಶ್ವರ ಮತ್ತು ಇತರೆ ದೇವರುಗಳಿಗೆ ಶಾಸನೋಲ್ಲೇಖಗಳು ಲಭ್ಯವಾಗಿವೆ. ಶಾಸನ ಸಂ. ೭, ೧೧, ೧೭, ೭೩, ೪೩, ಅಲ್ಲದೆ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಬೆಟ್ಟದ ಅನ್ನದಾನಿ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಗೋಪುರ, ಮಹಾದ್ವಾರದ ಎದುರಿಗಿರುವ ನಂದಿ ಮಂಟಪದಲ್ಲಿನ ಸುಂದರನಂದಿ ವಿಗ್ರಹವನ್ನು ಬಸವಯ್ಯನ 'ಪುಣ್ಯಸ್ತ್ರಿ' (ಉಪಪತ್ನಿ) ಮುದ್ದುಮಲ್ಲಾಜಮ್ಮನವರು ಮಾಡಿಸಿದ್ದಾರೆ.[೩೫]

ವಿಜಯನಗರ ಅರಸರು

ಕರ್ನಾಟಕದಲ್ಲಿ ಹೊಯ್ಸಳ ಸಾಮ್ರಾಜ್ಯ ಕಣ್ಮರೆಯಾದ ನಂತರ ವಿಜಯನಗರ ಸಾಮ್ರಾಜ್ಯ ತಲೆಯೆತ್ತಿತ್ತು. ಹೊಯ್ಸಳ ರಾಜ್ಯ ಅವನತಿ ಹೊಂದಿದಾಗ ವಾರಂಗಲ್ಲಿನಲ್ಲಿ ಕಾಕತೀಯರು ಮತ್ತು ದೇವಗಿರಿಯ ಸೇವುಣರು ಸಹ ಅವನತಿಯ ಹಾದಿಯಲ್ಲಿದ್ದರು. ಆ ಸಮಯದಲ್ಲಿ ದಕ್ಷಿಣ ಭಾರತದಲ್ಲಿ ಯಾವುದೇ ಬಲಿಷ್ಠ ಸಾಮ್ರಾಜ್ಯವಿರದಿದ್ದರಿಂದ ಕ್ರಿ.ಶ. ೧೩೩೬ರಲ್ಲಿ ಹರಿಹರ ಮತ್ತು ಬುಕ್ಕರಾಯ ಎಂಬ ಸಹೋದರರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ದಕ್ಷಿಣ ಭಾರತದಲ್ಲೇ ಪ್ರಬಲ ಹಾಗೂ ಸಂಪದ್ಭರಿತ ಸಾಮ್ರಾಜ್ಯವಾಗಿ ಬೆಳೆದ ಈ ಸಾಮ್ರಾಜ್ಯ ಇನ್ನೂರ ಐವತ್ತು ವರ್ಷಗಳ ಕಾಲ ಆಡಳಿತ ನಡೆಸಿತು.

ಇಂದಿನ ಹಂಪೆಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದ ಈ ಸಾಮ್ರಾಜ್ಯಕ್ಕೆ ಕನಕಪುರ ಪ್ರದೇಶ ಸೇರಿತ್ತು ಎಂದು ತಿಳಿಯಲು ಇಲ್ಲಿನ ಶಾಸನ ವೀರಗಲ್ಲು ಮತ್ತು ಇವರ ಕಾಲದಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳು ಆಧಾರಗಳಾಗಿವೆ. ದೊರೆತಿರುವ ಶಾಸನಾಧಾರಗಳಿಂದ ಈ ಪ್ರದೇಶದಲ್ಲಿ ಅವರ ರಾಜಕೀಯ, ಧಾರ್ಮಿಕ ಮತ್ತು ಪಾಳೆಯಗಾರರ ಆಡಳಿತ ಚಟುವಟಿಕೆಗಳ ವಿದ್ಯಮಾನಗಳನ್ನು ತಿಳಿಯಬಹುದು. ವಿಜಯನಗರ ಸಾಮ್ರಾಜ್ಯವನ್ನಾಳಿದ ಮೊದಲ ಅರಸು ಮನೆತನ ಸಂಗಮ ವಂಶದ ಕಾಲದಿಂದಲೇ ಕನಕಪುರದಲ್ಲಿ ಅವರ ರಾಜಕೀಯ ಚಟುವಟಿಕೆಗಳು

ನಡೆದಿವೆ ಎಂಬುದನ್ನು ಗಮನಿಸಬಹುದು. ಕನಕಪುರ ಪರಿಸರದ ಎಡಮಾರನಹಳ್ಳಿ ಗ್ರಾಮದಲ್ಲಿ ದೊರೆತಿರುವ ವೀರರ ಗುಡಿಯೊಂದರಲ್ಲಿ ವೀರಗಲ್ಲು ಕಂಡು ಬಂದಿದೆ. ಒಂದನೆಯ ಬುಕ್ಕರಾಯ ಅಧಿಕಾರದಲ್ಲಿರುವಾಗ ಸೀಗಲನಾಡಿನ ಮಾರೇನಹಳ್ಳಿಯ ಶಿವನಗೌಡನ ಮಗ ವೀರಸೋಮಾಜಿ ದನಕಾಯುವಾಗ ಮೇಲೆರಗಿದ ಹೆಬ್ಬುಲಿಯೊಂದಿಗೆ ಹೋರಾಡಿ ಸ್ವರ್ಗಸ್ತನಾದ ಅಂಶವನ್ನು ಉಲ್ಲೇಖಿಸುತ್ತದೆ.[೫೬]

ಕನ್ನಕಪುರ ಪಟ್ಟಣಕ್ಕೆ ಸೇರಿದ ಮಳಗಾಳು ಗ್ರಾಮದ ಮಹದೇಶ್ವರ ದೇವಾಲಯ ಬಳಿ ಒಂದನೇ ಬುಕ್ಕರಾಯನ ಮಗ ಕಾಲದ (೧೩೭೫) ಶಾಸನ (ನಂ. ೯೩) ದೊರೆತ್ತಿದ್ದು, ಮಗನ ಹೆಸರಿರುವ ಭಾಗ ಅಳಿಸಿ ಹೋಗಿದೆ. ಅಲ್ಲದೆ ಬುಕ್ಕರಾಯನ ಬಿರುದಾವಳಿ ಹಾಗೂ ಅವನನ್ನು ಪೂರ್ವ, ದಕ್ಷಿಣ, ಪಶ್ಚಿಮದ ಸಮದ್ರಾಧಿಪತಿ ಎಂದು ಹೊಗಳಲಾಗಿದೆ. ಕಾಲಮಾನದ ದೃಷ್ಟಿಯಿಂದ ಗಮನಿಸಿದರೆ ಇದು ಇಮ್ಮಡಿ ಹರಿಹರರಾಯನ ಹೆಸರಿರಬಹುದು ಎಂದು ಭಾವಿಸಬಹುದಾಗಿದೆ. ಕ್ರಿ.ಶ. ೧೩೭೫ರಲ್ಲಿ ಇಲ್ಲಿನ ಮಹಾಸಾಮಂತಾಧಿಪತಿಯಾಗಿದ್ದ ದೊಡ್ಡ ಕಲ್ಲಿಮಾಯ ನಾಯಕನ ಆಜ್ಞಾನುಸಾರ ಮಳಗಾಳಿನ ಮಹದೇಶ್ವರ ದೇವರಿಗೆ ಏನನ್ನೊ ದತ್ತಿಕೊಟ್ಟಿರುವ ವಿಷಯ ತಿಳಿಯುತ್ತದೆ.[೫೭] ಶಾಸನದಲ್ಲಿರುವ ವಿವರ ಸರಿಯಾಗಿ ತಿಳಿದುಬಂದಿಲ್ಲ. ಕೆಂಪಣ್ಣ ಮತ್ತು ಕೇಸರಟ್ಟಿ ಎಂಬ ಎರಡು ಹೆಸರಿನ ಉಲ್ಲೇಖನವನ್ನು ಗುರುತಿಸಲಾಗಿದೆ.

ಕನಕಪುರ ಪರಿಸರದ ಹರಿಹರ ಗ್ರಾಮದಲ್ಲಿ ದೊರೆತಿರುವ ಶಾಸನವನ್ನು (ನಂ. ೭೪-೧೪೧೨) ಇಮ್ಮಡಿ ಹರಿಹರರಾಯನ ಮಗ ಒಂದನೆಯ ದೇವರಾಯನ ಆಳ್ವಿಕೆ ಕಾಲದಲ್ಲಿ (೧೪೦೬-೨೨) ಹಾಕಲಾಗಿದೆ.[೫೮] ಇದು ವೀರಗಲ್ಲು ಶಾಸನವಾಗಿದ್ದು ಹರಿಹರದ ಬಸವಯ್ಯ ಮತ್ತು ಕಪನಯ್ಯ ಎಂಬುವರು ಯಾವುದೋ ಒಂದು ದುರ್ಘಟನೆಯನ್ನು ಭೇದಿಸಿದಕ್ಕೆ ಈ ವೀರಗಲ್ಲು ಹಾಕಲಾಗಿದೆ. ಈ ಪರಿಸರಕ್ಕೆ ಸೇರಿದ ಸಾತನೂರು ಹೋಬಳಿ ಹೊನ್ನಹಳ್ಳಿ ಗ್ರಾಮದ ಸೋಮನಾಥ ದೇವಾಲಯದ ಮುಂದೆ ಗರಡು ಗಂಭದಲ್ಲಿರುವ ಶಾಸನವನ್ನು (ನಂ. ೫೯-೧೪೨೫) ಮೂರನೇ ಬುಕ್ಕರಾಯನ ಮಗ ಕುಮಾರು ಪ್ರತಾಪ ಅಧಿಕಾರದಲ್ಲಿದ್ದಾಗ ಹಾಕಿಸಲಾಗಿದೆ. ಈ ಶಾಸನವನ್ನು ಹನಿಯೂರ ನಾಡ ಮಹಾಪ್ರಭು ರಾಮದೇವನ ಮಗ ದೇವಪ್ಪನು ಯಾವುದೋ ತೀರ್ಥಯಾತ್ರೆಯಲ್ಲಿ ಮರಣ ಹೊಂದಿದಾಗ ಅವನಿಗಾಗಿ ಸೋಮನಾಥ ದೇವರ ದೀಪಾರಾಧನೆಗೆ ಕಂಬವೊಂದನ್ನು ಪ್ರತಿಷ್ಠಾಪಿಸಿರುವ ಉಲ್ಲೇಖವಿದೆ.

ಪಾಂಚಾಳ ಕುಲದವರಿಗೆ ಸಂಬಂಧಿಸಿದ ಒಂದು ಶಾಸನ(ನಂ. ೬೫-೧೪೨೯) ಕಬ್ಬಾಳು ಗ್ರಾಮದ ಕಬ್ಬಾಳಮ್ಮ ದೇವಾಲಯ ಉತ್ತರ ಭಾಗದಲ್ಲಿ ದೊರೆತಿದೆ.[೫೯] ಈ ಶಾಸನ ಇಮ್ಮಡಿ ಜಗಮದೇವರಾಯನ ಕಾಲಕ್ಕೆ(೧೪೨೪-೪೬) ಸೇರಿದ್ದು ಇವನ ಪ್ರೌಢದೇವರಾಯ ಎಂಬ ಬಿರುದಿನ ಉಲ್ಲೇಖ ಕಾಣಬಹುದು. ಅಲ್ಲದೆ ಚನ್ನಪಟ್ಟಣ ಸೀಮೆ ಮತ್ತು ಕನಕಪುರ ಸೀಮೆಯ ವಾಜರುಗಳು ಕಬ್ಬಾಳು ಸ್ಥಳವನ್ನು ಚಿನ್ನ, ಬೆಳ್ಳಿ, ತಯಾರಿಕೆಯ ಕೇಂದ್ರ ಮಾಡಿಕೊಂಡು ಇಲ್ಲಿ ಅಕ್ಕಸಾಲಿಕೆಯನ್ನು ಅನುಭವಿಸಿಕೊಂಡು ಬರುವಂತೆ ತಿಳಿಸಿರುವ ಕಟ್ಟಳೆಯ ಉಲ್ಲೇಖವಿದೆ.

ಕನಕಪುರ ಹೋಬಳಿಗೆ ಸೇರಿದ ದ್ಯಾಪೇಗೌಡನ ದೊಡ್ಡಿಯಲ್ಲಿ ಸಿಕ್ಕಿರುವ ಶಾಸನದ(ನಂ. ೧೦೧-೧೪೬೯) ವಿವರಗಳ ಭಾಗ ತ್ರುಟಿತವಾಗಿದೆ. ಆದರೂ ಇದು ಮೂರನೇ ವಿರುಪಾಕ್ಷನ ಕಾಲಕ್ಕೆ (೧೪೬೫-೮೫) ಎಂದು ಗುರುತಿಸುವಷ್ಟು ಅಕ್ಷರ ಉಳಿದಿದೆ. ಶಾಸನವನ್ನು ಹಾಕಿಸಿರುವ ಉದ್ದೇಶ ತಿಳಿದು ಬಂದಿಲ್ಲ. ಕೃಷ್ಣದೇವರಾಯನ ತಮ್ಮ ಅಚ್ಯುತರಾಯನ ಆಳ್ವಿಕೆಯ ಕಾಲದೆಂದು ಹೇಳಲಾಗುವ ಶಾಸನ(ನಂ. ೩-೧೫೩೨) ಹಾರೋಹಳ್ಳಿಯ ವೆಂಗಳಯ್ಯನ ಕೆರೆ ತೂಬಿನ ಬಳಿ ದೊರೆತಿದೆ.[೧೦] ಕ್ರಿ.ಶ. ೧೫೩೨ರಲ್ಲಿ ಹಾರುವರಹಳ್ಳಿಯಲ್ಲಿ(ಹಾರೋಹಳ್ಳಿ) ವರದ ತಿಮ್ಮಯ್ಯ ಎಂಬುವನು ತಿರುವಂಗಡನಾಥ ಪ್ರತಿಷ್ಠಾಪಿಸಿದಾಗ ಯಾವುದೋ ಗ್ರಾಮವನ್ನು ದತ್ತಿ ನೀಡಿರುವುದು ತಿಳಿಯುತ್ತದೆ. ಶಾಸನ ಅಲ್ಲಲ್ಲಿ ತ್ರುಟಿತವಾಗಿದ್ದು ಯಾವ ಗ್ರಾಮ ಎಂದು ಸ್ಪಷ್ಟವಾಗಿ ತಿಳಿಯುತ್ತಿಲ್ಲ. ಆದರೆ ಅಂದಿನ ಹಾರುವರಹಳ್ಳಿ ಇಂದಿನ ಹಾರೋಹಳ್ಳಿ ಎಂಬುದು ಗಮನಾರ್ಹವಾಗಿದೆ.

ಸದಾಶಿವರಾಯನ (೧೫೪೨-೭೦) ಹೆಸರಿರುವ ಒಂದು ದತ್ತಿಶಾಸನ(ನಂ. ೨೭-೧೫೬೩) ಉಯ್ಯಂಬಳ್ಳಿ ಹೋಬಳಿಯ ಚಿಕ್ಕ ಮುದಡೆ ಗ್ರಾಮದಲ್ಲಿ ದೊರೆತಿದೆ.[೧೧] ಆದರೆ ಇದರ ಅಕ್ಷರಗಳು ಅಳಿಸಿ ಹೋಗಿದ್ದು ವಿವರ ತಿಳಿದುಬಂದಿಲ್ಲ. ಹೀಗೆ ೧ನೇ ಬುಕ್ಕರಾಯನ ಕಾಲದಿಂದ ಸದಾಶಿವರಾಯ ಕಾಲದವರೆಗೂ ವಿಜಯನಗರ ಸಾಮ್ರಾಜ್ಯಕ್ಕೊಳಪಟ್ಟಿದ್ದ ಕನಕಪುರ ಪ್ರದೇಶದಲ್ಲಿ, ನಂತರ ಮೈಸೂರು ಒಡೆಯರ ಅಧಿಕಾರ ಪ್ರಾರಂಭವಾಯಿತು.

ಕಾನಕಾನಹಳ್ಳಿಯ(ಕನಕಪುರ)ಪ್ರಭುಗಳು

ಮೈಸೂರಿನ ೫ನೇ ಚಾಮರಾಜ ಒಡೆಯರು (೧೬೧೭-೧೬೩೭) ೧೬೩೪ರಲ್ಲಿ ಚನ್ನರಾಯ ಪಟ್ಟಣವನ್ನು ಬೇಲೂರು ವೆಂಕಟಪ್ಪ ನಾಯಕನಿಂದ ಸ್ವಾಧೀನಕ್ಕೆ ಪಡೆದ ಮೇಲೆ ಮೈಸೂರಿನ ವಾಯುವ್ಯ ಭಾಗದ ಗಡಿ ಚನ್ನರಾಯಪಟ್ಟಣವಾಯಿತು. ಇವರ ನಂತರ ಅಧಿಕಾರಕ್ಕೆ ಬಂದ ೧ನೇ ಕಂಠೀರವ ನರಸರಾಜ ಒಡೆಯರ ಅಧೀನದ ಚನ್ನರಾಯಪಟ್ಟಣ ಸೀಮೆಯ ವ್ಯವಹಾರವನ್ನು ನೋಡಿಕೊಳ್ಳುವಂತೆ ಕಾನಕಾನಹಳ್ಳಿಯ ದೊಡ್ಡಯ್ಯನೆಂಬ ಪಾಳೆಯಗಾರರನ್ನು ನೇಮಿಸಿದ ಸಂಗತಿ ಚನ್ನರಾಯಪಟ್ಟಣದ ಶಾಸನದಲ್ಲಿ(೧೬೪೮) ಉಲ್ಲೇಖಗೊಂಡಿದೆ.[೧೨] ಈ ಶಾಸನದಲ್ಲಿ ಮೈಸೂರು ಕಂಠೀರವ ನರಸರಾಜ ಒಡೆಯನವರು ಸುಖ ರಾಜ್ಯಾಡಳಿತ ಮಾಡುವಾಗ ಚನ್ನಪಟ್ಟಣ ಸೀಮೆಯ ತುಂಗಣೆನಾಡ ಸ್ಥಳದ ಕಾನಕಾನಹಳ್ಳಿಯ ಪ್ರಬು ಚೆನ್ನವೀರಯ್ಯ ಗೌಡನವರ ಮಗ ದೊಡ್ಡಯ್ಯನವರಿಗೆ ಚನ್ನಪಟ್ಟಣವನ್ನು ಕೊಟ್ಟಿರುವ ಉಲ್ಲೇಖವಿದೆ.

ಕನಕಪುರದಿಂದ ಬೆಂಗಳೂರು ಮಾರ್ಗದ ಉತ್ತರಕ್ಕಿರುವ ಸಣ್ಣ ಗ್ರಾಮವಾದ ತುಂಗಣೆ, ೧೭ನೇ ಶತಮಾನದ ವೇಳೆಗೆ ಚನ್ನಪಟ್ಟಣ ಸೀಮೆಗೆ ಸೇರಿದ್ದ ನಾಡಾಗಿತ್ತು. ಆಗ ಕಾನಕಾನಹಳ್ಳಿ ಈ ತುಂಗಣೆನಾಡಿನ ಒಂದು ಸಣ್ಣ ಪಾಳೆಯಪಟ್ಟು ಆಗಿರಬಹುದು. ದೊಡ್ಡಯ್ಯನನ್ನು ಕಾನಕಾನಹಳ್ಳಿಯ ಪ್ರಭು ಎಂಬುದಾಗಿ ಶಾಸನಗಳಲ್ಲಿ ಸ್ಪಷ್ಟವಾಗಿ ಹೇಳಿದ್ದರೂ ಕನಕಪುರದ ಸುತ್ತಮುತ್ತ ಇವನ ಪ್ರಭುತ್ವವನ್ನು ಸೂಚಿಸುವ ಯಾವುದೇ ಆಧಾರಗಳು ದೊರೆತಿಲ್ಲ. ಅಲ್ಲದೆ

ಕಾನಕಾನಹಳ್ಳಿ ಪರಿಸರದ ಪಾಳೆಯಗಾರರಿಗೆ ಅಧಿರಾಜನಾಗಿದ್ದ ೧ನೆಯ ಕಂಠೀರವ ನರಸರಾಜ ಒಡೆಯರ ಕಾಲದ ಶಾಸನದಲ್ಲಿ ಇವನ ಉಲ್ಲೇಖಗಳಿಲ್ಲ.[೪೩]

ಗಂಗರ ಕಾಲದ ವೀರಗಲ್ಲು ಮತ್ತು ಚೋಳರ ಕಾಲದ ವೀರಮಾಸ್ತಿ ಶಾಸನಗಳಲ್ಲಿ ಮಾತ್ರ ಸಿಗಲನಾಡಿನ ಪ್ರಸ್ತಾಪವಿದೆ. ಕ್ರಿ.ಶ. ೧೧೭೧ರ ಕಾಲದಲ್ಲಿ ಸಿಗಲನಾಡು ಹೊಯ್ಸಳರ ವಶವಾದರೂ ಶಾಸನಗಳಲ್ಲಿ ಮುದಿಗೊಂಡ ಚೋಳ ಮಂಡಲದ ರಾಜೇಂದ್ರ ಚೋಳನ ವಳನಾಡಿನ ಮತ್ತು ಸಿಗಲನಾಡಿನ ಹೆಸರುಗಳ ಉಲ್ಲೇಖಗಳು ಮುಂದುವರಿದು ಬಂದಿರುವುದನ್ನು ಕಾಣಬಹುದು. ಕ್ರಿ.ಶ. ೧೧೭೧ರ ಮುಳ್ಳಹಳ್ಳಿ ಶಾಸನ ಮತ್ತು ಆಲಹಳ್ಳಿ ಗ್ರಾಮದ ಶಾಸನಗಳಲ್ಲಿ ಮಾದೇವ ಎಂಬುವನು ಸೀಗಲನಾಡನ್ನು ಆಳುತ್ತಿದ್ದ ಎಂದು ಉಲ್ಲೇಖಗಳಿವೆ.

ಕ್ರಿ.ಶ. ೧೨೦೭ರ ನಂತರ ಕಾಲದ ಹೊಯ್ಸಳರ ಹಲವು ಶಾಸನಗಳಲ್ಲಿ ವೀರಬಲ್ಲಾಳ ನಾಡು, ಹೊಯ್ಸಳಚ್ಚಿಗಲನಾಡು ಎಂಬ ಉಲ್ಲೇಖಗಳು ಇರುವುದನ್ನು ಗಮನಿಸಬಹುದು. ಹೊಯ್ಸಳರು ವೀರಬಲ್ಲಾಳನ ಕಾಲದಲ್ಲಿ ಸಿಗಲನಾಡಿನ ಸ್ಥಳೀಯ ಪಾಳೆಗಾರರ ಮೇಲೆ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ್ದರೆಂದು ಗ್ರಹಿಸಬಹುದು. ಕ್ರಿ.ಶ. ೧೫೫೧ರ ಎಡಮಾರನಹಳ್ಳಿ ಗ್ರಾಮದಲ್ಲಿರುವ ವೀರಬುಕ್ಕಣ್ಣ ಒಡೆಯನ ಶಾಸನದ ಕಾಲಕ್ಕೆ ಈ ಪ್ರದೇಶದ ಮೇಲೆ ವಿಜಯನಗರ ಅರಸರ ಆಳ್ವಿಕೆ ಸ್ಥಿರಗೊಂಡಿತ್ತು. ಶಾಸನಗಳಲ್ಲಿ ಕ್ರಿ.ಶ. ೧೬೩೩ರ ಕಾಲದವರೆಗೂ ಸಿಗಲನಾಡಿನ ಪ್ರಸ್ತಾಪ ಮುಂದುವರಿದಿರುವುದು ಕಂಡುಬರುತ್ತದೆ. ಈ ಸಿಗಲನಾಡಿಗೆ ಕನಕಪುರದ ದಕ್ಷಿಣಕ್ಕೆ ೨ ಕಿ.ಮೀ. ದೂರದಲ್ಲಿರುವ ಅರಳಾಳು ರಾಜಧಾನಿಯಾಗಿತ್ತು. ಎಂಬುದಕ್ಕೆ ಶಾಸನಾಧಾರಗಳಿವೆ.[೪೪] ಶಾಸನಗಳಲ್ಲಿ ಸಿಗನಾಡನ್ನು ಆಳುವ ಮಾರದೇವರು, ಕಾಣಿಕಾರನಹಳ್ಳಿಯ ಚಂಚೇಗೌಡ ಎಂಬ ಉಲ್ಲೇಖಗಳಿಂದ ಕನಕಪುರ ಪರಿಸರದ ಪ್ರಾಚೀನತೆ ತಿಳಿಯುತ್ತದೆ.

ಮೈಸೂರು ಒಡೆಯರು

೧೫ನೇ ಶತಮಾನದ ಆದಿಭಾಗದಲ್ಲಿ ಮೈಸೂರು ಒಡೆಯರು ಚಿಕ್ಕಪಾಳೆಪಟ್ಟಿನಲ್ಲಿ ಅಧಿಕಾರ ಪ್ರಾರಂಭಿಸಿದರು. ರಕ್ಕಸತಂಗಡಿ ಯುದ್ಧದ ತರುವಾಯ ವಿಜಯನಗರ ಸಾಮ್ರಾಜ್ಯ ಶಿಥಿಲವಾಗುತ್ತಿದ್ದ ಕಾಲದಲ್ಲಿ ವಿಜಯನಗರದ ಸಾಮಂತರಾಗಿ ನಂತರ ಸ್ವತಂತ್ರರಾಗಿ ದಕ್ಷಿಣ ಕರ್ನಾಟಕದ ಹಲವು ಭಾಗಗಳನ್ನು ವಶಪಡಿಸಿಕೊಂಡರು. ಟಿಪ್ಪುವಿನ ವಶವಾಗಿದ್ದ ಮೈಸೂರನ್ನು ೧೮ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರು ಕೊನೆಯ ಆಂಗ್ಲೋ ಮೈಸೂರು ಯುದ್ಧದ ಗೆಲುವಿನಿಂದ ಮೈಸೂರು ಒಡೆಯರು ಮರಳಿ ಅಧಿಕಾರ ಪಡೆದರು. ಚನ್ನಪಟ್ಟಣದಲ್ಲಿ ಆಳ್ವಿಕೆ ಮಾಡುತ್ತಿದ್ದ ವಿಜಯನಗರ ಅರಸರ ಪಾಳೆಯಗಾರ ಜಗದೇವರಾಯನು ಕನಕಪುರವನ್ನು ತನ್ನ ವ್ಯಾಪ್ತಿಗೊಳಪಡಿಸಿಕೊಂಡಿದ್ದನು. ಮೈಸೂರಿನ ಒಡೆಯರಿಗೂ ಜಗದೇವರಾಯನಿಗೂ ಆಗಾಗ ಹೋರಾಟಗಳು ನಡೆದಿರುವುದನ್ನು ಎಂದು ರಾಜ ಒಡೆಯರ ಆಳ್ವಿಕೆಯ ಕಾಲದಿಂದಲೂ ಗಮನಿಸಬಹುದು. ಕ್ರಿ.ಶ. ೧೬೧೭ರಲ್ಲಿ ಅಧಿಕಾರಕ್ಕೆ ಬಂದ ಆರನೆಯ ಚಾಮರಾಜ ಒಡೆಯರು ೧೬೩೦ರಲ್ಲಿ ಚನ್ನಪಟ್ಟಣ ಸೀಮೆಯನ್ನು

ಜಗದೇವರಾಯನಿಂದ ವಶಪಡಿಸಿಕೊಂಡರು.[೪೫] ಆಗ ಚನ್ನಪಟ್ಟಣಕ್ಕೆ ಸೇರಿದ ಕಾನಕಾನಹಳ್ಳಿ ಪ್ರದೇಶ ಮೈಸೂರು ಒಡೆಯರ ವಶವಾಯಿತು.

ಕನಕಪುರ ಪ್ರದೇಶದಲ್ಲಿ ಮೈಸೂರು ಒಡೆಯರ ಆಡಳಿತವನ್ನು ಶಾಸನಗಳು ಮತ್ತು ಉಪಲಬ್ಧವಿರುವ ದಾಖಲೆಗಳ ಆಧಾರದಿಂದ ತಿಳಿಯಬಹುದಾಗಿದ್ದು, ದೊರೆತಿರುವ ಶಾಸನಗಳಲ್ಲಿ ಹೆಚ್ಚಿನವು ದಾನಶಾಸನಗಳಾಗಿವೆ.

ಈ ಪ್ರದೇಶದಲ್ಲಿ ಮೈಸೂರು ಒಡೆಯರ ಇತಿಹಾಸ ಪ್ರಾರಂಭವಾಗುವುದು ೧ನೇ ರಾಜ ಒಡೆಯರ ಕಾಲದಿಂದ (೧೫೭೮-೧೬೧೭). ತುಂಗಣಿ ಹೋಬಳಿ ರಾಮಪುರದಲ್ಲಿ ಒಂದು ದಾನಶಾಸನ ದೊರೆತಿದೆ.[೪೬] ಅದರಲ್ಲಿ ನೂಲನಾಡ ಮಹಾಪ್ರಭು ತುಂಗಣಿಯ ಕಾಳಯ್ಯಜ್ಜ ಅವರ ಮಕ್ಕಳು ರಾಮಯ್ಯ ಮತ್ತು ಇತರರು, ದಾಮೋದರ ದೇವರ ಅಂಗಭೋಗಕ್ಕೆ ಈ ಗ್ರಾಮದ ಗದ್ಯಾಣ ೧೨ ಹೊನ್ನು ಕೊಟ್ಟು ಗ್ರಾಮದ ಉಳಿದ ಉತ್ಪನ್ನ ತಮ್ಮದು ಎಂದು ಹೇಳಿರುವುದನ್ನು ದಾಖಲಿಸಲಾಗಿದೆ.

ಕನಕಪುರ ಹೋಬಳಿ ಅಲ್ಲಾಳುಸಂದ್ರ ಗ್ರಾಮದ ಶಾಸನ(ನಂ. ೧೦೮) ಇಮ್ಮಡಿ ಜಗದೇವರಾಯನು ಕಾಶೀವಿಶ್ವವಿನಾಥ ಸ್ವಾಮಿಗೆ ಕನಕುಳಿ(ಕಾನಕಾನಹಳ್ಳಿ) ಸೀಮೆಯೊಳಗಿನ ಅಲ್ಲಾ ಸಮುದ್ರ ಗ್ರಾಮವನ್ನು ಸರ್ವೇಸಾಮಾನ್ಯ ಅಗ್ರಹಾರವನ್ನಾಗಿ ಮಾಡಿ ದತ್ತಿ ನೀಡಿರುವ ಉಲ್ಲೇಖವಿದೆ.[೪೭] ಅಂದರೆ ಈ ವೇಳೆಗಾಗಲೇ ಕನಕಪುರ ಒಂದು ಆಯಾಕಟ್ಟಿನ ಪ್ರದೇಶವಾಗಿ, ಸೀಮೆಯಾಗಿ ಬೆಳೆದಿತ್ತು. ಹಾಗಾಗಿ ಚನ್ನರಾಯಪಟ್ಟಣದ ಆಳ್ವಿಕೆಯ ಜವಾಬ್ದಾರಿಯನ್ನು ೧ನೇ ಕಂಠೀರವ ನರಸರಾಜ ಒಡೆಯರು (೧೬೩೮-೫೯) ಕಾನಕಾನಹಳ್ಳಿ ಪ್ರಭು ದೊಡ್ಡಯ್ಯನಿಗೆ ವಹಿಸಿಕೊಟ್ಟಿದ್ದರು ಎನಿಸುತ್ತದೆ. ಕಾನಕಾನಹಳ್ಳಿ ಅರಣ್ಯ ಪ್ರದೇಶದಿಂದ ಸುತ್ತುವರಿದಿದ್ದರಿಂದ ಅರ್ಕಾವತಿ ನದಿಗೆ ಅಂಟಿದಂತಿರುವ ಬೂದಿಗುಪ್ಪೆ ಗ್ರಾಮದಲ್ಲಿ ಚೌಡಪ್ಪನ ಮಗ ದೇವಪ್ಪ ಎಂಬುವನಿಗೆ ಹುಲಿಕಚ್ಚಿ ಸತ್ತು ಹೋಗಿದ್ದಕ್ಕೆ ಇದನ್ನು ಹಾಕಿಸಲಾಗಿದೆ. ಈ ವೀರಗಲ್ಲಿನಲ್ಲಿರುವ ಮೂರ್ತಿಯನ್ನು ಕೆತ್ತಿದವನು ನಾಗೋಜಿ ಎಂದು ತಿಳಿದು ಬಂದಿದೆ. ವೀರಗಲ್ಲು ಹಾಕುವ ಉದ್ದೇಶದ ಜೊತೆಗೆ ಕೆತ್ತಿದವನ ಹೆಸರಿನ ಉಲ್ಲೇಖವಿರುವುದು ವಿಶೇಷವಾಗಿದೆ.

ಅರ್ಕಾವತಿ ನದಿಯ ಎಡದಂಡೆಯಲ್ಲಿರುವ ಮಳಗಾಳು ಗ್ರಾಮ ವಿಜಯನಗರ ಕಾಲದಿಂದಲೇ ಗುರುತಿಸಿಕೊಂಡಿದೆ. ಈ ಗ್ರಾಮದ ಮಹದೇಶ್ವರ ದೇವಾಲಯಕ್ಕೆ ಮೈಸೂರು ದೊರೆ ದೇವರಾಜ ಒಡೆಯರು (೧೬೫೯-೭೨) ಸೇವೆ ಸಲ್ಲಿಸಿರುವುದು ಇಲ್ಲಿನ ಶಾಸನದಿಂದ (ನಂ. ೯೪-೧೬೬೨) ಸ್ಪಷ್ಟವಾಗಿ ತಿಳಿದಿದೆ.[೪೮] ಈ ಶಾಸನವನ್ನು "ಮೊಳಗಾಳು ಮಹದೇಶ್ವರ ಸ್ವಾಮಿಗೆ" ದೊರೆಯೇ ಹಾಕಿಸಿದ್ದು, ಇದರಲ್ಲಿ ಎರಡು ಸಲ 'ನಮಗೆ ಸಲ್ಲುವ ಕಾಣಿಕಾರನಹಳ್ಳಿ ಸೀಮೆಗಳ' ಎಂಬ ಉಲ್ಲೇಖ ಕಂಡು ಬಂದಿದೆ. ಕನಕಪುರದ ಸ್ಥಳನಾಮ ಆ ಕಾಲಕ್ಕೂ ಕಾಣಿಕಾನರಹಳ್ಳಿ ರೂಪದಲ್ಲಿ ಉಳಿದಿರುವುದನ್ನು ತಿಳಿಯುವ ಪ್ರಮುಖ ದಾಖಲೆಯಾಗಿದೆ.

ಇದೇ ದೇವರಾಯ ಒಡೆಯರ ಕಾಲಕ್ಕೆ ಸೇರಿದ ಶಾಸನವೊಂದು (ನಂ. ೯೧-೧೬೬೭) ದೇಗುಲ ಮಠದಲ್ಲಿ ಕಂಡು ಬಂದಿದೆ. ಇವರ ದಳವಾಯಿ ಆದ ವಿರುಪಸಮುದ್ರದ ಕೊಮಾರಯ್ಯನ ತಾಯಿ ತಿಮ್ಮಮ್ಮ ಮಠಕ್ಕೆ ಭೂಮಿಯನ್ನು ದಾನ ನೀಡಿ ಮಠ ಸಾಂಗಿಕವಾಗಿ ನಡೆದು ಬರಲೆಂದು ಕೋರಿಕೊಂಡಿದ್ದಾಳೆ. ಈಗ ದೇಗುಲ ಮಠ ತಿಮ್ಮಮ್ಮನ ಕೋರಿಕೆಯಂತೆ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ಬೆಳೆದಿರುವುದನ್ನು ಕಾಣಬಹುದು. ಅರ್ಕಾವತಿ ನದಿ ದಡದಲ್ಲಿರುವ ಈ ಮಠ ಕ್ರಿ.ಶ. ೧೬೬೭ರಲ್ಲಿ ಹುಚ್ಚು ಹೊಳೆ ಬಂದ ಕಾರಣ ಪ್ರವಾಹದಲ್ಲಿ ಕೊಚ್ಚಿ ಹೋಗಿ ಹಾಳಾಯಿತು. ಆಗ ತಿಮ್ಮಮ್ಮ ಭದ್ರವಾದ ಕಲ್ಲಿನ ಮಠವನ್ನು ಕಟ್ಟಿಸಿ(೨೮-೪-೧೬೭೮) ಮತ್ತೆ ಮಠಕ್ಕೆ ದತ್ತಿ ನೀಡಿರುವುದು ಶಾಸನದಲ್ಲಿ ಉಲ್ಲೇಖಗೊಂಡಿದೆ.[೯]

ದೇವರಾಜ ಒಡೆಯರ ಕಾಲದ ಮತ್ತೊಂದು ಶಾಸನ (ನಂ. ೯೫-೧೬೭೧) ವಿರೂಪ ಸಂದ್ರ ಗ್ರಾಮದ ಪೂರ್ವ ದಿಕ್ಕಿಗಿರುವ ದೇವರ ಕೆರೆಯ ಬಳಿ ಹುಟ್ಟು ಬಂಡೆಯ ಮೇಲೆ ಕಂಡು ಬಂದಿದೆ. ಇದರಲ್ಲಿ ವಿರೂಪ ಸಂದ್ರ ಗ್ರಾಮವನ್ನು ಮಳಗಾಳು ಮಹದೇಶ್ವರ ದೇವರಿಗೆ ದಾನ ಬಿಟ್ಟಂತೆ ತಿಳಿದು ಬರುತ್ತದೆ.[೫೦] ಮುದುವಾಡಿ ಹೋಬಳಿ ಮುರುಕಣಿ ಗ್ರಾಮದಲ್ಲಿ ಎರಡು ಶಾಸನಗಳು ಕಂಡುಬಂದಿವೆ. ಇಲ್ಲಿ ಅರಸರ ಹೆಸರು ಕಂಡು ಬಂದಿಲ್ಲ. ೧ನೇ ಶಾಸನದಲ್ಲಿ (ನಂ. ೧೧೫-೧೬೮೨?) "ಈ ಗದ್ದೆಯ ಸಿದ್ದಾಯ ಗದ್ಯಾಣ ೫" ಎಂದು ಜೊತೆಗೆ "ಅಕ್ಷರದಲ್ಲಿ ಅಯಿದು ಹಣ" ಎಂಬ ಉಲ್ಲೇಖವಿರುವುದು ಇಂದಿನ ದಾಖಲೆ ಪತ್ರಗಳ ರಚನೆಯ ಪ್ರಾಚೀನತೆಯನ್ನು ತೋರಿಸುತ್ತದೆ. ೨ನೇ ಶಾಸನದಲ್ಲಿ (ನಂ. ೧೧೬-೧೬೮೨) ಚನ್ನಪಟ್ಟಣದ ಮಾರದೇವ ಒಡೆಯರು ಕಗ್ಗಲ್ಲ ಭೈರನಾಯಕನ ಮಗ ತಿಪ್ಪಣ್ಣನ ನಾಯಕತ್ವಕ್ಕೆ ಮುರುಕಣಿ ಗ್ರಾಮವನ್ನು ಬಿಡಲಾಯಿತೆಂದು ಉಲ್ಲೇಖವಿದೆ.

ಮೈಸೂರು ಒಡೆಯರ ೧ನೇ ಕೃಷ್ಣರಾಜ ಒಡೆಯರ ಅಧಿಕಾರವಧಿಯವರೆಗೆ (೧೭೧೪-೩೨) ಕನಕಪುರ ಪ್ರದೇಶದಲ್ಲಿ ಈ ಮನೆತನದ ಆಳ್ವಿಕೆಯ ದಾಖಲೆಗಳು ಕಂಡು ಬರುವುದಿಲ್ಲ. ಪ್ರಾಯಶಃ ರಾಜ್ಯದ ಕ್ಷೋಭೆ ಇದಕ್ಕೆ ಕಾರಣವಿರಬಹುದು. ೧ನೇ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದ ಶಾಸನ ಕೋಡಿಹಳ್ಳಿ ಹೋಬಳಿ ಕೋಟಿಕಬ್ಬಳ್ಳಿ ಗ್ರಾಮದಲ್ಲಿ ಕಂಡು ಬಂದಿದೆ. ಇದರಲ್ಲಿ ಚಾಮರಾಜ ಒಡೆಯರು ಆನೇಕಲ್ಲು ಬಳಿಯ ಗುಮ್ಮಳಾಪುರದ ಮಠಕ್ಕೆ ದಾನ ನೀಡಿರುವ ಉಲ್ಲೇಖವಿದೆ.

ಈ ಕಾಲಘಟ್ಟದಿಂದ ಮುಂದೆ ಟಿಪ್ಪು ಸುಲ್ತಾನ್ ನಂತರದವರೆಗೂ ಕನಕಪುರ ತಾಲೂಕಿನಲ್ಲಿ ಮೈಸೂರು ಒಡೆಯರಿಗೆ ಸಂಬಂಧಿಸಿದ ಆಧಾರಗಳು ಕಂಡು ಬರುವುದಿಲ್ಲ. ಟಿಪ್ಪು ಸುಲ್ತಾನನ ಪತನದ ನಂತರ ಮುಮ್ಮಡಿ ಕೃಷ್ಣರಾಜರಿಗೆ(೧೮೧೧-೨೧) ಅಧಿಕಾರ ದೊರೆತ ಮೇಲೆ ಆಡಳಿತ ವ್ಯವಸ್ಥೆಯಲ್ಲಿ ೧೮ ಕಛೇರಿಗಳು ೧೨೫ ಗಡಿಗಳೂ(ತಾಲೂಕುಗಳು) ಸ್ಥಾಪನೆಯಾದವು.[೫೧] ಅವುಗಳಲ್ಲಿನ ನಡವಳಿಗಳನ್ನು ತಿಳಿಯಲು ೬ ತುಕಡಿಗಳು ಸ್ಥಾಪಿತವಾದವು. ಬೆಂಗಳೂರು ತುಕಡಿಯ ೨೮ ತಾಲೂಕುಗಳಲ್ಲಿ ಕಾನಕಾನಹಳ್ಳಿ ಮತ್ತು ಹಾರೋಹಳ್ಳಿ ಸೇರಿದ್ದವು.[೫೨]

ಚನ್ನಪಟ್ಟಣ, ಮಾಗಡಿ ಮತ್ತು ಕಾನಕಾನಹಳ್ಳಿ ತಾಲೂಕು ಸೇರಿದಂತೆ ಕ್ಲೋಸ್‌ಪೇಟ್ ಸಬ್‌ಡಿವಿಜನ್ ೧೮೮೪ರಲ್ಲಿ ಸ್ಥಾಪನೆಯಾಯಿತು. ಕನಕಪುರದ ಅಭಿವೃದ್ಧಿಗಾಗಿ ೧೯೭೦ರಲ್ಲಿ ಪುರಸಭೆ ಸ್ಥಾಪನಗೊಂಡಿತು. ೧೯೪೭ರಲ್ಲಿ ಪುರಸಭೆ ಅಧ್ಯಕ್ಷರು ಸೇರಿ ೨೧ ಮಂದಿ ಚುನಾಯಿತ ಸದಸ್ಯರ ಪದ್ಧತಿ ಆರಂಭವಾಯಿತು.[೫೩] ೨೦೧೪ರಲ್ಲಿ ನಗರ ಸಭೆ ಸ್ಥಾಪನೆಗೊಂಡು ಅಧ್ಯಕ್ಷರು ಸೇರಿ ೨೮ ಮಂದಿ ಚುನಾಯಿತ ಸದಸ್ಯರು ಕಾರ್ಯ ನಿರ್ವಹಿಸುತ್ತಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಕನಕಪುರದ ಪಾತ್ರ

ಭಾರತದಲ್ಲಿ ಸ್ಥಾಪಿತವಾಗಿದ್ದ ಬ್ರಿಟೀಷರ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆಯಲು ಭಾರತೀಯರು ಬ್ರಿಟೀಷರ ವಿರುದ್ಧ ಹೋರಾಡಬೇಕಾಯಿತು. ಭಾರತ ಕೇವಲ ಹೋರಾಟ ಮಾಡಿ ಸ್ವಾತಂತ್ರ್ಯ ಪಡೆಯಲು ಸಾಧ್ಯವಿಲ್ಲವೆಂದು ಅಹಿಂಸಾ ಮಾರ್ಗವನ್ನು ಕೈಗೊಂಡರು. ೧೯೧೯ರಿಂದ ಅಹಿಂಸೆ, ಅಸಹಕಾರ, ಕಾನೂನುಭಂಗ, ಕರನಿರಾಕರಣೆಯಂತಹ ಚಳುವಳಿ ಹಾಗೂ ಸತ್ಯಾಗ್ರಹಗಳನ್ನು ಪ್ರಾರಂಭಿಸಿದರು. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಮಹತ್ವ ಪಾತ್ರವಿರುವುದರಿಂದ ಕನಕಪುರ ತಾಲೂಕಿನ ಮುಖಂಡರು ಗಾಂಧಿತತ್ವ ಮತ್ತು ಚಳುವಳಿಗಳನ್ನು ರೂಢಿಸಿಕೊಂಡು ಸ್ವಾತಂತ್ರ್ಯ ಹೋರಾಟಕ್ಕೆ ಭಾಗವಹಿಸಿದ್ದಾರೆ. ಹೀಗೆ ರಾಷ್ಟ್ರದ ಸ್ವಾತಂತ್ರ್ಯ ಹೋರಾಟಕ್ಕೆ ಕನಕಪುರವೂ ಕೂಡ ತನ್ನದೇ ಆದ ಪಾತ್ರವಹಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಿಂದ ಕಾನಕಾನಹಳ್ಳಿಗೆ(ಕನಕಪುರ) ಬಂದು ವಾಸು ಹೋಟೆಲ್ ಸ್ಥಾಪಿಸಿದ್ದ ಮಂಚಯ್ಯ ಎಂಬುವರು ತಮ್ಮ ಸಹಪಾಠಿಗಳಾಗಿದ್ದ ನಾರಾಯಣಶೆಟ್ಟಿ, ಮೂಲೆ ಮನೆ ನಂಡುಂಜಶಾಸ್ತ್ರಿ ಮುಂತಾದವರನ್ನು ಸಂಘಟಿಸಿದರು.[೫೪] ನಂತರ ಅವರಿಗೆ ರಾಷ್ಟ್ರೀಯ ಕಾಂಗ್ರೇಸಿನ ಬಗ್ಗೆ ತಿಳಿಸಿ ಕನಕಪುರದಲ್ಲಿ ಕಾಂಗ್ರೇಸ್ ಸ್ಥಾಪನೆಯಾಗಲು ಕಾರಣೀಕೃತರಾದರು. ಮುಂದೆ ಅದು ಸರದಾರ್ ಎ.ವಿ. ವೆಂಕಟರಾಮಯ್ಯ ಮತ್ತು ಅವರ ತಮ್ಮ ವೆಂಕಟಪ್ಪ ಮುಂತಾದವರ ಮುಂದಾಳತ್ವದಲ್ಲಿ ಚಳುವಳಿಯ ರೂಪ ಪಡೆಯಿತು. ೧೯೩೭ರಲ್ಲಿ ಮಹಾತ್ಮಗಾಂಧಿಯವರು ಕನಕಪುರಕ್ಕೆ ಭೇಟಿ ನೀಡಿ ಜನರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಹುರಿದುಂಬಿಸಿ ಭಾಷಣ ಮಾಡಿದರು.[೫೫] ಇದು ಕಾನಕಾನಹಳ್ಳಿಯ ಕರಿಯಪ್ಪ, ನಾರಾಯಣಸ್ವಾಮಿ, ಎಚ್.ಎಸ್. ದೊರೆಸ್ವಾಮಿ ಮೊದಲಾದವರು ರಾಷ್ಟ್ರೀಯ ಚಳುವಳಿಯಲ್ಲಿ ಪಾಲ್ಗೊಳ್ಳಲು ಮತ್ತು ಕಾನಕಾನಹಳ್ಳಿಯ ಕೆ. ಸುಬ್ಬರಾವ್ ಅವರು ವಕೀಲಿ ವೃತ್ತಿ ಮಾಡುತ್ತಾ ಸ್ವಾತಂತ್ರ್ಯ ಹೋರಾಟದ ಮುಂಚೂಣಿಗೆ ಬರಲು ಪ್ರೇರೇಪಿಸಿತು.

ಭಾರತದಲ್ಲೇ ಮೊಟ್ಟಮೊದಲಿಗೆ ಬಾರಿಗೆ ೧೯೪೦ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆ ಸ್ಥಾಪನೆಯಾಯಿತು. ಈ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾನಕಾನಹಳ್ಳಿಯನ್ನು ಷೇಕ್ ಮೋಹಿದ್ದೀನ್, ಪಿ.ಎಲ್. ಚಾಮೇಗೌಡ, ಬಿ.ಎಸ್. ಸಿದ್ದಪ್ಪ, ಕೆ.ಪಿ. ಪರಶಿವಯ್ಯನವರು ಪ್ರತಿನಿಧಿಸಿದ್ದರು.[೫೬] ಎಸ್. ಕರಿಯಪ್ಪನವರು ೧೯೪೧ರಲ್ಲಿ ಪ್ರಾರಂಭ ಮಾಡಿದ ಗ್ರಾಮ ವಿದ್ಯಾ ಪ್ರಚಾರಕ ಸಂಸ್ಥೆ ಕಾಂಗ್ರೇಸ್ ಹೋರಾಟದ ಕೇಂದ್ರಬಿಂದುವಾಯಿತು. ಅಲ್ಲದೆ ಕರಿಯಪ್ಪನವರ ನೇತೃತ್ವದಲ್ಲಿ

ಪಿ. ವೆಂಕಟಾಚಲಪ್ಪ ಶೆಟ್ಟರು, ಡಿ. ರಾಮಯ್ಯ, ನಾರಾಯಣಸ್ವಾಮಿ, ಜೋಗಯ್ಯ, ಹೂವಾಡಿಗರ ವೆಂಕಟಸ್ವಾಮಿ, ಡಾ. ಕ್ಯಾಪ್ಟನ್ ಲಕ್ಷ್ಮೀನರಸಿಂಹಯ್ಯ, ಡಾ. ವೆಂಕಟಸುಬ್ಬಯ್ಯ, ಎಚ್.ಎಸ್. ದೊರೆಸ್ವಾಮಿ, ಕೆ.ಎನ್. ನರಸಿಂಹಶಾಸ್ತ್ರಿ ಮೊದಲಾದವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು.[೫೭]

ಭಾರತದಲ್ಲಿ ಬ್ರಿಟೀಷರು ನೇರವಾಗಿ ಆಡಳಿತ ನಡೆಸುತ್ತಿದ್ದ ಪ್ರಾಂತ್ಯಗಳಲ್ಲಿ ಸತ್ಯಾಗ್ರಹ, ಕಾನೂನುಭಂಗ ಮೊದಲಾದ ಚಳುವಳಿಗಳು ಗಾಂಧಿಯವರ ನೇತೃತ್ವದಲ್ಲಿ ಹುರುಪಿನಲ್ಲಿ ನಡೆಯುತ್ತಿದ್ದವು. ಆದರೆ ದೇಶೀಯ ಸಂಸ್ಥಾನಗಳ ಹೋರಾಟಗಳು ಅವುಗಳಲ್ಲಿ ಗಣನೀಯವಾಗಿ ನಡೆಯುತ್ತಿರಲಿಲ್ಲ. ಇದಕ್ಕೆ ಕಾರಣ ಬ್ರಿಟೀಷರು ಭಾರತದಿಂದ ಹೋದರೆ ದೇಶೀಯ ಸಂಸ್ಥಾನಗಳು ತಮ್ಮ ಅಧಿಕಾರಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬ ಭಾವನೆಯಾಗಿತ್ತು. ಈ ವೇಳೆಯಲ್ಲಿ ನೆಹರು ಅವರು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಟವೆಂದು ಘೋಷಿಸಿದ ನಂತರ ಚಳುವಳಿ ದೇಶೀಯ ಸಂಸ್ಥಾನಗಳಿಗೂ ತೀವ್ರವಾಗಿ ಹರಡಿತು. ಅಲ್ಲದೆ ಕರ್ನಾಟಕದ ಉತ್ತರ ಭಾಗದಲ್ಲಿ ಆರಂಭಗೊಂಡಿದ್ದ ಕರನಿರಾಕರಣ ಚಳುವಳಿ ಎಲ್ಲಾ ಕಡೆಗೂ ಹಬ್ಬಿತು.

"ಗಾಂಧಿಯವರು ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಿ ದಂಡಿಯಾತ್ರೆ ನಡೆಸಿದಾಗ ಕಾನಕಾನಹಳ್ಳಿ ಸ್ವಾತಂತ್ರ್ಯ ಹೋರಾಟಗಾರರ ಮುಂಚೂಣಿಯಲ್ಲಿದ್ದ ಎ.ವಿ. ವೆಂಕಟರಾಮಯ್ಯನವರ ಮೊಮ್ಮಗ ಎ.ವಿ. ಶ್ರೀನಿವಾಸಮೂರ್ತಿ ಭಾಗವಹಿಸಿ ಬಂಧನಕ್ಕೊಳಗಾಗಿ ಕಾರಾಗೃಹ ಶಿಕ್ಷೆ ಅನುಭವಿಸಿದರು. ಕಾನಕಾಹಳ್ಳಿ ವೆಂಕಟಸುಬ್ಬಯ್ಯನವರು ೧೯೨೮ ಸರದಾರ್ ವಲ್ಲಬಾಯಿ ಪಟೇಲರ ನೇತೃತ್ವದಲ್ಲಿ ಬಾರ್ಡೋಲಿಯಲ್ಲಿ ನಡೆದ ಕರನಿರಾಕರಣ ಆಂದೋಲನದಲ್ಲಿ ಭಾಗವಹಿಸಿದ್ದರು".[೫೮]

ಜನ ಸಂಘಟನೆಯಲ್ಲಿ ಕರಿಯಪ್ಪನವರು ಅನುಭವಿಗಳಾಗಿದ್ದರಿಂದ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುವಾಗ ಸರ್ಕಾರಿ ಕಛೇರಿಗಳಲ್ಲಿ ಹೆಚ್ಚು ಹಣ ನೀಡ ಬೇಡಿ, ಲಂಚ ಕೊಡಬೇಡ ಎಂದು ಬಹಿರಂಗವಾಗಿಯೇ ಹೇಳುತ್ತಿದ್ದರು. ಕರನಿರಾಕರಣೆ ಚಳುವಳಿಯ ಅಂಗವಾಗಿ ಒಮ್ಮೆ ಸಾತನೂರಿನಲ್ಲಿ ಸಾರ್ವಜನಿಕ ಸಭೆ ಸೇರಿ ರೈತರು ಸರ್ಕಾರಕ್ಕೆ ಕಂದಾಯ ನೀಡಬಾರದು ಎಂದು ಭಾಷಣ ಮಾಡಿದರು. ಅಂದಿನ ಬ್ರಿಟೀಷ್ ಸರ್ಕಾರ ಇದನ್ನು 'ರಾಜದ್ರೋಹ' ಎಂದು ಪರಿಗಣಿಸಿ ಕರಿಯಪ್ಪನವರನ್ನು ಕ್ಲೋಸ್‌ಪೇಟ್(ರಾಮನಗರ) ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿತು. ವಿಚಾರಣೆ ನಡೆದು ಜುಲ್ಮಾನಿ ವಿಧಿಸಿದಾಗ ಕರಿಯಪ್ಪನವರು ಅದನ್ನು ಕಟ್ಟಲು ನಿರಾಕರಿಸಿದಾಗ ಅವರನ್ನು ಕಾರಾಗೃಹಕ್ಕೆ ಹಾಕಲಾಯಿತು.[೫೯] ೧೯೩೮ರಲ್ಲಿ ಮದ್ದೂರಿನ ಶಿವಪುರದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸಮಾವೇಶ ನಡೆದಾಗ ಸರ್ಕಾರ ಶಿವಪುರದಲ್ಲಿ ಕಾಂಗ್ರೆಸ್ ಧ್ವಜವನ್ನು ಹಾರಿಸಬಾರದೆಂದು ಆಜ್ಞೆ ಹೊರಡಿಸಿತು. ಆದರೂ ಕಾಂಗ್ರೆಸ್ ರಾಷ್ಟ್ರೀಯ ಧ್ವಜವನ್ನು ಹಾರಿಸಲು ನಿರ್ಧರಿಸಿದಾಗ ಮೈಸೂರು ಸಂಸ್ಥಾನದಾದ್ಯಂತ ಧ್ವಜ ಸತ್ಯಾಗ್ರಹ ಚಳುವಳಿ ನಡೆದು ಸಾವಿರಾರು ಜನರು ಸೆರೆಮನೆ ವಾಸ ಅನುಭವಿಸಿದರು. ಕರಿಯಪ್ಪನವರು ತಮ್ಮ ಸ್ನೇಹಿತರೊಡನೆ ಮತ್ತು ಚಿಕ್ಕ ಹುಡುಗ ಕೇಶವಯ್ಯನ ಜೊತೆ ಈ ಚಳುವಳಿಯಲ್ಲಿ ಭಾಗವಹಿಸಿದ್ದರು.[೬೦]

ಮುಂಬಯಿಯಲ್ಲಿ ನಡೆದ ೧೯೪೨ ಆಗಸ್ಟ್ ತಿಂಗಳ ಎ.ಐ.ಸಿ.ಸಿ. ಅಧಿವೇಶನ ಇತಿಹಾಸ ಪ್ರಸಿದ್ಧವಾಗಿದೆ. 'ಭಾರತದಿಂದ ತೊಲಗಿ' ಎಂದು ಬ್ರಿಟೀಷರ ವಿರುದ್ಧ ನಿರ್ಣಯವನ್ನು ಅಂಗೀಕರಿಸಿದರು. ಕ್ವಿಟ್ ಇಂಡಿಯಾ ಚಳುವಳಿ ಭಾರತದಾದ್ಯಂತ ತೀವ್ರ ಸ್ವರೂಪ ಪಡೆಯಿತು. ಕಾನಕಾನಹಳ್ಳಿಯ ಗ್ರಾಮ ವಿದ್ಯಾ ಪ್ರಚಾರಕ ಸಂಘದ ಪ್ರೌಢ ಶಾಲಾ ಮೈದಾನ ಇಡೀ ತಾಲೂಕಿನ ಕಾಂಗ್ರೇಸ್ ರಾಜಕೀಯ ಚಟುವಟಿಕೆಯ ಕೇಂದ್ರ ಸ್ಥಳವಾಯಿತು. ದೇಶದಾದ್ಯಂತ ನಡೆಯುತ್ತಿದ್ದ ವಿದ್ಯುತ್ ಸಂಪರ್ಕ ಕಡಿತ, ಪಿಕೆಟಿಂಗ್ ಮೊದಲಾದ ಸರ್ಕಾರ ವಿರೋಧಿ ಚಟುವಟಿಕೆಗಳನ್ನು ಕಾನಕಾನಹಳ್ಳಿಯಲ್ಲಿ ವೆಂಕಟಾಚಲಪತಿ ಶೆಟ್ಟಿ, ಕೆ. ಸುಬ್ಬರಾಯರು ಮತ್ತು ಕರಿಯಪ್ಪನವರು ನಡೆಸಿದಾಗ ಸರ್ಕಾರ ಇವರನ್ನು ಬಂಧಿಸಿ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಹಾಕಿತು. ೧೯೪೬ರ ನವೆಂಬರ್ ೨ ಮತ್ತು ೩ರಂದು ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಮೈಸೂರು ಕಾಂಗ್ರೇಸಿನ ಆರನೆಯ ಅಧಿವೇಶನ ನಡೆಯಿತು. ಈ ಅಧಿವೇಶನದಲ್ಲಿ ಕನಕಪುರದ ಗಾಂಧಿ ಎಂದು ಪ್ರಖ್ಯಾತರಾದ ಎಸ್. ಕರಿಯಪ್ಪನವರು ಮತ್ತು ಅವರ ಅನುಯಾಯಿಗಳು ಪಾಲ್ಗೊಂಡರು. ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಕನಕಪುರ ತಾಲೂಕಿನ ಜನ ತಮ್ಮನ್ನು ತೊಡಗಿಸಿಕೊಂಡು ನಿರಂತರವಾಗಿ ಹೋರಾಡಿದ್ದಾರೆ ಎಂಬುದು ತಿಳಿದುಬಂದಿದೆ.

ಕಾನಕಾನಹಳ್ಳಿಗೆ(ಕನಕಪುರ)ಫ್ರಾನ್ಸಿಸ್ ಬುಕನನ್ ಭೇಟಿ

ಟಿಪ್ಪು ಸುಲ್ತಾನನ ಪತನದ ನಂತರ ಇಲ್ಲಿನ ಸ್ಥಳೀಯ ವಿದ್ಯಾಮಾನಗಳ ವರದಿ ತಯಾರು ಮಾಡಲು ಈಸ್ಟ್ ಇಂಡಿಯಾ ಕಂಪನಿಯು ಫ್ರಾನ್ಸಿಸ್ ಬುಕನನ್ ಅವರನ್ನು ನೇಮಿಸಿತು. ಕಂಪನಿಯ ವಶದಲ್ಲಿದ್ದ ಪ್ರದೇಶಗಳ ವಸ್ತುಸ್ಥಿತಿಯನ್ನು ಪರಿಶೀಲಿಸಿ ವರದಿ ಮಾಡಲು ಬುಕನನ್ ಪ್ರವಾಸ ಕೈಗೊಂಡನು. ಈ ರೀತಿ ಪ್ರವಾಸ ಕೈಗೊಂಡು ಸಂಗ್ರಹಿಸಿದ ಮಾಹಿತಿಯನ್ನು ವರದಿ ಮಾಡಲು ಮೈಸೂರು ಪ್ರಾಂತ್ಯಕ್ಕೆ ೧೮೦೦-೧೮೦೧ರಲ್ಲಿ ಬಂದಿದ್ದನು. ಬ್ರಿಟೀಷರು ಮೈಸೂರು ಅರಸರಿಂದ ಮತ್ತು ಟಿಪ್ಪು ಸುಲ್ತಾನಿಂದ ವಶಪಡಿಸಿಕೊಂಡ ಪ್ರದೇಶಗಳ ಭೌಗೋಳಿಕ, ಸಾಮಾಜಿಕ, ಐತಿಹಾಸಿಕ, ಕೃಷಿ, ಪುರಾತತ್ವ ಮೊದಲಾದ ವಿಷಯಗಳ ಮಾಹಿತಿಯನ್ನು ಪ್ರವಾಸ ಮಾಡಿ ಸಂಗ್ರಹಿಸುವುದು ಬುಕನಾನ್ ಅವರ ಉದ್ದೇಶವಾಗಿತ್ತು. ಆ ಸಂದರ್ಭದಲ್ಲಿ ಇಲ್ಲಿಯ ಜನರ ಆಚಾರ, ವಿಚಾರ, ಧರ್ಮ, ಕೃಷಿ, ಕಲೆಗಳು, ವ್ಯಾಪಾರ ಹಾಗೂ ಅವನು ಗ್ರಹಿಸಿದ ವಿಷಯವನ್ನು ಸಂಗ್ರಹಿಸಿ "ಎ ಜರ್ನಿ ಫ್ರಮ್ ಮದ್ರಾಸ್ ತ್ರೂ ದಿ ಕಂಟ್ರೀಸ್ ಆಫ್ ಮೈಸೂರ್ ಅಂಡ್ ಮಲಬಾರ್" ಎಂಬ ಪುಸ್ತಕ ಬರೆದನು. ಅದು ೧೮೦೭ರಲ್ಲಿ ಲಂಡನಿನಲ್ಲಿ ಮೊದಲು ಪ್ರಕಟಗೊಂಡಿತು.

ಎರಡು ಶತಮಾನಗಳ ಹಿಂದಿನ ಸಮಕಾಲೀನ ವಿದ್ಯಾಮಾನಗಳನ್ನು ತಿಳಿದುಕೊಳ್ಳಲು ಇದೊಂದು ಉಪಯುಕ್ತ ದಾಖಲೆ. ಬುಕನನ್ ೧೮೦೦ ರ ಜೂನ್ ೧೧ ಮತ್ತು ೧೨ರಂದು ಕನಕಪುರದಲ್ಲಿ ವಾಸ್ತವ್ಯ ಹೂಡಿದ್ದನು. ಆ ಸಂದರ್ಭದಲ್ಲಿ ಕನಕಪುರ ಸ್ಥಳದ ಇತಿಹಾಸ ಮತ್ತು ಕೃಷಿಗೆ ಸಂಬಂಧಿಸಿದ ಅನೇಕ ವಿವರಗಳನ್ನು ಸ್ಥಳೀಯ ಸರ್ಕಾರಿ ಅಧಿಕಾರಿಗಳಿಂದ

ಸಂಗ್ರಹಿಸಿಕೊಂಡನು. ಅದೇ ಜೂನ್ ೧೨ ಮರಳವಾಡಿಗೆ ತೆರಳಿ ಅಲ್ಲಿಂದ ಕಾಡು ದಾರಿ ಮೂಲಕ ಪ್ರಸ್ತುತ ತಮಿಳುನಾಡಿಗೆ ಸೇರಿದ ಥಳಿ ಗ್ರಾಮದ ಕಡೆ ಹೋದನು. ಈ ಥಳಿ ಗ್ರಾಮ ಆ ಸಂದರ್ಭದಲ್ಲಿ ಕನ್ನಡ ನಾಡಿಗೆ ಸೇರಿತ್ತು. ಹೀಗೆ ಕನಕಪುರ ಸ್ಥಳದಲ್ಲಿ ಬುಕನನ್ ಸಂಗ್ರಹಿಸಿದ ಮಾಹಿತಿಯನ್ನು "A Journey form Madras Through the Contries of Mysore, Canara and Malabar" ಕೃತಿಯಲ್ಲಿ ವಿವರಿಸಿದ್ದು ಅದನ್ನು ಈ ಕೆಳಕಂಡಂತೆ ಕಾಣಬಹುದು.

ಜೂನ್-೧೦ : "ನಾನು ಎರಡು ಸುಲ್ತಾನಿ ಕ್ರೋಸುಗಳನ್ನು (ಸು. ೭ ಮೈಲಿ) ಪ್ರಯಾಣಿಸಿ ಸಾತನೂರು ಸೇರಿದೆ. ರಸ್ತೆಯ ಎರಡೂ ಕಡೆ ಬೆಟ್ಟಗಳು ಬುಡದಲ್ಲಿ ವಿಶಾಲವಾದ ಕಣಿವೆಗಳ ದಾರಿ. ಮಣ್ಣು ಸಾಧಾರಣವಾಗಿದ್ದು, ಬಹುಭಾಗ ಕುರುಚಲು ಗಿಡಗಳು ಪೊದೆಗಳಿಂದ ಕೂಡಿದ್ದು ಗೋಪಾಲ ದುರ್ಗದಿಂದ (ಈಗಿನ ಬಸವನಬೆಟ್ಟ) ಸಾತನೂರು ಒಂದು ಕ್ರೋಶದಷ್ಟು ದೂರ. ಇದೊಂದು ಬಡಬಯಲು ಹಳ್ಳಿ. ಸುಮಾರು ೩೦ ಮನೆಗಳಿದ್ದು, ೧೦ ಮುಸಲ್ಮಾನರಿಗೆ ಸೇರಿದ್ದವು. ಇವರು ಕೃಷಿಯನ್ನು ಅವಲಂಬಿಸಿದವರು. ಸಾರ್ವಜನಿಕ ಲೆಕ್ಕದ ಪ್ರಕಾರ ಸಾತನೂರು ಒಂದು ಉಸೂಲ್ ಗ್ರಾಮ, ಎಂದರೆ ಹೋಬಳಿ ಗ್ರಾಮ. ಆದರೆ ಇಂಡಿಯಾದ ವಿಷಯದಲ್ಲಿ ನಾವು ಈ ದೊಡ್ಡ ದೊಡ್ಡ ಪದ ಬಳಕೆಯಲ್ಲಿ ಎಚ್ಚರಿಕೆ ಇರಬೇಕು. ಇಲ್ಲಿ ಗೌಡ ಎಂಬುವನು ಮುಖ್ಯ ಸಾತನೂರಿನಿಂದ ಅರ್ಧ ಕ್ರೋಶು ದೂರದಲ್ಲಿ ಒಂದು ಕಬ್ಬಿಣದ ಕುಲುಮೆಯಿದೆ.

ಜೂನ್-೧೧ : "ನಾನು ಮುಂದೆ ಮೂರು ಕ್ರೋಶು (ಸು. ೧೦-೧೧ ಮೈಲಿ) ದಾರಿ ಸಾಗಿ ಕಾಣಿಕಾರ್‍ನಹಳ್ಳಿ ತಲುಪಿದೆ. ಇದನ್ನು ಜನ ಕಾನ್‌ಕಾನ್‌ಹಳ್ಳಿ ಎಂದು ಕರೆಯುತ್ತಾರೆ. ಇವುಗಳಲ್ಲಿ ಮೊದಲಿನ ಹೆಸರೇ ಚೆನ್ನಾಗಿದೆ ಎಂದು ಇಲ್ಲಿಯ ಸ್ಥಳೀಯರು ಒಟ್ಟಾಗಿ ತಿಳಿಸಿದ್ದಾರೆ. ಕಾಣಿಕಾರ ಎಂಬುವರ ಷಷ್ಠಿ ವಿಭಕ್ತಿ ರೂಪವೇ ಕಾಣಿಕಾರ್‍ನ ಎಂದು ಹೇಳುತ್ತಾರೆ. ತಮಿಳು ಭಾಷೆಯಲ್ಲಿ ಇದರ ಅರ್ಥ ಭೂಮಾಲಿಕ(ಜಮೀನ್ದಾರ) ಎಂದಾಗುತ್ತದೆ. ಹಳ್ಳಿ ಎಂದರೆ ಕನ್ನಡ ಭಾಷೆಯಲ್ಲಿ ಗ್ರಾಮ. ನಾನು ಬಂದ ದಾರಿಯ ಒಂದು ಕಣಿವೆಯ ಮಾರ್ಗ. ಇದು ಕೆಲವು ಕಡೆಗಳಲ್ಲಿ ಕಿರಿದಾದ ಬೆಟ್ಟಗುಡ್ಡಗಳಿಂದ ಕೂಡಿದೆ. ಇನ್ನೂ ಕೆಲವು ಕಡೆಗಳಲ್ಲಿ ಅಗಲವಾಗಿದ್ದು, ಪ್ರಾಯಶಃ ಬೇಸಾಯ ಮಾಡಿದೆ ಮತ್ತು ಇದು ಗುಜ್ಜು ಮರಗಳಿಂದ ತುಂಬಿ ಹೋಗಿದೆ. ಅವುಗಳನ್ನು ಬೆಳೆಸಿದ ಬೆಟ್ಟಗಳು ವಿಶೇಷವಾಗಿ ಕಲ್ಲು ಮಣ್ಣುಗಳಿಂದಲೂ, ಬಂಡೆಗಳಿಂದಲೂ ತುಂಬಿವೆ. ಅವುಗಳಲ್ಲಿ ಹುಲಿಗಳು ಸೇರಿಕೊಂಡಿವೆ ಎನ್ನುತ್ತಾರೆ".

ವಾಸ್ತವ್ಯದ ವಿವರಣೆ

"ಕಾನಕಾನಹಳ್ಳಿಗೆ ಒಬ್ಬ ಅಮಲ್ದಾರನಿದ್ದನು. ಇದು ಚನ್ನಪಟ್ಟಣದ ಜಗದೇವರಾಯ ಎಂಬುವನು ಕಟ್ಟಿಸಿದ ಕೋಟೆ. ತನ್ನ ಕಾಲದಲ್ಲಿ ಈತ ಒಬ್ಬ ಪ್ರಬಲ ಪಾಳೆಯಗಾರ. ಇಲ್ಲಿ ಜಗದೇವರಾಯನ ಸಂತತಿಯವನಾದ ಚನ್ನಪಟ್ಟಣದ ಇಮ್ಮಡಿ ಅಂಕುಶರಾಯನು ಒಬ್ಬ ಬ್ರಾಹ್ಮಣನಿಗೆ ಭೂದಾನ ಮಾಡಿದ್ದ. ಪೆನುಕೊಂಡೆಯಲ್ಲಿ ಶ್ರೀರಾಮದೇವ ಎಂಬುವನು ಇದ್ದನು ಎಂದು

ಶಕ ೧೫೪೬ (೧೬೨೪) ಶಾಸನದಿಂದ ತಿಳಿಯುತ್ತದೆ. ಇದು ವಿಜಯನಗರದ ಪತನದಿಂದ ಮುಂದೆ ೩೫ ವರ್ಷಗಳ ಬಳಿಕ ನಡೆದ ವಿದ್ಯಾಮಾನ.

ನಂತರ ಈ ಊರು ಜಗದೇವರಾಯನ ಸಂತತಿಯವರ ಕೈಯಿಂದ ಮೈಸೂರು ದೊರೆಗಳ ಕೈಗೆ ಸೇರಿತು. ದೇವಸ್ಥಾನವೊಂದರ ಎರಡು ಶಾಸನಗಳಲ್ಲಿ, ಒಂದು ಚಿಕ್ಕದೇವರಾಜ ಒಡೆಯನ, ಇನ್ನೊಂದು ದೇವರಾಜ ಒಡೆಯನ(ಕ್ರಿ.ಶ. ೧೫೮೯) ಕಾಲಕ್ಕೆ ಸೇರಿದ್ದು. ದೇವರಾಯನು ಇಲ್ಲಿಯ ಜಂಗಮ ಮಠಕ್ಕೆ ಭೂದಾನ ಮಾಡಿದನು. ಮೈಸೂರು ಅರಸುಮನೆತನದ ಎಲ್ಲಾ ಹೆಂಗಸರೂ ಲಿಂಗ ಧರಿಸುತ್ತಾರೆ. ದೊರೆ ಮಾತ್ರ ತಾನು ವೈಷ್ಣ ಬ್ರಾಹ್ಮಣರ ಅನುಯಾಯಿ ಎಂದು ಹೇಳಿಕೊಳ್ಳುತ್ತಾನೆ. ಮೈಸೂರ ದೊರೆ ಕೃಷ್ಣರಾಯ ಇಲ್ಲಿಯ ಪ್ರಾಚೀನವಾದ ದೇವಾಲಯ ಒಂದನ್ನು ಪುನರ್‌ನಿರ್ಮಾಣ ಮಾಡುತ್ತಾನೆ. ಇದನ್ನು ರಾಮಾಯಣದ ಕರ್ತೃ ವಾಲ್ಮೀಕಿ ನಿರ್ಮಿಸಿದನು. ಎಂದು ಹೇಳಲಾಗುತ್ತದೆ.

ಲಾರ್ಡ್ ಕಾರ್ನ್‌ವಾಲೀಸ್ ಈ ಊರಿಗೆ ಮುತ್ತಿಗೆ ಹಾಕುವ ಮೊದಲು ಇದು ಪೂರ್ತಿ ಬೇಸಾಯವಾಗುತ್ತಿದ್ದ ಭೂಮಿ. ಬ್ರಿಟೀಷ್ ಸೈನ್ಯಕ್ಕೆ ಸಹಾಯವಾಗಬಾರದೆಂದು ಟಿಪ್ಪು ಇದನ್ನು ಹಾಳು ಮಾಡಿದ್ದನು. ಕರ್ನಲ್ ರೀಡನ್ ಆಹ್ವಾನದ ಮೇರೆಗೆ ಬಂದು ಆನೇಕಲ್ಲು ಪಾಳೆಯಗಾರನು ಇದನ್ನು ಲೂಟಿ ಮಾಡಿದನು. ಅಮಲ್ದಾರನ ಲೆಕ್ಕದಂತೆ ಇಲ್ಲಿಯ ೨/೫ ಭಾಗದ ಭೂಮಿ ಪಾಳು ಬಿದ್ದಿದೆ. ಇಲ್ಲಿ ಜನಸಂಖ್ಯೆ ಕಡಿಮೆ ಇರುವುದರಿಂದ ಕಾಡುಮೃಗಗಳು ಹೆಚ್ಚಿಕೊಂಡು, ಸುಲ್ತಾನನ ಕೊನೆಯ ಎರಡು ವರ್ಷಗಳಲ್ಲಿ ಕಾನಕಾನ ಹಳ್ಳಿಯ ಕೋಟೆಯೊಳಗೆ ನುಗ್ಗಿದ ಹುಲಿಗಳು ೮೦ ಜನರನ್ನು ಕಚ್ಚಿಕೊಂಡು ಹೋದವು. ಈಗ ಕೋಟೆಯನ್ನು ಭದ್ರಪಡಿಸಿರುವುದರಿಂದ ಜನ ನೆಮ್ಮದಿಯಿಂದ ನಿದ್ರಿಸಬಹುದಾಗಿದೆ.

ಈ ಕ್ರೂರ ಪ್ರಾಣಿಗಳ ಹಾವಳಿಯನ್ನು ತಡೆಯಲು ಪ್ರತಿ ಹಳ್ಳಿಯಲ್ಲೂ ಬಲವಾಗಿ ಮುಳ್ಳುಬೇಲಿಗಳನ್ನು ಹಾಕಲಾಗಿದೆ. ಜನರಲ್ ಹ್ಯಾರಿಸ್ ನೇತೃತ್ವದಲ್ಲಿ ಇಲ್ಲಿಗೆ ಬ್ರಿಟೀಷ್ ಸೈನ್ಯ ಬಂದಾಗ ಟಿಪ್ಪು ಈ ಊರನ್ನು ಸುಟ್ಟನು. ಈ ಅವಕಾಶವನ್ನು ದೇವಾಲಯ ಹಾಳು ಮಾಡಲು ಬಳಸಿಕೊಂಡನು. ಅವನು ದೇವಾಲಯದ ಮಂಟಪವನ್ನು ಕೆಡವಿದನು. ಮಹಾದ್ವಾರ, ಗುಡಿ ಮಾತ್ರ ಉಳಿದುಕೊಂಡವು. ಇವನ್ನು ಹಾಳು ಮಾಡಲು ಅವನ ಜನ ಧೈರ್ಯ ಮಾಡಿಲ್ಲ.

ಈಗ ಕಾನಕಾನಹಳ್ಳಿಯಲ್ಲಿ ೨೦೦ ಮನೆಗಳು ಮಾತ್ರ ಇವೆ. ಲಾರ್ಡ್ ಕಾರ್ನ್‌ವಾಲೀಸ್ ಮುತ್ತಿಗೆ ಹಾಕುವ ಮೊದಲಿಗೆ ಕನಿಷ್ಠ ೫೦೦ ಮನೆಗಳಾದರೂ ಅಲ್ಲಿದ್ದವು. ಅರ್ಕಾವತಿ ನದಿಗೆ ಪಶ್ಚಿಮದ ದಂಡೆಯಲ್ಲಿ ಈ ಊರಿದೆ. ಅರ್ಕಾವತಿ ನದಿ ನಂದಿಬೆಟ್ಟದಿಂದ ಪ್ರಾರಂಭವಾಗಿ ದೊಡ್ಡಬಳ್ಳಾಪುರದ ಕೆರೆಯ ಮೂಲಕ ಹಾದು ಮಾಗಡಿ, ರಾಮಗಿರಿ(ರಾಮನಗರ) ಮೂಲಕ ಹರಿದು ಕಾನಕಾನಹಳ್ಳಿಗೆ ಆರು ಕ್ರೋಶಗಳ ದೂರದಲ್ಲಿರುವ ಕಾವೇರಿನದಿಗೆ ಹೋಗಿ ಸೇರುತ್ತದೆ.

ಬೇಸಿಗೆಯ ಮೂರು ತಿಂಗಳಲ್ಲಿ ಹರಿವಿಲ್ಲ. ಆದರೆ ಚಿಲುಮೆ ತೆಗೆದರೆ ಒಳ್ಳೆಯ ನೀರು ಸಿಗುತ್ತದೆ.

ನಾನು ಶ್ರೀರಂಗಪಟ್ಟಣ ಬಿಟ್ಟ ಮೇಲೆ ಆಗಾಗ ಬರುವ ಚಳಿ-ಜ್ವರದಿಂದ ತೊಂದರೆ ಪಡುತ್ತಲೇ ಇದ್ದೆ. ಔಷಧಿ ತೆಗೆದುಕೊಳ್ಳಲು ೧೨ನೇ ತಾರೀಖು ಕೂಡ ಇಲ್ಲೇ ಉಳಿದೆ. ಇಲ್ಲಿಯ ಕೃಷಿ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಆ ಸಮಯವನ್ನು ಉಪಯೋಗ ಮಾಡಿಕೊಂಡೆ. ಅಮಲ್ದಾರನು ನನಗೆ ಸಹಾಯ ಮಾಡಿದನು.

ಗ್ರಾಮಗಳು

ಭಾರತದ ಹಳ್ಳಿಗಳಲ್ಲಿ ಬೇಸಾಯ ಮಾಡಲು ಇರುವ ದೊಡ್ಡ ಅಡ್ಡಿ ಎಂದರೆ, ವಾಸದ ಮನೆಗಳಿಂದ ಹೊಲ ಗದ್ದೆಗಳಿಗೆ ದೂರ ಇರುವುದು. ಗೊಬ್ಬರದ ಕೊರತೆ, ಕಡಿಮೆ ಪ್ರಮಾಣದ ಉತ್ಪಾದಕತೆ ಹಾಗೂ ಕನಿಷ್ಠ ಕಂದಾಯ ಪಾವತಿ. ಇಲ್ಲಿಯ ಭೂಮಿಯ ಗುಣವನ್ನು ಕಂದಾಯವೇ ನಿರ್ಧರಿಸಿದ್ದರೂ ಪ್ರತಿ ಜಮೀನಿಗೂ ಒಂದೇ ತರದ ಬೆಲೆ, ಕಾಲು ಭಾಗದಷ್ಟು ಬೆಲೆಯನ್ನು ಹಳ್ಳಿಯಿಂದ ದೂರದ ಭೂಮಿಗೆ ನೀಡಿದ್ದು, ಹಳ್ಳಿಗೆ ಹತ್ತಿರವಿರುವ ಜಮೀನಿನ ಬೇಸಾಯಕ್ಕೆ ಈಗಿರುವ ಕೃಷಿಕರ ಸಂಖ್ಯೆ ಸಾಲದಿರುವುದು ಸತ್ಯ ಸಂಗತಿ.

ಕೂಲಿ

ಬಹುಪಾಲು ಬೇಸಾಯ ರೈತರು ಮತ್ತು ಅವರ ಕುಟುಂಬದವರಿಂದ ಸ್ವತಃ ನಡೆಯುತ್ತಿದೆ. ಇದಕ್ಕೆ ಕೆಲವು ಕೂಲಿ ಆಳುಗಳನ್ನೂ ಸಹ ನೇಮಿಸಿಕೊಂಡಿದ್ದಾರೆ. ಆದರೆ ಜೀತದಾಳುಗಳಲ್ಲಿ ಒಬ್ಬ ಗಂಡಾಳು ವರ್ಷಕ್ಕೆ ೪ ಖಂಡುಗ(೨೦೦ ಸೇರು) ರಾಗಿ ಪಡೆಯುತ್ತಾನೆ. ಹಣದ ಲೆಕ್ಕದಲ್ಲಾದರೆ ೨೮ ಫಣಂಗಳು ಇದರ ಜೊತೆಗೆ ೧೨ ಫಣಂ(೧ ಪೌಂಡ್, ೪, ಷಿಲ್ಲಾಂಗ್, ೧೧೧/೨ ಪೆನ್ನಿ) ಕೆಲಸದ ವೇಳೆ ಬೆಳಿಗ್ಗೆ ೬:೩೦ರಿಂದ ಪ್ರಾರಂಭಿಸಿ ಮಧ್ಯಾಹ್ನದವರೆಗೆ ಮತ್ತೆ ೩ ಗಂಟೆಗೆ ಪ್ರಾರಂಭಿಸಿ ಹೊತ್ತು ಮುಳುಗುವ ತನಕ. ರಜಾ ದಿನಗಳು ಕಡಿಮೆ, ಸಾಂದರ್ಭಿಕವಾಗಿ ಕೂಲಿ ಆಳುಗಳು ೪-೫ ದಿನಗಳು ತಮ್ಮ ಮನೆ ರಿಪೇರಿಗೆ ರಜಾ ಪಡೆಯಬಹುದು. ಬಿತ್ತನೆ ಒಕ್ಕಣೆ ಸ್ವಲ್ಪ ಜಾಸ್ತಿ ಇರುತ್ತದೆ. ಒಬ್ಬನ ದಿನಗೂಲಿ ೧/೨ನಿಂದ ೧/೪ ಫಣಂ(೧೧/೨ ಪೆನ್ನಿಯಿಂದ ೨೧/೨ ಪೆನ್ನಿಯವರೆಗೆ) ಹೆಣ್ಣಾಳು ೧/೪ ರಿಂದ ೧/೫ ಫಣಂ(ಸು. ೧೧/೨ ಪೆನ್ನಿ).

ಕೃಷಿ ಸಲಕರಣೆ ಮತ್ತು ಭೂಮಿಯ ಅಳತೆ

ಯಾವ ರೈತರು ೬ ನೇಗಿಲುಗಳಿಗಿಂತ ಹೆಚ್ಚು ಇಟ್ಟವರಲ್ಲ. ೪ ನೇಗಿಲು ಇಟ್ಟಿದ್ದವನೇ ಶ್ರೀಮಂತ. ಒಂದು ನೇಗಿಲಿಗೆ ಒಬ್ಬ ಕೂಲಿ ಹಾಗೂ ಒಂದು ಜೊತೆ ಎತ್ತು. ಇಲ್ಲಿನ ಅಮಲ್ದಾರನ ಪ್ರಕಾರ ಒಂದು ದಿನಕ್ಕೆ ಒಬ್ಬ ರೈತ ಹತ್ತು ಒಕ್ಕಳ(ಪಾತಿ ಎನಿಸುತ್ತದೆ)ದಷ್ಟು ಉಳುಮೆ ಮಾಡುತ್ತಾನೆ. ಇದರಲ್ಲಿ ಅರ್ಧದಷ್ಟು ರಾಗಿ, ಹೊಲ ಅಥವಾ ೫ ಕೊಳಗ ಒಣಭೂಮಿ, ೫ ಕೊಳಗ ನೀರಾವರಿ ಭೂಮಿ ಉಳುಮೆ ಮಾಡಬಹುದು. ಹಳ್ಳಿಯ ಗೌಡರ

ಹೇಳಿಕೆಯಂತೆ ಒಕ್ಕಲು ಮನುಷ್ಯ ೫ ಅಥವಾ ೬ ಕೊಳಗದಷ್ಟು ಬತ್ತದ ಗದ್ದೆಯನ್ನು ಒಂದು ನೇಗಿಲಿನಲ್ಲಿ ಉಳುಮೆ ಮಾಡಿದರೆ, ಅವನು ಖುಷ್ಕಿ ಭೂಮಿಯನ್ನು ಉಳುಮೆ ಮಾಡಲು ಸಾಧ್ಯವಿಲ್ಲ. ಆದರೂ ಅಮಲ್ದಾರ ಹೇಳುವಂತೆ ಈ ಖುಷ್ಕಿ ಭೂಮಿಯನ್ನು ಅವಲಂಬಿಸಿದೆ ಬೇರೆ ದಾರಿಯಿಲ್ಲ.

ಬೆಳೆಗಳು ಮತ್ತು ಕಂದಾಯ

ಕಬ್ಬು : ನೀರಾವರಿ ಜಮೀನು ತೀರಾ ಕಡಿಮೆ ಇದೆ. ಆದರೂ ಹೆಚ್ಚಿನ ಪ್ರಮಾಣದಲ್ಲಿ ಕಬ್ಬು ಬೆಳೆಯಲು ಪ್ರಯತ್ನ ಮಾಡಿದ್ದಾರೆ. ಈ ಕಬ್ಬು ರಸಾದಳಿ ತಳಿಗೆ ಸೇರಿದ್ದು, ಪಟಾವಳಿ ತಳಿ ಈ ಜಿಲ್ಲೆಯಲ್ಲಿ ಇನ್ನೂ ಪ್ರಚಲಿತದಲಿಲ್ಲ. ಭೂಕಂದಾಯ ಬೆಳೆಗಳ ಇಳುವರಿಯ ಅರ್ಧದಷ್ಟು ಸರ್ಕಾರಕ್ಕೆ ಸಲ್ಲಬೇಕು. ಒಕ್ಕಳ ಭೂಮಿಯಿಂದ ೫೦೦ ಸೇರಿನಷ್ಟು ಅಥವಾ ಎಕರೆಗೆ ೧೧ ಸಿ.ಡಬ್ಲ್ಯೂಟಿ. ಇದು ತುಂಬಾ ಹೆಚ್ಚಿನ ಸಾಗುವಳಿ. ಆದ್ದರಿಂದ ಏನೋ ತಪ್ಪು ಲೆಕ್ಕ ಇರಬೇಕೆಂಬುದು ನನ್ನ ಭಾವನೆ, ಕಬ್ಬಿನ ನಂತರ ಒಂದು ವರ್ಷ ಬತ್ತದ ಬೇಸಾಯ ಮತ್ತೆ ಕಬ್ಬು ಬೆಳೆಯುತ್ತಾರೆ.

ಬತ್ತದ ಗದ್ದೆಗಳು : ಕೆರೆಗಳು ತುಂಬಿದಾಗ ಎರಡು ಬಾರಿ ಬತ್ತದ ಬೆಳೆ ತೆಗೆಯಬಹುದು. ಆದರೆ ಕೃಷಿಕರ ಸಂಖ್ಯೆ ಕಡಿಮೆ ಇರುವುದರಿಂದ, ಬೇಸಾಯದ ಜಮೀನಿನಲ್ಲಿ ಅರ್ಧ ಬಿತ್ತನೆ ಮಾಡಿ ಉಳಿದ ಅರ್ಧ ನಂತರ ಬಿತ್ತನೆ ಮಾಡಲಾಗುತ್ತದೆ. ರೈತರು ಒಣ ಬೇಸಾಯಕ್ಕಿಂತ ಹೆಚ್ಚಿನ ನೀರಾವರಿ ಬೇಸಾಯದ ಪ್ರದೇಶಗಳಲ್ಲಿ ನೆಲೆಸುತ್ತಾರೆ.

ರಾಗಿ ಮತ್ತು ಸಾಮೆ : ಹಳ್ಳಿಗಳಿಗೆ ಹತ್ತಿರದ ಒಣಜಮೀನಿನಲ್ಲಿ ಬೆಳೆಯುವ ರಾಗಿ ಬೆಳೆಗೆ ಕಂದಾಯ ನಿಗಧಿಯಾಗಿತ್ತು. ಒಂದು ಒಕ್ಕಳ ಜಮೀನಿಗೆ ೫ ರಿಂದ ೨ ಫಣಂ ಇರುತ್ತದೆ. ನನ್ನ ಅಳತೆಯ ಪ್ರಕಾರ ಒಂದು ಎಕರೆಗೆ ೩ ಫಿಲಿಂಗ್, ೧೧/೨ ಪೆನ್ನಿಯಿಂದ ೧ ಪಿಲಿಂಗ್ ೨೧/೨ ಪೆನ್ನಿಯವರೆಗೆ, ರಾಗಿಯ ನಂತರ ಸಾಮೆ ಬೆಳೆ ತೆಗೆಯುತ್ತಾರೆ. ಇದಕ್ಕೆ ರಾಗಿಯ ಅರ್ಧಪಾಲು ಕಂದಾಯ ಕೊಡಬೇಕಿತ್ತು. ಅಮಲ್ದಾರನ ಪ್ರಕಾರ ಒಂದು ಒಕ್ಕಳ ಹಸನು ಭೂಮಿಯ ಉತ್ಪನ್ನ ಹೀಗಿದೆ; ಬಿತ್ತನೆ ರಾಗಿ ೧ ಒಕ್ಕಳ, ೨ ಖಂಡುಗ ದವಸ, ಬೆಲೆ ೧೪ ಫಣಂ, ಅವರೆ ಅಥವಾ ತೊಗರಿ ೧/೪ ಒಕ್ಕಳಕ್ಕೆ ೧/೧೮ ಫಣಂ ಕಂದಾಯ ಐದು ಫಣಂಗಳು ಅಥವಾ ಉತ್ಪನ್ನದ ಪ್ರತಿಶತ ೨೮ರಷ್ಟು.

ತೆಂಗಿನ ತೋಟ : ಕಾನಕಾನಹಳ್ಳಿ ಅರ್ಕಾವತಿ ನದಿ ದಂಡೆಯಲ್ಲಿ ಅನೇಕ ತೆಂಗಿನ ತೋಟಗಳಿವೆ. ಇದರೊಂದಿಗೆ ಕೆಲವು ಅಡಿಕೆ ಮರಗಳೂ ಇವೆ. ಆದರೆ ಇದೇನು ಅಷ್ಟು ಮುಖ್ಯವಲ್ಲ. ಬಾರಾಮಹಲ್ ಜನಕ್ಕೆ ತೆಂಗಿನಕಾಯಿ ಮಾರಾಟ ಮಾಡಲಾಗುತ್ತದೆ. ತೋಟದ ಜಮೀನು ಸರ್ಕಾರಕ್ಕೆ ಸೇರಿದ್ದು, ತೆಂಗಿನ ಮರಗಳು ರೈತರಿಗೆ ಸೇರಿದ್ದವು. ಕಾವೇರಿ ನದಿಗೆ ೮ ಕ್ರೋಶಗಳ ದೂರಕ್ಕಿರುವ ಈ ಊರಿನ ಸುತ್ತಮುತ್ತ ಖುಷ್ಕಿ ಜಮೀನುಗಳಿವೆ. ರಾಗಿ, ಹುರುಳಿ ಇಲ್ಲಿಯ ಮುಖ್ಯ ಬೆಳೆಗಳು(ಸಂ. ೩, ಪು. ೪೨೫-೩೧). ಟಿಪ್ಪು ಸುಲ್ತಾನನ ಮರಣದ ನಂತರ ಈಸ್ಟ್ ಇಂಡಿಯಾ ಕಂಪನಿಯ ವಶದಲ್ಲಿದ್ದ ಮೈಸೂರು ಸಂಸ್ಥಾನ, ದಕ್ಷಿಣ ಮತ್ತು

ಉತ್ತರ ಕನ್ನಡ ಕರಾವಳಿ ಪ್ರದೇಶಗಳು ಹಾಗೂ ಮಲಬಾರ್ ಪ್ರಾಂತ್ಯಗಳಲ್ಲಿ ಬುಕನಾನ್ ಅವರು ಪ್ರವಾಸ ಕೈಗೊಂಡನು. ಇದು ಅವುಗಳ ಸ್ಥಳೀಯ ವಿದ್ಯಾಮಾನಗಳನ್ನು ಬುಕಾನನ್ ಮೂಲಕ ಸಂಗ್ರಹಿಸಿಕೊಳ್ಳುವುದು ಕಂಪನಿಯ ಉದ್ದೇಶವಾಗಿತ್ತು. ಪ್ರಾಯಶಃ ಈ ಉದ್ದೇಶ ಆ ಎಲ್ಲಾ ಪ್ರದೇಶಗಳಲ್ಲಿರುವ ಸಂಪತ್ತನ್ನು ಗುರುತಿಸಿಕೊಂಡು ಅದನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದು ಕಂಪನಿಯ ಗುರಿಯಾಗಿತ್ತು ಎನ್ನಿಸುತ್ತದೆ. ಅದೇನೇ ಇದ್ದರೂ ಕನಕಪುರ ಪಟ್ಟಣದ ಭೌಗೋಳಿಕ ಹಾಗೂ ಐತಿಹಾಸಿಕ ವಿವರಗಳನ್ನು ತಿಳಿಸುವ ಬುಕನನ್ ಅವರ ವರದಿಯು ಈ ಪಟ್ಟಣದ ಸ್ಥಳೀಯ ಚರಿತ್ರೆಯನ್ನು ಕಟ್ಟುವಲ್ಲಿ ಪ್ರಮುಖ ದಾಖಲೆಗಳಲ್ಲಿ ಒಂದಾಗಿ ಸಹಾಯ ವಾಗುತ್ತದೆ.

ಅಡಿಟಿಪ್ಪಣಿಗಳು

೧. ಕ್ಷೇತ್ರಕಾರ್ಯ ಸಂದರ್ಭದಲ್ಲಿ ನಗರಸಭೆ ಕಛೇರಿಯಿಂದ ಪಡೆದ ಮಾಹಿತಿ.

೨. ವೀರಭದ್ರಯ್ಯ ಎಚ್.ವಿ., **ದೇಗುಲಸಿರಿ,** ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ನೆನಪಿನ ಸಂಚಿಕೆ, ಪುಟ ೨೫.

೩. ಜ್ಯೋತಿಲಿಂಗಯ್ಯ ಆರ್., **ಜಾನಪದ ಹಿನ್ನೆಲೆಯಲ್ಲಿ ಕನಕಪುರ ತಾಲೂಕಿನ ಸಾಂಸ್ಕೃತಿಕ ಅಧ್ಯಯನ,** ಪುಟ ೩೦.

೪. ಕ್ಷೇತ್ರಕಾರ್ಯ ಸಂದರ್ಭದಲ್ಲಿ ನಗರಸಭೆ ಕಛೇರಿಯಿಂದ ಪಡೆದ ಮಾಹಿತಿ.

೫. ಶಿವರುದ್ರಪ್ಪ ಎಸ್.ಎನ್., **ಭಾರತದ ಇತಿಹಾಸ(ಪ್ರಾರಂಭದಿಂದ ಕ್ರಿ.ಶ. ೧೭೦೭ರವರೆಗೆ),** ಪುಟ ೩೩.

೬. ಶಿವತಾರಕ್ ಕೆ.ಬಿ., **ಕರ್ನಾಟಕದ ಪುರಾತತ್ವ ನೆಲೆಗಳು,** ಪುಟ ೧೦.

೭. ಕರ್ನಾಟಕ ಪರಂಪರೆ, ಸಂಪುಟ-೧, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಪುಟ ೧೧೨.

೮. ಅದೇ., ಪುಟ ೧೧೩.

೯. ಅದೇ., ಪುಟ ೧೧೬.

೧೦. ಷೇಕ್ ಅಲಿ, **ಕರ್ನಾಟಕ ಚರಿತ್ರೆ, ಸಂಪುಟ-೧,** ಪುಟ ೧೦೭.

೧೧. ಮುತ್ತುರಾಜು, **ಇತಿಹಾಸ ದರ್ಶನ, ಸಂಪುಟ-೧೩,** ಪುಟ ೨೨.

೧೨. ಪುಟ್ಟಸ್ವಾಮಿ ಜಿ., **ಕನಕಪುರ ಪಟ್ಟಣ : ಒಂದು ಸಮಾಜಶಾಸ್ತ್ರೀಯ ಅಧ್ಯಯನ,** ಪುಟ ೫೮.

೧೩. ಮುತ್ತುರಾಜು, **ಇತಿಹಾಸ ದರ್ಶನ, ಸಂಪುಟ-೧೫,** ಪುಟ ೧೬.

೧೪. ಪ್ರಕಾಶ್ ಕೆ.ಪಿ., **ಕನಕಪುರ ಪ್ರದೇಶದ ಸಾಂಸ್ಕೃತಿಕ ಅಧ್ಯಯನ,** ಪುಟ ೨೯.

೧೫. ಮುತ್ತುರಾಜು, **ಇತಿಹಾಸ ದರ್ಶನ, ಸಂಪುಟ-೧೧,** ಪುಟ ೪೧.

೧೬. ರಘುನಾಥ ಭಟ್, ಪುರಾತತ್ವ ಪರಿಚಯ, ಪುಟ ೩೧.

೧೭. ಷೇಕ್ ಅಲಿ, **ಪೂರ್ವೋಕ್ತ**, ಪುಟ ೧೮೧.

೧೮. ಸೂರ್ಯನಾಥ್ ಯು. ಕಾಮತ್, **ಕರ್ನಾಟಕ ರಾಜ್ಯ ಗ್ಯಾಜೆಟಿಯರ್, ಭಾಗ-೩**, ಪುಟ ೪೭೭.

೧೯. ತಿಮ್ಮಯ್ಯ ತಾ.ಸಿ.(ಸಂ), **ಅಂತರಗಂಗೆ**, ಕನಕಪುರ ತಾಲೂಕು, ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನ ನೆನಪಿನ ಸಂಚಿಕೆ, ಪುಟ ೯.

೨೦. ರೈಸ್ ಬಿ.ಎಲ್., **ಎಫಿಗ್ರಾಪಿಯ ಆಫ್ ಕರ್ನಾಟಕ, ಸಂಪುಟ-೯**, ಕನಕಪುರ, ಪುಟ ೮೩.

೨೧. ವೆಂಕಟಾಚಲಶಾಸ್ತ್ರಿ ಟಿ.ವಿ., **ಕನಕಪುರ ಎಂಬ ಕಾನಕಾನಹಳ್ಳಿ ಚರಿತ್ರೆ**, ಪುಟ ೨೩.

೨೨. ಜ್ಯೋತಿಲಿಂಗಯ್ಯ ಆರ್., **ಪೂರ್ವೋಕ್ತ**, ಪುಟ ೩೦.

೨೩. ತಿಮ್ಮಯ್ಯ ತಾ.ಸಿ., **ಪೂರ್ವೋಕ್ತ**, ಪುಟ ೭.

೨೪. ಅಂಬಳಿಕೆ ಹಿರಿಯಣ್ಣ, **ಕನ್ನಡ ವಿಷಯ ವಿಶ್ವಕೋಶ**, ಇತಿಹಾಸ ಮತ್ತು ಪುರಾತತ್ವ, ಪುಟ ೪೨೧.

೨೫. ರೈಸ್ ಬಿ.ಎಲ್., **ಎಫಿಗ್ರಾಫಿಯ ಆಫ್ ಕರ್ನಾಟಕ, ಸಂಪುಟ-೯**, ಕನಕಪುರ, ಪುಟ ೩೦೩.

೨೬. ಜ್ಯೋತಿಲಿಂಗಯ್ಯ ಆರ್., **ಪೂರ್ವೋಕ್ತ**, ಪುಟ ೩೨.

೨೭. ವೆಂಕಟಾಚಲಶಾಸ್ತ್ರಿ ಟಿ.ವಿ., **ಪೂರ್ವೋಕ್ತ**, ಪುಟ ೨೫.

೨೮. ಅದೇ., ಪುಟ ೧೪.

೨೯. ರೈಸ್ ಬಿ.ಎಲ್., **ಎಫಿಗ್ರಾಫಿಯ ಆಫ್ ಕರ್ನಾಟಕ, ಸಂಪುಟ-೯**, ಕನಕಪುರ, ಪುಟ ೨೯೫.

೩೦. ಅದೇ., ಪುಟ ೧೪.

೩೧. ಅದೇ., ಪುಟ ೨೯೫.

೩೨. ವೀರಭದ್ರಯ್ಯ ಹೆಚ್.ವಿ.(ಸಂ), **ಪೂರ್ವೋಕ್ತ**, ಪುಟ ೨೬.

೩೩. ಸುರೇಶ ಕೆ.ಸಿ., **ರಾಮನಗರ ಜಿಲ್ಲೆಯ ಸ್ಥಳನಾಮಗಳು ಅಧ್ಯಯನ**, ಪುಟ ೧೨೮.

೩೪. ವೆಂಕಟಾಚಲಶಾಸ್ತ್ರಿ ಟಿ.ವಿ., **ಪೂರ್ವೋಕ್ತ**, ಪುಟ ೩೪.

೩೫. ಬೈರೇಗೌಡ ಎಂ., ತಿಮ್ಮಯ್ಯ ತಾ.ಸಿ.(ಸಂ), **ಅರ್ಕಾವತಿ**, ಪುಟ ೧೫೩.

೩೬. ರೈಸ್ ಬಿ.ಎಲ್., **ಎಫಿಗ್ರಾಫಿಯ ಆಫ್ ಕರ್ನಾಟಕ, ಸಂಪುಟ-೧**, ಚನ್ನರಾಯಪಟ್ಟಣ, ಪುಟ ೧೪.

೩೭. ಅದೇ., ಪುಟ ೧೪.

೩೮. ವೆಂಕಟಾಚಲಶಾಸ್ತ್ರಿ ಟಿ.ವಿ., **ಪೂರ್ವೋಕ್ತ**, ಪುಟ ೪೧.

೩೯. ರೈಸ್ ಬಿ.ಎಲ್., **ಎಫಿಗ್ರಾಫಿಯ ಆಫ್ ಕರ್ನಾಟಕ, ಸಂಪುಟ-೯**, ಕನಕಪುರ, ಪುಟ ೨೯೩.

೪೦. ಅದೇ., ಪುಟ ೨೯೪.

೪೧. ಅದೇ., ಪುಟ ೯೫.

೪೨. ರೈಸ್ ಬಿ.ಎಲ್., **ಎಪಿಗ್ರಾಫಿಯ ಆಫ್ ಕರ್ನಾಟಕ, ಸಂಪುಟ-೯**, ಕನಕಪುರ, ಪುಟ ೪೩.

೪೩. ಪ್ರಕಾಶ್ ಕೆ.ಪಿ., **ಪೂರ್ವೋಕ್ತ,** ಪುಟ ೬೩.

೪೪. ರೈಸ್ ಬಿ.ಎಲ್., **ಎಪಿಗ್ರಾಫಿಯ ಆಫ್ ಕರ್ನಾಟಕ, ಸಂಪುಟ-೧**, ಚನ್ನರಾಯಪಟ್ಟಣ, ಪುಟ ೧೪.

೪೫. ಮುತ್ತುರಾಜು, **ಇತಿಹಾಸ ದರ್ಶನ, ಸಂಪುಟ-೧೨,** ಪುಟ ೧೩೦.

೪೬. ಸುರೇಶ ಕೆ.ಸಿ., **ಪೂರ್ವೋಕ್ತ,** ಪುಟ ೧೩೦.

೪೭. ಸೂರ್ಯನಾಥ ಯು. ಕಾಮತ್, **ಕರ್ನಾಟಕದ ಸಂಕ್ಷಿಪ್ತ ಇತಿಹಾಸ,** ಪುಟ ೧೨೬.

೪೮. ರೈಸ್ ಬಿ.ಎಲ್., **ಎಪಿಗ್ರಾಫಿಯ ಆಫ್ ಕರ್ನಾಟಕ, ಸಂಪುಟ-೯**, ಕನಕಪುರ, ಪುಟ ೨೮೫.

೪೯. ಅದೇ., ಪುಟ ೨೦೨.

೫೦. ವೆಂಕಟಾಚಲಶಾಸ್ತ್ರಿ ಟಿ.ವಿ., **ಪೂರ್ವೋಕ್ತ,** ಪುಟ ೯೨.

೫೧. ಮಹದೇವಯ್ಯ ಟಿ.ಆರ್.(ಸಂ), **ನಿರ್ವಾಣಶ್ರೀ ರಜತಮಹೋತ್ಸವ ನೆನಪಿನ ಸಂಚಿಕೆ,** ಪುಟ ೨೯.

೫೨. ವೆಂಕಟಾಚಲಶಾಸ್ತ್ರಿ ಟಿ.ವಿ., **ಪೂರ್ವೋಕ್ತ,** ಪುಟ ೬೭.

೫೩. ಸೂರ್ಯನಾಥ ಯು. ಕಾಮತ್, **ಪೂರ್ವೋಕ್ತ,** ಪುಟ ೧೪೭.

೫೪. ರೈಸ್ ಬಿ.ಎಲ್., **ಮೈಸೂರು ಗ್ಯಾಸೆಟಿಯರ್, ಸಂಪುಟ-೧,** ಪುಟ ೨೬.

೫೫. ಗೋಪಾಲರಾವ್ ಎಚ್.ಎಸ್.(ಸಂ), **ಕನಕಸಿರಿ,** ಅಖಿಲ ಭಾರತ ೬೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ, ಪುಟ ೮೧.

೫೬. ಮುನಿರಾಜಪ್ಪ, **ಹರಿಣಾಶವಿ(ಕೃತಿ),** ಪುಟ ೧೦೯.

೫೭. **ಮೈಸೂರು ಪ್ರಜಾಪ್ರತಿನಿಧಿ ಸಭೆಯ ನಡವಳಿಗಳು, ಬಡ್ಜೆಟ್ ಅಧಿವೇಶನ-ಜೂನ್,** ೧೯೪೦, ಪುಟ ೨೩೩-೨೩೪.

೫೮. ಅನಂತರಾಮಯ್ಯ ಆರ್.ಎಲ್., **ಸ್ವಾತಂತ್ರ್ಯದ ಹೋರಾಟ,** ಪುಟ ೨೧೦.

೫೯. ಗೋಪಾಲರಾವ್ ಎಚ್.ಎಸ್., **ಪೂರ್ವೋಕ್ತ,** ಪುಟ ೮೧.

೬೦. ಗ್ರಾಮ ವಿದ್ಯಾ ಪ್ರಚಾರಕ ಸಂಘ(ರಿ) ಕನಕಪುರ **ಎಸ್. ಕರಿಯಪ್ಪನವರ ಪ್ರತಿಮೆ ಅನಾವರಣ ನೆನಪಿನ ಸಂಚಿಕೆ,** ಪುಟ ೧೩.

ಅಧ್ಯಾಯ : ಮೂರು

ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ

೩.೧. ಸಾಮಾಜಿಕ ಸ್ಥಿತಿಗತಿ

೩.೨. ಧಾರ್ಮಿಕ ಸ್ಥಿತಿಗತಿ

೩.೩. ಆರ್ಥಿಕ ಸ್ಥಿತಿಗತಿ

೩.೪. ಶೈಕ್ಷಣಿಕ ಸ್ಥಿತಿಗತಿ

ಅಧ್ಯಾಯ : ಮೂರು

ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ

ಒಂದು ಪ್ರದೇಶದ ಸಾಂಸ್ಕೃತಿಕ ಇತಿಹಾಸದ ಅಧ್ಯಯನವೆಂದರೆ ಅದು ಅಲ್ಲಿ ಬಾಳಿದ ಜನರ ಬದುಕಿನ ಅಧ್ಯಯನವಾಗಿದೆ. ಆ ಪ್ರದೇಶದ ಜನರ ನೋವು-ನಲಿವು, ಆಚಾರ-ವಿಚಾರ, ವ್ಯವಹಾರ, ಜೀವನದ ಮೊದಲಾದ ಅಂಶಗಳು ಅಲ್ಲಿ ಮಡುಗಟ್ಟಿರುತ್ತವೆ. ಇವುಗಳನ್ನು ತಿಳಿಯಲು ನಮಗೆ ಪುರಾತತ್ವ ಮತ್ತು ಲಿಖಿತ ಆಕರಗಳು ಮಹತ್ವದವುಗಳಾಗಿವೆ. ಈ ಪಟ್ಟಣ ಪರಿಸರದಲ್ಲಿ ಪ್ರಾಚೀನ ಮಾನವನು ನೆಲೆಸಿದ್ದಕ್ಕೆ ಆಧಾರಗಳಿಲ್ಲದಿದ್ದರೂ, ತಾಲೂಕಿನ ಇತರೆ ಪ್ರದೇಶಗಳಲ್ಲಿ ನೆಲೆಸಿರುವುದಕ್ಕೆ ಹಲವು ಕುರುಹುಗಳು ಲಭ್ಯವಾಗಿದ್ದು ಅವುಗಳಿಂದ ಈ ಪರಿಸರದ ಪ್ರಾಚೀನತೆಯನ್ನು ತಿಳಿಯಬಹುದಾಗಿದೆ.

ಇತಿಹಾಸ ಕಾಲದಲ್ಲಿ ಗಂಗ, ಚೋಳ, ಹೊಯ್ಸಳ, ವಿಜಯನಗರ ಅರಸರು ಮತ್ತು ಮೈಸೂರು ಒಡೆಯರು ಹಾಗೂ ಸ್ಥಳೀಯ ಪಾಳೆಯಗಾರರು ಇಲ್ಲಿ ಆಳ್ವಿಕೆ ನಡೆಸಿದ್ದಾರೆ. ಇವರು ತಮ್ಮ ಅಧಿಕಾರಾವಧಿಯಲ್ಲಿ ಕೇವಲ ರಾಜಕೀಯ ಚಟುವಟಿಕೆಗಳಲ್ಲಿ ಮಾತ್ರ ತೊಡಗದೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕೂಡ ಗಮನಾರ್ಹ ಸಾಧನೆಯನ್ನು ಮಾಡಿ ತೋರಿಸಿದ್ದಾರೆ. ಇವರ ಸಾಂಸ್ಕೃತಿಕ ಸಾಧನೆಗಳನ್ನು ತಿಳಿದುಕೊಳ್ಳಲು ಅವರ ಕಾಲದಲ್ಲಿ ರಚನೆಯಾಗಿರುವ ಶಾಸನಗಳು, ಸ್ಮಾರಕ ಅವಶೇಷಗಳು ಹಾಗೂ ಸ್ಥಳೀಯವಾಗಿ ಲಭ್ಯವಿರುವ ಮೌಖಿಕ ಆಕರಗಳು ನಮಗೆ ಸಹಾಯಕವಾಗಿ ನಿಲ್ಲುತ್ತವೆ. ಈ ಪಟ್ಟಣದ ಸಾಂಸ್ಕೃತಿಕ ಇತಿಹಾಸ ಕಟ್ಟುವಲ್ಲಿ ಇವುಗಳು ಪ್ರಮುಖ ಆಕರಗಳಾಗಿ ಪರಿಗಣಿಸಲ್ಪಟ್ಟಿವೆ. ಯಾವುದೇ ಒಂದು ಪ್ರದೇಶದ ವಾಸ್ತವಿಕ ಚಿತ್ರಣವನ್ನು ತಿಳಿಯಲು ಅಲ್ಲಿನ ಸಾಂಸ್ಕೃತಿಕ ಅಂಶಗಳನ್ನು ತಿಳಿದುಕೊಂಡಾಗ ಮಾತ್ರ ಆ ಪ್ರದೇಶದ ಇತಿಹಾಸ ರಚಿಸಲು ಸಾಧ್ಯ. ಆದ್ದರಿಂದ ಇಲ್ಲಿನ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗತಿಯನ್ನು ತಿಳಿದುಕೊಳ್ಳುವುದರ ಮೂಲಕ ಕನಕಪುರ ಪಟ್ಟಣದ ಸ್ಥಳೀಯ ಚರಿತ್ರೆಯನ್ನು ನಿರೂಪಿಸಲಾಗುವುದು.

೩.೧. ಸಾಮಾಜಿಕ ಸ್ಥಿತಿಗತಿ

ಸಮಾಜ ಎಂಬುದು ಮಾನವನಿಂದ ನಿರ್ಮಿತವಾದ ಒಂದು ಸಂಸ್ಥೆಯಾಗಿದೆ. ಇದರ ವಿಧಾನಗಳು ಮೇಲ್ನೋಟಕ್ಕೆ ಸರಳ ಮತ್ತು ಸಹಜ ಅನಿಸಿದರೂ ಅದಕ್ಕೆ ವಿಶಾಲ ರೂಪವಿದೆ.

ಈ ಸಾಮಾಜಿಕ ಸಂಸ್ಥೆಯಲ್ಲಿ ಜಾತಿ, ಉಪಜಾತಿ, ವರ್ಣ, ವಿವಾಹ, ರೂಢಿ ಪದ್ಧತಿ, ಸಂಪ್ರದಾಯ, ನಂಬಿಕೆ, ಆಚರಣೆ ಮುಂತಾದ ಅಂಶಗಳು ಅಡಗಿರುತ್ತವೆ.

ಜಾತಿ ಪದ್ಧತಿ

ಜಾತಿ ಪದ್ಧತಿಯು ಸಮಾಜದಲ್ಲಿ ಬೆಳೆದು ಬಂದಿರುವ ಒಂದು ವ್ಯವಸ್ಥೆಯ ಲಕ್ಷಣವಾಗಿದೆ. ಇತರ ಕಡೆಗಳಲ್ಲಿ ಕಂಡು ಬರುವಂತೆ ಪ್ರಾದೇಶಿಕವಾಗಿ ಕನಕಪುರ ಪಟ್ಟಣದಲ್ಲೂ ಅನೇಕ ಜಾತಿ ಹಾಗೂ ಉಪಜಾತಿಗಳನ್ನು ಕಾಣಬಹುದಾಗಿದೆ. ಸಮಾಜಶಾಸ್ತ್ರಜ್ಞ 'ರಿಸ್ಲೆಯವರ' ಪ್ರಕಾರ 'ಜಾತಿ ಎಂದರೆ ಒಬ್ಬ ಮಾನವ ಅಥವಾ ದೈವ ಸಂಭೂತನಾದ ಕಾಲ್ಪನಿಕ ಪೂರ್ವಜನಿಂದ ತಮ್ಮ ವಂಶವನ್ನು ಗುರುತಿಸುವ ಕೆಲವು ಕುಟುಂಬಗಳ ಸಮೂಹ. ಅದು ಒಂದು ಸಮರೂಪವುಳ್ಳ ಸಮುದಾಯ'. ಕನಕಪುರ ಪಟ್ಟಣದ ಜಾತಿ ಪದ್ಧತಿಯಲ್ಲಿ ವೈವಿಧ್ಯಮಯ ಗುಂಪುಗಳಿದ್ದು, ಜಾತಿ ವ್ಯವಸ್ಥೆ ವಂಶಪಾರಂಪರ್ಯವಾಗಿ ಬೆಳೆದು ಬಂದಿದ ವೃತ್ತಿಯನ್ನು ಅನುಸರಿಸುವಂತೆ ಮಾಡಿದೆ. ಆದರೆ ಇತ್ತೀಚಿಗೆ ಅದು ಕೊಂಚ ಬದಲಾವಣೆ ರೂಪ ಪಡೆದಿದೆ. ಉಡುಗೆ-ತೊಡುಗೆ, ಆಹಾರ, ವಿವಾಹ, ಧಾರ್ಮಿಕಾಚರಣೆ ಹಾಗೂ ರೂಢಿ ಸಂಪ್ರದಾಯಗಳು ಜಾತಿಯಿಂದ ಜಾತಿಗೆ ಭಿನ್ನವಾಗಿವೆ.

ಅಗಸ :- ಅಗಸರನ್ನು ಡೋಬಿ, ಮಡಿವಾಳ ಮೊದಲಾದ ಹೆಸರುಗಳಿಂದ ಕರೆಯುವುದುಂಟು. ಇವರು ಈ ಸ್ಥಳದ ಜನರ ಬಟ್ಟೆ ಸ್ವಚ್ಛ ಮಾಡುವುದು, ವಿವಾಹ, ದೇವರ ಉತ್ಸವ ಮೊದಲಾದ ಶುಭ ಸಮಾರಂಭ ಉತ್ಸವಗಳಲ್ಲಿ ಪಂಜು (ದೀವಟಿಗೆ) ಹಿಡಿಯುವುದು ಇವರ ವಂಶಪಾರಂಪರೆಯ ವೃತ್ತಿಯಾಗಿತ್ತು. ಆದರೆ ಆಧುನಿಕತೆಯಿಂದ ಇದರಲ್ಲಿ ಇಂದು ಸಾಕಷ್ಟು ಬದಲಾವಣೆಗಳಾಗಿವೆ.

ಬ್ರಾಹ್ಮಣ :- ಇಲ್ಲಿರುವ ಬ್ರಾಹ್ಮಣರು ಮಾಧ್ವರು ಮತ್ತು ಶ್ರೀ ವೈಷ್ಣವ ಪಂಗಡಕ್ಕೆ ಸೇರಿದವರೆ ಹೆಚ್ಚಿನವರಾಗಿದ್ದಾರೆ. ಈ ಪಟ್ಟಣದ ಕೋಟೆ ಬೀದಿಯಲ್ಲಿ ಬ್ರಾಹ್ಮಣರು ಹೆಚ್ಚು ವಾಸಿಸುತ್ತಿದ್ದರು. ಇವರಲ್ಲಿ ವೈದಿಕ ಬ್ರಾಹ್ಮಣರು ಮತ್ತು ಲೌಕಿಕ ಬ್ರಾಹ್ಮಣ ಎಂಬ ಎರಡು ಪಂಗಂಡಗಳಿದ್ದು, ವ್ಯಾಪಾರ, ಗುತ್ತಿಗೆದಾರಿಕೆ, ಸರಿಕಾರಿ ಮತ್ತು ಖಾಸಗೀ ಕ್ಷೇತ್ರಗಳಲ್ಲಿ ಕೆಲಸ ಮಾಡುವುದರ ಜೊತೆಗೆ ಇಲ್ಲಿನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಸಮಾಜದಲ್ಲಿ ಇವರಿಗೆ ಉತ್ತಮವಾದ ಸ್ಥಾನಮಾನವಿದೆ.

ಈಡಿಗರು :- ಸೇಂದಿ ಇಳಿಸಿ ಮಾರಾಟ ಮಾಡುವುದು ಇವರ ಸಾಂಪ್ರದಾಯಿಕ ಉದ್ಯೋಗವಾಗಿತ್ತು. ಇತ್ತೀಚಿನ ದಿಗಳಲ್ಲಿ ಅದು ಕೊನೆಗೊಂಡು ವ್ಯಾಪಾರ, ಬೇಸಾಯ, ನೌಕರ ಮೊದಲಾದ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಇವರಲ್ಲಿ ಮಡ್ಡಿ ಈಡಿಗರು ಮತ್ತು ಬೆಲ್ಲದ ಈಡಿಗರೆಂಬ ಪಂಗಡದ ಜೊತೆಗೆ ಹಲವು ಒಳಪಂಗಡಗಳಿವೆ. ಸಾಮಾಜಿಕವಾಗಿ ಇವರ ಸ್ಥಿತಿ ಸ್ವಲ್ಪ ಸುಧಾರಣೆಯಾಗಿದೆ.

ಒಕ್ಕಲಿಗರು :- ಒಕ್ಕಲಿಗರೆಂದರೆ ಒಕ್ಕಲುತನ ಅಥವಾ ಬೇಸಾಯ ಮಾಡುವವನು ಎಂದರ್ಥ. ಕನಕಪುರ ಪ್ರದೇಶದಲ್ಲಿ ಬಹುಸಂಖ್ಯೆಯಲ್ಲಿ ಒಕ್ಕಲಿಗರು(ಗೌಡರು) ಬೇಸಾಯವನ್ನು ಸಾಂಪ್ರದಾಯಿಕ ವೃತ್ತಿಯಾಗಿ ಮುಂದುವರಿಸಿಕೊಂಡು ಬಂದಿದ್ದರು. ಇತ್ತೀಚೆಗೆ ವ್ಯಾಪಾರ - ವ್ಯವಹಾರ, ಸರ್ಕಾರಿ ನೌಕರಿ ಮೊದಲಾದ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಈ ಪ್ರದೇಶದಲ್ಲಿ ಜಮೀನ್ದಾರರಾಗಿರುವ ಈ ಸಮುದಾಯದ ಕೆಲವರು ಆರಂಭದಿಂದಲೂ ಗೌಡಿಕೆಯನ್ನು ಮಾಡುತ್ತ ಬಂದಿದ್ದಾರೆ. ಸಾಮಾಜಿಕವಾಗಿ ಇವರ ಸ್ಥಾನಮಾನಗಳು ಉತ್ತಮವಾಗಿವೆ.

ಬೆಸ್ತರು :- ಇವರು ತಮ್ಮನ್ನು ಗಂಗೆಕುಲ, ಗಂಗಾಮಾತ, ಗಂಗೆ ಮಕ್ಕಳು ಎಂದು ಮೊದಲಾದ ಹೆಸರುಗಳಿಂದ ಗುರುತಿಸಿಕೊಂಡಿದ್ದಾರೆ. ಮೀನು ಹಿಡಿಯುವುದು ಇಲ್ಲಿನ ಬೆಸ್ತರ ಮೂಲ ವೃತ್ತಿಯಾಗಿತ್ತು. ಆದರೆ ಇಂದು ನದಿಗಳು, ಕೆರೆಗಳು ನಾಶವಾಗುತ್ತಿರುವುರಿಂದ ವ್ಯವಸಾಯ, ಕೂಲಿ, ನೌಕರಿ ಇತರೆ ಉದ್ಯೋಗ ಮಾಡಿಕೊಂಡು ಬದುಕುತ್ತಿದ್ದಾರೆ. ಪಟ್ಟಣದ ಕುರುಪೇಟೆಯಲ್ಲಿ ಇವರು ಹೆಚ್ಚಾಗಿ ಕಂಡುಬರುತ್ತಾರೆ ಸಾಮಾಜಿಕ ಸ್ಥಾನಮಾನದಲ್ಲಿ ಇವರಿಗೆ ಅಷ್ಟೇನು ಮಾನ್ಯತೆ ಸಿಗುತ್ತಿಲ್ಲ.

ದರ್ಜಿಗಳು :- ಬಟ್ಟೆ ಹೊಲಿಯುವುದು ಇವರ ಮೂಲವೃತ್ತಿಯಾಗಿತ್ತು. ಆದರೆ ಜಾಗತೀಕರಣದ ಪ್ರಭಾವದಿಂದಾಗಿ ಪಟ್ಟಣದಲ್ಲಿ ಇತ್ತೀಚೆಗಷ್ಟೇ ಬಟ್ಟೆ ಉತ್ಪಾದನಾ ಕಾರ್ಖಾನೆಗಳು ಹೆಚ್ಚಿರುವುದು ಇವರ ಉದ್ಯೋಗಕ್ಕೆ ಸಹಾಯವಾಗಿದೆ. ಚಂದ್ರಿಕಾ ಇವರ ವಿಶೇಷ ದೇವತೆಯಾಗಿದ್ದು ಆ ದೇವಿಗೆ ಗಣೇಶ ಚತುರ್ಥಿಯ ದಿನ ವಿಶೇಷ ಪೂಜೆ ಮಾಡುತ್ತಾರೆ.

ನಾಯಿಂದ(ಸವಿತ ಸಮಾಜ) :- ಇವರನ್ನು ಕ್ಷೌರಿಕರು, ಹಜಾಮರು, ಭಜಂತ್ರಿಗಳು ಎಂದು ಕರೆಯುತ್ತಾರೆ. ಕ್ಷೌರ ಮಾಡುವುದು ಇವರ ಮೂಲ ವೃತ್ತಿಯಾಗಿತ್ತು. ಜೊತೆಗೆ ವಿವಾಹ ಮೊದಲಾದ ಶುಭ ಸಮಾರಂಭಗಳಲ್ಲಿ ನಾದಸ್ವರ ನುಡಿಸುತ್ತಾರೆ. ಕ್ಷೌರ ಮಾಡಿದ್ದಕ್ಕೆ ಉಂಬಳಿಯಾಗಿ ಧಾನ್ಯ ಪಡೆಯುತ್ತಿದ್ದರು ಆದರೆ ಇಂದು ಆ ವ್ಯವಸ್ಥೆ ಆಧುನೀಕರಣದ ಪ್ರಭಾವದಿಂದ ಬದಲಾಗಿದೆ.

ಶೆಟ್ಟರು :- ಶೆಟ್ಟರು ಮೂಲತಃ ನೇಯ್ಗೆಯನ್ನು ಸಾಂಪ್ರದಾಯಿಕ ಕುಲಕುಸುಬಾಗಿ ಹೊಂದಿದ್ದರು. ಆದರೆ ಕಾಲಾಂತರದಲ್ಲಿ ಇವರಲ್ಲಿ ಕೆಲವರು ವ್ಯಾಪಾರಿಗಳು, ಜಮೀನ್ದಾರಾಗಿರುವುದು ಕಂಡು ಬರುತ್ತದೆ. ಕನಕಪುರದಲ್ಲಿ ಗುರುಕಾರ್ ವಂಶಸ್ಥರ ನಂತರ ಜಮೀನ್ದಾರರನ್ನು ಕಾಣುವುದು ಶೆಟ್ಟಿ ಸಮುದಾಯದಲ್ಲಿ ಇವರ ಸ್ಥಿತಿ ಸಾಮಾಜಿಕವಾಗಿ ಉತ್ತಮವಾಗಿದೆ.

ಕುಂಬಾರ :- ಮಣ್ಣನ್ನು ಹದ ಮಾಡಿ ಮಡಿಕೆ, ಕುಡಿಕೆಗಳನ್ನು ತಯಾರು ಮಾಡುವುದು ಇವರ ಕುಲಕಸುಬಾಗಿತ್ತು. ಈ ಪಟ್ಟಣದಲ್ಲಿ ಇವರಿರುವ ಸ್ಥಳವನ್ನು 'ಕುಂಬಾರರ ಬೀದಿ' ಎಂದೇ ಕರೆಯಲಾಗಿದೆ. ಆದರೆ ಆಧುನಿಕತೆ ಬೆಳೆದಂತೆ ಈ ಕುಂಬಾರಿಕೆಯ ವಸ್ತುಗಳ ಬಳಕೆಯಿಲ್ಲದೆ ಇಂದು ಕೇವಲ ಒಂದೇ ಒಂದು ಕುಂಬಾರಿಕೆಯ ಸಣ್ಣ ಘಟಕವನ್ನು ಕಾಣಬಹುದು.

ಗಾಣಿಗರು :- ಕನಕಪುರದಲ್ಲಿರುವ 'ಹೊಸಬೀದಿ'ಯನ್ನು ಹಿಂದೆ 'ಗಾಣಿಗರಬೀದಿ' ಎಂದು ಕರೆಯಲಾಗುತ್ತಿತ್ತು. ಗಾಣದಿಂದ ಎಣ್ಣೆ ತೆಗೆದು ವ್ಯಾಪಾರ ಮಾಡುವುದು ಇವರ ವೃತ್ತಿಯಾಗಿತ್ತು. ಹೆಗ್ಗಾಣಿಗ ಶೆಟ್ಟರು, ಕೊಂಗಾಣಿಗ ಶೆಟ್ಟರು, ಕಿರುಗಾಣಿಗ ಶೆಟ್ಟರು ಎಂಬ ಪಂಗಡಗಳಿದ್ದವು, ತಾವು ತಯಾರಿಸಿದ ಎಣ್ಣೆಯನ್ನು ದೇವಾಲಯಗಳಿಗೆ ನೀಡುವುದು ರೂಢಿಯಲ್ಲಿತ್ತು.

ತಿಗಳರು :- ತಿಗಳರು ಟಿಪ್ಪುವಿನ ಕಾಲದಲ್ಲಿ ಇಲ್ಲಿಗೆ ಬಂದು ನೆಲೆಸಿದರೆಂದು ಕಾಣುತ್ತದೆ. ತರಕಾರಿ ಮತ್ತು ಹೂ ತೋಟಗಳನ್ನು ಬೆಳೆಸುವುದು ಇವರ ಉದ್ಯೋಗವಾಗಿತ್ತು. ದ್ರೌಪತಿಯನ್ನು ತಮ್ಮ ಕುಲದೇವತೆಯೆಂದು ಹಾಗೂ ಶಕ್ತಿದೇವತೆಯ ಸ್ವರೂಪವೆಂದೂ ದೃಢವಾಗಿ ನಂಬಿದ್ದಾರೆ.

ಮೇದರು :- ಬಿದಿರಿನಿಂದ ಮೊರ, ಬುಟ್ಟಿ, ಬೀಸಣಿಗೆ, ಚಾಪೆ, ರೇಶ್ಮೆ ಗೂಡಿನ ಚಂದ್ರಿಕೆಗಳನ್ನು ತಯಾರು ಮಾಡುತ್ತಾರೆ. ಇವರಲ್ಲಿ ಗರಿಮೇದರು, ಪಲ್ಲಿಮೇದರು, ಬುಡಿಕಾರ ಮೇದರೆಂಬ ಒಳಪಂಗಡಗಳಿವೆ. ಪಟ್ಟಣದ ಬಸ್‌ನಿಲ್ದಾಣದ ಹಿಂದೆ ಇರುವ ಬೂದಿಕೇರಿಯು ಇವರ ಕಸುಬು ಚಟುವಟಿಕೆಯ ಕೇಂದ್ರವಾಗಿದೆ.

ವಿಶ್ವಕರ್ಮ :- ವಿಶ್ವಕರ್ಮ ಸಮುದಾಯದವರು ವಿಶೇಷವಾಗಿ ಪರಂಪರಾನುಗತ ಕಲಾ ಕೌಶಲ್ಯಕ್ಕೆ ಪ್ರಸಿದ್ಧರಾಗಿದ್ದಾರೆ. ಪಟ್ಟಣದ ವಾಜರ ಬೀದಿಯಲ್ಲಿದ್ದಾರೆ. ಇವರನ್ನು ಪಾಂಚಾಳರು ಎಂದು ಕರೆಯುವುದುಂಟು. ಇವರಲ್ಲಿ ಚಿನ್ನ, ಬೆಳ್ಳಿ ಕೆಲಸ ಮಾಡುವವ ಅಕ್ಕಸಾಲಿಗ, ಕಂಚು, ಹಿತ್ತಾಳೆ ಕೆಲಸ ಮಾಡುವವ ಕಂಚುಗಾರ; ಕಬ್ಬಿಣದ ಕೆಲಸ ಮಾಡುವವ ಕಮ್ಮಾರ, ಮರದ ಕೆಲಸ ಮಾಡುವವ ಬಡಿಗ ಹಾಗೂ ಶಿಲ್ಪಿಗಾರ ಸೇರಿದ್ದಾನೆ.

ಹೊಲೆ - ಮಾದಿಗರು :- ಇವರು ಸಮಾಜದ ಅಂಚಿನಲ್ಲಿದ್ದು ತಿರಸ್ಕಾರಕ್ಕೊಳಗಾಗಿದ್ದರು. ತಮಟೆ ಬಾರಿಸುವುದು, ತೋಟಿ ಕಾರ್ಯ ನಿರ್ವಹಿಸುವುದು, ಸತ್ತ ಹಸುಗಳನ್ನು ಹೂಳುವುದು, ಸೋಬಾನೆ ಹೇಳುವುದು ಹಾಗೂ ಮೇಲ್ವರ್ಗದವರ ಸೇವೆ ಸಲ್ಲಿಸುವುದು ಇವರ ವೃತ್ತಿಯಾಗಿತ್ತು. ಜಮೀನ್ದಾರರ ಮನೆಯಲ್ಲಿ ಜೀತವನ್ನು ಮಾಡಬೇಕಿತ್ತು. ಮೆಳೆಕೋಟೆಯಲ್ಲಿ ಮಾದಿಗರು, ಮಳಗಾಳು, ಕುರುಪೇಟೆಯಲ್ಲಿ ಹೊಲೆಯರು ಕಂಡು ಬರುತ್ತಾರೆ. ಸಾಮಾಜಿಕವಾಗಿ ಇವರನ್ನು ನಿಕೃಷ್ಟವಾಗಿ ಕಾಣಲಾಗಿದೆ. ಶಿಷ್ಠ ಆಚರಣೆಗಳನ್ನು ಇವರು ಮಾಡುವಂತಿರಲಿಲ್ಲ.

ಕುಟುಂಬ

ಸಮಾಜದಲ್ಲಿ ಗಂಡ, ಹೆಂಡತಿ, ಮಕ್ಕಳು, ಅಕ್ಕ-ತಂಗಿ, ಅಣ್ಣ-ತಮ್ಮ ಮೊದಲಾದ ಸಂಬಂಧಿಕರು ಒಂದೇ ಮನೆಯಲ್ಲಿ ಒಟ್ಟಿಗೆ ವಾಸ ಮಾಡುವ ಗುಂಪನ್ನೇ ಕುಟುಂಬ ಎಂದು ಕರೆಯಲಾಗುವುದು. ಭಾರತೀಯ ಸಮಾಜದಲ್ಲಿ ಅವಿಭಕ್ತ ಮತ್ತು ವಿಭಕ್ತ ಎಂಬ ಎರಡು ಕುಟುಂಬದ ವಿಭಾಗಗಳನ್ನು ಕಾಣಬಹುದು. ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿಯ ಬದಲು ಕುಟುಂಬವನ್ನೇ ಒಂದು ಘಟಕವಾಗಿ ಪರಿಗಣಿಸಲಾಗುತ್ತಿತ್ತು. ಹೀಗಾಗಿ ಯಾವುದೇ ಪ್ರದೇಶದ ಜನಸಂಖ್ಯೆಯನ್ನು ಲೆಕ್ಕ ಹಾಕುವಾಗ ಅಲ್ಲಿಯ ಕುಟುಂಬವನ್ನು ಎಣಿಸಲಾಗುತ್ತಿತ್ತೇ ವಿನಃ

ತಲೆಗಳನ್ನೆಲ್ಲ. ಕುಟುಂಬದಲ್ಲಿನ ಸಂಬಂಧಗಳು ಗಟ್ಟಿಯಾದವುಗಳಾಗಿವೆ ಹಾಗೂ ಜವಾಬ್ದಾರಿಯುತವಾದವುಗಳು ಆಗಿದ್ದು ಪರಸ್ಪರ ಸಹಾಯ ಸೌಹಾರ್ದತೆಯನ್ನು ಹೊಂದಿವೆ. ಆದರೆ ಇಂದಿನ ಪೀಳಿಗೆಯವರಿಗೆ ಅವಿಭಕ್ತ ಕುಟುಂಬ ಪದ್ಧತಿಯು ಭಾರವೆನ್ನಿಸುತ್ತಿದ್ದು, ವಿಭಕ್ತ ಕುಟುಂಬಗಳೇ ಹೆಚ್ಚಾಗಿವೆ. ಭಾರತದ ಕುಟುಂಬ ಪದ್ಧತಿ ಪಿತೃಪ್ರಧಾನವಾದ್ದರಿಂದ ಅದರ ಹಿರಿಯ ವ್ಯಕ್ತಿಯೇ ಮನೆಯ ಯಜಮಾನನಾಗಿರುತ್ತಾನೆ.

ಕನಕಪುರ ಪಟ್ಟಣದಲ್ಲಿ ಜನರು ವಿಭಕ್ತ ಕುಟುಂಬಗಳಲ್ಲಿ ಹೆಚ್ಚಾಗಿ ವಾಸಿಸುತ್ತಿರುವುದು ಕಂಡು ಬರುತ್ತದೆ. ಸರ್ಕಾರದಲ್ಲಿ ಲಭ್ಯವಿರುವ ದಾಖಲೆ ಪ್ರಕಾರ ಅತಿ ಹೆಚ್ಚಿನ ೩೪೦ (ಶೇ. ೯೭.೧೪ರಷ್ಟು) ಜನರು ವಿಭಕ್ತ ಕುಟುಂಬವನ್ನು ಹೊಂದಿದವರಾಗಿದ್ದಾರೆ.[೧] ಹೀಗೆ ಕನಕಪುರ ಪಟ್ಟಣದ ನಿವಾಸಿಗಳು ಹಲವು ಕಾರಣಗಳಿಂದ ಅವಿಭಕ್ತ ಕುಟುಂಬವನ್ನು ಬಿಟ್ಟು ವಿಭಕ್ತ ಕುಟುಂಬಗಳಲ್ಲಿ ವಾಸಿಸುತ್ತಿದ್ದಾರೆ.[೨] ಬದಲಾದ ಜೀವನ ಕ್ರಮದಿಂದಾಗಿ ಕಾಲಕ್ರಮೇಣ ಅವಿಭಕ್ತ ಕುಟುಂಬಗಳು ಕಡಿಮೆಯಾಗುತ್ತಾ ಬಂದಿರುವುದರಿಂದ ವಿಭಕ್ತ ಕುಟುಂಬಗಳು ತಮ್ಮಲ್ಲಿನ ಅನುಕೂಲತೆಗಳಿಂದಾಗಿ ಹೆಚ್ಚಿನ ಜನಪ್ರಿಯತೆಯನ್ನು ಪಡೆಯುತ್ತಿವೆ.

ಈ ಪಟ್ಟಣದಲ್ಲಿ ಅತ್ಯಂತ ಹೆಚ್ಚಿನ (ಶೇ. ೮೪ರಷ್ಟು) ಜನರು ತಮ್ಮ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಹಾಗೂ ರಾಷ್ಟ್ರದ ಜನಸಂಖ್ಯಾ ಹಿತದೃಷ್ಟಿಯಿಂದ ಚಿಕ್ಕ ಕುಟುಂಬವನ್ನು ಹೊಂದಿರುವುದು ಪ್ರಜ್ಞಾಪೂರಕವಾಗಿದೆ. ಹಾಗೆಯೇ ಕಡಿಮೆ ಸಂಖ್ಯೆಯ (ಶೇ. ೧೩.೧೪ರಷ್ಟು) ಜನರು ಕೌಟುಂಬಿಕ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿಕೊಂಡು ಮಧ್ಯಮ ಗಾತ್ರದ ಕುಟುಂಬವನ್ನು ಹೊಂದಿರುವುದು ಕಂಡು ಬರುತ್ತದೆ. ಒಟ್ಟಾರೆಯಾಗಿ ಇದರಿಂದ ಗಮನಿಸಬೇಕಾಗಿರುವ ಅಂಶವೆಂದರೆ ವಿಭಕ್ತ ಕುಟುಂಬದ ಬಗೆಗಿನ ಒಲವುಗಳು ಹೆಚ್ಚಾಗಿರುವುದರಿಂದ ಅವಿಭಕ್ತ ಕುಟುಂಬಗಳು ಕಣ್ಮರೆಯಾಗಿವೆ ಎಂದು ಹೇಳಬಹುದು.

ವಿವಾಹ

ವಿವಾಹ ಎಂಬುದು ಪವಿತ್ರವಾದ ಒಂದು ಸಾಮಾಜಿಕ ಸಂಬಂಧ ಕುಟುಂಬದ ಅತ್ಯವಶ್ಯಕ ಸಂಬಂಧಗಳಲ್ಲಿ ವಿವಾಹಕ್ಕೆ ಮಹತ್ವ ಸ್ಥಾನವನ್ನು ನೀಡಲಾಗಿದೆ. ಕನಕಪುರ ಪರಿಸರ ಪ್ರದೇಶಗಳಲ್ಲಿ ಕಂಡು ಬರುವ ಸರ್ವೇಸಾಮಾನ್ಯ ಸಂಗತಿ ಎಂದರೆ ವಿವಾಹ ವಧು-ವರರ ತಂದೆ ತಾಯಿಗಳು ಗುರು ಹಿರಿಯರ ಇಚ್ಛೆಯನ್ನು ಅವಲಂಬಿಸಿದೆ. ವಿವಾಹದ ವಯಸ್ಸಿನಲ್ಲಿ ಅಂತರವಿದ್ದು ಹುಡುಗನಿಗಿಂತ ಹುಡುಗಿ ೫-೧೦ ವರ್ಷ ಚಿಕ್ಕವಳಾಗಿರುತ್ತಾಳೆ. ಗಂಡು ತನ್ನ ಅಕ್ಕನ ಮಗಳು, ಅತ್ತೆಯ ಮಗಳು, ಸೋದರ ಮಾವನ ಮಗಳನ್ನು ವಿವಾಹವಾಗುವ ಪದ್ಧತಿ ರೂಢಿಯಲ್ಲಿದೆ. ಪ್ರತಿ ಜಾತಿಯಲ್ಲೂ ಹಲವು ಒಳಪಂಗಡಗಳಿದ್ದು ಇವುಗಳ ನಡುವೆ ಕುಲಸಂಬಂಧಿ ವಿವಾಹಗಳು ನಡೆಯುತ್ತವೆ. ಬೆಸ್ತರಲ್ಲಿ ಬೆಳ್ಳಿ, ರತ್ನ, ಹವಳ ಮೊದಲಾದ ಒಳಪಂಗಡಗಳಿದ್ದು ಅವುಗಳ ನಡುವೆ ಪರಸ್ಪರ ವಿವಾಹ ಏರ್ಪಡುತ್ತಿರಲಿಲ್ಲ.[೩] ಇತ್ತೀಚೆಗೆ ಈ ಒಳಪಂಗಡ ವಿವಾಹಗಳಲ್ಲಿ ಬದಲಾವಣೆಯಾಗಿ ಸಂಬಂಧಗಳು ಬೆಳೆಯುತ್ತಿವೆ.

ವಿವಾಹ ತಮ್ಮ ಜಾತಿ, ಧರ್ಮ ಮತ್ತು ನೀತಿ - ನಿಯಮಗಳಿಗೆ ಅನುಗುಣವಾಗಿ ಸಂಪ್ರದಾಯ ವಿಧಿ - ವಿಧಾನಗಳ ಮೂಲಕ ನಡೆಯುತ್ತದೆ. ವಿವಾಹ ಸಂದರ್ಭದಲ್ಲಿ ಮಂಗಳ ದ್ರವ್ಯಗಳಾದ ಹಣ್ಣು, ಕಾಯಿ, ವಿಳ್ಳೇದೆಲೆ, ಅರಿಶಿಣ, ಕುಂಕುಮ, ಬಳೆ ಇತ್ಯಾದಿ ಸಾಮಗ್ರಿಗಳನ್ನು ಬಳಸುತ್ತಾರೆ. ತಾಳಿ, ಕಾಲುಂಗುರ, ಬಾಸಿಂಗ, ಕಂಕಣ ಧರಿಸುವುದು[೪] ಇತ್ಯಾದಿ ವಿಧಿಗಳು ಪ್ರಧಾನವಾಗಿವೆ. ಆರ್ಥಿಕವಾಗಿ ಎಷ್ಟೇ ಬಡವರಾಗಿದ್ದರೂ ಕೂಡ ತಾಳಿಯನ್ನು ಗಂಡಿನ ಕಡೆಯವರು ತರುವುದು ಕಡ್ಡಾಯವಾದ ಸಂಪ್ರದಾಯವಾಗಿದೆ.

ಮದುವೆಯನ್ನು ಕುರಿತ ಹಳೆಯ ಸಂಪ್ರದಾಯದ ವಿಚಾರಗಳು ತಮ್ಮ ಹಿಡಿತವನ್ನು ಕಳೆದುಕೊಳ್ಳುತ್ತಿವೆ. ಅನೇಕ ಕಾರಣಗಳಿಂದಾಗಿ ಮದುವೆಯ ಆಚರಣೆಗಳು ಹೊರ ತಲೆಮಾರು ಬೆಳೆದಂತೆ ಸರಳವಾಗುತ್ತಿವೆ. ಅಂತರಜಾತಿಯ ವಿವಾಹಗಳು ಇನ್ನೂ ಬಹುಸಂಖ್ಯೆಯಲ್ಲಿ ಕಾಣುವುದಿಲ್ಲವಾದರೂ ನಿಧಾನವಾಗಿ ಹೆಚ್ಚುತ್ತಿವೆ. ಮಳಗಾಳು ಸೇತುವೆ ಬಳಿಯಿರುವ ಸೋಪಾನ ಕಟ್ಟೆ ಮತ್ತು ಬೆಂಗಳೂರಿಗೆ ಹೋಗುವ ಮಾರ್ಗದಲ್ಲಿರುವ ಅರ್ಕಾವತಿ ಸೇತುವೆ ಬಳಿ ಇರುವ ಹೊಳೆ ಆಂಜನೇಯ ದೇವಾಲಯಗಳು ಪ್ರಾಚೀನ ಕಾಲದಿಂದಲೂ ವಿವಾಹದ ಕೇಂದ್ರಗಳಿವೆ. ಬಾಲವಿವಾಹ ವ್ಯವಸ್ಥೆ ರೂಢಿಯಲ್ಲಿಲ್ಲ. ಇದು ಇಲ್ಲಿನ ಜನರಲ್ಲಿ ವಿವಾಹ ವಯಸ್ಸಿನ ಪ್ರಜ್ಞೆಯನ್ನು ತಿಳಿಸುತ್ತದೆ.

ಸ್ತ್ರೀಯ ಸ್ಥಾನಮಾನ

ಒಂದು ಸಮಾಜದ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರ ಸ್ಥಾನಮಾನ ವೈವಿಧ್ಯತೆಯಿಂದ ಕೂಡಿದೆ. ಅದರಲ್ಲೂ ಕರ್ನಾಟಕದ ಸ್ತ್ರೀಗೆ ಗೌರವ ಸ್ಥಾನವಿದ್ದರೂ "ಅರ್ಥೋಹಿ ಕನ್ಯಾ ಪರಕೀಯ ಏವ" ಹೆಣ್ಣು ಮನೆಬಿಟ್ಟು ಹೋಗುವಳು ಎಂಬ ವಾಡಿಕೆಯೂ ಇತ್ತು.[೫] ಧಾರ್ಮಿಕ, ಆರ್ಥಿಕ, ಕಲೆ, ಸಾಹಿತ್ಯ, ವಿಜ್ಞಾನ, ರಾಜಕೀಯ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಮಹಿಳೆಯರು ವಹಿಸುತ್ತಿರುವ ಪಾತ್ರ ಗಳಿಸುತ್ತಿರುವ ಸಾಧನೆ ಮಹತ್ವದ್ದು. ಸಾಮಾಜಿಕ ರಂಗದಲ್ಲಿ ಮಹಿಳೆ ತಾಯಿ, ಪತ್ನಿ, ಸಹೋದರಿ, ಮಗಳು ಮುಂತಾದ ಸ್ಥಾನದಲ್ಲಿ ಪಾತ್ರ ನಿರ್ವಹಿಸುತ್ತಿದ್ದಾಳೆ. ಈ ಪರಿಸರದ ಮಹಿಳೆ ಎಲ್ಲಾ ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ಪ್ರಮುಖ ಪಾತ್ರವಹಿಸಲು ಅವಕಾಶವಿದೆ. ಪುರಾತತ್ವ ಆಕರಗಳಿಂದ ಹಿಂದಿನ ಸ್ತ್ರೀಯರಿಗಿದ್ದ ಗೌರವವನ್ನು ದೃಢಪಡಿಸುತ್ತವೆ. ವಿರೂಪ ಸಂದ್ರದ ದಳವಾಯಿ ಕೊಮಾರಯ್ಯನ ತಾಯಿ ತಿಮ್ಮಮ್ಮ ದೇಗುಲ ಮಠವನ್ನು ಕಟ್ಟಿಸಿಕೊಟ್ಟಿರುವುದು ಶಾಸನಗಳಿಂದ ತಿಳಿದು ಬಂದಿದೆ. ದಾನ ಮಾಡುವುದು, ಕೆರೆಕಟ್ಟೆ, ಅಗ್ರಹಾರ, ಛತ್ರ ನಿರ್ಮಾಣ ಮೊದಲಾದ ಜನೋಪಕಾರಿ ಕಾರ್ಯಗಳಲ್ಲಿ ಮಹಿಳೆ ಸಕ್ರಿಯವಾಗಿ ಭಾಗವಹಿಸುತ್ತಿದ್ದಳು ಎಂದು ಚರಿತ್ರೆಯಲ್ಲಿ ದಾಖಲಾಗಿವೆ. ಈ ರೀತಿ ಮಹಿಳೆಯರ ಸ್ಥಾನಮಾನದಲ್ಲಿ ಕಂಟಕ ಪ್ರಾಯವಾದ ವೇಶ್ಯಾವೃತ್ತಿ, ದೇವದಾಸಿ ವ್ಯವಸ್ಥೆ ಮತ್ತು ಸತಿ ಸಹಗಮನ, ಬಾಲ್ಯ ವಿವಾಹ ಮೊದಲಾದ ಅನಿಷ್ಟ ಪದ್ಧತಿಗಳು ಈ ಸಮಾಜದಲ್ಲಿ ಬಲಿಷ್ಠವಾಗಿದ್ದವು ಎಂಬುದು ಗಮನಿಸಬೇಕಾದ ಅಂಶ.

೩.೨. ಧಾರ್ಮಿಕ ಸ್ಥಿತಿಗತಿ

ಭಾರತವು ಹಲವು ಧರ್ಮ, ಜಾತಿ, ಭಾಷೆ, ಸಂಸ್ಕೃತಿಗಳ ನೆಲೆಬೀಡಾಗಿದೆ. ಹೀಗಿದ್ದರೂ ಕೂಡ ಭೂಮಿಯ ಮೇಲೆ ವೈವಿಧ್ಯತೆಯಲ್ಲಿ ಏಕತೆಯನ್ನು ಕಂಡುಕೊಂಡು ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿದೆ. ಪ್ರಾಚೀನ ಕಾಲದಿಂದಲೂ ಮೂಲಭೂತ ಧಾರ್ಮಿಕ ನಂಬಿಕೆ ಮತ್ತು ಅನುಸರಣೆಗಳು ಇಂದಿನವರೆಗೂ ಅವಿಚ್ಛಿನ್ನವಾಗಿ ಮುಂದುವರಿದುಕೊಂಡು ಬಂದಿವೆ. ಧಾರ್ಮಿಕ ಜೀವನದ ಎರಡು ಗಮನಾರ್ಹ ವೈಶಿಷ್ಟ್ಯಗಳಾಗಿರುವ ಅನ್ಯಧರ್ಮ ಸಹಿಷ್ಣುತೆ ಮತ್ತು ಮೂರ್ತಿ ಪೂಜೆಗಳು ಎಲ್ಲಾ ವಿಧದಿಂದಲೂ ಮುಂದುವರಿದಿರುವುದನ್ನು ಕಾಣಬಹುದು. ಜನರು ಅವರವರ ಒಲುವಿಗೆ ಅನುಸಾರವಾಗಿ ಶಿವ, ವಿಷ್ಣು, ಅಲ್ಲಾ, ಯೇಸು ಮೊದಲಾದ ದೇವರುಗಳನ್ನು ಧರ್ಮದ ಹಿನ್ನೆಲೆಯಲ್ಲಿ ಆರಾಧಿಸುತ್ತಾ ಬರುತ್ತಿದ್ದಾರೆ.

ಕನಕಪುರದಲ್ಲಿ ಹಿಂದೂ, ಜೈನ, ಶೈವ, ಮುಸ್ಲಿಂ, ಕ್ರಿಶ್ಚಿಯನ್ ಮೊದಲಾದ ಧರ್ಮೀಯರು ನೆಲೆಸಿದ್ದರೂ ಹಿಂದೂ ಧರ್ಮಿಯರೇ ಬಹುಸಂಖ್ಯಾತರು ಮತ್ತು ಪ್ರಧಾನರಾಗಿದ್ದಾರೆ. ಬಹುಸಂಸ್ಕೃತಿ ಎಲ್ಲಾ ಜನಾಂಗದ ಮೇಲೆ ಪ್ರಭಾವ ಬೀರಿವುದು ಸಹಜ ಕ್ರಿಯೆ. ಆದರೆ ಇಲ್ಲಿ ಅಲ್ಪಸಂಖ್ಯಾತ ಪರಂಪರೆ ಬಹುಸಂಖ್ಯಾತರ ಮೇಲೆ ಪ್ರಭಾವ ಬೀರಿರುವುದು ವಿಶೇಷವಾಗಿ ಕಂಡು ಬರುತ್ತದೆ. ಪಾಶ್ಚಿಮಾತ್ಯ ಮತ್ತು ಭಾರತೀಯ ಸಂಸ್ಕೃತಿ ಹೇಗೆ ಮಿಳಿತವಾಗಿದೆ ಎಂಬುದನ್ನು ಈ ಪ್ರಭಾವದ ಹಿನ್ನೆಲೆಯಿಂದ ಅರಿಯಬಹುದು.

ಪ್ರಸ್ತುತ ಭಾರತದ ಸಂದರ್ಭದಲ್ಲಿ ಕೋಮುಗಲಭೆಗಳು ದೇಶದಾದ್ಯಂತ ನಡೆಯುತ್ತಿದ್ದು, ಜನಜೀವನ ಸ್ಥಿತಿ ಅಸ್ತವ್ಯಸ್ತವಾಗಿ ಕೆಲವು ಸೂಕ್ಷ್ಮ ಪ್ರದೇಶಗಳಲ್ಲಿ 'ಒಂದು ಕೋಮಿನವರು' ನೆಮ್ಮದಿಯಾಗಿ ಬದುಕಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವು ಸಂಪ್ರದಾಯ ಸಂಘಟನೆಗಳು ಕೋಮು ಗಲಭೆಗಳನ್ನು ಹುಟ್ಟಿಹಾಕಿ, ರಾಷ್ಟ್ರೀಯ ಭಾವೈಕ್ಯತೆಗೆ ಧಕ್ಕೆಯನ್ನು ಉಂಟು ಮಾಡುತ್ತಿವೆ. ಇದಕ್ಕೆ ವಿರುದ್ಧ ದಿಕ್ಕಿನಲ್ಲಿ ಭಿನ್ನಧರ್ಮ ಅನುಸರಣೆ ಕನಕಪುರದಲ್ಲಿದ್ದು ಯಾವುದೇ ಕೋಮುಗಲಭೆ ನಡೆಯದೇ ಇರುವ ಧಾರ್ಮಿಕ ಸಾಮರಸ್ಯದ ಪ್ರದೇಶವಾಗಿದೆ. ಪ್ರತಿ ವರ್ಷ ಖಾನ್‌ಖಾನ್ ಸಾಹೇಬರ ಪುಣ್ಯತಿಥಿ(ಉರುಸ್)ಯನ್ನು ಹಿಂದೂ, ಮುಸ್ಲಿಂ ಎಲ್ಲರೂ ಸೇರಿಕೊಂಡು ಆಚರಣೆ ಮಾಡುತ್ತಾ ಬಂದಿರುವುದು ಇಲ್ಲಿನ ಧಾರ್ಮಿಕ ಸಾಮರಸ್ಯವನ್ನು ತಿಳಿಯಲು ಸಹಕಾರಿಯಾಗಿದೆ.

ಬೌದ್ಧ ಧರ್ಮ

ವೈದಿಕ ಧರ್ಮದ ಸಂಪ್ರದಾಯ ಸಿದ್ಧಾಂತಗಳನ್ನು ತಿರಸ್ಕರಿಸಿ ಬೌದ್ಧ ಧರ್ಮ ಉಗಮ ವಾಯಿತು. ಕ್ರಿ.ಶ. ೩ನೇ ಶತಮಾನದ ಅಶೋಕನ ಶಾಸನಗಳೇ ಈ ಧರ್ಮದ ಅತ್ಯಂತ ಪ್ರಾಚೀನ ದಾಖಲೆಗಳಾಗಿವೆ. ರಾಮನಗರ ಜಿಲ್ಲೆಯ ಸುಗ್ಗನಹಳ್ಳಿ, ಕಲ್ಯಾ, ಶಿವಗಂಗೆ, ರಾಜಘಟ್ಟ, ಸಾವನದುರ್ಗ ಮೊದಲಾದ ಕಡೆ ಬೌದ್ಧ ಧರ್ಮದ ಅವಶೇಷಗಳು ದೊರೆತಿವೆ.[೬] ಮಾಗಡಿಸೀಮೆ

ಕನಕಪುರ ತಾಲೂಕಿನಲ್ಲಿ ಬೌದ್ಧ ಧರ್ಮದ ಯಾವುದೇ ಕುರುಹುಗಳು ದೊರೆತಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಇಲ್ಲಿನ ದಲಿತರು ಬೌದ್ಧ ಧರ್ಮದ ಕಡೆ ಒಲವು ತೋರುತ್ತಿರುವುದನ್ನು ಗಮನಿಸಬಹುದು.

ಜೈನ ಧರ್ಮ

ಕರ್ನಾಟಕದ ಪ್ರಮುಖ ಧರ್ಮಗಳಲ್ಲಿ ಜೈನ ಧರ್ಮವೂ ಒಂದಾಗಿದೆ. ಕ್ರಿ.ಶ. ೩ನೇ ಶತಮಾನದ ಮೊದಲಿನಿಂದಲೂ ಕರ್ನಾಟಕ ಜೈನ ಧರ್ಮೀಯರ ನೆಲೆಬೀಡಾಗಿತ್ತು. ಹೆಚ್ಚು ಬೆಟ್ಟಗುಡ್ಡಗಳಿಂದ ಕೂಡಿರುವ ಪ್ರದೇಶವನ್ನೆ ಇವರು ತಮ್ಮ ನೆಲೆಗಳನ್ನಾಗಿ ಮಾಡಿಕೊಂಡರು. ಕನಕಪುರ ತಾಲೂಕು ಬೆಟ್ಟಗುಡ್ಡಗಳಿಂದ ಸುತ್ತುವರಿದ ಪ್ರದೇಶವಾಗಿದೆ. ಹಾಗಾಗಿ ಪ್ರಾಚೀನ ಕಾಲದಿಂದಲೂ ಇಲ್ಲಿ ಜೈನ ಧರ್ಮ ನೆಲೆಯೂರಿರುವ ಸಾಧ್ಯತೆಗಳಿವೆ. ಈ ಪ್ರದೇಶ ಗಂಗ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಇವರು ಜೈನ ಮತಾವಲಂಬಿಗಳು ಆಗಿದ್ದರಿಂದ ಇಲ್ಲಿನ ಜೈನ ಧರ್ಮದ ಪ್ರಭಾವವನ್ನು ತಳ್ಳಿ ಹಾಕುವಂತಿಲ್ಲ. ಕನಕಪುರ ಪಟ್ಟಣದಲ್ಲಿ ಜೈನ ಧರ್ಮದ ಯಾವುದೇ ಕುರುಹು ದೊರೆಯದಿದ್ದರೂ ತಾಲೂಕಿನ ಕೆಲವು ಪ್ರದೇಶಗಳಲ್ಲಿ ಜೈನ ಕುರುಹು ದೊರೆತ್ತಿದ್ದು ಅವುಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಸಾತನೂರು ಹೋಬಳಿ ಹರಿಹರ ಗ್ರಾಮದ ಬಳಿ ಶ್ರವಣನ ಒಡ್ಡು ಎಂಬ ಸ್ಥಳದಲ್ಲಿ ಎರಡುವರೆ ಅಡಿ ಎತ್ತರದ ಜಿನ ತೀರ್ಥಂಕರನ ಮೂರ್ತಿಯೊಂದು ಕಂಡು ಬಂದಿದೆ. ಈ ತೀರ್ಥಂಕರ ಮೂರ್ತಿಯ ಪಕ್ಕದಲ್ಲಿ ಧ್ಯಾನದ ಪೀಠವೊಂದು ದೊರೆತಿದೆ.[೭] ಪ್ರಾಚೀನತೆಯ ದೃಷ್ಟಿಯಿಂದ ಈ ಮೂರ್ತಿ ಹತ್ತನೇ ಶತಮಾನದ್ದಾಗಿದ್ದು ಇಲ್ಲಿನ ಪರಿಸರದಲ್ಲಿ ಜೈನ ಧರ್ಮದ ಪ್ರಭಾವ ಪ್ರಾರಂಭದಿಂದಲೂ ಇದೆ ಎಂಬುದನ್ನು ಸೂಚಿಸುತ್ತದೆ. ಇದೇ ಹೋಬಳಿಯ ವೀರೇಗೌಡನ ದೊಡ್ಡಿಯ 'ಬೋಳರೆ' ಎಂಬ ಸ್ಥಳದಲ್ಲಿ ಮತ್ತೊಂದು ಜಿನ ತೀರ್ಥಂಕರನ ಮೂರ್ತಿ ದೊರೆತಿದ್ದು ಅದರ ಪಕ್ಕದಲ್ಲಿ ಮಂಟಪದ ಅವಶೇಷಗಳು ದೊರೆತಿರುವುದರಿಂದ ಈ ಪ್ರದೇಶ ಸುತ್ತಮುತ್ತಲಿನ ಜೈನರಿಗೆ ಕೇಂದ್ರವಾಗಿತ್ತು ಎಂದು ಕಾಣುತ್ತದೆ.[೮]

ಹುಣಸನಹಳ್ಳಿ ಬೆಟ್ಟದ ದಿಗಂಬರ ಒಡ್ಡು ಎಂಬ ಸ್ಥಳದಲ್ಲಿ ಜೈನ ಸನ್ಯಾಸಿಯೊಬ್ಬನ ಸಮಾಧಿಯಿದೆ.[೯] ದಿಗಂಬರ ಸ್ವಾಮಿ ಎಂಬ ಜೈನ ಸನ್ಯಾಸಿ ಇಲ್ಲಿ ವಾಸವಾಗಿದ್ದರಿಂದ ಈ ಸ್ಥಳವನ್ನು ಸ್ಥಳೀಯರು ದಿಗಂಬರನ ಒಡ್ಡು ಎಂದು ಕರೆಯುತ್ತಾರೆ. ಅಲ್ಲದೆ ಪೂಜ್ಯ ಭಾವನೆಯಿಂದ ದಿಗಂಬರ ಸ್ವಾಮಿಯ ಸಮಾಧಿಯನ್ನು ಇಂದಿಗೂ ಆರಾಧಿಸುತ್ತಾ ಬಂದಿದ್ದಾರೆ. ಈ ದಿಗಂಬರ ಸ್ವಾಮಿ ೧೮ನೇ ಶತಮಾನಕ್ಕೂ ಹಿಂದೆ ಇಲ್ಲಿ ವಾಸವಾಗಿದ್ದು ತನ್ನ ಜೀವನ ಕಳೆದಿದ್ದಾನೆ. ಸ್ಥಳೀಯರು ಇವನ ಮೇಲೆ ಇಟ್ಟಿರುವ ಪೂಜ್ಯಭಾವನೆಯನ್ನು ಗಮನಿಸಿದರೆ ಈ ಒಬ್ಬ ಜನಪ್ರಿಯ ಜೈನಮುನಿಯಾಗಿದ್ದ ಎಂದು ತಿಳಿದು ಬರುತ್ತದೆ.

ಕನಕಪುರ ತಾಲೂಕಿನಲ್ಲಿ ಬೆರಳಣಿಕೆಯಷ್ಟಿದ್ದ ಜೈನ ಕೇಂದ್ರಗಳಿಗೆ ಗಂಗರ ನಂತರ ಬೆಂಬಲ ದೊರೆಂಪದೆ ಶೈವ ಮತ್ತು ವೈಷ್ಣವ ಧರ್ಮಗಳು ಜನರ ಮೇಲೆ ಹೆಚ್ಚು ಪ್ರಭಾವ ಬೀರಿವೆ

ಎಂದು ಕಾಣಿಸುತ್ತದೆ. ಇದರಿಂದ ಈ ಜೈನ ಕೇಂದ್ರಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡರೂ ಕೂಡ ಅಲ್ಪಪ್ರಮಾಣದ ಜೈನರು ಇಂದಿಗೂ ಇಲ್ಲಿ ನೆಲೆಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಉತ್ತರ ಭಾರತದ ಕಡೆಯಿಂದ ಬಂದು ವ್ಯಾಪಾರ ವಾಣಿಜ್ಯದಲ್ಲಿ ತೊಡಗುತ್ತಿರುವ ಕೆಲವು ಜೈನ ಕುಟುಂಬಗಳು ಕನಕಪುರ ಪಟ್ಟಣದಲ್ಲಿ ನೆಲೆಗೊಂಡಿವೆ.

ಶೈವ ಧರ್ಮ

ದೇವತೆಗಳೆಂದರೆ ಅದ್ಭುತಗಳ ವ್ಯಕ್ತೀಕರಣ ಎಂದು ಮ್ಯಾಕ್ ಗ್ರೇಗರ್ ಅಭಿಪ್ರಾಯ ಪಡುತ್ತಾರೆ. ಹಿಂದೂಗಳು ಸೃಷ್ಟಿಸಿದ ಅಸಂಖ್ಯಾತ ದೇವರುಗಳಲ್ಲಿ ಶಿವ, ವಿಷ್ಣು, ಬ್ರಹ್ಮನನ್ನು ತ್ರಿಮೂರ್ತಿಗಳೆಂದು ಲಯ, ಸ್ಥಿತಿ, ಸೃಷ್ಟಿಯ ಕಾರಣೀಕರ್ತರೆಂದು ನಂಬಲಾಗಿದೆ. ಶಿವನನ್ನು ಇತರ ದೈವಗಳೆಲ್ಲಾ ಶ್ರೇಷ್ಠವೆಂದು ಭಾವಿಸಿದ ವೈದಿಕ ವರ್ಗದ ಒಂದು ಗುಂಪನ್ನು ಶೈವರೆಂದು ಕರೆಯಲಾಗಿದೆ. ಶೈವ ಧರ್ಮ ಭಾರತದ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ವೇದಪೂರ್ವ ಹರಪ್ಪ-ಮೊಹೆಂಜೋದಾರೋಗಳ ಕಾಲದಿಂದಲೂ ಶಿವನ ಆರಾಧನೆ ಬೆಳೆದು ಸಾಗಿ ಬಂದಿದೆ. ಹೀಗೆ ವಿವಿಧ ಕಾಲಘಟ್ಟಗಳಲ್ಲಿ ಶಿವನು ಅನೇಕ ರೂಪವನ್ನು ಪಡೆದು ಕೊಂಡಿರುವನು. ಋಗ್ವೇದದಲ್ಲಿ ಕಾಣಿಸಿಕೊಳ್ಳುವ ರುದ್ರ ಕ್ರಮೇಣ ಶಿವನಾಗಿ ಶೈವಧರ್ಮೀಯರಿಗೆ ಆರಾಧ್ಯ ದೈವವಾಗಿ ಬೆಳೆದ.[೧೦] ಶಿವನನ್ನು ಲಿಂಗರೂಪಿ ಸಾಕಾರ ಮತ್ತು ನಿರಾಕಾರವಾಗಿ ಆರಾಧಿಸುವ ರೂಢಿ ಬೆಳೆದು ಬಂದಿದೆ. ದಕ್ಷಿಣ ಭಾರತದಲ್ಲಿ ಹೆಚ್ಚು ಪ್ರಚಲಿತವಿರುವ ಶೈವ ಧರ್ಮದ ಕಾಪಾಲಿಕ ಮತ್ತು ಕಾಳಮುಖ ಪಾಶುಪತ ಪಂಥ ಎಂಬ ಪಂಗಡವಾಗಿದೆ.[೧೧] ಕರ್ನಾಟಕದಲ್ಲಿ ಶೈವ ಧರ್ಮದ ಇತಿಹಾಸವನ್ನು ಗಮನಿಸಿದರೆ ಕಾಪಾಲಿಕರ ಸಂಖ್ಯೆ ಕಡಿಮೆಯಿದ್ದು ಕಾಳಮುಖ ಪಾಶುಪತರ ಸಂಖ್ಯೆ ಹೆಚ್ಚಾಗಿದೆ.

ಕನಕಪುರದಲ್ಲಿ ಪ್ರಾಚೀನ ಕಾಲದಿಂದಲೂ ಶೈವ ಧರ್ಮ ತನ್ನ ಪ್ರಭಾವ ಬೀರಿತ್ತು ಎಂದು ದೇವಾಲಯ ಮತ್ತು ಶಾಸನಗಳ ಆಧಾರದಿಂದ ತಿಳಿಯಬಹುದು. ಮಳಗಾಳು ಮಹದೇಶ್ವರ ದೇವಾಲಯದ ಬಳಿಯಿರುವ ಶಾಸನ ದೊಡ್ಡ ಕಲ್ಲಿಮಾಯ ನಾಯಕ ಎಂಬ ಪಾಳೆಯಗಾರ ಈ ದೇವಾಲಯಕ್ಕೆ ದಾನ ನೀಡಿರುವುದನ್ನು ಸೂಚಿಸುತ್ತದೆ. ವಿರೂಪ ಸಂದ್ರದಲ್ಲಿರುವ ಮೈಸೂರು ಒಡೆಯರ ಕಾಲದ ಶಾಸನದಲ್ಲಿ ವಿರೂಪ ಸಮುದ್ರ ಗ್ರಾಮವನ್ನು ಮಳಗಾಳು ಮಹದೇಶ್ವರ ದೇವಾಲಯಕ್ಕೆ ದಾನ ಬಿಟ್ಟಿರುವುದನ್ನು ಗಮನಿಸಿದರೆ ಶೈವ ಧರ್ಮದ ಪ್ರಭಾವವನ್ನು ಇಲ್ಲಿ ಕಾಣಬಹುದು. ಮಳಗಾಳು ಮಹದೇಶ್ವರ ದೇವಾಲಯಗಳನ್ನು ಗಮನಿಸಿದರೆ ಕನಕಪುರ ಪ್ರಾಚೀನ ಕಾಲದಿಂದಲೂ ಶೈವ ಧರ್ಮದ ಚಟುವಟಿಕೆಗಳ ಕೇಂದ್ರವಾಗಿತ್ತು ಎಂಬ ವಿಚಾರ ಸ್ಪಷ್ಟವಾಗುತ್ತದೆ.

ದೇಗುಲ ಮಠದ ಶಿವಾಲಯದಲ್ಲಿ ಪ್ರತಿವರ್ಷ ನಡೆಯುವ ಲಕ್ಷ ದೀಪೋತ್ಸವದಲ್ಲಿ ಪಟ್ಟಣದ ಜನ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ ಶಿವನ ಆರಾಧನೆ ಮಾಡುತ್ತಾರೆ. ತಾಲೂಕಿನ ಎಲ್ಲಾ ಜನ ಸಮುದಾಯಗಳು ಧರ್ಮ ಭೇದವಿಲ್ಲದೆ ಚಾಮರಾಜನಗರ ಜಿಲ್ಲೆಯ

ಮಹದೇಶ್ವರನ ಬೆಟ್ಟಕ್ಕೆ ಕಾಲುನಡಿಗೆಯಲ್ಲಿ ಹೋಗುತ್ತಾರೆ. ಹೀಗೆ ಹೋಗುವರಿಗೆ ದಾರಿಯ ಮಧ್ಯದಲ್ಲಿ ಅನ್ನದಾನ, ಅರವಟ್ಟಿಗೆ ಮೊದಲಾದ ಪೂರೈಕೆಗಳನ್ನು ಮಾಡುತ್ತಾರೆ. ಈ ಎಲ್ಲಾ ಅಂಶಗಳಿಂದ ಶೈವ ಧರ್ಮಕ್ಕೆ ಸ್ಥಳೀಯರ ಪ್ರೋತ್ಸಾಹ ಗಣನೀಯವಾಗಿದೆ ಎಂದು ತಿಳಿಯುತ್ತದೆ.

ವೈಷ್ಣವ

ಪ್ರಾಚೀನ ಕರ್ನಾಟಕದ ಚಾತುವರ್ಣ ಪದ್ಧತಿಯಲ್ಲಿ ಅತ್ಯಂತ ಶ್ರೇಷ್ಠ ಸ್ಥಾನ ಬ್ರಾಹ್ಮಣರದಾಗಿತ್ತು. ಕ್ರಿ.ಶ. ಆರಂಭದಲ್ಲೇ ಕರ್ನಾಟಕದಲ್ಲಿ ವೈಷ್ಣವ ಧರ್ಮ ಪ್ರಚಲಿತವಿದ್ದಂತೆ ಕಂಡು ಬರುತ್ತದೆ. ಪ್ರಾಯಶಃ ಈ ಧರ್ಮ ವೈದಿಕ ಪ್ರಭಾವಿತ ಭಾಗವತ ಧರ್ಮವಿರಬೇಕು. ಶಾಸನಗಳಲ್ಲಿ ಭಾಗವತ, ವೈಷ್ಣವ ಎಂಬ ಉಕ್ತಿಗಳು ದೊರೆಯುತ್ತವೆ. ಹೊಯ್ಸಳ ರಾಜ ವಿಷ್ಣುವರ್ಧನ ಈ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ್ದರಿಂದ ಕರ್ನಾಟಕದಲ್ಲಿ ಹೆಚ್ಚು ಪ್ರಚಾರವಾಯಿತು. ವಿಷ್ಣುವಿನ ಸರ್ವಶ್ರೇಷ್ಠತೆಯನ್ನು ಪ್ರತಿಪಾದಿಸುವ ಪರಂಪರೆಯೇ ವೈಷ್ಣವ ಪಂಥ ಮುಖ್ಯ ಆಶಯ. ದ್ವೈತ ಮತ್ತು ವಿಶಿಷ್ಠಾದ್ವೈತ ಇದರ ಎರಡು ಶಾಖೆಗಳು ಕರ್ನಾಟಕದಲ್ಲಿ ಪ್ರಸಿದ್ಧಿಗೆ ಬಂದವು. ರಾಮಾನುಜಾಚಾರ್ಯರು ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದು ಹೊಯ್ಸಳ ದೊರೆ ವಿಷ್ಣುವರ್ಧನನ ಆಶ್ರಯ ಪಡೆದು ಮೇಲುಕೋಟೆಯಲ್ಲಿ ನೆಲೆಸಿದರು. ಶ್ರವಣಬೆಳಗೊಳದ ಜೈನ ಬರಹಗಳ ಪ್ರಕಾರ ರಾಮಾನುಜರು ಹೊಯ್ಸಳ ವಿಷ್ಣುವರ್ಧನನ್ನು ಶ್ರೀವೈಷ್ಣವ ಮತಕ್ಕೆ ಮತಾಂತರಿಸಿದರು.[೨]

ಈ ನಾಡಿನ ಕ್ರಿಸ್ತಶಕ ಪ್ರಾರಂಭದಿಂದಲೂ ಮೇಲಿನ ಎರಡು ಶಾಖೆಗಳ ಪ್ರಭಾವ ಗೋಚರಿಸುತ್ತದೆ. ಕನ್ನಡ ನಾಡಿನ ಹಲ್ಮಿಡಿಶಾಸನ(ಕ್ರಿ.ಶ. ೪೫೦)ರ ಶಾಸನವು ಐತಿಹಾಸಿಕ ದೃಷ್ಟಿಯಿಂದ ವೈಷ್ಣವ ಧರ್ಮದ ಪ್ರಥಮ ಆಕರವಾಗಿದೆ ಕನ್ನಡನಾಡನ್ನಾಳಿದ ಕದಂಬ, ಚಾಳುಕ್ಯ, ಹೊಯ್ಸಳ, ವಿಜಯನಗರ ಮೊದಲಾದ ಅರಸುಮನೆತನಗಳು ವೈಷ್ಣವ ಧರ್ಮದ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿದ ವಿಚಾರ ಗೋಚರಿಸುತ್ತದೆ. ಕ್ರಿ.ಶ. ಆರಂಭದಿಂದ ೧೨ನೇ ಶತಮಾನದವರೆಗೂ ಶೈವ ಮತ್ತು ವೈಷ್ಣವ ಧರ್ಮಗಳು ಪರಸ್ಪರ ಸಾಮರಸ್ಯದಿಂದ ಬೆಳೆದು ಬಂದಿದೆ. ಪ್ರಸ್ತುತ ಅಧ್ಯಯನದ ಕನಕಪುರ ಪರಿಸರದಲ್ಲಿ ಸ್ಥಾಪಿಸಲಾಗಿರುವ ರಂಗನಾಥ ದೇವಾಲಯ ವೈಷ್ಣವ ಪರಂಪರೆಯ ದೇವಾಲಯವಾಗಿದೆ. ಸುಂಡಘಟ್ಟದ ರಂಗನಾಥ ದೇವಾಲಯ, ಕೋಟೆ ಆಂಜನೇಯ, ಹೊಳೆ ಆಂಜನೇಯ ದೇವಾಲಯಗಳು, ಮುತ್ತತ್ತಿಯ ಮುತ್ತುರಾಯ ದೇವಾಲಯ, ವೈಷ್ಣವ ಪಂಥಕ್ಕೆ ಪ್ರತ್ಯಕ್ಷ ಸಾಕ್ಷಿಗಳಾಗಿವೆ.

ತಮಿಳುನಾಡಿನಿಂದ ಕನ್ನಡ ನಾಡಿಗೆ ಹೊರಟ ರಾಮಾನುಜರು ಪ್ರಾಯಶಃ ಕನಕಪುರ ಮಾರ್ಗದಲ್ಲಿ ಬಂದಿರಬಹುದು. ಇದರಿಂದ ವೈಷ್ಣವ ಧರ್ಮ ಸ್ಥಳೀಯರ ಮೇಲೆ ಹೆಚ್ಚು ಪ್ರಭಾವ ಬೀರುವಂತೆ ಕಾಣುತ್ತದೆ. ಬಿಳಿಕಲ್ಲು ಬೆಟ್ಟದ ಗುಹೆಯೊಂದರಲ್ಲಿ ದಾಸಪ್ಪ ಎಂಬ ವ್ಯಕ್ತಿ ವಾಸವಾಗಿದ್ದ ಅವನು ಹಣೆಯಲ್ಲಿ ಮೂರುನಾಮ, ಭುಜಗಳಲ್ಲಿ ಮೂರು ನಾಮ ಹಾಕಿಕೊಳ್ಳುತ್ತಿದ್ದನಂತೆ ಎಂಬ ಸ್ಥಳೀಯರ ಐತಿಹ್ಯವೂ ಉಂಟು. ದಾಸಪ್ಪ ವಾಸವಾಗಿದ್ದರು

ಎನ್ನುವ ಗುಹೆಯಲ್ಲಿ ಇಂದು ರಂಗನಾಥ ದೇವರ ಆರಾಧನೆ ಕಾಣಬಹುದು. ಇದರಿಂದ ರಾಮಾನುಜರು ಇಲ್ಲಿ ಉಳಿದಿರಬಹುದು ಎಂದು ಅಭಿಪ್ರಾಯ ಪಡಬಹುದು.

ವೀರಶೈವ ಧರ್ಮ

ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಕ್ರಾಂತಿಯಿಂದ ಕರ್ನಾಟಕದಲ್ಲಿ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಂದೋಲನವಾಯಿತು. ಇದರಿಂದ ನಾಡಿನ ಮೂಲೆ ಮೂಲೆಗಳಿಗೆ ಶಿವಶರಣರು ಪ್ರಯಾಣಿಸಿ ತಮ್ಮ ನೆಲೆಗಳನ್ನು ಹುಡುಕಿಕೊಂಡರು. ಉತ್ತರದಿಂದ ಹೊರಟ ಶರಣರ ಗುಂಪು ದಕ್ಷಿಣ ಕರ್ನಾಟಕದ ಹಲವು ಕಡೆ ತಮ್ಮ ತಪೋ ಕೇಂದ್ರಗಳನ್ನು ಸ್ಥಾಪಿಸಿಕೊಂಡರು. ಇದೇ ಸಂದರ್ಭದಲ್ಲಿ ಕನಕಪುರ ಪರಿಸರಕ್ಕೆ ಬಂದ ಶಿವಶರಣರು ದೇಗುಲ ಮಠವನ್ನು ಸ್ಥಾಪಿಸಿಕೊಂಡು ವೀರಶೈವ ಧರ್ಮ ಪ್ರಚಾರ ಮಾಡಿದ್ದಾರೆ.

ನಿರಂಜನ ಸ್ವಾಮಿಗಳ ಗಣ ಸಮೂಹದ ನೂರೊಂದು ವಿರಕ್ತರಲ್ಲೊಬ್ಬರಾದ ಆದ್ಯ ನಿರ್ವಾಣ ಸ್ವಾಮಿಗಳು ದೇಗುಲ ಮಠದ ಪ್ರಥಮ ಮಠಾಧೀಶರು ಎಂದು ಹೇಳಲಾಗುತ್ತಿದೆ.[೧೩] ಆರು ಶತಮಾನಗಳಿಂದ ಈ ಪರಂಪರೆ ನಿರಂತರವಾಗಿ ನಡೆದುಕೊಂಡು ಬಂದಿದೆ. ಕನಕಪುರ ಪ್ರದೇಶದಲ್ಲಿ ವೀರಶೈವ ಧರ್ಮದ ಪ್ರಭಾವ ತಿಳಿಸಲು ಹಲವು ನಿದರ್ಶನಗಳು ಗ್ರಾಮೀಣರಲ್ಲಿ ಈಗಲೂ ಜನಜನಿತವಾಗಿವೆ. ವಿರುಪಸಂದ್ರ, ಕುರುಪೇಟೆ, ಮಳಗಾಳು ಮತ್ತು ಕನಕಪುರ ಪಟ್ಟಣದ ಕೊಲ್ಲಾಪುರದಮ್ಮ, ಮರಸನಾಡಮ್ಮ, ಬಾಣಂತಮ್ಮ ಗ್ರಾಮದೇವತೆಗಳ ತವರು ಮನೆ ದೇಗುಲ ಮಠ ಎಂದು ಹೇಳುವುದು ಇಲ್ಲಿನ ವಾಡಿಕೆಯಾಗಿದೆ. ಪ್ರತೀ ವರ್ಷ ಈ ಗ್ರಾಮದೇವತೆಗಳ ಜಾತ್ರೆಯ ಸಂದರ್ಭದಲ್ಲಿ ದೇಗುಲ ಮಠದಲ್ಲಿ ಆ ದೇವಿಯರಿಗೆ "ಸೋಗಲು ತುಂಬುವ" ಸಂಪ್ರದಾಯ ಇಂದಿಗೂ ಕಾಣಬಹುದು.

ಕ್ರಿ.ಶ. ೧೯೨೩ರಲ್ಲಿ ಬೆಂಗಳೂರಿನ ಗುರುದಾಸಪ್ಪ ಎಂಬ ವೃದ್ಧ ಭಕ್ತ ಆರ್ಥಿಕ ಸಹಾಯ ಮಾಡಿದ್ದಾರೆ.[೧೪] ಸ್ಥಳೀಯ ಭಕ್ತಮಂಡಳಿಯವರ ನೆರವಿನಿಂದ ಮಠದ ಗದ್ದುಗೆ ಕಟ್ಟಡಗಳು ಪುನರುಜ್ಜೀವನ ಹೊಂದಿದವು. ಈ ಪರಿಸರದಲ್ಲಿರುವ ವೀರಶೈವರು ಕನಕಪುರ ಪಟ್ಟಣದ ದೇಗುಲ ಮಠವನ್ನು ಕೇಂದ್ರವಾಗಿ ಮಾಡಿಕೊಂಡು, ತಾಲೂಕಿನ ಹಲವು ಕಡೆ ಮಠದ ಉಪಶಾಖೆಗಳನ್ನು ಸ್ಥಾಪಿಸಿಕೊಂಡಿದ್ದಾರೆ.

ಇಸ್ಲಾಂ ಧರ್ಮ

ಇಸ್ಲಾಂ ಎಂದರೆ ದೇವರ ಇಚ್ಛೆಗೆ ಶರಣಾಗುವುದು ಎಂದರ್ಥ. ಖುರಾನಿನಲ್ಲಿ ಈ ಧರ್ಮಕ್ಕೆ ಇಸ್ಲಾಂ ಎಂದು ಕರೆಯಲಾಗುತ್ತದೆ. "ಶಾಂತಿಯನ್ನು ಉಂಟು ಮಾಡುವ ಧರ್ಮವೇ ಇಸ್ಲಾಂ ಧರ್ಮ' ಎಂದರ್ಥ. ಈ ಧರ್ಮಕ್ಕೆ ಮಹಮದೀಯ ಅಥವಾ ಅಹಮ್ಮದೀಯ ಧರ್ಮವೆಂತಲೂ ಕರೆಯುತ್ತಾರೆ. ಇಸ್ಲಾಂ ಧರ್ಮದ ಮೂಲನೆಲೆ ಇಂದಿನ ಸೌದಿ ಅರೇಬಿಯಾದ ಪಶ್ಚಿಮ ಭಾಗದಲ್ಲಿರುವ ಮೆಕ್ಕಾನಗರ. ಮೆಕ್ಕಾ ಮತ್ತು ಮದೀನ ಇಸ್ಲಾಂ ಧರ್ಮದ ಪ್ರಮುಖ ಕೇಂದ್ರಗಳು. ಈ ಧರ್ಮವು ೭ನೇ ಶತಮಾನದ ಪೂರ್ವಾರ್ಧದಲ್ಲಿ ಉದಯವಾದರೂ ಅತ್ಯಲ್ಪ

ಕಾಲದಲ್ಲೇ ಶೀಘ್ರವಾಗಿ ವಿಶ್ವದ ವಿವಿಧ ಕಡೆ ಹರಡಿತು. ದಕ್ಷಿಣ ಭಾರತಕ್ಕೆ ಅಲ್ಲಾವುದ್ದೀನನ ಕಾಲದಲ್ಲಿ ಇಲ್ಲಿಗೆ ಕಾಲಿಟ್ಟಿತು.

ಕನಕಪುರ ಪರಿಸರದಲ್ಲಿ ಇಸ್ಲಾಂ ಧರ್ಮ ವ್ಯಾಪಕವಾಗಿ ಹರಡಿದ್ದು, ಬಹುಸಂಖ್ಯಾತರಾದ ಹಿಂದೂ ಧರ್ಮೀಯರನ್ನು ಬಿಟ್ಟರೆ ಮುಸ್ಲಿಂ ಧರ್ಮೀಯರೆ ಹೆಚ್ಚಾಗಿದ್ದಾರೆ. ತಮ್ಮ ಧಾರ್ಮಿಕ ಆಚರಣೆಗಳನ್ನು ಮಾಡಲು ಮಸೀದಿಗಳನ್ನು ಹಾಗೂ ದರ್ಗಾಗಳನ್ನು ನಿರ್ಮಿಸಿಕೊಂಡು ಹಲವು ನಂಬಿಕೆ ಆಚರಣೆಗಳನ್ನು ಸಂಪ್ರದಾಯ ಬದ್ಧವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಕನಕಪುರ ಪಟ್ಟಣದಲ್ಲಿ ಹಿಂದೂ ಮತ್ತು ಮುಸ್ಲಿಮರು ಸಾಮರಸ್ಯದ ಜೀವನ ನಡೆಸುತ್ತಿದ್ದು ಯಾವುದೇ ಕೋಮುಗಲಭೆ ಅವಕಾಶ ಮಾಡಿಕೊಡದಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಕ್ರೈಸ್ತ ಧರ್ಮ

ಪ್ರಪಂಚದ ಪ್ರಮುಖ ಧರ್ಮಗಳಲ್ಲೊಂದಾದ ಕ್ರೈಸ್ತ ಧರ್ಮವು, ಯೇಸು ಕ್ರಿಸ್ತನ ಉಪದೇಶದ ಆಧಾರದ ಮೇಲೆ ಹುಟ್ಟಿ ಬೆಳೆದು ಪ್ರಪಂಚದಾದ್ಯಂತ ಹರಡಿತು. ಈ ಧರ್ಮವನ್ನು ಅನುಸರಿಸುವವರಿಗೆ ಕ್ರೈಸ್ತರು ಎಂದು ಕರೆಯಲಾಗುತ್ತದೆ. ೨೦೦೦ ವರ್ಷಗಳ ಹಿಂದೆ ಪ್ಯಾಲಸ್ತೀನ್ ದೇಶದ ಆರಂಭವಾಗಿ ಈಗ ಪ್ರಪಂಚದ ಎಲ್ಲಾ ಕಡೆ ಹಬ್ಬಿಕೊಂಡಿರುವ ಕ್ರೈಸ್ತ ಧರ್ಮ ಸುಮಾರು ೮೫೦ ದಶಲಕ್ಷ ಅನುಯಾಯಿಗಳನ್ನು ಒಳಗೊಂಡಿದೆ.[೨೫] ೧೬ನೇ ಶತಮಾನದ ಅನಂತರ ಅನೇಕ ಪಂಗಡಗಳಾಗಿ ವಿಭಾಗಿಸಲ್ಪಟ್ಟಿದ್ದು ಬೇರೆ ಬೇರೆ ಸಾಂಸ್ಕೃತಿಕ ಹಿನ್ನೆಲೆಗಳಿರುವ ಜನಾಂಗಗಳ ಮಧ್ಯೆ ಇರುವುದಾದರೂ ಈ ಧರ್ಮದಲ್ಲಿ ತಾತ್ವಿಕ ಏಕತೆ ಇದೆ. ಕ್ರೈಸ್ತ ಧರ್ಮದ ಪ್ರಚಾರಕರು ೧೭ನೇ ಶತಮಾನದಲ್ಲಿ ಹಿಂದೂಸ್ತಾನದ ಕಡೆ ಬರತೊಡಗಿದರು.

ಬ್ರಿಟೀಷರು ಕ್ರೈಸ್ತ ಮಿಷನರಿಗಳಿಗೆ ನೀಡಿದ ಪ್ರೋತ್ಸಾಹ ಮತ್ತು ಸಹಾಯದಿಂದ ಭಾರತದ ಹಲವು ಕಡೆಗಳಲ್ಲಿ ಚರ್ಚ್ ಮತ್ತು ಕ್ರೈಸ್ತ ಮಿಷನ್‌ಗಳನ್ನು ಸ್ಥಾಪನೆಗೊಂಡವು. ಕರ್ನಾಟಕದಲ್ಲಿ ಕ್ರೈಸ್ತ ಮಿಷನರಿಗಳು ಶಾಲಾ, ಕಾಲೇಜುಗಳನ್ನು ತೆರೆದು ಆಂಗ್ಲ ಶಿಕ್ಷಣವನ್ನು ಸ್ಥಳೀಯರಿಗೆ ನೀಡಿ ಜನಪ್ರಿಯತೆ ಪಡೆದು ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ಸಂಚಲನ ಮೂಡಿಸುತ್ತಿವೆ. ಪ್ರಸ್ತುತ ಕನಕಪುರ ಪಟ್ಟಣದಲ್ಲಿ ಕ್ರೈಸ್ತ ಧರ್ಮ ಏಳಿಗೆಯಲ್ಲಿದ್ದು ಚರ್ಚ್‌ಗಳನ್ನು ಹಾಗೂ ಶಿಕ್ಷಣ ಕೇಂದ್ರಗಳನ್ನು ತೆರೆದು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದ್ದು, ತಾಲೂಕಿನಾದ್ಯಂತ ವ್ಯಾಪಕವಾಗಿ ಬೆಳೆಯುತ್ತಿದೆ.

೩.೩. ಆರ್ಥಿಕ ಸ್ಥಿತಿಗತಿ

ಯಾವುದೇ ಪ್ರದೇಶದ ಸಮಗ್ರ ಪ್ರಗತಿ ಅಲ್ಲಿನ ಆರ್ಥಿಕ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಆಯಾ ಪ್ರದೇಶಗಳಲ್ಲಿ ಲಭ್ಯವಿರುವ ನೈಸರ್ಗಿಕ ಸಂಪತ್ತು, ಮಾನವ ಸಂಪತ್ತು, ಕೃಷಿ, ಕೈಗಾರಿಕೆ, ವ್ಯಾಪಾರ - ವ್ಯವಹಾರ, ಬ್ಯಾಂಕಿಂಗ್, ಸಾರಿಗೆ ಸಂಪರ್ಕ, ನಗರೀಕರಣ, ಉದ್ಯೋಗ, ಕೂಲಿ, ಶಲಾದಾಯ, ಬೆಲೆಗಳು ಮುಂತಾದ ಹಲವು ರಂಗಗಳಲ್ಲಿ ಕಂಡು ಬರುತ್ತದೆ. ಇವುಗಳ

ಪರಿಕಿತಗಳನ್ನು ಗಮನಿಸಿದರೆ ಆರ್ಥಿಕ ಪ್ರವೃತ್ತಿಗಳು ಆಯಾ ಪ್ರದೇಶಗಳ ಆರ್ಥಿಕ ಮುನ್ನಡೆಯನ್ನು ನಿರ್ಧರಿಸುತ್ತವೆ. ಲಭ್ಯವಿರುವ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳ ಸಮಗ್ರ ಬಳಕೆಗಳು ಆರ್ಥಿಕತೆಯ ಮೂಲ ಅಂಶಗಳಾಗಿವೆ. ಮೂಲಭೂತ ಸೌಕರ್ಯ, ತಂತ್ರಜ್ಞಾನ ಮುಂತಾದವುಗಳು ಆರ್ಥಿಕ ಪ್ರವೃತ್ತಿಯ ದಿಸೆಯನ್ನು ನಿರ್ದೇಶಿಸುವ ಪ್ರಧಾನ ಅಂಶಗಳಾಗಿದ್ದು, ಆರ್ಥಿಕ ಅಭಿವೃದ್ಧಿ ಸಾಧಿಸುವಲ್ಲಿ ಸಹಕಾರಿಯಾಗುತ್ತವೆ.

ನೀರಾವರಿ :- ಪ್ರಾಚೀನ ಕಾಲದಿಂದಲೂ ಇಲ್ಲಿನ ನೀರಾವರಿ ವ್ಯವಸ್ಥೆ ಮುಖ್ಯವಾಗಿ ನದಿ, ಕೆರೆ, ಬಾವಿಗಳನ್ನು ಅವಲಂಬಿಸಿತ್ತು. ಜನರು ಕೆರೆ, ಬಾವಿ, ಕಾಲುವೆಗಳನ್ನು ನಿರ್ಮಿಸುವುದು ಶ್ರೇಷ್ಠವೆಂದು ಭಾವಿಸಿದ್ದರು. ಬಾವಿ, ಕೆರೆ, ಕಾಲುವೆಗಳಿಂದ ಜಮೀನಿಗೆ ನೀರನ್ನು ಸಾಗಿಸಿ ಕೃಷಿಗೆ ಅವಕಾಶ ಕಲ್ಪಿಸಲಾಗಿತ್ತು. ಕನಕಪುರ ಪಟ್ಟಣದಲ್ಲಿ ಜಮೀನ್ದಾರರು, ಶ್ರೀಮಂತರು, ಕೆರೆ, ಬಾವಿಗಳನ್ನು ಕಟ್ಟಿಸಿದ್ದಾರೆ. ಪ್ರಸ್ತುತ ಪಟ್ಟಣದಲ್ಲಿ ಮೂರು ಕೆರೆಗಳು ಕಂಡು ಬಂದಿವೆ. ಇವು ಮಳೆಯ ಆಶ್ರಿತ ಕೆರೆಗಳು, ಕೆರೆ ಎಂದೊಡನೆ ಮೊದಲಿಗೆ ನೆನಪಾಗುವುದು ಲಕ್ಷ್ಮೀಧರಾಮಾತ್ಯನ ಶಾಸನ ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾ - ಗಾರವಂ ಮೂಡಿಸು. ಪ್ರಸ್ತುತ ಪರಿಸರದಲ್ಲಿ ಪೇಟೆಕೆರೆ, ಕೆಂಕೇರಮ್ಮನ ಕೆರೆ, ನಾರಾಯಣಪ್ಪನ ಕೆರೆಗಳು ಈ ಭಾಗದ ಜನತೆಗೆ ನೀರಿನ ಸೌಕರ್ಯಗಳಿಗೆ ಸಹಕಾರಿಯಾಗಿವೆ.

ಈ ಪಟ್ಟಣಕ್ಕೆ ಹಿಂದೆ ಕಾಣಿಕಾರನಹಳ್ಳಿ ಎಂಬ ಹೆಸರಿತ್ತು ಎಂದು ಕ್ರಿ.ಶ. ೧೩೧೭ರ ನಾಯಕನಹಳ್ಳಿ ಶಾಸನ, ೧೩೭೯ ಅಚ್ಚಲು ಶಾಸನ ಮತ್ತು ೧೬೭೨ರ ಮಳಗಾಳರ ಶಾಸನಗಳಲ್ಲಿ ಉಲ್ಲೇಖಗಳಿವೆ. ಕಾಣಿ ಎಂದರೆ ಗದ್ದೆ, ಸುಂಕ, ನಾಣ್ಯ ಎಂಬ ಅರ್ಥವಿದ್ದು, ಕರಣಿಕ ಎಂದರೆ ಭೂಮಾಲೀಕ, ಲೆಖ್ಖಿಗ, ಜಮೀನ್ದಾರ ಎಂಬ ಅರ್ಥವಿದೆ. ಇಂತಹ ಆರ್ಥಿಕ ಅಂಶಗಳ ಹಿನ್ನೆಲೆಯಿಂದಲೇ ಕಾಣಿಕಾರನಹಳ್ಳಿ ಹೆಸರು ಬಂದಿರಬಹುದಾದ ಸಾಧ್ಯತೆಯಿದೆ. ಪಾಂಚಾಳ ಸಮುದಾಯಗಳ ಉಲ್ಲೇಖಗಳು ಶಾಸನಗಳಲ್ಲಿ ಕಂಡು ಬಂದಿರುವುದರಿಂದ ಕೃಷಿ ಉಪಕರಣಗಳ ತಯಾರಿಕೆಯ ಕುಲುಮೆಗಳು ಪಟ್ಟಣದ ಬೂದಿಕೇರಿಯಲ್ಲಿ ಕಂಡು ಬರುತ್ತವೆ. ಕೃಷಿ ಇಲ್ಲಿನ ಪ್ರಧಾನ ಕಸುಬಾಗಿತ್ತು ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತವೆ. ಪ್ರತಿ ಗುರುವಾರ ನಡೆಯುವ ಸಂತೆಗೆ ಪ್ರಾಚೀನತೆಯಿದ್ದು ವಸ್ತುಗಳನ್ನು ಸಂತೆಯಲ್ಲಿ ಮಾರಾಟ ಮಾಡಲು ಸುಂಕ ಕಟ್ಟಬೇಕಿತ್ತು.

ಬೆಳೆಗಳು :- ಕನಕಪುರ ಪ್ರದೇಶದ ಪ್ರಮುಖ ಬೆಳೆಗಳೆಂದರೆ ರಾಗಿ, ನೆಲಗಡಲೆ, ಹಿಪ್ಪುನೇರಳೆ, ಭತ್ತ ಹಾಗೂ ದ್ವಿದಳ ಧಾನ್ಯಗಳು. ನೀರಾವರಿ ಲಭ್ಯವಿರುವ ಕಡೆಗಳಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದೆ. ಕೆರೆ ಮತ್ತು ಬಾವಿಗಳಿಂದ ನೀರಾವರಿ ಸೌಲಭ್ಯ ಸೃಷ್ಟಿಸಿಕೊಂಡು ಭತ್ತ ಮತ್ತು ಹಿಪ್ಪುನೇರಳೆ ಬೆಳೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ಈ ಪ್ರದೇಶ ಜನರು ಇತ್ತೀಚಿನ ದಿನಗಳಲ್ಲಿ ರೇಷ್ಮೆ ಬೆಳೆಯನ್ನು ಹೆಚ್ಚು ಅವಲಂಬಿಸಿದ್ದು ಅವರ ಆರ್ಥಿಕತೆಯನ್ನು ಹೆಚ್ಚಿಸುತ್ತಿದೆ. ತೆಂಗು, ಬಾಳೆ, ಮಾವು, ಸಪೋಟ, ದ್ರಾಕ್ಷಿ ಮೊದಲಾದ ಬೆಳೆಗಳನ್ನು ನೀರಾವರಿ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ.

ತೋಟಗಾರಿಕೆ :- ಕನಕಪುರಪಟ್ಟಣ, ವಿವೇಕಾನಂದ ನಗರ ಪಕ್ಕದಲ್ಲಿ ಪೇಟೆ ಕೆರೆಯ ಬಳಿ ೧೧ ಎಕರೆ ವಿಸ್ತೀರ್ಣದಲ್ಲಿ ವಿಶಾಲವಾದ ತೋಟಗಾರಿಕೆ ಇಲಾಖೆ ಇದ್ದು, ಅದರ ಸಂಪೂರ್ಣ ಹೊಣೆ ಬೆಂಗಳೂರಿನ ಕಬ್ಬನ್‌ಪಾರ್ಕ್ ಆಡಳಿತದ ಅಧೀನದಲ್ಲಿದೆ. ಈ ತೋಟದಲ್ಲಿ ಅನೇಕ ತಳಿಯ ಹಣ್ಣಿನ ಸಸಿಗಳನ್ನು ಕಸಿ ಮಾಡಿ ಮಾರಾಟ ಮಾಡಲಾಗುವುದು. ಈ ಇಲಾಖೆಯ ವತಿಯಿಂದ ರೈತರಿಗೆ ಗಿಡಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು.

ಕೂಲಿ :- ಬಹುಪಾಲು ಬೇಸಾಯ ರೈತರಿಂದ ನಡೆಯುತ್ತಿತ್ತು. ಇಲ್ಲಿನ ಜಮೀನ್ದಾರರು ಕೆಲವು ಕೂಲಿಯ ಆಳುಗಳನ್ನು ನೇಮಿಸಿಕೊಂಡಿದ್ದರು. ಒಬ್ಬ ಗಂಡಾಳಿಗೆ ಕೂಲಿ ಸಂಭಾವನೆಯಾಗಿ ವರ್ಷಕ್ಕೆ ೪ ಖಂಡುಗ (೨೦೦ ಸೇರು) ರಾಗಿಯನ್ನು ನೀಡಲಾಗುತ್ತಿತ್ತು. ತಳಸಮುದಾಯದವರೇ ಹೆಚ್ಚು ಕೂಲಿ ಕಾರ್ಮಿಕರಾಗಿದ್ದಾರೆ. ಜಮೀನ್ದಾರರ ಜಮೀನಿನಲ್ಲಿ ದಿನಗೂಲಿ ಮಾಡುವುದು, ಗುಡಿ ಕೈಗಾರಿಕೆಗಳಲ್ಲಿ ದುಡಿಯುವುದೇ ಇವರ ಜೀವನಾಂಶಕ್ಕೆ ಆಧಾರವಾಗಿದೆ. ಗ್ರಾಮಗಳಿಂದ ಉದ್ಯೋಗ ಹರಸಿ ಬಂದಿರುವ ನೂರಾರು ಕುಟುಂಬಗಳು ದಿನಗೂಲಿ ಮಾಡಿ ಜೀವನ ಸಾಗಿಸುತ್ತಿವೆ.

ಕಂದಾಯ ವ್ಯವಸ್ಥೆ :- ಕಂದಾಯವನ್ನು ಧಾನ್ಯ ಮತ್ತು ದ್ರವದ ರೂಪದಲ್ಲಿ ವಸೂಲು ಮಾಡಲಾಗುತ್ತಿತ್ತು. ವಿವಿಧ ಕಸುಬುಗಳನ್ನು ಮಾಡುವವರ ಮೇಲೆ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ನೇಕಾರರ ಮೇಲೆ 'ಮಗ್ಗದೆರಿಗೆ' ಗಾಣಿಗರ ಮೇಲೆ 'ಗಾಣದೆರಿಗೆ' ತೋಟಗಾರರ ಮೇಲೆ 'ತೋಟದ ಸುಂಕ', ಮಾರ್ಗ ಸುಂಕ, ವ್ಯಾಪಾರದ ವಸ್ತುಗಳ ಮೇಲೆ ವಿಧಿಸುತ್ತಿದ್ದ ಸುಂಕ ಮೊದಲಾದವು ಆದಾಯದ ಮೂಲಗಳಾಗಿದ್ದವು. ಭೂಕಂದಾಯವು ರಾಜ್ಯದ ಮುಖ್ಯ ಆದಾಯದ ಮೂಲಗಳಾಗಿದ್ದವು. ಭೂಕಂದಾಯವು ರಾಜ್ಯದ ಮುಖ್ಯ ಆದಾಯವಾಗಿದ್ದು, ಪಾಳೆಯಗಾರರ ಅವಧಿಯಲ್ಲಿ ಭೂಮಿಯ ಹುಟ್ಟುವಳಿಯ ಮೂರನೇ ಒಂದು ಭಾಗವನ್ನು ಮೀರುತ್ತಿರಲಿಲ್ಲ. ಇವರು 'ರಸ್ತು' ಎಂಬ ಕಂದಾಯವನ್ನು ವಸೂಲಿ ಮಾಡುತ್ತಿದ್ದರು. ಜೊತೆಗೆ ಗಾವುಂಡ, ಸುಂಕ, ಪೆರ್ಜುಂಕ, ವಡ್ಡರಾಹುಳ ಪನ್ನಯದ ಸುಂಕ ಮೊದಲಾದ ತೆರಿಗೆಗಳನ್ನು ಸಂಗ್ರಹಿಸುತ್ತಿದ್ದರು.[೧೬]

ಕೈಗಾರಿಕೆ :- ಕನಕಪುರದಲ್ಲಿ ಪ್ರಾಚೀನ ಕಾಲದಿಂದಲೂ ಗೃಹಕೈಗಾರಿಕೆಗಳು ನಡೆದುಕೊಂಡು ಬಂದಿದ್ದು, ತಾಲೂಕಿನ ಆರ್ಥಿಕ ವ್ಯವಸ್ಥೆಯಲ್ಲಿ ಸಮತೋಲನವನ್ನು ಕಾಪಾಡುವಲ್ಲಿ ಕೃಷಿಯಷ್ಟೇ ಪ್ರಧಾನ ಪಾತ್ರ ವಹಿಸಿವೆ. ಈ ಕೈಗಾರಿಕೆಗಳು ಪಟ್ಟಣದ ಜನರಿಗೆ ಸ್ವಾವಲಂಬಿ ಆರ್ಥಿಕ ಜೀವನಕ್ಕೆ ಸಹಕಾರಿಯಾಗಿದ್ದವು. ಪ್ರತಿಯೊಂದು ಸಮುದಾಯವು ತಮಗೆ ಬೇಕಾಗಿದ್ದ ಪದಾರ್ಥಗಳನ್ನು ಸ್ವತಃ ತಯಾರಿಸಿಕೊಂಡು ನೆಮ್ಮದಿಯ ಸಂತೃಪ್ತ ಜೀವನ ನಡೆಸುತ್ತಿದ್ದರು. ಪಟ್ಟಣದ ಮೇಗಳ ಬೀದಿಯು ನೇಯ್ಗೆ ಕೈಗಾರಿಕೆಗಳ ಕೇಂದ್ರವಾಗಿದೆ. ದೇವಾಂಗಶೆಟ್ಟಿ ಎಂಬ ಜನಾಂಗದವರು ಈ ವೃತ್ತಿಯಲ್ಲಿ ಹೆಚ್ಚು ತೊಡಗಿದ್ದರು. ಫ್ರಾನ್ಸಿಸ್ ಬುಕನನ್ ಪಟ್ಟಣದಲ್ಲಿ ನೇಯ್ಗೆ ವೃತ್ತಿಯನ್ನು ಅವಲಂಬಿಸಿದ್ದವರ ಪ್ರತಿಯೊಂದು ಮನೆಯು ಜವಳಿ ತಯಾರಿಕೆಯಲ್ಲಿ

ತೊಡಗಿರುತ್ತಿತ್ತೆಂದು, ಮಹಿಳೆಯರು ಕೂಡ ನೂಲುವುದು, ನೇಯುವುದು ಮುಂತಾದ ಚಟುವಟಿಕೆಗಳಲ್ಲಿ ನಿರಂತರ ತೊಡಗಿರುತ್ತಿದ್ದರು ಎಂದು ತಿಳಿಸಿದ್ದಾರೆ. ರೇಶ್ಮೆ ಸೀರೆ ತಯಾರಿಕೆಯಲ್ಲಿ ಪಟ್ಟಣದ ನೇಕಾರರು ನಿಪುಣರೆನಿಸಿದ್ದು, ತಾಲೂಕಿನಲ್ಲಿ ಹೆಚ್ಚು ಬೆಳೆಯುವ ರೇಶ್ಮೆ ಇವರಿಗೆ ಸುಲಭವಾಗಿ ಸ್ಥಳೀಯವಾಗಿ ದೊರೆಯುತ್ತದೆ. ಕೋಟೆ ಬೀದಿಯ ಪಕ್ಕದಲ್ಲಿ ಹೊಸ ಬೀದಿಯಲ್ಲಿ ಗಾಣಿಗರು ಹೆಚ್ಚು ವಾಸವಾಗಿದ್ದಾರೆ. ಗಾಣದ ಸಹಾಯದಿಂದ ಎಳ್ಳು, ಹುಚ್ಚೆಳ್ಳು, ಹೆರಳು, ಕಡಲೆಕಾಯಿ ಬೀಜ ಮುಂತಾದ ಎಣ್ಣೆ ಬೀಜಗಳಿಂದ ಎಣ್ಣೆ ತಯಾರಿಸುತ್ತಿದ್ದರು.

ಹೊಯ್ಸಳರ ಕಾಲದಲ್ಲಿ ಕನಕಪುರದಲ್ಲಿ ಲೋಹ ತಯಾರಿಕೆ ಚಟುವಟಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ನಡೆದಿವೆ. ಕಾಣಿ ಎಂದರೆ ನಾಣ್ಯ ಎಂದು ಅರ್ಥವಿದೆ, ತಾಮ್ರದ ನಾಣ್ಯಗಳನ್ನು ತಯಾರು ಮಾಡುತ್ತಿದ್ದ ಕಾಣಿಕಾರನ ಊರು ಇದಾಗಿತ್ತು. ಹಾಗಾಗಿ ಈ ಪಟ್ಟಣಕ್ಕೆ ಕಾಣಿಕಾರನಹಳ್ಳಿಯ ಉಲ್ಲೇಖಗಳು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ವಿಶ್ವಕರ್ಮ ಸಮುದಾಯ ಕಸುಬುದಾರರು ತಯಾರು ಮಾಡುತ್ತಿದ್ದ ಚಿನ್ನ, ಬೆಳ್ಳಿಯಂತಹ ಲೋಹದ ಆಭರಣ ಹಾಗೂ ವಸ್ತುಗಳು ಅಂದಿನ ವ್ಯಾಪಾರಿಗಳಿಂದ ಸಂತೆಗಳಲ್ಲಿ ಮಾರಾಟವಾಗುತ್ತಿದ್ದವು ಎಂಬ ಮಾಹಿತಿಯನ್ನು ಸ್ಥಳೀಯವಾಗಿ ನೆಲೆಸಿರುವ ಹಿರಿಯರು ಹೇಳುತ್ತಾರೆ.

ಕರಕುಶಲ ಕೈಗಾರಿಕೆಗಳಲ್ಲಿ ಚಮ್ಮಾರ, ಕುಂಬಾರ, ಮರಗೆಲಸದವರು, ಕಲ್ಲು - ಕುಟಿಕ ಇತ್ಯಾದಿ ವಿವಿಧ ವೃತ್ತಿಯನ್ನು ಅವಲಂಬಿಸಿದ್ದ ವರ್ಗದ ಜನರು ತಮ್ಮ ವೃತ್ತಿಗೆ ಬಂದಿದ್ದ ಕೈಗಾರಿಕೆಗಳಲ್ಲಿ ನುರಿತ ಪರಿಣಿತಿ ಪಡೆದಿದ್ದರು. ಚಮ್ಮಾರರು ಸತ್ತ ಪ್ರಾಣಿಗಳ ಚರ್ಮದಿಂದ ಪಾದರಕ್ಷೆ, ನೀರಿನ ಚರ್ಮ ಚೀಲ, ಏತ ಮುಂತಾದ ಸಾಮಗ್ರಿಗಳನ್ನು ತಯಾರಿಸುತ್ತಿದ್ದರು. ಮರಗೆಲಸದವರು ಮರದ ಸಾಮಗ್ರಿಗಳನ್ನು ತಯಾರು ಮಾಡಿದರೆ, ಮೇದರು ಬಿದಿರಿನಿಂದ ಗೃಹಬಳಕೆಯ ವಸ್ತುಗಳನ್ನು ತಯಾರು ಮಾಡುತ್ತಿದ್ದರು. ಕುಂಬಾರರು ಮಡಿಕೆ, ಕುಡಿಕೆಯಂತಹ ಮಣ್ಣಿನ ವಸ್ತು ತಯಾರು ಮಾಡುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿ ಪಟ್ಟಣದಲ್ಲಿ ಉಳಿದಿರುವ ಸಣ್ಣ ಪ್ರಮಾಣದ ಕುಂಬಾರಿಕೆಯ ಗುಡಿ ಕೈಗಾರಿಕೆಗಳು ಸಾಕ್ಷಿಯಾಗಿವೆ.

ವ್ಯಾಪಾರ ವಾಣಿಜ್ಯ :- ಕೃಷಿ ಹಾಗೂ ಕೈಗಾರಿಕೆಗಳಲ್ಲಿ ಉತ್ಪಾದಿಸಿದ ವಸ್ತುಗಳನ್ನು ಪರಸ್ಪರ ಜನರಿಗೆ ತಲುಪಿಸಲು ಹಾಗೂ ಇಲ್ಲಿ ಹೆಚ್ಚು ಉತ್ಪಾದಿಸಿದ ಪದಾರ್ಥಗಳನ್ನು ರಾಜ್ಯದ ಇತರೆ ಪ್ರದೇಶಗಳಿಗೆ ರಫ್ತು ಮತ್ತು ಅಗತ್ಯವಿದ್ದರೆ ಸಾಮಾನು ಸರಂಜಾಮುಗಳನ್ನು ಆಮದು ಮಾಡಿಕೊಳ್ಳಲು ವ್ಯಾಪಾರ, ವಾಣಿಜ್ಯ ಅಗತ್ಯವಾಗಿತ್ತು. ಈ ಪ್ರದೇಶದಲ್ಲಿ ವೈಶ್ಯರ, ಬಣಜಿಗಶೆಟ್ಟಿಗಳು ಎಂಬ ಜನಾಂಗದವರು ವ್ಯಾಪಾರ ವೃತ್ತಿಯನ್ನು ಅವಲಂಬಿಸಿದ್ದರು. ಇವರನ್ನು ವರ್ತಕರೆಂದೂ, ವಣಿಕರೆಂದೂ ಕರೆಯಲಾಗುತ್ತಿತ್ತು. ವರ್ತಕರು ತಮ್ಮದೇ ಆದ ಸಂಘಗಳನ್ನು ಕಟ್ಟಿಕೊಂಡು ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುತ್ತಿದ್ದರು. ಮಾರುಕಟ್ಟೆ, ಪೇಟೆ, ಸಂತೆಗಳಲ್ಲಿ ಪ್ರತಿದಿನವೂ ವ್ಯಾಪಾರ, ವ್ಯವಹಾರ ನಡೆಯುತ್ತಿತ್ತು. ಗ್ರಾಮಗಳಲ್ಲಿ ಮತ್ತು ತಾಲೂಕು ಕೇಂದ್ರದಲ್ಲಿ ಸ್ಥಳೀಯ

ವ್ಯಾಪಾರ ಸಂತೆಗಳ ಮೂಲಕ ನಡೆಯುತ್ತಿತ್ತು. ಪಟ್ಟಣಸ್ವಾಮಿ, ಮಂಡಲಸ್ವಾಮಿ, ನಾಡಸ್ವಾಮಿ ಅಥವಾ ನಾಡಪಟ್ಟಣ ಸ್ವಾಮಿಯರು ಸಂತೆ, ಪೇಟೆ, ಪಟ್ಟಿಗಳ ಸಂಯೋಜನೆ ಮತ್ತು ಕಾರ್ಯಾಚರಣೆಗಳ ಕರ್ತವ್ಯ ನಿರ್ವಹಿಸುತ್ತಿದ್ದರು.

ದಳವಾಯಿ ನಂಜಯ್ಯನ ಕಾಲದಲ್ಲಿ (೧೭೩೬-೧೭೫೯) ಮೈಸೂರು ಸಂಸ್ಥಾನದ ವರ್ತಕರಲ್ಲಿ ವಿನಿಮಯ ವೃತ್ತಿಯವರು ಹಾಗೂ ಉತ್ಪಾದನಾ ವಿನಿಮಯ ವೃತ್ತಿಯವರೆಂಬ ಎರಡು ವರ್ಗಗಳಿದ್ದುದು ಕಂಡುಬರುತ್ತದೆ.[೧೭] ಗೃಹ ಕೈಗಾರಿಕೆಗಳ ಮೂಲಕ ತಾವು ಉತ್ಪಾದಿಸಿದ ವಸ್ತುಗಳನ್ನು ತಾವೇ ಸ್ವತಃ ಮಾರಾಟ ಮಾಡುವ ವರ್ತಕರನ್ನು ಉತ್ಪಾದಕ-ವಿನಿಮಯ ವರ್ತಕರೆನ್ನಲಾಗಿದೆ. ಕುಂಬಾರ, ಅಕ್ಕಸಾಲಿಗ, ಚಮ್ಮಾರ ಮುಂತಾದವರು ತಯಾರಿಸಿ ಪದಾರ್ಥಗಳನ್ನು ತಾವೇ ವ್ಯಾಪಾರ ಮಾಡುತ್ತಿದ್ದರು. ಉತ್ಪಾದಕರಿಂದ ವಸ್ತುಗಳನ್ನು ಕೊಂಡುಕೊಂಡು ಈ ತಾಲೂಕಿನ ನಾನಾ ಕಡೆಗಳಲ್ಲಿ ಹಾಗೂ ಹೊರಗಿನ ತಾಲೂಕುಗಳಲ್ಲಿ ವ್ಯಾಪಾರವನ್ನು ವೈಶ್ಯರು, ಬಣಜಿಗಶೆಟ್ಟಿಗಳು ಮೊದಲಾದ ವರ್ತಕ ವರ್ಗಕ್ಕೆ ಸೇರಿದವರು ಕೈಗೊಳ್ಳುತ್ತಿದ್ದರು. ಇವರು ತಮ್ಮ ವ್ಯಾಪಾರ ವಹಿವಾಟುಗಳನ್ನು ಪಟ್ಟಣದಲ್ಲಿ ಕಟ್ಟಿಕೊಂಡಿದ್ದ ವರ್ತಕ ಸಂಘದ ಮೂಲಕ ನಿರ್ವಹಿಸುತ್ತಿದ್ದರು.

ತೂಕ ಮತ್ತು ಅಳತೆ

ಚಿಕ್ಕದೇವರಾಜ ಒಡೆಯ ಆಳ್ವಿಕೆಗೆ ಮುನ್ನ ಈ ಪಟ್ಟಣದಲ್ಲಿ ವಿವಿಧ ರೀತಿಯ ತೂಕ ಮತ್ತು ಅಳತೆಯ ಮಾಪನಗಳು ಜಾರಿಯಲ್ಲಿದ್ದವು.[೧೮] ಚಿಕ್ಕದೇವರಾಜ ಒಡೆಯರ ಸಂಸ್ಥಾನದ ಘಟಕಕ್ಕೆ ಸೇರಿದ ಕನಕಪುರ.

ಅಳತೆಯ ಸಾಧನಗಳು

ತಕ್ಕಡಿ, ತೂಕದ ಬೊಟ್ಟುಗಳು ಬರುವುದಕ್ಕೂ ಮೊದಲು ಈ ಪರಿಸರದಲ್ಲಿ ಅಳತೆಯ ಮಾಪನಗಳು ಜಾನಪದೀಯ ಮಾದರಿಯಲ್ಲೇ ಇದ್ದವು. ಅವುಗಳು ಸಂಸ್ಕೃತಿಯ ಭಾಗವಾಗಿ ಇಂದಿಗೂ ಉಳಿದಿದ್ದು, ತಮ್ಮ ವೈಶಿಷ್ಟ್ಯತೆಯನ್ನು ಬಿಂಬಿಸುತ್ತವೆ. ಪ್ರಾದೇಶಿಕವಾಗಿ ಇವುಗಳನ್ನು ಬೇರೆ ಬೇರೆ ಹೆಸರುಗಳಿಂದ ಗುರುತಿಸಿಕೊಳ್ಳಲಾಗಿದೆ.

ಕೊಳಗ

ದವಸ - ಧಾನ್ಯಗಳಿಂದ ರಾಗಿ, ಭತ್ತ, ಎಳ್ಳು, ಕಾಳು ಮೊದಲಾದ ಪದಾರ್ಥಗಳನ್ನು ಅಳೆಯಲು ಬಳಸುವ ಸಾಧನವಾಗಿದೆ. ಇದು ವೃತ್ತಾಕಾರದಲ್ಲಿದ್ದು ಒಂದೂವರೆ ಅಡಿ ಎತ್ತರ ಮತ್ತು ಮುಕ್ಕಾಲು ಅಡಿ ವ್ಯಾಸವುಳ್ಳ ತಳ ಕಟ್ಟಿದ್ದು ಸಿಲಿಂಡರಿನಾಕಾರದಲ್ಲಿರುತ್ತದೆ. ಇದನ್ನು ಕಬ್ಬಿಣದ ತಗಡಿನಿಂದ ಮಾಡಿರುತ್ತಾರೆ. ಒಂದು ಕೊಳಗಕ್ಕೆ ಎರಡು ಇಬ್ಬಳಿಗೆ ಎಂಬ ಲೆಕ್ಕಾಚಾರವಾಗಿ ಮಾಡಿರುತ್ತಾರೆ. ರಾಶಿಗಟ್ಟಲೇ ದವಸ - ಧಾನ್ಯ ಅಳೆಯುವಾಗ ಕೊಳಗದಿಂದ ಅಳೆಯುತ್ತಾರೆ.

ಇಬ್ಬಳಿಗೆ

ಇಬ್ಬಳಿಗೆ ಕೊಳಗಕ್ಕಿಂತ ಚಿಕ್ಕದು. ಐದು ಸೇರು ಪ್ರಮಾಣದ ಸಾಧನ. ಇದರಿಂದ ದವಸ-ಧಾನ್ಯಗಳನ್ನು ಅಳೆಯುವುದು ರೂಢಿಯಲ್ಲಿದೆ.

ಸೇರು

ಕಡಿಮೆ ಪ್ರಮಾಣದ ದವಸ-ಧಾನ್ಯ ಮತ್ತು ಕಾಳು, ಹಿಟ್ಟನ್ನು ಅಳೆಯುವುದಕ್ಕೆ ಹೆಚ್ಚು ಬಳಸುತ್ತಾರೆ. ರೈತರ ಮನೆಗಳಲ್ಲಿ ಇಂದಿಗೂ ಇದರ ಬಳಕೆಯನ್ನು ಕಾಣಬಹುದು. ಎಣ್ಣೆ, ತುಪ್ಪ ಇತ್ಯಾದಿ ತೈಲ ಪದಾರ್ಥಗಳನ್ನು ಅಳೆಯಲು ಒಂದು ಸೇರಿನ ಎಣ್ಣೆ ಪಾತ್ರೆ ಬಳಕೆಯಲ್ಲಿತ್ತು. ಇವೆಲ್ಲದರ ಜೊತೆಗೆ ಕಚ್ಚಾಸೇರು, ಪಕ್ಕಾಸೇರು ಮುಂತಾದ ಮಾಪನಗಳೂ ಇದ್ದುದ್ದಾಗಿ ಬುಕನನ್ ತಿಳಿಸಿದ್ದಾನೆ. ಅವುಗಳ ಅಳತೆಯ ವಿವರಗಳನ್ನು ಹೀಗೆ ನೀಡಿದ್ದಾನೆ.

೧ ಸೇರು	=	೦.೬೦೬೭ ಪೌಂಡ್
೨ ಸೇರು	=	೧ ಪಂಚೇರು - ೩.೦೩೩೫ ಪೌಂಡ್
೮ ಪಂಚೇರು	=	೧ ಮಣ - ೨೪.೨೬೮೦ ಪೌಂಡ್
೨೦ ಮಣ	=	೧ ಖಂಡುಗ - ೪೮೫.೩೬೦೦ ಪೌಂಡ್[೧೫]

ಸಾರಿಗೆ ವ್ಯವಸ್ಥೆ

ಈ ಪರಿಸರದ ಸಾರಿಗೆ ವ್ಯವಸ್ಥೆಯು ಹೆಚ್ಚಾಗಿ ಎತ್ತಿನಗಾಡಿಯ ಮೂಲಕವೇ ನಡೆದಿತ್ತು. ಇದು ಕುದುರೆ, ಎತ್ತು, ಎಮ್ಮೆ ಸರಕನ್ನು ಸಾಗಿಸುವ ಸಾಧನಗಳಾಗಿದ್ದವು. ಇತ್ತೀಚಿಗೆ ಟ್ರಾಕ್ಟರ್, ಆಟೋ, ಬಸ್ ಮೊದಲಾದ ವಾಹನಗಳ ಮೂಲಕ ಸರಕು ಮತ್ತು ಪ್ರಯಾಣಿಕರನ್ನು ಸಾಗಿಸಲಾಗುತ್ತದೆ.

ನಾಣ್ಯ ಪದ್ಧತಿ

ಮೊದ ಮೊದಲು ವಸ್ತು ವಿನಿಮಯ ಪದ್ಧತಿ ಜಾರಿಯಲ್ಲಿದ್ದರೂ ನಂತರದಲ್ಲಿ ನಾಣ್ಯ ಪದ್ಧತಿ ಜಾರಿಗೆ ಬಂದಿತು. ಈ ಪ್ರದೇಶದ ಆರ್ಥಿಕ ಪ್ರಗತಿ ಅವರ ನಾಣ್ಯಗಳಲ್ಲಿ ಬಿಂಬಿತವಾಗಿರುವುದು ಸುಲಭವಾಗಿ ಗುರುತಿಸಬಹುದು. ವಿಷಯ, ಕಾಸು, ಪೈಸೆ, ಆಣೆ, ರೂಪಾಯಿ ಇಲ್ಲಿನ ವ್ಯಾಪಾರ ವಹಿವಾಟಿನ ನಾಣ್ಯಗಳಾಗಿದ್ದವು. ಒಟ್ಟಾರೆ ಕನಕಪುರ ಪಟ್ಟಣದಲ್ಲಿ ಲಭ್ಯವಿರುವ ನಾಣ್ಯಗಳು ಹಿಂದಿನ ಕಾಲದ ಆರ್ಥಿಕ ಸ್ಥಿತಿಗತಿಯ ಬಗ್ಗೆ ಸ್ಪಷ್ಟ ಮಾಹಿತಿಯನ್ನು ತಿಳಿಯಲು ಸಹಾಯವಾಗುತ್ತವೆ.

೩.೪. ಶಿಕ್ಷಣ ಸ್ಥಿತಿಗತಿ

ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ಪರಂಪರೆಯಲ್ಲಿ ಶಿಕ್ಷಣ ಪದ್ಧತಿಯೂ ಒಂದಾಗಿದೆ. ಶಿಕ್ಷಣವು ಮೂಲತಃ ಧಾರ್ಮಿಕ ಸ್ವರೂಪದ್ದಾಗಿದ್ದರೂ, ನೈತಿಕ ಹಾಗೂ ಜ್ಞಾನದ

ವಿವಿಧ ಕ್ಷೇತ್ರಗಳ ಬಗೆಗೆ ತಿಳುವಳಿಕೆ ನೀಡಲಾಗುತ್ತಿತ್ತು. ವೇದಗಳು, ಉಪನಿಷತ್ತು, ಪುರಾಣ, ಕಾವ್ಯ, ಇತಿಹಾಸ, ವ್ಯಾಕರಣ, ವಿಜ್ಞಾನ, ತರ್ಕಶಾಸ್ತ್ರ, ತತ್ವಶಾಸ್ತ್ರ, ನ್ಯಾಯಶಾಸ್ತ್ರ ಮುಂತಾದ ವಿದ್ಯೆಗಳನ್ನು ಕಲಿಸಲಾಗುತ್ತಿತ್ತು. ಭಾರತದಲ್ಲಿ ಸಂಪ್ರದಾಯ ಶಿಕ್ಷಣ ವ್ಯವಸ್ಥೆಯಿಂದ ಜನಸಾಮಾನ್ಯರು ಹಾಗೂ ತಳವರ್ಗದವರು ಶಿಕ್ಷಣದಿಂದ ವಂಚಿತರಾಗಿದ್ದರು. ಅಗ್ರಹಾರ ಮತ್ತು ಮಠಗಳು ಶಿಕ್ಷಣ ಕೇಂದ್ರಗಳಾಗಿದ್ದು ಪರಂಪರಾನುಗತ ಪದ್ಧತಿಗಳಾದ ಧೂಳಕ್ಷರ, ಕಡತ, ಹಸ್ತಪ್ರತಿ ಇವುಗಳ ಮೂಲಕ ಶಿಕ್ಷಣ ಕಲಿಸಲಾಗುತ್ತಿತ್ತು. ಈ ಶಿಕ್ಷಣ ಕೇಂದ್ರಗಳಿಗೆ ತಳ ಸಮುದಾಯಗಳಿಗೆ ಪ್ರವೇಶ ನಿರ್ಬಂಧವಿತ್ತು. ಹಾಗಾಗಿ ಅವರು ದೂರದಲ್ಲಿ ನಿಂತು ಪಾಠ ಕೇಳುವ ಪರಿಸ್ಥಿತಿಯಿತ್ತು. ಸಾಮಾನ್ಯವಾಗಿ ಹಿಂದಿನ ಸಮಾಜದಲ್ಲಿ ಬಹುಮಟ್ಟಿಗೆ ತಂದೆ ತಾಯಿಗಳು ತಮ್ಮ ಮಕ್ಕಳು ತಮ್ಮಂತೆಯೇ ಕುಲಕಸುಬನ್ನು ಮುಂದುವರಿಸುವಂತೆ ಇಚ್ಛಿಸಿ ಅದರಲ್ಲೇ ತರಬೇತಿ ನೀಡುತ್ತಿದ್ದರೆಂದು ಹೇಳಬಹುದು. "ಮೈಸೂರು ಸಂಸ್ಥಾನದ ರೈತರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಆಸಕ್ತಿ ಹೊಂದಿರಲಿಲ್ಲ. ಏಕೆಂದರೆ ಪುಸ್ತಕ ಹಿಡಿದ ತಮ್ಮ ಮಕ್ಕಳು ಕೃಷಿಯನ್ನು ನಿರ್ಲಕ್ಷಿಸಬಹುದು ಎಂದು ಭಾವಿಸಿದ್ದರು.[೨೦]

ಕನಕಪುರ ಪರಿಸರದಲ್ಲಿ ಶಿಕ್ಷಣ ಎಲ್ಲಾ ವರ್ಗಗಳಿಗೂ ಸಿಗುತ್ತಿರಲಿಲ್ಲ. ಅವಕಾಶ ಸಿಕ್ಕವರು ಶಿಕ್ಷಣ ಪಡೆಯುತ್ತಿದ್ದರು ಎಂದು ಹೇಳಬಹುದು. ಮೇಲುಕೀಳುಗಳ ಮಧ್ಯೆ ಬ್ರಾಹ್ಮಣ, ಶ್ರೀಮಂತ, ಮೇಲುವರ್ಗದ ಜನರೇ ಶಿಕ್ಷಣ ಪಡೆದು ವಿದ್ಯಾವಂತರಾಗಿರುವುದು ಕಂಡುಬರುತ್ತದೆ. ಈ ಪ್ರದೇಶದಲ್ಲಿ ದೇಗುಲ ಮಠ ಜನರಿಗೆ ಶಿಕ್ಷಣ ನೀಡಿದ ಪ್ರಥಮ ವಿದ್ಯಾಕೇಂದ್ರ, ತಾಲೂಕು ದೊಡ್ಡದಾಗಿದ್ದರೂ ಬೆರಳೆಣಿಕೆಯಷ್ಟು ಪ್ರಾಥಮಿಕ ಶಾಲೆಗಳು, ಎರಡು ಮೂರು ಮಾಧ್ಯಮಿಕ ಶಾಲೆಗಳಿದ್ದವು. ೧೮೬೮ರಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಹೊಸ ಬೆಳಕನ್ನು ಚೆಲ್ಲಿ ಅವರು ತಮ್ಮ ಜೀವನ ರೂಪಿಸಿಕೊಳ್ಳಲು ಸಹಾಯವಾಗಿದೆ.

೧. ಪುರಸಭೆ ಪ್ರೌಢಶಾಲೆ, ಕನಕಪುರ.

೨. ಪುರಸಭೆ ಪದವಿ ಪೂರ್ವ ಕಾಲೇಜು, ಕನಕಪುರ.

೩. ಪುರಸಭೆ ಪದವಿಕಾಲೇಜು, ಕನಕಪುರ.

ಇತ್ತೀಚಿನ ದಶಕಗಳಲ್ಲಿ ಹಲವು ಸರ್ಕಾರಿ ಶಾಲೆಗಳು ಹೆಚ್ಚಾಗುತ್ತಿವೆ. ಆದರೆ ಪಟ್ಟಣದಲ್ಲಿ ಒಂದೇ ಒಂದು ಸರ್ಕಾರಿ ಪದವಿಪೂರ್ವ ಕಾಲೇಜು, ಪದವಿ ಕಾಲೇಜು ಇರುವುದು ವಿಷಾದನೀಯಕರ ಸಂಗತಿಯಾಗಿದೆ. ಅವುಗಳ ಸಂಖ್ಯೆ ಹೆಚ್ಚಿಸಿ ಜನಸಾಮಾನ್ಯರಿಗೆ ಉತ್ತಮ ಶಿಕ್ಷಣ ನೀಡಬೇಕಾಗಿದೆ.

ಕರಿಯಪ್ಪನವರ ಖಾಸಗಿ ಸಂಸ್ಥೆಗಳು

೧. ದಯಾನಂದ ವಸತಿ ವಿದ್ಯಾಲಯ, ಕನಕಪುರ - ೧೯೪೧

೨. ಗ್ರಾಮಾಂತರ ಪ್ರೌಢ ಶಾಲೆ, ಕನಕಪುರ - ೧೯೪೨.

೩. ಗ್ರಾಮಾಂತರ ಪದವಿಪೂರ್ವ ಕಾಲೇಜು, ಕನಕಪುರ - ೧೯೫೫.

೪. ಗ್ರಾಮಾಂತರ ಪದವಿ ಕಾಲೇಜು, ಕನಕಪುರ - ೧೯೫೭.

೫. ಗ್ರಾಮಾಂತರ ಪ್ರೌಢಶಾಲೆ, ಕನಕಪುರ - ೧೯೬೩

೬. ಬಾಲಕಿಯರ ಪ್ರೌಢಶಾಲೆ, ಕನಕಪುರ - ೧೯೬೩.

ದೇಗುಲ ಮಠದ ಶಿಕ್ಷಣ ಸಂಸ್ಥೆಗಳು

ಶಿಕ್ಷಣ ಮತ್ತು ಸಾಂಸ್ಕೃತಿಕ ಬೆಳವಣಿಗೆಯಲ್ಲಿ ದೇಗುಲ ಮಠ ಸಾಕಷ್ಟು ಪ್ರಭಾವ ಬೀರಿದೆ. ಇದರ ಮೂಲ ಉದ್ದೇಶ ಜನತೆಗೆ ಶಿಕ್ಷಣ ನೀಡುವುದು, ಅದು ಜನರ ಕೇವಲ ಉಪಜೀವನ ಮಾತ್ರವಾಗಿರದೆ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮೌಲ್ಯಗಳ ತಿಳುವಳಿಕೆ, ನಡೆವಳಿಕೆಯನ್ನು ರೂಪಿಸುವಂತ ಶಿಕ್ಷಣವಾಗಿತ್ತು. ಎಲ್ಲಾ ಜನಾಂಗದ ವಿದ್ಯಾರ್ಥಿಗಳಿಗೂ, ಉಚಿತ ಊಟ ಹಾಗೂ ವಸತಿ ವ್ಯವಸ್ಥೆ ಹಾಗೂ ವಿದ್ಯಾರ್ಜನೆಗಾಗಿ ಕಟ್ಟಡಗಳನ್ನು ನಿರ್ಮಾಣ ಮಾಡಿಕೊಳ್ಳಲಾಗಿದೆ. ಕಳೆದ ಅನೇಕ ದಶಕಗಳಿಂದ ನಾಡಿನ ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ಸಲ್ಲಿಸುತ್ತದೆ. ಮಠದ ಆಶ್ರಯ ಕೇವಲ ಕನಕಪುರ ಪರಿಸರದ ಮಕ್ಕಳಿಗೆ ಮಾತ್ರ ಸೀಮಿತವಾಗಿರದೆ ಕರ್ನಾಟಕ, ಆಂಧ್ರ ಮತ್ತು ತಮಿಳುನಾಡಿನ ನಾನಾ ಭಾಗದ ಬಡಮಕ್ಕಳಿಗೂ ಇಲ್ಲಿ ಅಶ್ರಯ ನೀಡಲಾಗುತ್ತಿದೆ. ಮುಮ್ಮಡಿ, ನಿರ್ವಾಣ ಮಹಾಸ್ವಾಮಿಗಳು ಮತ್ತು ಮಹಾಲಿಂಗ ಸ್ವಾಮಿಗಳ ಪ್ರಯತ್ನಗಳಿಂದ ಶೈಕ್ಷಣಿಕ ಹೊಸ ಹೊಸ ಯೋಜನೆಗಳನ್ನು ಮಠಕ್ಕೆ ನೀಡಿದ್ದಾರೆ. ದೇಗುಲ ಮಠದಲ್ಲಿ ಕೆಳಕಂಡ ಶಿಕ್ಷಣ ಸಂಸ್ಥೆಗಳು ಸ್ಥಾಪನೆಯಾಗಿವೆ.

೧. ಶ್ರೀ ನಿರ್ವಾಣ ಸ್ವಾಮಿ ಅನಾಥಾಲಯ, ಕನಕಪುರ - ೧೯೪೭

೨. ಶ್ರೀ ನಿರ್ವಾಣ ಸ್ವಾಮಿ ವಸತಿ ಪ್ರೌಢ ಶಾಲೆ, ಕನಕಪುರ - ೧೯೬೪

೩. ಶ್ರೀ ಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆ, ಕನಕಪುರ - ೧೯೬೯

೪. ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಪಾಠ ಶಾಲೆ, ಕನಕಪುರ - ೧೯೭೯

೫. ಶ್ರೀ ಮಹಾಲಿಂಗೇಶ್ವರ ಕೈಗಾರಿಕಾ ತರಬೇತಿ ಸಂಸ್ಥೆ, ಕನಕಪುರ - ೧೯೯೨

೬. ಶ್ರೀ ನಿರ್ವಾಣ ಸ್ವಾಮಿ ಡಿಪ್ಲೊಮೋ ಇನ್ ಟೀಚರ್ ಎಜುಕೇಷನ್, ಕನಕಪುರ - ೨೦೦೪.

೭. ಶ್ರೀ ನಿರ್ವಾಣ ಸ್ವಾಮಿ, ಕಾಲೇಜ್ ಆಫ್ ನರ್ಸಿಂಗ್, ಕನಕಪುರ - ೨೦೦೪.

ಕನಕಪುರ ಪಟ್ಟಣದಲ್ಲಿ ಇರುವ ಮತ್ತಷ್ಟು ಖಾಸಗೀ ವಿದ್ಯಾಸಂಸ್ಥೆಗಳೆಂದರೆ ಸೆಂಟ್ ಮೈಕಲ್ ಸ್ಕೂಲ್, ಸೆಂಟ್ ಥಾಮಸ್ ಸ್ಕೂಲ್, ಬ್ಲಾಸಂಸ್ಕೂಲ್, ಮಾನಸಸ್ಕೂಲ್ ಮೊದಲಾದ ಶಾಲೆಗಳಲ್ಲಿ ಆಂಗ್ಲ ಮಾಧ್ಯಮಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದರಿಂದ. ಈ ಪಟ್ಟಣದಲ್ಲಿ ಉತ್ತಮ ಶಿಕ್ಷಣ ಬೆಳವಣಿಗೆ ಆಗುತ್ತಿದೆ.

ಅಡಿಟಿಪ್ಪಣಿಗಳು

೧. ಪುಟ್ಟಸ್ವಾಮಿ ಬಿ., **ಕನಕಪುರ ಪಟ್ಟಣ : ಒಂದು ಸಮಾಜಶಾಸ್ತ್ರೀಯ ಅಧ್ಯಯನ,** ಪುಟ ೮೬.

೨. ಅದೇ., ಪುಟ ೮೬.

೩. ಅನಂತಕೃಷ್ಣ ಅಯ್ಯರ್ ಎಲ್.ಕೆ., **ಮೈಸೂರು ಕ್ಯಾಸ್ಟ್ ಅಂಡ್ ಟ್ರೈಬ್ಸ್,** QJMS, Vol-xiii, ಪುಟ ೫೩೨.

೪. ಸುಧಾಮಣಿ ಬಿ.ವಿ., **ದಳವಾಯಿ ನಂಜಯ್ಯನ ಕಾಲದ ಮೈಸೂರು,** ಪುಟ ೧೨೫.

೫. ಬಸಪ್ಪಶಾಸ್ತ್ರಿ, **ಅಭಿಜ್ಞಾನ ಶಾಕುಂತಲ,** ಪುಟ ೪೨.

೬. ಮುನಿರಾಜಪ್ಪ, **ಮಾಗಡಿ ಸೀಮೆ ಇತಿಹಾಸ ಸಂಸ್ಕೃತಿ,** ಪುಟ ೧೫೫.

೭. ಮುತ್ತರಾಜು, **ಇತಿಹಾಸ ದರ್ಶನ,** ಸಂ. ೧೨, ಪುಟ ೨೧.

೮. ಅದೇ., ಪುಟ ೨೨.

೯. ಅದೇ., ಪುಟ ೨೩.

೧೦. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪುಟ ೧೮೬.

೧೧. ಅದೇ., ಪುಟ ೫.

೧೨. ಸೂರ್ಯನಾಥ ಕಾಮತ್, **ಕರ್ನಾಟಕದ ಸಂಕ್ಷಿಪ್ತ ಇತಿಹಾಸ,** ಪುಟ ೧೪೨.

೧೩. ವೀರಭದ್ರಯ್ಯ ಎಚ್.ವಿ., **ದೇಗುಲಸಿರಿ,** ಪುಟ ೧.

೧೪. ಮಹದೇವಯ್ಯ ಟಿ.ಆರ್., **ನಿರ್ವಾಣಶ್ರೀ,** ರಜತ ಮಹೋತ್ಸವ ನೆನಪಿನ ಸಂಚಿಕೆ, ಪುಟ ೧೨.

೧೫. ಅಂಬಳಿಕೆ ಹಿರಿಯಣ್ಣ, **ಕನ್ನಡ ವಿಷಯ ವಿಶ್ವಕೋಶ,** ಇತಿಹಾಸ ಮತ್ತು ಪುರಾತತ್ವ, ಪುಟ ೨೯೩.

೧೬. ಸುಧಾಮಣಿ ಬಿ.ವಿ., **ಪೂರ್ವೋಕ್ತ,** ಪುಟ ೧೨೭.

೧೭. ಅದೇ., ಪುಟ ೧೩೧.

೧೮. ಅದೇ., ಪುಟ ೧೨೦.

೧೯. ಫ್ರಾನ್ಸಿಸ್ ಬುಕನನ್, ಎ ಜರ್ನಿ ಫ್ರಮ್ ಮದ್ರಾಸ್ ತ್ರೂ ದಿ ಕಂಟ್ರೀಸ್ ಆಫ್ ಮೈಸೂರು ಅಂಡ್ **ಮಲಬಾರ್,** ಪುಟ ೧೩೭.

೨೦. Bowring L.B., **Eastern Experiences(London : 1871),** P. 21.

❖❖

ಅಧ್ಯಾಯ : ನಾಲ್ಕು

ವಾಸ್ತು ಮತ್ತು ಮೂರ್ತಿಶಿಲ್ಪ

೪.೧. ದೇವಾಲಯಗಳು

೪.೨. ಮೂರ್ತಿಶಿಲ್ಪಗಳು

೪.೩. ಮಸೀದಿ ಮತ್ತು ಚರ್ಚ್‌ಗಳು

ಅಧ್ಯಾಯ : ನಾಲ್ಕು

ವಾಸ್ತು ಮತ್ತು ಮೂರ್ತಿಶಿಲ್ಪ

೪.೧. ದೇವಾಲಯಗಳು

ಮಾನವ ಅಲೆದಾಡುವ ಪ್ರವೃತ್ತಿಯಿಂದ ಒಂದೆಡೆ ನೆಲೆನಿಲ್ಲಲು ಪ್ರಾರಂಭಿಸಿದಾಗಿನಿಂದ ತಾನು ವಾಸಿಸಲು ಯೋಗ್ಯವಾದ ರೀತಿಯಲ್ಲಿ ಮನೆಯನ್ನು ನಿರ್ಮಿಸಲು ಆರಂಭಿಸಿದನು. ಇಲ್ಲಿಂದಲೇ ವಾಸ್ತುಶಿಲ್ಪ ಆರಂಭದ ಹಂತವನ್ನು ಕಾಣಬಹುದು. ಸಾಮಾನ್ಯವಾಗಿ ವಾಸ್ತು ಎಂದರೆ ಕಟ್ಟಡ ಮನುಷ್ಯ ಹಾಗೂ ದೇವತೆಗಳು ವಾಸ ಮಾಡುವ ಸ್ಥಳ ಅಥವಾ ವಾಸಕ್ಕೆ ಮನೆಯನ್ನು ಕಟ್ಟಲು ಬೇಕಾದ ಯೋಗ್ಯವಾದ ಭೂಮಿ. ಇಂತಹ ಕಟ್ಟಡಗಳು ದೇವಾಲಯ ಗಳಾಗಿರಬಹುದು, ಮನೆಗಳಾಗಿರಬಹುದು ಅಥವಾ ಕೋಟೆಗಳಾಗಿರಬಹುದು.

ವಾಸ್ತುಶಿಲ್ಪ ಎಂಬ ಪರಿಭಾಷೆಗೆ ವಿಶಾಲವಾದ ಅರ್ಥವಿದ್ದರೂ, ಸಾಮಾನ್ಯವಾಗಿ ದೇವಾಲಯಗಳು ಮಾತ್ರ ವಾಸ್ತುಶಿಲ್ಪಗಳಾಗಿ ಕಾಣುತ್ತವೆ. ಗಟ್ಟಿಯಾದ ವಸ್ತುವಿನಿಂದ ವಾಸ್ತುವಿನ (ನಿವೇಶ) ಮೇಲೆ ನಿರ್ಮಾಣಗೊಂಡ ಕಟ್ಟಡವನ್ನು ವಾಸ್ತುರಚನೆ ಎಂದು ಕರೆಯುತ್ತಾರೆ. ಇಂತಹ ವಾಸ್ತು ರಚನೆಗಳು ಮಾನವನ ನಾಗರಿಕತೆಯ ಮಾನದಂಡ ಎಂದರೆ ತಪ್ಪಾಗಲಾರದು. ಕಾಲಾಂತರದಲ್ಲಿ ಮಾನವನು ಬೌದ್ಧಿಕ ವಿಕಾಸ ಹೊಂದಿರುವುದನ್ನು ತಿಳಿಯಲು ಈ ವಾಸ್ತು ರಚನೆಗಳು ಸಾಕ್ಷಿಯಾಗಿವೆ.[೧]

ಸ್ತೂಪ, ಚೈತ್ಯ, ವಿಹಾರ, ಬಸದಿ, ಮಸೀದಿ, ಚರ್ಚ್, ಕೆರೆಕಟ್ಟೆ, ಕೋಟೆ, ದೇವಾಲಯ ಹಾಗೂ ಮನೆಗಳಂತಹ ಎಲ್ಲಾ ರಚನೆಗಳು ವಾಸ್ತುಶಿಲ್ಪಗಳೇ ಆಗಿವೆ.[೨] ಶುಕ್ರನ ಗ್ರಂಥದಲ್ಲಿ ದೇವಾಲಯ, ಅರಮನೆ, ಮೂರ್ತಿಶಿಲ್ಪ ರಚನೆ, ಜನರ ಜೀವನೋಪಯೋಗಿ ಗೃಹಗಳು, ಬಾವಿ, ಪುಷ್ಕರಣಿ ಮೊದಲಾದ ಸ್ಮಾರಕಗಳನ್ನು ಶಿಲ್ಪಶಾಸ್ತ್ರದಡಿಯಲ್ಲಿ ಗುರುತಿಸುತ್ತದೆ.[೩] ವಾಸ್ತುವಿನ ಜೊತೆ ಜೊತೆಗೆ ಶಿಲ್ಪವು, ಶಿಲ್ಪಿಯ ಅಭಿರುಚಿಗೆ ಅನುಗುಣವಾಗಿ ಅವನ ಅಭಿವ್ಯಕ್ತತೆಯನ್ನು ಶಿಲ್ಪಗಳಲ್ಲಿ ಕಾಣಬಹುದು. ವಾಸ್ತು ಮತ್ತು ಶಿಲ್ಪಗಳೆರಡೂ ಕಲಾ ಸೌಂದರ್ಯದ ಪ್ರತೀಕವಾಗಿದ್ದು ಇವು ಆರಂಭದಿಂದಲೂ ಜೊತೆ ಜೊತೆಯಾಗಿ ಬೆಳೆದುಬಂದಿರುವುದನ್ನು ಕಾಣಬಹುದು.

ಮಾನಸಾರ, ಕಶ್ಯಪ, ವೈಖಾಸನ, ವಿಶ್ವಕರ್ಮೀಯ ಇನ್ನೂ ಮೊದಲಾದ ಶಿಲ್ಪಶಾಸ್ತ್ರದ ಗ್ರಂಥಗಳಲ್ಲಿ ದೇವಾಲಯಗಳ ನಿರ್ಮಾಣ ಕುರಿತ ಅನೇಕ ವಿವರಗಳು ದೊರೆಯುತ್ತವೆ.[೪]

ವಿಪರ್ಯಾಸವೆಂದರೆ ಈ ಎಲ್ಲಾ ಗ್ರಂಥಗಳು ಪೂರ್ಣಪ್ರಮಾಣದಲ್ಲಿ ದೊರೆಯದೇ ಇಲ್ಲದಿರುವುದರಿಂದ, ದೇವಾಲಯದ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಗಳು ತಿಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದರೆ ಮಾನಸಾರ ಗ್ರಂಥದ ಪ್ರತಿ ಅಧ್ಯಾಯದಲ್ಲೂ ದೇವಾಲಯಗಳ ನಿರ್ಮಾಣದ ಉದ್ದೇಶ, ಶಿಲ್ಪಕ್ಕಿರಬೇಕಾದ ಅರ್ಹತೆಗಳು, ದೇವಾಲಯ ನಿರ್ಮಾಣಕ್ಕಿರುವ ಯೋಗ್ಯ ಸ್ಥಳ, ದೇವಾಲಯಗಳನ್ನು ಗ್ರಾಮ ಹಾಗೂ ನಗರದ ಯಾವ ದಿಕ್ಕಿನಲ್ಲಿ ಕಟ್ಟಬೇಕು ಎನ್ನುವ ವಿವರಗಳಿವೆ.[೫]

ದೇವಾಲಯಗಳು ಚರಿತ್ರೆಯ ರಚನೆಯಲ್ಲಿ ಪ್ರಮುಖ ಮಾಧ್ಯಮಗಳಾಗಿ ಕಾರ್ಯನಿರ್ವಹಿಸುತ್ತವೆ. ಇವುಗಳು ಮಾನವನ ಚರಿತ್ರೆ ಮತ್ತು ಅವನ ಜೀವನದ ವಿವಿಧ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಸಾಮಾನ್ಯವಾಗಿ ದೇವಾಲಯ ಎಂದರೆ ದೇವರು ಇರುವ ಸ್ಥಾನ, ಜಾಗ ಎಂದರ್ಥ. ದೇವಾಲಯವು ಮಾನವ ಧಾರ್ಮಿಕ ಶ್ರದ್ಧೆಯ ಪ್ರಮುಖ ಕೇಂದ್ರವಾಗಿದೆ. ಇದಕ್ಕೆ ತನ್ನದೇ ಆದ ಸಂಸ್ಕೃತಿ ಹಾಗೂ ಭವ್ಯ ಪರಂಪರೆ ಬೆಳೆದುಬಂದಿದೆ. ಮಾನವ-ದೈವ, ಇಹ-ಪರ, ವಾಸ್ತವಿಕ-ಆದರ್ಶ ಇವುಗಳ ಸಮ್ಮಿಲನದ ಸಂಕೇತವೇ ದೇವಾಲಯ.[೬] ಲೋಕದ ರಕ್ಷಣೆಗಾಗಿ ಭಗವಂತನು ಭೂಮಿಯಲ್ಲಿ ವಾಸ ಮಾಡುವ ಸ್ಥಳವಾದ ದೇವಾಲಯ ಜೀವಾತ್ಮ ಮತ್ತು ಪರಮಾತ್ಮನಲ್ಲಿ ಇರುವ ಅಂತರವನ್ನು ಕಡಿಮೆ ಮಾಡುತ್ತದೆ. ಜಗತ್ತಿನ ಸೃಷ್ಟಿಕರ್ತ ಹಾಗೂ ನಿಯಂತ್ರಕ ಎನ್ನಲಾಗುವ ದೇವರ ಬಳಿ ಹೋಗಲು ಸರಿಯಾದ ಮಾರ್ಗವನ್ನು ತೋರಿಸುವಂತೆ ಅವನನ್ನು ಪ್ರಾರ್ಥಿಸುವ ಸ್ಥಳವೇ ದೇವಾಲಯ ಆಗಿದೆ ಎಂದು ಹೇಳಬಹುದು.[೭]

ದೇವಾಲಯದ ಉಗಮವು ಪ್ರಾಚೀನತೆಯನ್ನು ಪಡೆದಿದ್ದು, ಅದರ ನಿರ್ದಿಷ್ಟ ಸ್ವರೂಪ ವ್ಯಕ್ತವಾಗಿರುವುದಿಲ್ಲ. ಕ್ರಿಪೂ. ೨೦೦೦ ವರ್ಷಗಳಷ್ಟು ಹಿಂದಿನ ಹರಪ್ಪ ಮತ್ತು ಮೊಹೆಂಜೋದಾರೋ ಉತ್ಖನನಗಳಲ್ಲಿ ಸಾರ್ವತ್ರಿಕ ಕಟ್ಟಡಗಳು ದೊರೆತರೂ ಅವುಗಳನ್ನು ದೇವಾಲಯ ಎನ್ನಲಾಗದು. ಸಿಂಧೂ ನಿವೇಶನಗಳಲ್ಲಿ ಸುಮಾರು ೨೦೦೦ಕ್ಕೂ ಅಧಿಕ ಮುದ್ರೆಗಳು ದೊರೆತಿವೆ. ಮೊಹೆಂಜೊದಾರೋದಲ್ಲಿ ದೊರೆತ ನರ್ತಕಿಯ ಕಂಚಿನ ವಿಗ್ರಹ, ಪುರೋಹಿತನ ಶಿಲ್ಪ, ಪಶುಪತಿ, ಗೂಳಿ ಹಾಗೂ ಇನ್ನಿತರ ಪ್ರಾಣಿ ಪಕ್ಷಿಗಳ ಇತ್ಯಾದಿ ವಸ್ತುಗಳು ಅವರ ಕಲಾಆಸಕ್ತಿಗೆ ಸಾಕ್ಷಿಯಾಗಿವೆ. ಇವುಗಳಿಂದ ನಮಗೆ ಸ್ಪಷ್ಟವಾಗುವ ಒಂದು ಅಂಶವೆಂದರೆ, ದೇವಾಲಯಗಳ ರಚನೆಗೆ ಮೊದಲೇ ಮೂರ್ತಿಶಿಲ್ಪ ಬೆಳವಣಿಗೆಯಾಗಿತ್ತು ಎಂದು ಹೇಳಬಹುದು. ಮೂರ್ತಿ ಆರಾಧನೆಯು ಆರಂಭವಾದ ನಂತರ ಅದರ ರಕ್ಷಣೆಗಾಗಿ ವಾಸ್ತುರೂಪವನ್ನು ನೀಡಲಾಯಿತು.

ಕ್ರಿ.ಶ. ೩ನೇ ಶತಮಾನದ ವೇಳೆಗೆ ಭಾರತೀಯ ವಾಸ್ತುಶಿಲ್ಪಕ್ಕೆ ಭದ್ರವಾದ ಬುನಾದಿಯನ್ನು ಹಾಕಿದ ಕೀರ್ತಿ ಮೌರ್ಯರಿಗೆ ಸಲ್ಲುತ್ತದೆ. ಅವರ ಕಾಲದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳು ತೀವ್ರಗೊಂಡು ಬೌದ್ಧ ಧರ್ಮವು ಜಗತ್ತಿನಲ್ಲೇ ಅತ್ಯಂತ ಪ್ರಬಲ ಧರ್ಮವಾಗಿ ಬೆಳೆಯಲು ಕಾರಣವಾದವು. ಬುದ್ಧನ ಅವಶೇಷಗಳನ್ನಿಟ್ಟು ಅವುಗಳ ರಕ್ಷಣೆಗಾಗಿ 'ಸ್ತೂಪಗಳು' ನಿರ್ಮಾಣವಾದವು. ಇದನ್ನು ಬೃಹತ್ ಶಿಲಾ ಸಂಸ್ಕೃತಿಯ ಸಮಾಧಿಯ ಮುಂದುವರಿದ

ಅಂಶವೆಂದು ಗುರುತಿಸಬಹುದು. ದಕ್ಷಿಣ ಭಾರತದಲ್ಲಿ ಈ ರೀತಿಯ ವೃತ್ತಾಕಾರದಲ್ಲಿ ನಿರ್ಮಿಸಿರುವ ಸಮಾಧಿಗಳನ್ನು ಕಾಣಬಹುದು.[೮] ಕರ್ನಾಟಕದಲ್ಲಿ ಈ ರೀತಿಯ ವಾಸ್ತುರಚನೆಯುಳ್ಳ ಕಟ್ಟಡಗಳು ಶಾತವಾಹನರ ಆಳ್ವಿಕೆಯ ಅನೇಕ ನೆಲೆಗಳಲ್ಲಿ ಕಂಡು ಬಂದಿವೆ.

ಗುಪ್ತರು ಮೊಟ್ಟಮೊದಲು ಕಲ್ಲಿನಿಂದ ದೇವಾಲಯವನ್ನು ಕಟ್ಟಲು ಪ್ರಾರಂಭಿಸಿದರು. ಅದುವರೆಗೂ ಸಾಧಾರಣವಾಗಿ ಇಟ್ಟಿಗೆ, ಮರ, ಮಣ್ಣುಗಳಿಂದ ದೇಗುಲಗಳನ್ನು ನಿರ್ಮಿಸಲಾಗುತ್ತಿತ್ತು. ಅವು ಬೇಗ ನಾಶ ಹೊಂದುವಂತಹ ವಸ್ತುಗಳಿಂದ ನಿರ್ಮಿಸಿದ ವಾಸ್ತುರಚನೆಗಳಾಗಿದ್ದರಿಂದ, ಗುಪ್ತರ ದೇವಾಲಯಗಳು ಸರಳತೆ ಹಾಗೂ ನಿರಾಲಂಕೃತವಾಗಿ ನಿರ್ಮಾಣಗೊಂಡಿವೆ. ಕರ್ನಾಟಕದಲ್ಲಿ ಕದಂಬರ ಅವಧಿಯಲ್ಲಿ ಶಿಲಾವಸ್ತುಗಳಿಂದ ನಿರ್ಮಾಣಗೊಂಡಿರುವ ದೇವಾಲಯಗಳನ್ನು ಕಾಣಬಹುದು. ಕ್ರಿ.ಶ. ೨ನೇ ಶತಮಾನದಿಂದ ಮೈಸೂರು ಒಡೆಯರ ಅವಧಿಯವರೆಗೆ ವಾಸ್ತುಶಿಲ್ಪಕಲೆಯ ಉಗಮ ಮತ್ತು ವಿಕಾಸದ ಹೆಜ್ಜೆಗಳನ್ನು ಗುರುತಿಸಬಹುದು.

ಗುಪ್ತರು ಕಲ್ಲಿನ ದೇವಾಲಯಗಳನ್ನು ನಿರ್ಮಿಸಿದಂತೆ ನಂತರದಲ್ಲಿ ಬಾದಾಮಿ ಚಾಲುಕ್ಯ ಹಾಗೂ ಪಲ್ಲವರು ಸಹ ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಶಿಲೆಯಿಂದ ದೇವಾಲಯಗಳನ್ನು ನಿರ್ಮಿಸಿದರು. ನಂತರದ ರಾಷ್ಟ್ರಕೂಟರ ಅವಧಿಯಲ್ಲಿ ವಾಸ್ತುಶಿಲ್ಪವು ಸ್ಪಷ್ಟ ರೂಪವನ್ನು ಪಡೆದುಕೊಂಡಿತು. ಗೃಹನಿರ್ಮಾಣ ವಸ್ತುವಿನಲ್ಲಿ ಬಾದಾಮಿ ಚಾಲುಕ್ಯರಿಗಿಂತಲೂ ಉತ್ತಮವಾದ ಕಟ್ಟಡ ರಚನೆಗಳನ್ನು ಕಾಣಬಹುದು. ಕಲ್ಯಾಣಿ ಚಾಲುಕ್ಯರು ದೇವಾಲಯಗಳನ್ನು ಹೆಚ್ಚು ಕಪ್ಪು ಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲಿನಲ್ಲಿ (ಕ್ಲೋರೈಟಿಕ್ ಸಿಸ್ಟ್) ನಿರ್ಮಿಸಿದ್ದಾರೆ. ಆದುದರಿಂದ ಅವರ ದೇವಾಲಯಗಳು ಅತ್ಯಂತ ಸೂಕ್ಷ್ಮ ಕೆತ್ತನೆ ಹಾಗೂ ಹೆಚ್ಚು ಅಲಂಕಾರಿಕವಾಗಿವೆ.[೯]

ಹೊಯ್ಸಳರ ಕಾಲವು ದೇವಾಲಯಗಳ ನಿರ್ಮಾಣ ವಿಕಾಸದಲ್ಲಿ ಆಕರ್ಷಕವಾದ ಕಾಲಘಟ್ಟ ಎನ್ನಬಹುದು. ಇವರು ತಮ್ಮ ದೇವಾಲಯಗಳನ್ನು ನಿರ್ಮಿಸಲು ಬಳಸಿದ ಮಾಧ್ಯಮ ಅತ್ಯಂತ ಸೂಕ್ಷ್ಮ ಕೆತ್ತನೆಗಳು, ನಿರ್ಮಾಣ ಶೈಲಿಯಲ್ಲಿ 'ಹೊಯ್ಸಳ ಶೈಲಿ' ಎಂದೇ ಪ್ರತ್ಯೇಕವಾಗಿ ಗುರುತಿಸಿಕೊಂಡಿದೆ.[೧೦] ಹೊಯ್ಸಳರ ನಂತರ ದಕ್ಷಿಣ ಭಾರತದಲ್ಲಿ ವಿಜಯನಗರ ಅರಸರ ಕಾಲಕ್ಕೆ ದ್ರಾವಿಡ ಶೈಲಿ ಉಚ್ಛ್ರಾಯ ಸ್ಥಿತಿ ತಲುಪಿರುವುದನ್ನು ಕಾಣಬಹುದು. ಇವರು ದೇವಾಲಯಗಳನ್ನು ನಿರ್ಮಿಸಲು ಗ್ರಾನೈಟ್ ಶಿಲೆಯನ್ನು ಬಳಸಿದ್ದರಿಂದ ಹೆಚ್ಚಿನ ಅಲಂಕಾರಿಕ ಅಂಶಗಳು ಕಂಡುಬರುವುದಿಲ್ಲ.

ಕನಕಪುರ ಪಟ್ಟಣದಲ್ಲಿರುವ ದೇವಾಲಯಗಳು ವಿಜಯನಗರ ಶೈಲಿಯಲ್ಲಿ ನಿರ್ಮಾಣಗೊಂಡಿವೆ. ವಿಜಯನಗರ ಅರಸರ ಅಧೀನ ಪಾಳೆಯಗಾರರ ಕಾಲದಲ್ಲಿ ನಿರ್ಮಾಣವಾಗಿರಬಹುದಾದ,[೧೧] ಇಲ್ಲಿನ ದೇವಾಲಯಗಳ ಬಗೆಗಿನ ಐತಿಹಾಸಿಕ ವಿವರಗಳನ್ನು ತಿಳಿದುಕೊಳ್ಳಲು ಶಾಸನಗಳಾಗಲಿ ಅಥವಾ ಆನುಷಂಗಿಕ ಆಕರಗಳಾಗಲಿ ದೊರಕದಿರುವುದು ದೊಡ್ಡ ತೊಡಕಾಗಿದೆ. ಕ್ಷೇತ್ರಕಾರ್ಯ

ಸಂದರ್ಭದಲ್ಲಿ ಕನಕಪುರ ಪಟ್ಟಣದಲ್ಲಿರುವ ದೇವಾಲಯಗಳ ಐತಿಹಾಸಿಕತೆ, ನಿರ್ಮಾಣ ಹಾಗೂ ವಾಸ್ತುಶಿಲ್ಪದ ಕುರಿತ ಮಾಹಿತಿಗಳನ್ನು ಸಂಗ್ರಹಿಸಿಕೊಂಡಿದ್ದು, ಅವುಗಳನ್ನು ಈ ಮುಂದಿನಂತೆ ವಿವರಿಸಲಾಗಿದೆ.

ರಂಗನಾಥಸ್ವಾಮಿ ದೇವಾಲಯ

ಕನಕಪುರ ಪಟ್ಟಣದಲ್ಲಿರುವ ಇತಿಹಾಸ ಪ್ರಸಿದ್ದ ದೇವಾಲಯವಾದ ಶ್ರೀರಂಗನಾಥಸ್ವಾಮಿ ದೇವಾಲಯವು ವಿಜಯನಗರ ಶೈಲಿಯಲ್ಲಿದ್ದು, ವಿಜಯನಗರ ಸಂಸ್ಥಾನಿಕರ ಅಧೀನರಿಂದ ನಿರ್ಮಾಣವಾಗಿರಬಹುದು. ಈ ದೇವಾಲಯದ ಐತಿಹಾಸಿಕ ವಿವರಗಳನ್ನು ತಿಳಿಯಲು ಆಧಾರಗಳ ಕೊರತೆಯಿದ್ದು, ಚನ್ನಪಟ್ಟಣದ ಜಗದೇವರಾಯನ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಗೆಜೆಟಿಯಿರ್‌ನಲ್ಲಿ ಉಲ್ಲೇಖವಾಗಿದೆ. ಆದರೆ ಅದಕ್ಕೆ ಪೂರಕವಾದ ಆಧಾರಗಳನ್ನು ಸೂಚಿಸಿಲ್ಲವಾದರಿಂದ ದೇವಾಲಯದ ನಿರ್ಮಾತೃ ಯಾರು, ಯಾವ ಕಾಲಾವಧಿಯಲ್ಲಿ ನಿರ್ಮಾಣವಾಯಿತು ಎಂದು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಮೈಸೂರು ಪುರಾತತ್ವ ಇಲಾಖೆಯ (MAR, 1938, pb.1940, pb. 44-45) ವರದಿಯಲ್ಲಿ ರಂಗನಾಥ ದೇವಾಲಯವು ಜಗದೇವರಾಯನ ಕಾಲಕ್ಕೆ ಸೇರಿದೆ ಎಂದು ಉಲ್ಲೇಖಿಸಲಾಗದೆ. ಇದರಲ್ಲಿ ದೇವಾಲಯಕ್ಕೆ ಸಂಬಂಧಿಸಿದ ವಾಸ್ತುಶಿಲ್ಪದ ಲಕ್ಷಣಗಳ ಕೆಲವು ವಿವರಗಳಷ್ಟೇ ತಿಳಿದುಬರುತ್ತದೆ. ಈ ವರದಿಯ ಹಿನ್ನೆಲೆಯನ್ನು ಇಟ್ಟುಕೊಂಡು ಕ್ಷೇತ್ರಕಾರ್ಯ ಕೈಗೊಂಡು ದೇವಾಲಯದ ಮಾಹಿತಿಗಳನ್ನು ಸಂಗ್ರಹಿಸಿಕೊಂಡಿದ್ದು, ಅದನ್ನು ಮುಂದಿನಂತೆ ವಿವರಿಸಲಾಗಿದೆ.

ರಂಗನಾಥಸ್ವಾಮಿ ದೇವಾಲಯ ಲಕ್ಷಣಗಳು

ಈ ದೇವಾಲಯವು ಚನ್ನಪಟ್ಟಣದ ಅಪ್ರಮೇಯ ದೇವಾಲಯ ಮತ್ತು ಮಾಗಡಿಯ ರಂಗನಾಥಸ್ವಾಮಿ ದೇವಾಲಯದ ವಾಸ್ತುವಿನ್ಯಾಸವನ್ನು ಹೊಂದಿದೆ. ಇದರ ಸಂಪೂರ್ಣ ಆಧಾರಕ್ಕಾಗಿ ಕಲ್ಲಿನ ಕಂಬಗಳು, ಮೇಲ್ಛಾವಣಿಯಲ್ಲಿ ಕಲ್ಲಿನ ಚಪ್ಪಡಿಗಳನ್ನು ಹೊಂದಿದ್ದು, ಇಟ್ಟಿಗೆಯಿಂದ ಆವೃತವಾಗಿರುವ ವಿಶಾಲವಾದ ಕೋಟೆಯ ಮಾದರಿಯ ಆವರಣದಲ್ಲಿದೆ. ದೇವಾಲಯದ ಮುಖ್ಯಪ್ರವೇಶ ದ್ವಾರವು ನಾಲ್ಕು ಬೃಹತ್ ಕಲ್ಲಿನ ಕಂಬಗಳನ್ನು ಒಳಗೊಂಡಿದ್ದು ಅಷ್ಟೇನೂ ಎತ್ತರವಿಲ್ಲದ ಗೋಪುರವು ದ್ರಾವಿಡ ಶೈಲಿಯ ವಿನ್ಯಾಸವನ್ನು ಹೊಂದಿದೆ. ಪ್ರವೇಶ ದ್ವಾರದ ಒಳಭಾಗದ ವಿಶಾಲ ಅಂಗಳದ ಮಧ್ಯದಲ್ಲಿ ಸುಮಾರು ೨೫ಅಡಿ ಎತ್ತರದ ಏಕಶಿಲೆಯ ಗರುಡಗಂಭ ಎದುರಾಗುತ್ತದೆ. ಇದರ ಕೆಳ ಭಾಗದಲ್ಲಿ ಒಂದು ಪೀಠವಿದ್ದು, ಆ ಪೀಠವು ಕಂಬಕ್ಕೆ ಆಸರೆಯಾಗಿದೆ. ಗರುಡಗಂಭದ ಕೆಳಭಾಗದಲ್ಲಿ ಶಂಖ, ಚಕ್ರ ಮತ್ತು ಗರುಡದ ಉಬ್ಬು ಶಿಲ್ಪಗಳ ಕೆತ್ತನೆಯಿದ್ದು, ಗರುಡಗಂಭದ ಮೇಲ್ಭಾಗದ ತುದಿಯಲ್ಲಿ ದೀಪನ್ನಿಡಲು ಅನುಕೂಲ ವಾಗುವಂತೆ ಸ್ಥಳ ವಿನ್ಯಾಸಗೊಳಿಸಲಾಗಿದೆ.

ಪ್ರವೇಶ ದ್ವಾರದ ಬಲಪಾರ್ಶ್ವಕ್ಕೆ ಸುಮಾರು ೨೫ ಅಡಿ ಅಗಲ, ೫ ಅಡಿ ಎತ್ತರದ ವೇದಿಕೆ ಇದ್ದು ಈ ವೇದಿಕೆಯನ್ನು ಹಬ್ಬಹರಿದಿನಗಳ ಸಂದರ್ಭದಲ್ಲಿ, ನ್ಯಾಯ ಪಂಚಾಯಿತಿ

ಸಂದರ್ಭದಲ್ಲಿ ಬಳಸಲಾಗುತ್ತಿತ್ತು ಇದರ ಎಡ ಮತ್ತು ಬಲ ಭಾಗದಲ್ಲಿ ಮೆಟ್ಟಿಲುಗಳಿವೆ. ಗರುಡಗಂಭದಿಂದ ಮುಂದೆ ದೇವಾಲಯದ ಮತ್ತೊಂದು ಪ್ರವೇಶದ್ವಾರ ಕಂಡುಬರುತ್ತದೆ ಅದರ ಎಡಭಾಗದಲ್ಲಿ ದೇವಾಲಯದ ರಥವನ್ನು ನಿಲ್ಲಿಸಲು ವ್ಯವಸ್ಥೆ ಮಾಡಲಾಗಿದೆ. ಪ್ರವೇಶದ್ವಾರವು ದ್ರಾವಿಡ ಶೈಲಿಯ ದೇವಾಲಯಗಳ ಮಾದರಿಯಲ್ಲಿದ್ದು, ಬೃಹತ್ ಮಾದರಿಯ ಎರಡು ಕಲ್ಲುಗಳ ಜಗತಿಯು ಎಡ ಮತ್ತು ಬಲ ಭಾಗದಲ್ಲಿದೆ. ಪ್ರವೇಶದ್ವಾರದ ತರುವಾಯ ಪಂಚಲೋಹದಿಂದ ಮಾಡಿದ ೨೦ ಅಡಿ ಎತ್ತರದ ಜೈನ ಮಾನಸ್ತಂಭ ಮಾದರಿಯ ಮತ್ತೊಂದು ಗರುಡಗಂಭವಿದ್ದು, ಈ ಕಂಬವೂ ಸಹ ತಳಭಾಗದಲ್ಲಿ ಶಂಖ, ಚಕ್ರ, ಗರುಡದ ಉಬ್ಬುಶಿಲ್ಪಗಳ ಕೆತ್ತನೆಗಳನ್ನು ಒಳಗೊಂಡಿದೆ. ದೇವಾಲಯದ ಒಳಭಾಗದಲ್ಲಿ ವಿಶಾಲವಾದ ಪ್ರಾಂಗಣದ ನಡುವೆ ರಂಗನಾಥ ದೇವಾಲಯವಿದ್ದು, ಇದರ ಮುಂಭಾಗದ ಗೋಪುರದಲ್ಲಿರುವ ವಿಷ್ಣುವಿನ ದಶಾವತಾರದ ಮೂರ್ತಿಗಳನ್ನು ಸಿಮೆಂಟ್ ಮಾದರಿಯ ಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಪ್ರದಕ್ಷಿಣಾ ಪಥವಿಲ್ಲದ ಗರ್ಭಗೃಹ, ಮುಖಮಂಟಪ, ನಾಲ್ಕು ಕಂಬಗಳ ನವರಂಗ, ಸಾಧಾರಣ ಅಲಂಕಾರವನ್ನು ಹೊಂದಿರುವ ಗೋಡೆ ಮತ್ತು ಅದರಲ್ಲಿ ಮೇಲ್ಛಾವಣಿಗೆ ಹೊಂದಿಕೊಂಡಿರುವ ಕಂಬಗಳಿದ್ದು ಮೇಲ್ಛಾವಣಿ ಸಂಪೂರ್ಣವಾಗಿ ಕಲ್ಲು ಚಪ್ಪಡಿಗಳಿಂದ ನಿರ್ಮಾಣವಾಗಿದೆ. ನವರಂಗದಲ್ಲಿ ಅಷ್ಟಕೋನಾಕೃತಿ ಕಂಬಗಳ ಮೇಲೆ ನರಸಿಂಹ, ವಾಲಿ, ಸುಗ್ರೀವ, ಕೃಷ್ಣ ಮೊದಲಾದ ಉಬ್ಬುಶಿಲ್ಪಗಳ ಕೆತ್ತನೆಗಳಿವೆ. ವಿಶ್ವಕ್ಸೇನ, ಆಳ್ವಾರರ, ಕೋದಂಡರಾಮ, ಲಕ್ಷ್ಮಣ ಹಾಗು ಸೀತೆಯರ ಲೋಹಪ್ರತಿಮೆಗಳನ್ನು ನವರಂಗದಲ್ಲಿ ಇಡಲಾಗಿದೆ. ಗರ್ಭಗೃಹದ ಬಲಭಾಗದಲ್ಲಿ ಪ್ರತ್ಯೇಕವಾದ ಸಣ್ಣಗುಡಿಯಿದ್ದು, ಅದರಲ್ಲಿ ರಂಗನಥನೆಂದು ಕರೆಯಲ್ಪಡುವ ಪದ್ಮನಾಭನ ಒಂನದು ಸಾಮಾನ್ಯ ಮೂರ್ತಿಯಿದೆ ಹಾಗೂ ಗರ್ಭಗೃಹದ ಎಡಭಾಗದ ಗುಡಿಯಲ್ಲಿ ಕುಳಿತ ಭಂಗಿಯಲ್ಲಿರುವ ಲಕ್ಷ್ಮಿಯ ಮೂರ್ತಿಯೂ ಸಹ ಒಂದು ಸಾಮಾನ್ಯವಾದ ರಚನೆಯಾಗಿದೆ. ಈ ದೇವಾಲಯದ ಗರ್ಭಗೃಹದ ಮೇಲ್ಬಾಗದಲ್ಲಿ ಅಷ್ಟೇನು ಎತ್ತರವಿಲ್ಲದ ಹಾಗೂ ಅಧಿಷ್ಠಾನದಿಂನದ ಮೇಲ್ಭಾಗಕ್ಕೆ ಕಿರಿದಾಗುತ್ತಾ ಹೋಗಿ ಏಕ ಕಳಶದಿಂದ ಅಂತ್ಯವಾಗುವ ಚೌಕಾಕಾರದ ಗೋಪುರವಿದೆ. ದಕ್ಷಿಣ ಕರ್ನಾಟಕದ ಎಲ್ಲ ವೈಷ್ಣವ ದೇವಾಲಯದ ಮಾದರಿಯಲ್ಲೇ ಈ ದೇವಾಲಯದ ಪ್ರಾಕಾರದ ಒಳಗೆ ಬಾವಿ, ಅರ್ಚಕರ ಅಥವಾ ಪ್ರಸಾದ ತಯಾರಿಸುವ ಕೊಠಡಿ ಇದೆ.

ಮಹದೇವೇಶ್ವರಸ್ವಾಮಿ ದೇವಾಲಯ

ಕನಕಪುರ ಪಟ್ಟಣದ ಅರ್ಕಾವತಿ ನದಿಯ ಎಡದಂಡೆಯ ಮೇಲಿರುವ ಮಳಗಾಳಿನ ಮಹದೇವೇಶ್ವರ ದೇವಾಲಯ ವಿಜಯನಗರ ವಾಸ್ತುಶಿಲ್ಪದ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಈ ದೇವಾಲಯದ ನಿರ್ಮಾಣದ ವಿವರಗಳನ್ನು ತಿಳಿಯಲು ಈವರೆಗೂ ಚಾರಿತ್ರಿಕ ಆಧಾರಗಳು ಕಂಡುಬಂದಿಲ್ಲದಿದ್ದರೂ, ದೇವಾಲಯದ ವಾಸ್ತು ಶೈಲಿಯ ಹಿನ್ನೆಲೆಯಿಂದ ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಿದೆ ಎನ್ನಬಹುದು. ಶೈವ ಅಂದರೆ ಶಂಕರಾಚಾರ್ಯರ ಪಂಥಕ್ಕೆ ಸೇರಿದ ದೇವಾಲಯ ಪ್ರಸ್ತುತ ಮುಜರಾಯಿ ಇಲಾಖೆಯ ಒಡೆತನದಲ್ಲಿದೆ. ಈ ದೇವಾಲಯ

ಇಲ್ಲಿನ ಅರ್ಚಕರ ಪ್ರಕಾರ ಸುಮಾರು ೭೦೦ ವರ್ಷಗಳ ಇತಿಹಾಸವನ್ನು ಹೊಂದಿದ್ದು, ದೇವಾಲಯದ ಪ್ರವೇಶ ಮತ್ತು ಒಳಭಾಗದಲ್ಲಿ ಮೂರು ಶಿಲಾಶಾಸನಗಳಿವೆ. ಹಾಗೆಯೆ ಈ ದೇವಾಲಯಕ್ಕೆ ಒಂದು ಐತಿಹ್ಯವಿದ್ದು, ಇಲ್ಲಿ ಕಿವುಡ ಮತ್ತು ಮೂಗನೊಬ್ಬ ಉಳುಮೆ ಮಾಡುತ್ತಿದ್ದಾಗ ನೇಗಿಲಿಗೆ ಶಿವಲಿಂಗವೊಂದು ದೊರೆತು ಅದನ್ನು ಇಲ್ಲಿ ಪ್ರತಿಷ್ಠಾಪಿಸಲಾಗಿದೆ. ದೇವಾಲಯವನ್ನು ವಿಶಾಲವಾದ ಜಾಗದಲ್ಲಿ ನಿರ್ಮಿಸಲಾಗಿದ್ದು ಸುತ್ತಲೂ ವಿಸ್ತಾರವಾಗಿರುವ ಪ್ರಾಕಾರ ಗೋಡೆಯ ಮಧ್ಯಭಾಗದಲ್ಲಿ ದೇವಾಲಯವಿದೆ.

ಮಹದೇವೇಶ್ವರಸ್ವಾಮಿ ದೇವಾಲಯದ ಲಕ್ಷಣಗಳು

ಪ್ರಾಕಾರ ಗೋಡೆಗೆ ಹೊಂದಿಕೊಂಡಿರುವ ಮುಖ್ಯ ಪ್ರವೇಶದ್ವಾರವು ಮರದಿಂದ ಮಾಡಿದ ಬಾಗಿಲುಗಳನ್ನು ಹೊಂದಿದ್ದು ಆ ಬಾಗಿಲ ಗೋಡೆಯ ಮೇಲೆ ಬೃಹತ್ ನಂದಿಯನ್ನು ಗಾರೆಯಿಂದ ನಿರ್ಮಿಸಲಾಗಿದೆ. ವಿಶಾಲವಾದ ಒಳ ಪ್ರಾಂಗನದಲ್ಲಿ ಮೂರು ಅಡಿ ಎತ್ತರದ ಪೀಠದ ಮೇಲಿರುವ ಗರುಡಗಂಭ ಸುಮಾರು ೧೦ ಅಡಿ ಎತ್ತರ ಮತ್ತು ೧.೫ಅಡಿ ದಪ್ಪವಾಗಿದೆ. ನಂತರ ೫೦ ಅಡಿ ಉದ್ದ, ೩೦ಅಡಿ ಅಗಲವಾದ ಮಹದೇಶ್ವರನ ದೇವಾಲಯ ನಾಲ್ಕು ಕಂಬಗಳ ಮುಖಮಂಟಪ, ಮರದಿಂದ ಮಾಡಿದ ಬಾಗಿಲು, ನಾಲ್ಕು ಕಂಬಗಳುಳ್ಳ ಪ್ರಾಂಗಣ, ಅಂತರಾಳ ಮತ್ತು ಗರ್ಭಗೃಹವನ್ನು ಹೊಂದಿದೆ. ಗರ್ಭಗೃಹದಲ್ಲಿ ಅತಿ ಚಿಕ್ಕದಾದ ೨ ರಿಂದ ಮೂರು ಅಡಿ ಎತ್ತರದ ಶಿವಲಿಂಗವಿದ್ದು, ಶಿವಲಿಂಗಕ್ಕೆ ನೇರವಾಗಿ ಅಂತರಾಳದ ಮುಂಭಾಗದಲ್ಲಿ ಕಪ್ಪುಕಲ್ಲಿನಿಂದ ಕಡೆದ ನಂದಿಯ ವಿಗ್ರಹವಿದೆ.

ಗರ್ಭಗೃಹದ ದ್ವಾರದ ಎರಡು ಪಾರ್ಶ್ವಗಳಲ್ಲಿ ತುಂಬು ಯೌವ್ವನದ ಸ್ತ್ರೀಯರ ಉಬ್ಬು ಶಿಲ್ಪಗಳಿವೆ. ಗರ್ಭಗೃಹದ ಮೇಲೆ ನಂದಿಯ ವಿಗ್ರಹಗಳುಳ್ಳ, ಗಾರೆಯಿಂದ ನಿರ್ಮಿಸಿರುವ ಗೋಪುರ ತುದಿಯಲ್ಲಿ ಒಂದು ಕಳಸವನ್ನು ಜೋಡಿಸಲಾಗಿದೆ. ದೇವಾಲಯದ ಒಳಭಾಗದ ಪ್ರಾಂಗಣದಲ್ಲಿರುವ ನಾಲ್ಕು ಕಲ್ಲಿನ ಕಂಬಗಳು ೨ ಅಡಿ ದಪ್ಪದ ಎಂಟು ಅಡಿ ಎತ್ತರವಿದ್ದು ಛಾವಣಿಗೆ ಆಸರೆಯಾಗಿವೆ. ಛಾವಣಿ ಪೂರ್ಣವಾಗಿ ಕಲ್ಲಿನ ಚಪ್ಪಡಿಗಳಿಂದ ನಿರ್ಮಿತವಾಗಿದೆ. ದೇವಾಲಯದ ಹೊರ ಭಾಗದ ಆವರಣದಲ್ಲಿ ಗಣೇಶ, ನಾಗದೇವತೆಗಳ ಶಿಲ್ಪಗಳಿವೆ. ಜೊತೆಗೆ ಬಲಪಾರ್ಶ್ವದಲ್ಲಿ ಪ್ರಸನ್ನ ಹಾಗು ಪಾರ್ವತಿ ಮಂದಿರವಿದೆ.

ಕೋದಂಡರಾಮ ದೇವಾಲಯ

ಕೋದಂಡರಾಮ ಕನಕಪುರ ಪಟ್ಟಣದ ಕೋಟೆಯ ಉತ್ತರ ಅಂಚಿನಲ್ಲಿರುವ ಕೋದಂಡರಾಮಸ್ವಾಮಿ ದೇವಾಲಯ ಕೂಡ ವಿಜಯನಗರ ವಾಸ್ತು ಶೈಲಿಯಲ್ಲಿದ್ದು, ಇದು ಕಲ್ಲಿನ ಕಂಬಗಳು ಹಾಗೂ ಕಲ್ಲಿನ ಚಪ್ಪಡಿಗಳಿಂದ ನಿರ್ಮಾಣವಾಗಿದೆ. ಪಟ್ಟಣದಲ್ಲಿರುವ ರಂಗನಾಥಸ್ವಾಮಿ ದೇವಾಲಯದ ಮಾದರಿಯಲ್ಲಿ ವಿಜಯನಗರ ಶೈಲಿಯ ಲಕ್ಷಣಗಳನ್ನು ಒಳಗೊಂಡಿದ್ದು ಗರ್ಭಗೃಹದಲ್ಲಿ ರಾಮ, ಲಕ್ಷ್ಮಣ, ಸೀತೆಯರ ವಿಗ್ರಹಗಳು ಮತ್ತು ಗರ್ಭಗೃಹದ

ಎದುರಿಗೆ ಆಂಜನೇಯನ ವಿಗ್ರಹವಿದೆ. ಆದರೆ ದೇವಾಲಯದ ಐತಿಹಾಸಿಕ ವಿವರಗಳನ್ನು ತಿಳಿಯಲು ಆಧಾರಗಳ ದೊರೆತಿಲ್ಲ. ಆದ್ದರಿಂದ ಈ ದೇವಾಲಯದ ವಾಸ್ತು ವಿನ್ಯಾಸದ ಲಕ್ಷಣಗಳ ಮಾಹಿಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಿಕೊಂಡಿದ್ದು ಅವುಗಳ ಆಧಾರದ ಮೇಲೆ ಇದರ ವಾಸ್ತು ವಿವರಗಳನ್ನು ಕೆಳಗೆ ನಿರೂಪಿಸಲಾಗಿದೆ.

ಕೋದಂಡರಾಮ ದೇವಾಲಯದ ಲಕ್ಷಣಗಳು

ಸರಳವಾದ ವಿನ್ಯಾಸವನ್ನು ಹೊಂದಿರುವ ಮುಖ್ಯ ಪ್ರವೇಶದ್ವಾರ, ಅದಕ್ಕೆ ಹೊಂದಿ ಕೊಂಡಂತಿರುವ ವಿಶಾಲವಾದ ಪ್ರಾಕರವನ್ನು ಹೊಂದಿರುವ ಈ ದೇವಾಲಯವು ಅರ್ಚಕರ ಗೃಹಗಳು, ಬಾವಿ, ಪ್ರಸಾದ ಗೃಹ, ಮರದಿಂದ ಮಾಡಿದ ೧೫ ಅಡಿ ಎತ್ತರದ ಗರುಡಗಂಭವನ್ನು ಹೊಂದಿದೆ. ಪ್ರವೇಶದ್ವಾರ ಮತ್ತು ದೇವಾಲಯದ ಮುಖ್ಯದ್ವಾರದ ಮಧ್ಯಭಾಗದಲ್ಲಿ ೩೨ ಕಂಬಗಳುಳ್ಳ ಪ್ರಾಂಗಣವಿದ್ದು ಈ ಕಂಬಗಳು ಸುಮಾರು ೧೦ ಅಡಿ ಎತ್ತರವಾಗಿರುವುದು ಮಾತ್ರವಲ್ಲದೆ ಛಾವಣಿಗೆ ಆಸರೆಯಾಗಿವೆ. ಕೆಲವು ಕಂಬಗಳ ಮೇಲೆ ಮಾತ್ರ ಗಣೇಶನ, ಚಾಮುಂಡಿಯ ಉಬ್ಬು ಶಿಲ್ಪಗಳಿದ್ದು ಉಳಿದವುಗಳು ಸಾಮಾನ್ಯ ವಿನ್ಯಾಸವನ್ನು ಹೊಂದಿವೆ ಹಾಗೂ ಪ್ರಾಂಗಣದ ಎಡ ಮತ್ತು ಬಲಭಾಗದಲ್ಲಿ ಎರಡು ಅಡಿ ಎತ್ತರದ ಚತುರ್ಮುಖ ವಿನ್ಯಾಸದ ಜಗತಿಗಳಿದ್ದು ಇಲ್ಲಿ ಪ್ರವಚನಗಳು, ಹರಿಕಥೆ ಹಾಗು ಇನ್ನಿತರ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಲಾಗುತ್ತಿತ್ತು. ದೇವಾಲಯದ ಒಳಭಾಗದಲ್ಲಿನ ದ್ವಾರದ ಎರಡು ಪಾರ್ಶ್ವದಲ್ಲಿ ದ್ವಾರಪಾಲಕರ ವಿಗ್ರಹಗಳು ಮತ್ತು ಕಂಬಗಳಿಂದ ಕೂಡಿದ ಪ್ರಾಂಗಣ, ಅಂತರಾಳ ಮತ್ತು ಗರ್ಭಗೃಹವಿದೆ. ಗರ್ಭಗೃಹದ ಮೇಲಿರುವ ಚೌಕಾಕಾರದ ಗೋಪುರವು ಹಂತಹಂತವಾಗಿ ಕಿರಿದಾಗುತ್ತಾ ಹೋಗಿ ಒಂದು ಕಳಸದಲ್ಲಿ ಅಂತ್ಯವಾಗುತ್ತದೆ. ವಿಮಾನ ಗೋಪುರದಲ್ಲಿ ವಿಷ್ಣುವಿನ ಮತ್ತು ರಾಮಾಯಣಕ್ಕೆ ಸಂಬಂಧಿಸಿದ ಮೂರ್ತಿಗಳನ್ನು ಗಾರೆಯಿಂದ ನಿರ್ಮಿಸಲಾಗಿದೆ. ದೇವಸ್ಥಾನದ ಒಳಭಾಗದಲ್ಲಿರುವ ಕಲ್ಲಿನ ಚಪ್ಪಡಿಗಳು ಸಾಧಾರಣ ವಿನ್ಯಾಸವನ್ನು ಹೊಂದಿದ್ದು ಯಾವುದೇ ಅಲಂಕಾರಿಕ ಕೆತ್ತನೆಗಳನ್ನು ಒಳಗೊಂಡಿಲ್ಲ.

ಕೋಟೆ ಆಂಜನೇಯ ದೇವಾಲಯ

ಹಿಂದೆ ಕನಕಪುರ ಪಟ್ಟಣದಲ್ಲಿ ಇದ್ದ ಕೋಟೆಯ ದಕ್ಷಿಣ ಬಾಗಿಲಿನಲ್ಲಿ, ಕೋದಂಡರಾಮ ದೇವಾಲಯದ ಮಗ್ಗುಲಿನಲ್ಲಿ ಆಂಜನೇಯನ ಪುಟ್ಟ ಗುಡಿಯೊಂದಿದೆ. ಕೋಟೆಯ ರಕ್ಷಣೆಗೆ ಇದನ್ನು ಕಟ್ಟಲಾಗಿದೆ ಎಂಬುದು ಸ್ಥಳೀಯ ಜನರ ನಂಬಿಕೆಯಾಗಿದೆ. ಈ ಪುಟ್ಟ ಗುಡಿಯಲ್ಲಿ ಒಂದು ಪೀಠದ ಮೇಲೆ ಸುಮಾರು ಐದು ಅಡಿ ಎತ್ತರ, ಮೂರು ಅಡಿ ಅಗಲವಿರುವ ಆಂಜನೇಯನ ಮೂರ್ತಿಯಿದೆ. ಇದು ಪುಟ್ಟ ಗುಡಿಯಾಗಿರುವುದರಿಂದ ವಿಶೇಷವಾದ ಬೇರೆ ವಾಸ್ತು ಲಕ್ಷಣಗಳು ಕಂಡುಬಂದಿಲ್ಲ. ಹನುಮ ಜಯಂತಿ, ರಾಮನವಮಿಯಲ್ಲಿ ಇದಕ್ಕೆ ವಿಶೇಷವಾದ ಆರಾಧನೆ ನಡೆಯುತ್ತದೆ.

ಹೊಳೆಕಟ್ಟೆ ಆಂಜನೇಯ ದೇವಾಲಯ

ಪಟ್ಟಣದಿಂದ ಬೆಂಗಳೂರು ಮಾರ್ಗಕ್ಕಿರುವ ಅರ್ಕಾವತಿ ಸೇತುವೆಯ ಬಳಿಯಿರುವ ಹೊಳೆಕಟ್ಟೆ ಆಂಜನೇಯನ ದೇವಾಲಯವು ಸುಮಾರು ೫೦೦ ವರ್ಷಗಳ ಹಿಂದೆ ವ್ಯಾಸರಾಯರಿಂದ ನಿರ್ಮಾಣವಾಗಿದೆ ಎನ್ನುತ್ತಾರೆ ಇದರ ಅರ್ಚಕರಾದ ಶ್ರೀಧರ ಮೂರ್ತಿಯವರು. ಮೊದಲು ಇದನ್ನು ಹೆಂಚಿನ ಮನೆಯಿಂದ ನಿರ್ಮಿಸಿಕೊಳ್ಳಲಾಗಿತ್ತು, ನಂತರ ೧೯೩೦ರಲ್ಲಿ ದೇವಾಲಯದ ಅಕ್ಕಪಕ್ಕದಲ್ಲಿರುವ ಜಮೀನಿನವರು ಒಂದು ಸಾಮಾನ್ಯ ಗಾರೆಯ ಕಟ್ಟಡವನ್ನು ಕಟ್ಟಿಸಿಕೊಟ್ಟರು. ಸುಮಾರು ೨೦ ಅಡಿ ಉದ್ದ, ೧೫ ಅಡಿ ಅಗಲವಿರುವ ದೇವಾಲಯದ ಮಧ್ಯ ಮಂಟಪದಲ್ಲಿ ಆಂಜನೇಯನ ಗರ್ಭಗೃಹವಿದೆ. ಗರ್ಭಗೃಹದಲ್ಲಿರುವ ಆಂಜನೇಯನ ಮೂರ್ತಿ ಮೂರು ಅಡಿ ಎತ್ತರವಾಗಿದ್ದು, ನಿಂತ ಭಂಗಿಯಲ್ಲಿದೆ. ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾಪತವಿದೆ ಹಾಗೂ ದೇವಾಲಯದ ಮೇಲೆ ರಾಮ ಮತ್ತು ಆಂಜನೇಯ ಆಲಿಂಗನರಾಗಿ ನಿಂತಿರುವಂತೆ ಮಣ್ಣಿನ ಮೂರ್ತಿಗಳನ್ನು ನಿರ್ಮಿಸಲಾಗಿದೆ. ತಾಲೂಕಿನಲ್ಲಿರುವ ಜನರು ಬಹಳ ವಿವಾಹ ಕಾರ್ಯಗಳನ್ನು ಹಿಂದಿನ ಕಾಲದಿಂದಲೂ ಇಲ್ಲಿ ನಡೆಸುತ್ತಾ ಬಂದಿರುವುದು ವಿಶೇಷವಾಗಿದೆ.

ಕೆಂಕೇರಮ್ಮನ ದೇವಾಲಯ

ಕನಕಪುರದ ಗ್ರಾಮದೇವತೆಯಾದ ಕೆಂಕೇರಮ್ಮನ ದೇವಾಲಯ "ಹಲಸಿನಮರದ ದೊಡ್ಡಿ"ಯಲ್ಲಿ ಸುಮಾರು ೨೦೦ ವರ್ಷಗಳ ಹಿಂದೆ ನಿರ್ಮಾಣಗೊಂಡಿದೆ ಎಂದು ಸ್ಥಳೀಯರು ಹೇಳುತ್ತಾರೆ. ವಿಶಾಲವಾದ ಅಂಗಳದಲ್ಲಿರುವ ಈ ದೇವಾಲಯ ಹಿಂದೆ ಒಂದು ಸಣ್ಣ ಮಂಟಪವಾಗಿತ್ತು ೨೦೧೪ರಲ್ಲಿ ದೇವಾಲಯದ ಟ್ರಸ್ಟಿನವರು ದ್ರಾವಿಡ ಶೈಲಿಯಲ್ಲಿ ವಿಶಾಲವಾದ ದೇವಾಲಯವನ್ನು ನಿರ್ಮಿಸಿದ್ದಾರೆ. ಇದರ ದ್ವಾರದ ಮೇಲಿರುವ ಐದು ಹಂತಗಳ ಎತ್ತರದ ಗೋಪುರದ ಮೇಲೆ ಹೆಣ್ಣು ದೇವತೆಗಳ ನೂರಾರು ಶಿಲ್ಪಗಳು ಹಾಗೂ ಐದು ಕಳಸಗಳು ಕಂಡುಬರುತ್ತವೆ. ದೇವಾಲಯದ ಒಳಭಾಗ ವಿಶಾಲವಾಗಿದ್ದು, ಮಧ್ಯದಲ್ಲಿರುವ ಗರ್ಭಗುಡಿಯಲ್ಲಿ ಕೆಂಕೇರಮ್ಮನ ಮೂರ್ತಿ ಬಲಗೈಯಲ್ಲಿ ತ್ರಿಶೂಲ ಹಿಡಿದು ನಿಂತ ಭಂಗಿಯಲ್ಲಿದೆ. ವಿಶಾಲವಾದ ಪ್ರದಕ್ಷಣಾ ಪತವಿದ್ದು, ಗರ್ಭಗೃಹದ ಮುಂದಿರುವ ಎಡಕೋಷ್ಟಕದಲ್ಲಿ ಗಣೇಶ ಹಾಗೂ ಬಲ ಕೋಷ್ಟಕದಲ್ಲಿ ವೀರಾಂಜನೇಯನ ಮೂರ್ತಿಗಳು ಕಂಡು ಬರುತ್ತವೆ. ಗರ್ಭಗೃಹದ ಬಾಗಿಲುವಾಡದಲ್ಲಿರುವ ತಾಮ್ರಪಟ್ಟಿಕೆಯ ಮೇಲೆ ಪಾರ್ವತಿ, ಲಕ್ಷ್ಮಿ ಕಮಲದ ಕೆತ್ತನೆಗಳಿವೆ ಹಾಗೂ ದೇವಾಲಯದ ಮುಂಭಾಗದಲ್ಲಿ ಗ್ರಾನೈಟ್‌ಕಲ್ಲಿನ ಹತ್ತು ಅಡಿ ಎತ್ತರದ ಗರಡು ಗಂಭವಿದೆ. ಪಟ್ಟಣದ ಗ್ರಾಮದೇವತೆಯಾಗಿರುವ ಕೆಂಕೇರಮ್ಮ ದೇವಿಗೆ ಪ್ರತಿವರ್ಷ ಹಬ್ಬ, ಕೊಂಡ, ಸಿಡಿ, ಬಲಿ ಮೊದಲಾದ ಆಚರಣೆಗಳು ನಡೆಯುತ್ತವೆ.

ಮೇಲಿನ ದೇವಾಲಯಗಳಲ್ಲದೆ ಪಟ್ಟಣದ ಪೇಟೆ ಭಾಗದಲ್ಲಿ ಈಚೆಯ ಕಾಲದಲ್ಲಿ ನಿರ್ಮಾಣಗೊಂಡಿರುವ ಸಣ್ಣ ದೇವಾಲಯಗಳಾದ ವಿಠ್ಠಲದೇವಾಲಯ, ರಾಮನಗುಡಿ, ಆಂಜನೇಯನ ದೇವಾಲಯಗಳಿವೆ. ಇವುಗಳಲ್ಲಿ ವಿಠ್ಠಲ ದೇವಾಲಯವನ್ನು ಪಾಂಡುರಂಗನ

ಭಕ್ತರಾದ ಮರಾಠ ಸಮುದಾಯದ ವ್ಯಾಪಾರವೃತ್ತಿಯವರು ಈ ದೇವಾಲಯವನ್ನು ನಿರ್ಮಿಸಿಕೊಂಡು ಆರಾಧನೆ ಮಾಡುತ್ತಾ ಬರುತ್ತಿದ್ದಾರೆ.

ಹೀಗೆ ಪ್ರಾಚೀನ ಕಾಲದಿಂದಲೂ ಪ್ರಸ್ತುತದವರೆಗೆ ಈ ಪಟ್ಟಣದಲ್ಲಿ ವಿವಿಧ ಧರ್ಮದ ದೇವಾಲಯಗಳು ನಿರ್ಮಾಣವಾಗುತ್ತಾ ಬಂದಿದ್ದು, ತಮ್ಮ ತಮ್ಮ ಧಾರ್ಮಿಕ ಆಚರಣೆಗಳನ್ನು ಸ್ವಚ್ಛಂದವಾಗಿ ನಡೆಸಿಕೊಂಡು ಬಂದಿದ್ದಾರೆ. ಇದು ಇಲ್ಲಿನ ವಿವಿಧ ಧರ್ಮೀಯರ ನಡುವೆ ಸಾಮರಸ್ಯ ಬೆಳೆಸಲು ಸಾಧ್ಯವಾಗಿದ್ದು, ಕೋಮು ಗಲಭೆಗೆ ಅವಕಾಶವಿಲ್ಲದಿರುವುದು ಸಂತಸದ ಸಂಗತಿಯಾಗಿದೆ.

೫.೨. ಮೂರ್ತಿಶಿಲ್ಪ

ಭಾರತದಲ್ಲಿ ದೇವರ ಆರಾಧನೆ ಹಾಗೂ ವ್ಯವಸ್ಥಿತ ದೇವಾಲಯ ನಿರ್ಮಾಣ ಆರಂಭವಾದಾಗಿನಿಂದಲೂ ದೇವತಾ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಆರಾಧನೆ ನಡೆಯುತ್ತಾ ಬಂದಿದೆ. ಯಾವುದೇ ಪಂಥದ ದೇವಾಲಯವಾಗಿರಲಿ ಆ ದೇವಾಲಯಕ್ಕೆ ಒಂದು ದೇವರ ಮೂರ್ತಿ ಇದ್ದೇ ಇರುತ್ತದೆ. ಈ ರೀತಿಯ ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು "ಮೂರ್ತಿಶಾಸ್ತ್ರ" ಎಂದು ಕರೆಯಬಹುದು.

ಮೂರ್ತಿ ಎಂಬ ಶಬ್ದಕ್ಕೆ ಪರ್ಯಾಯವಾಗಿ ಬಳಸಿದ ಶಬ್ದಗಳಲ್ಲಿ ಅದೊಂದು ಭೌತಿಕವಸ್ತು ಎಂಬಂತೆ ಗ್ರಹಿಸಲಾಗುತ್ತದೆ. ದೇವತಾ ಮೂರ್ತಿಶಿಲ್ಪದ ಕುರಿತು ಇರುವ ಪ್ರತಿಮಾ, ಬಿಂಬ, ಪ್ರತಿಕೃತಿ, ವಿಗ್ರಹ ಮೊದಲಾದ ಶಬ್ದಗಳು ಇದನ್ನು ಇನ್ನೂ ಸ್ಪಷ್ಟವಾಗಿ ಸೂಚಿಸುತ್ತವೆ. ಇವೆಲ್ಲ ಒಂದು ನಿರಾಕಾರದ ಕಲ್ಪನೆಯನ್ನು ಯಥಾವತ್ತಾಗಿ ಅನುಸರಿಸಿದ 'ವಸ್ತು' ಎಂಬ ಪರಿಕಲ್ಪನೆಯಿದೆ.[೧೨] "ಅರ್ಚ್ಯ" ಎಂಬ ಶಬ್ದ ಪೂಜಿಸಲ್ಪಡುವಂಥದ್ದು ಎಂದಾದರೆ, 'ತನು', 'ವಪು' ಮುಂತಾದ ಶಬ್ದಗಳು ಮೂರ್ತಿಯನ್ನು ದೇಹವನ್ನಾಗಿ ಗ್ರಹಿಸುವಲ್ಲಿ ಹಾಗೂ ದೇವರನ್ನು ಅದರ ಆತ್ಮವನ್ನಾಗಿ ಪ್ರತ್ಯೇಕಿಸುತ್ತಿವೆ.[೧೩]

ಮೂರ್ತಿ ಎಂಬ ಪದಕ್ಕೆ ಸಮನಾರ್ಥವಾಗಿ 'ಪ್ರತಿಮೆ' ಎಂಬ ಪದ ಪ್ರಯೋಗದಲ್ಲಿದೆ. ಅಲ್ಲದೆ ಮೂರ್ತಿಶಾಸ್ತ್ರವನ್ನು 'ಪ್ರತಿಮಾಶಾಸ್ತ್ರ' ಎಂದೂ ಸಹ ಕರೆಯಲಾಗುತ್ತದೆ. ಇಂತಹ ಪ್ರತಿಮಾ ಲಕ್ಷಣವೆಂದರೆ ಒಂದು ದೇವತೆಯ ಲಕ್ಷಣಗಳನ್ನು ಮೂರ್ತಿ ರೂಪದಲ್ಲಿ ಪ್ರಮಾಣಬದ್ಧವಾಗಿ ಹೇಗೆ ರಚಿಸಬೇಕು ಎಂಬುದನ್ನು ತಿಳಿಸುವ ಶಾಸ್ತ್ರವೇ ಮೂರ್ತಿಶಾಸ್ತ್ರ. ಶಾಸ್ತ್ರೀಯ ನಿರೂಪಣೆಯ ಪ್ರಕಾರ ಮೂರ್ತಿಯು ಒಂದು ರೂಪ ಒಂಭತ್ತು ಅಂಗಗಳನ್ನು ಒಳಗೊಂಡಿರುತ್ತದೆ. ಅವೆಂದರೆ ನ್ಯಾಸ(ರೂಪ ಸಂಯೋಜನೆ), ಅಲಂಕಾರ(ಆಭರಣ, ವಸ್ತ್ರ, ಕೇಶ), ಮುದ್ರೆ(ಹಸ್ತ ಮುದ್ರೆಗಳು), ಆಯುಧ, ಆಸನ, ವಾಹನ, ಅರಿ ಹಾಗೂ ಸುವಕ್ತ ಈ ಶಾಸ್ತ್ರೀಯ ಸಂಪ್ರದಾಯಕ್ಕೆ ಅನುಗುಣವಾಗಿ ದೇವರಮೂರ್ತಿಗಳು ರೂಪುಗೊಳ್ಳುತ್ತವೆ. ಮೂರ್ತಿಶಿಲ್ಪ ನಿರ್ಮಾಣವಾಗಿರುವುದಕ್ಕೆ ಪ್ರಾಗಿತಿಹಾಸ ಕಾಲದಿಂದಲೂ ಚಾರಿತ್ರಿಕ ಆಧಾರಗಳು ದೊರೆಯುತ್ತವೆ.[೧೪]

ಭಾರತದಲ್ಲಿ ವಿವಿಧ ನೆಲೆಗಳ ಉತ್ಖನನದಿಂದ ಮೂರ್ತಿಶಿಲ್ಪಕ್ಕೆ ಸಂಬಂಧಿಸಿದಂತೆ ಹಲವಾರು ಮಾಹಿತಿಗಳು ದೊರೆತಿವೆ. ಅವುಗಳಲ್ಲಿ ಬಿಹಾರ ರಾಜ್ಯದ ಚಿರಾಂಡ, ರಾಜಸ್ಥಾನದ ಆಹಾರ್, ಮಧ್ಯಪ್ರದೇಶದ ಕಾಯಥ, ನವದೋಲಿ,[೧೫] ಉತ್ತರ ಪ್ರದೇಶದ ಲಾಲ್-ಖಿಲಾದಲ್ಲಿ ಪ್ರಾಣಿ ಹಾಗೂ ಮಾತೃದೇವತೆಯ ಮಣ್ಣಿನ ಮೂರ್ತಿಗಳು ದೊರೆತಿವೆ. ಇವುಗಳು ನಂತರದ ಭಾರತೀಯ ಮೂರ್ತಿಶಿಲ್ಪಗಳ ಲಕ್ಷಣಗಳಿಗೆ ಪ್ರೇರಕವಾದವು. ಕರ್ನಾಟಕದ ಕುಪ್ಪಗಲ್, ಪಿಕ್ಲಿಹಾಳ, ಸಂಗನಕಲ್ಲು, ತೆಕ್ಕಲಕೋಟೆ ಮುಂತಾದ ಕಡೆ ನಡೆದ ಉತ್ಖನನಗಳಿಂದ ನೂತನ ಶಿಲಾಯುಗ ಹಾಗೂ ತಾಮ್ರ ಶಿಲಾಯುಗಕ್ಕೆ ಸೇರಿದ ಸುಡಾವೆ ಮಣ್ಣಿನ ಗೊಂಬೆಗಳು ದೊರೆತಿವೆ.[೧೬] ಇವು ಅಂದಿನ ಧಾರ್ಮಿಕ ನಂಬಿಕೆ, ಭಾವನೆ ಮತ್ತು ಪರಂಪರೆಯನ್ನು ಸೂಚಿಸುವ ಆಕರಗಳಾಗಿ ಇರುವುದಷ್ಟೇ ಅಲ್ಲದೆ ಕರ್ನಾಟಕ ಮೂರ್ತಿಶಿಲ್ಪದ ಪೂರ್ವಭಾವಿ ಹಂತವನ್ನು ಸೂಚಿಸುತ್ತವೆ.

ದಕ್ಷಿಣ ಭಾರತದಲ್ಲಿ ಶಾತವಾಹನರ ಕಲೆ ಅನೇಕ ಕಡೆ ಪ್ರಭಾವಿಸಿದೆ. ನಾಗಾರ್ಜುನಕೊಂಡ ದಲ್ಲಿರುವ ಶಿಲ್ಪಗಳು ಶಾತವಾಹನರ ಶೈಲಿಗೆ ಅತ್ಯುತ್ತಮ ಉದಾಹರಣೆಗಳಾಗಿವೆ. ಬಾದಾಮಿ ಚಾಲುಕ್ಯರ ಶಿಲ್ಪಗಳು ಕರ್ನಾಟಕದ ಐಹೊಳೆ, ಬಾದಾಮಿ, ಮಹಾಕೂಟ, ಪಟ್ಟದಕಲ್ಲು ಮುಂತಾದ ಕಡೆಗಳಲ್ಲಿ ಕಂಡುಬರುತ್ತವೆ. ಐಹೊಳೆಯ ಮೇಗುತಿ ದೇವಾಲಯ ಹುಚ್ಚಿಮಲ್ಲಿ ಗುಡಿ ಮತ್ತು ಲಾಡಾಖಾನ್ ಗುಡಿಗಳಲ್ಲಿರುವ ಶಿಲ್ಪಗಳು ಆರಂಭಿಕ ಹಂತದ ಅತ್ಯುತ್ತಮ ಶಿಲ್ಪಗಳಾಗಿವೆ. ಹೀಗೆ ವಿವಿಧ ಕಾಲಘಟ್ಟಗಳಲ್ಲಿ ಭಾರತ ಮತ್ತು ಕರ್ನಾಟಕದಲ್ಲಿ ಮೂರ್ತಿಶಿಲ್ಪದ ಕಲೆ ಬೆಳೆದುಬಂದ ಬಗೆಯನ್ನು ತಿಳಿಯಬಹುದು.

ಕನಕಪುರ ಪಟ್ಟಣ ಪರಿಸರ ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಹಲವು ಧರ್ಮಗಳ ತವರೂರಾಗಿತ್ತು. ಈ ಪ್ರದೇಶ ಹಲವು ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದರಿಂದ ವಿಭಿನ್ನ ಧರ್ಮೀಯರ ದೇವಾಲಯಗಳು ನಿರ್ಮಾಣಗೊಳ್ಳಲು ಸಾಧ್ಯವಾಗಿದೆ. ಈ ದೇವಾಲಯಗಳಲ್ಲಿ ಆಯಾ ಧರ್ಮೀಯರಿಗೆ ಸಂಬಂಧಿಸಿದ ಮೂರ್ತಿ ಪ್ರತಿಷ್ಠಾಪನೆ ಆಗಿರುವುದರ ಹಿನ್ನೆಲೆಯಲ್ಲಿ ಕನಕಪುರ ಪಟ್ಟಣದ ಪರಿಸರದಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಸಂಗ್ರಹಿಸಿರುವ ವಿವಿಧ ದೇವರುಗಳ ಮೂರ್ತಿಶಿಲ್ಪಗಳ ವಿವರಣೆಗಳನ್ನು ಮುಂದಿನಂತೆ ನಿರೂಪಿಸಲಾಗಿದೆ.

ನಂದಿ ವಿಗ್ರಹ

ಹಾರ್ಡ್‌ಸ್ಟೋನಿನಲ್ಲಿರುವ ಈ ನಂದಿ ಶಿಲ್ಪವು ಸುಮಾರು ಮೂರು ಅಡಿ ಉದ್ದ ಹಾಗೂ ಒಂದುವರೆ ಅಡಿ ಎತ್ತರವಿದೆ. ಸಾಧಾರಣ ಕೆತ್ತನೆಯಿಂದ ಕೂಡಿರುವ ನಂದಿಯು ಕಾಲುಗಳನ್ನು ಮಡಚಿಕೊಂಡಿರುವ ಭಂಗಿಯಲ್ಲಿದೆ. ನಂದಿಯ ಕೊರಳಲ್ಲಿ ಚಿಕ್ಕ ಚಿಕ್ಕ ಗಂಟೆಗಳನ್ನು ಎಣೆದಿರುವ ಕೊರಳ ಹಾರವಿದೆ. ಎರಡು ಕೊರಳ ಹಾಗೂ ಮಧ್ಯೆ ದೊಡ್ಡ ಗಂಟೆಗಳ ಕೆತ್ತನೆಯನ್ನು ಕಾಣುತ್ತೇವೆ. ಆದರ ಹಣೆಯ ಮೇಲೆ ಹಣೆಪಟ್ಟಿಯ ಕೆತ್ತನೆಯಿದ್ದು ಹಣೆಯ ಮಧ್ಯಭಾಗದಲ್ಲಿ ಎಲೆಯಾಕಾರ ಕೆತ್ತನೆಯಿದೆ. ಶಿಲ್ಪದ ಇತರೆ ಭಾಗದಲ್ಲಿ ಯಾವುದೇ ಅಲಂಕೃತ ಕೆತ್ತನೆ ಕಂಡು ಬರುವುದಿಲ್ಲ. ಈ ಶಿಲ್ಪವು ಮೂಲತಃ ಅರ್ಕಾವತಿ ನದಿಯಲ್ಲಿತ್ತು. ಕಾಲಾನಂತರ ಅದನ್ನು

ರೂರಲ್ ಕಾಲೇಜಿನ ಸಂಶೋಧನಾ ಕೇಂದ್ರದಲ್ಲಿ ಸಂರಕ್ಷಿಸಿಡಲಾಗಿದೆ. ಸ್ಥಳೀಯವಾಗಿ ಇದನ್ನು ಬಸವಣ್ಣ, ಬಸವ ಎಂದು ಕರೆಯುವರು. ಮತ್ತೊಂದು ನಂದಿ ಶಿಲ್ಪವು ದೇಗುಲಮಠದ ಶಿವನ ದೇವಾಲಯದ ಗರ್ಭಗೃಹಕ್ಕೆ ಅಭಿಮುಖವಾಗಿದೆ. ಈ ಶಿಲ್ಪವು ಬಳಪದ ಕಪ್ಪು ಶಿಲೆಯಲ್ಲಿರುವ ಇದು ನಯವಾದ ಕೆತ್ತನೆಯಿಂದ ಕೂಡಿದೆ. ಮೇಲೆ ವಿವರಿಸಿರುವ ನಂದಿಯ ಲಕ್ಷಣಗಳನ್ನು ಭಾಗಶಃ ಹೋಲುತ್ತದೆ.

ಕಾಲಭೈರವ

ಕಪ್ಪು ಮಿಶ್ರಣದ ಕಣಶಿಲೆಯಲ್ಲಿರುವ ಈ ಶಿಲ್ಪವು ಸರಳವಾದ ಪ್ರಭಾವಗಳಿಂದ ಕೂಡಿದ ದ್ವಿಭಂಗಿಯಲ್ಲಿರುವ ಕಾಲಭೈರವನಿಗೆ ನಾಲ್ಕು ಕೈಗಳಿವೆ. ನಾಲ್ಕು ಕೈಗಳಲ್ಲಿ ದಪ್ಪನೆಯ ಕಡಗಗಳಿವೆ. ಎರಡು ಕೈಗಳಲ್ಲಿ ಡಮರುಗ, ಉಳಿದ ಬಲಭಾಗದ ಕೈಯಲ್ಲಿ ಕತ್ತಿಯನ್ನು ಹಾಗೂ ಎಡಭಾಗದ ಕೈಯಲ್ಲಿ ದಕ್ಷನ ಶಿರವನ್ನು ಹಿಡಿದಿರುವ ಹಾಗೂ ನಾಯಿ ಕೆತ್ತನೆಯಿದೆ. ಸೂರ್ಯಾಕಾರದ ಕಿರೀಟ ಧಾರಣೆ, ಹಾರ, ಸರ, ರುಂಡಮಾಲೆ, ಕಿಂಕಣಿ ಮುಂತಾದ ಆಭರಣಗಳಿಂದ ಕಾಲಭೈರವ ಅಲಂಕೃತಗೊಂಡಿದ್ದಾನೆ. ಶಿಲ್ಪದ ಕೆಳಭಾಗದಲ್ಲಿ ದಕ್ಷ ಬ್ರಹ್ಮ ಮತ್ತು ಆತನ ಪತ್ನಿ ವೀರ ರಾಣಿ ಇಬ್ಬರು ಅಂಜಲಿ ಮುದ್ರೆಯಲ್ಲಿ ಆಯುಧಗಳನ್ನು ಹಿಡಿದು ನಿಂತಿರುವರು. ಈ ಶಿಲ್ಪದ ಕೆಳಗೆ ವೃಶ್ಚಿಕದ ಕೆತ್ತನೆಯು ಕಂಡು ಬರುತ್ತದೆ.

ಶಿವಲಿಂಗ

ಶಿವನನ್ನು 'ಲಿಂಗ' ರೂಪದಲ್ಲಿ ಪೂಜಿಸುವ ವಾಡಿಕೆ ಪ್ರಾರಂಭದಿಂದಲೂ ಇದೆ. ಶಿವನ ಆಯುಧಗಳಾದ ಶೂಲ, ತ್ರಿಶೂಲ, ಶಿವನಮೂರ್ತಿಯಾದ ಲಿಂಗ ಇವು ವೈದಿಕ ಸಂಸ್ಕೃತಿಯ ಯಜ್ಞಯಾಗಾದಿಗಳ ಸಂದರ್ಭದಲ್ಲಿ ಬಳಕೆಯಿದ್ದು ಯೂಪದ ರೂಪಾಂತರಗಳಾಗಿವೆ ಎಂದು ಹೇಳಲಾಗುತ್ತದೆ.[೧೭] ಲಿಂಗಗಳಲ್ಲಿ ಸ್ಥಾವರ ಮತ್ತು ಜಂಗಮ ಎನ್ನುವ ಎರಡು ಪ್ರಕಾರಗಳಿವೆ. ಸ್ಥಾವರವೆಂದರೆ ಬೃಹತ್ ಗಾತ್ರದ, ಅಲುಗಾಡದೇ ಇರುವವು. ಜಂಗಮವೆಂದರೆ ಸಣ್ಣ ಸಣ್ಣ ಕಲ್ಲುಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಯ್ಯುವಂತಹವು.[೧೮] ಜಂಗಮಲಿಂಗಕ್ಕಿಂತಲೂ ಸ್ಥಾಪರಲಿಂಗವೇ ಶ್ರೇಷ್ಠ ಪ್ರಾಚೀನ ಲಿಂಗಗಳಿಗೆ ಪೀಠವಿರಲಿಲ್ಲ. ನಂತರ ಪೀಠದ ಮೇಲೆ ಲಿಂಗವನ್ನು ಪ್ರತಿಷ್ಠಾಪಿಸಲು ಪ್ರಾರಂಭಿಸಿದರು. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಪೀಠವಿರುವ ಒಂದು ಶಿವಲಿಂಗ ಶಿಲ್ಪ ಕಂಡು ಬರುವುದು. ಇದು ವೃಷಭಾವತಿ ಮತ್ತು ಅರ್ಕಾವತಿ ನದಿಗಳು ಸೇರುವ ಪ್ರದೇಶದಲ್ಲಿ ಕಂಡು ಬರುತ್ತದೆ. ಎರಡು ಹಂತದ ವೃತ್ತಾಕಾರದ ಪೀಠದ ಮೇಲೆ ಈ ಶಿವಲಿಂಗವಿದ್ದು, ಯಾವುದೇ ರೀತಿಯ ಅಲಂಕೃತ ಕೆತ್ತನೆಗಳು ಪೀಠ ಮತ್ತು ಲಿಂಗದ ಮೇಲೆ ಕಂಡು ಬರುವುದಿಲ್ಲ. ಹಬ್ಬ-ಹರಿದಿನಗಳಲ್ಲಿ ಇದನ್ನು ಪೂಜಿಸುತ್ತಿರುವುದು ಕಂಡುಬರುತ್ತದೆ.

ಗಣೇಶ

ಗಣಪತಿಯ ಪ್ರಾಚೀನ ಶಿಲ್ಪಗಳು ನಿರಾಭರಣಗಳಾಗಿವೆ. ನಂತರದ ಕಾಲದಲ್ಲಿ ಕರಂಡ ಮುಕುಟ ಅಥವಾ ಜಟಾಮುಕುಟ, ರತ್ನಹಾರಗಳು, ಕಂಕಣ, ಉಪವೀತ, ನಾಗಯಜ್ಞೋಪವೀತ ಇನ್ನೂ ಮುಂತಾದ ಅಲಂಕಾರದಿಂದ ಕೂಡಿದವು. ಶಾಸ್ತ್ರಗಳಲ್ಲಿ ಈತನನ್ನು ವಕ್ರತುಂಡ, ಹಸ್ತವಕ್ರ, ಏಕದಂತ, ಲಂಬೋದರ ಇನ್ನು ಮುಂತಾದಾಗಿ ವರ್ಣಿಸಲಾಗಿದೆ.[೧೯] ಕನಕಪುರದ ರೂರಲ್ ಕಾಲೇಜು ಬಳಿ ಇರುವ ಗಣೇಶ ಶಿಲ್ಪವನ್ನು ಕಪ್ಪುಶಿಲೆಯಿಂದ ಕಡೆಯಲಾಗಿದೆ. ವೃತ್ತಾಕಾರದ ಪೀಠದ ಮೇಲಿರುವ ಈ ಶಿಲ್ಪದಲ್ಲಿ ಗಣೇಶನನ್ನು ಚತುರ್ಭುಜಗಳಲ್ಲಿ ಇರುವಂತೆ ಕಂಡರಿಸಿದ್ದು ಕೈಗಳಲ್ಲಿ ಶಂಖ, ಪಾಶ, ಅಂಕುಶ ಹಾಗೂ ಫಲಗಳನ್ನು ಹಿಡಿದಿರುವನು. ಕಿರೀಟದಾರಿ, ಹಾರ, ಸರ, ಕಡಗ ಹಾಗೂ ಭುಜಬಂದಿ ಮೊದಲಾದ ಆಭರಣಗಳಿಂದ ಅಲಂಕೃತಗೊಂಡಿರುವನು. ಪ್ರಸ್ತುತ ಅಧ್ಯಯನ ಪ್ರದೇಶದ ಮಳಗಾಳು ಮಹದೇಶ್ವರ ದೇವಾಲಯ, ಕಾಳಿಕಾಂಬಾ ದೇವಾಲಯ, ಕೋಟೆ ಗಣೇಶನ ದೇವಾಲಯ ಹಾಗೂ ರಂಗನಾಥ ದೇವಾಲಯದಲ್ಲಿ ಕಂಡು ಬರುವ ಗಣೇಶನ ವಿಗ್ರಹಗಳು ಸಾಮಾನ್ಯವಾಗಿ ಮೇಲ್ಕಂಡ ಲಕ್ಷಣಗಳನ್ನೇ ಹೋಲುತ್ತವೆ.

ಕಾಳಿಕಾಂಬ

ಮರದಿಂದ ಕಂಡರಿಸಿರುವ ಈ ಮೂರ್ತಿಯು ಸುಮಾರು ಐದು ಅಡಿ ಎತ್ತರ, ಮೂರು ಅಡಿ ಅಗಲವಿದೆ. ಚತುರ್ಭುಜ ಭಂಗಿಯಲ್ಲಿ ನಿಂತಿರುವ ಕಾಳಿಯ ಸುತ್ತಲೂ ಬಳ್ಳಿಯಾಕಾರದ ಕೆತ್ತನೆಯಿಂದ ಕೂಡಿದ ಪ್ರಭಾವಳಿಯಿದ್ದು, ಮಧ್ಯದಲ್ಲಿ ಸಿಂಹಮುಖದ ಕೆತ್ತನೆಯಿದೆ. ಶಿಲ್ಪದಲ್ಲಿ ಕಾಳಿಯು ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಡಮರುಗವನ್ನು ಹಿಡಿದಿರುವಳು. ಮತ್ತೆರೆಡು ಕೈಗಳನ್ನು ಅಬಯ ಮುದ್ರೆ ಹಾಗೂ ವರಮುದ್ರೆ ಭಂಗಿಯಲ್ಲಿ ಕೆತ್ತಲಾಗಿದೆ. ಕೈ ಮತ್ತು ಕಾಲುಗಳಲ್ಲಿ ವಿವಿಧ ಆಭರಣಗಳನ್ನು ಧರಿಸಿದ್ದು, ಕೊರಳಿನಲ್ಲಿ ರುಂಡಮಾಲೆಯಿದೆ. ಉದ್ದನೆಯ ಕಿರೀಟವನ್ನು ಧರಿಸಿದ್ದು ಅದರ ಮೇಲೆ ಐದು ತಲೆಯ ನಾಗರ ಹೆಡೆಯಿದೆ.

ವೀರಾಂಜನೇಯ

ಮಾಧ್ವ ಸಂಪ್ರದಾಯದಲ್ಲಿ ಹನುಮಂತನಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಮಧ್ವಾಚಾರ್ಯರೇ ಹನುಮಂತನ ಅವತಾರವೆಂದೂ ಎಣಿಕೆಯಿದೆ. ದಶನದಲ್ಲಿ ಅವನ ಪಾಲಿಗೆ ಮಧ್ಯಸ್ಥ್ಯದ ಪಾತ್ರವನ್ನೂ ಕೊಟ್ಟಿದ್ದಾರೆ.[೨೦] ಮಾಧ್ವ ಸಂಪ್ರದಾಯದ ಪ್ರಭಾವದಿಂದಾಗಿ ಹನುಮಂತನ ಗುಡಿಗಳು ಕನ್ನಡ ನಾಡಿನಲ್ಲಿ ಹರಡಿದವು ಎನ್ನಬಹುದು. ಅದರಲ್ಲಿಯೂ, ಮಧ್ವಾಚಾರ್ಯರ ಪರಂಪರೆಯಲ್ಲಿ ಬಂದ ವ್ಯಾಸತೀರ್ಥರು ಹೋದಲೆಲ್ಲಾ ಹನುಮಂತನ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡುತ್ತಾ ಬಂದರು.

ಹದಿನೈದನೇ ಶತಮಾನದಲ್ಲಿ ವ್ಯಾಸರಾಯರು ಪ್ರತಿಷ್ಠಾಪಿಸಿರುವ ವೀರಾಂಜನೇಯನ ಮೂರ್ತಿಯನ್ನು ಮುಳುಬಾಗಿಲಿನಲ್ಲಿ ಕಾಣಬಹುದು.[೨೧] ಕಾರ್ಯಕ್ಷೇತ್ರ ಸಂದರ್ಭದಲ್ಲೂ ಕೂಡ ವೀರಾಂಜನೆಯ ಮೂರ್ತಿಗಳು ಕಂಡುಬಂದಿವೆ. ಕಾಳಿಕಾಂಬ ದೇವಾಲಯದಲ್ಲಿ ಅಲಂಕೃತ

ಕೆತ್ತನೆಯಿರುವ ಪೀಠದ ಮೇಲೆ ವೀರಾಂಜನೇಯನ ಶಿಲ್ಪವಿದ್ದು, ಎಲೆಯಾಕಾರದ ಕೆತ್ತನೆಯುಳ್ಳ ಪ್ರಭಾವಳಿಯಿದೆ. ಈ ಮೂರ್ತಿಶಿಲ್ಪವು ಎಡಭಾಗಕ್ಕೆ ಮುಖಮಾಡಿ ನಿಂತಿದ್ದು, ಎಡಗೈಯಲ್ಲಿ ಗದೆಯನ್ನು ಹಿಡಿದಿದೆ ಹಾಗೂ ಬಲಗೈಯನ್ನು ಮೇಲಕ್ಕೆ ಎತ್ತಲಾಗಿದೆ. ಇದರ ಕೈ ಮತ್ತು ಕಾಲುಗಳಲ್ಲಿ ಕಡಗಗಳು, ವಿವಿಧ ಆಭರಣಗಳನ್ನು ಧರಿಸಿದ್ದು, ಕೊರಳಲ್ಲಿ ಕಂಠಿಹಾರದ ಕೆತ್ತನೆಯಿದೆ. ಅಲ್ಲದೆ ತಲೆಯಲ್ಲಿ ರುದ್ರಾಕ್ಷಿ ಕಿರೀಟ ಕಂಡುಬರುತ್ತದೆ.

ನಾಗರಶಿಲ್ಪ

ವೃಕ್ಷ ಪೂಜೆಯ ಸಂದರ್ಭದಲ್ಲಿ ನಾಗಪೂಜೆಯ ಆಚರಣೆ ಕೂಡ ಬೆಳೆದುಬಂದಿದೆ. ದಕ್ಷಿಣ ಭಾರತದಲ್ಲಿ ದಕ್ಷಿಣ ಭಾರತದಲ್ಲಿ ನಾಗಪೂಜೆ ಹರಡಿರುವ ಹಾಗೆ ಬೇರೆಲ್ಲಿಯೂ ಕಾಣಸಿಗದು. ಅರಳಿ ಮರದ ಕೆಳಗೆ ನಾಗರಕಲ್ಲು ನೆಡುವುದು, ಮಕ್ಕಳು ಹೆದರಿದರೆ ನಾಗಬಂಧ ಮಾಡಿಸುವುದು ರೂಢಿಯಲ್ಲಿದೆ. ಊರಿನ ಬಾಗಿಲ ಬಳಿ, ಕೆರೆ ಕೊಳಗಳ ದಂಡೆಯ ಮೇಲೆ, ಗುಡಿಗಳ ಪಕ್ಕದಲ್ಲಿ, ಬೇವಿನಮರದ ಕೆಳಗೆ, ನಾಗರ ಕಲ್ಲುಗಳನ್ನು ಕಾಣಬಹುದು. ಮಕ್ಕಳಿಲ್ಲದವರು ನಾಗ ಪ್ರತಿಷ್ಠಾಪನೆ ಮಾಡಿದರೆ ಅಥವಾ ಪ್ರತಿಷ್ಠಾಪಿಸಿರುವ ನಾಗರ ಕಲ್ಲನ್ನು ಪೂಜಿಸಿದರೆ ಮಕ್ಕಳಾಗುತ್ತವೆಂಬ ನಂಬಿಕೆ ಜನರಲ್ಲಿದೆ. ಇದು ನಮ್ಮಲ್ಲಿ ಮಾತ್ರವಲ್ಲ ಕ್ರಿ.ಪೂ. ೨೬೦೦ ವರ್ಷಗಳಷ್ಟು ಹಿಂದೆಯೇ ಸುಮೇರಿಯನ್ ದೊರೆ "ಗುದಿಯನ ಸುರಾಪಾತ್ರೆಯ" ಮೇಲೆ ನಾಗ ಮಿಥುನ ಸ್ವಾರಸ್ಯದ ಚಿತ್ರಣವಿದೆ.[೨೨]

ಪ್ರಸ್ತುತ ಅಧ್ಯಯನ ಪ್ರದೇಶವಾದ ಕನಕಪುರ ಪಟ್ಟಣದ ಬಾಣಂತಿ ಮಾರಮ್ಮನ ದೇಗುಲದ ಬಳಿ ಒಂದೇ ಪೀಠದ ಮೇಲೆ ಮೂರು ಬಿಡಿ ಬಿಡಿಯಾಗಿರುವ ನಾಗರಶಿಲ್ಪವನ್ನು ಕಪ್ಪು ಶಿಲೆಯಿಂದ ಸುರುಳಿಯಂತೆ ನಿಂತ ಭಂಗಿಯಲ್ಲಿ ಕಡೆಯಲಾಗಿದೆ. ಸುಮಾರು ೩-೪ ಅಡ್ಡಿ ಎತ್ತರವಿರುವ ಈ ಮೂರು ನಾಗರಶಿಲ್ಪಗಳ ಪ್ರಭಾವಳಿಯು ಸೂಕ್ಷ್ಮ ಕೆತ್ತನೆಯ ಅಲಂಕಾರಿಕದಿಂದ ಕೂಡಿದೆ. ಮೊದಲನೆ ನಾಗರಕಲ್ಲಿನಲ್ಲಿ ಏಳು ತಲೆ ಇರುವ ಒಂದು ನಾಗರಹಾವು ಹೆಡೆಯನ್ನು ತೆರೆದು ನಿಂತಿರುವಂತೆ ಕೆತ್ತಲಾಗಿದೆ. ಮಧ್ಯದಲ್ಲಿರುವ ಮತ್ತೊಂದು ಶಿಲ್ಪವು ನಾಗ-ಯಕ್ಷಿಯ ಶಿಲ್ಪವಾಗಿದ್ದು, ಅದರಲ್ಲಿ ಅರ್ಧ ದೇಹ ಹಾವಾಗಿದ್ದರೆ, ಉಳಿದ ಅರ್ಧ ದೇಹ ಹೆಣ್ಣಿನ ರೂಪದಲ್ಲಿದೆ. ನಾಗ-ಯಕ್ಷಿಯು ತನ್ನ ದೇಹದ ಮೇಲಿನ ಭಾಗದಲ್ಲಿ ಎರಡು ಕೈಗಳನ್ನು ಜೋಡಿಸಿ ನಮಸ್ಕರಿಸಿ ನಿಂತ ಭಂಗಿಯಲ್ಲಿ ಈ ಶಿಲ್ಪವಿದ್ದು ಎರಡು ಕೈಗಳ ಸಂಧಿಯಲ್ಲಿ ಎರಡು ಸರ್ಪಗಳ ಹೆಡೆಗಳನ್ನು ಕಂಡರಿಸಲಾಗಿದೆ. ಕೊರಳಲ್ಲಿ ಸರ, ತಲೆಯ ಮೇಲೆ ಕಿರೀಟವಿದ್ದು, ಕಿರೀಟದ ಮೇಲೆ ಐದು ತಲೆಯಿರುವ ಹಾವಿನಹೆಡೆ ನಾಗ - ಯಕ್ಷಿಯರ ರಕ್ಷಣೆಗಿರುವಂತೆ ನಿರ್ಮಿಸಲಾಗಿದೆ. ಮೂರನೇ ಶಿಲ್ಪದಲ್ಲಿ ನಾಗ - ನಾಗಿಣಿಯರ ಮಿಥುನ ಶಿಲ್ಪ ಆಕರ್ಷಕವಾಗಿದೆ. ಈ ಮೇಲಿನ ಲಕ್ಷಣಗಳಿರುವ ನಾಗರಶಿಲ್ಪಗಳು ಕನಕಪುರ ಪಟ್ಟಣದ ಹೊಳೆಕಟ್ಟೆ ಆಂಜನೇಯನ ದೇವಾಲಯ, ಕೆಂಕೇರಮ್ಮನ ದೇವಾಲಯ, ದೇಗುಲ ಮಠ, ದೇಸಪೇಟೆ ಗರಡಿ ಮನೆಯ ಬಳಿ ಮುಂತಾದ ಸ್ಥಳಗಳಲ್ಲಿ ಕಂಡು ಬರುತ್ತವೆ. ಈ ಎಲ್ಲಾ ಸ್ಥಳಗಳಲ್ಲಿರುವ ನಾಗರಶಿಲ್ಪಗಳಿಗೆ ನಾಗರಪಂಚಮಿ ಹಬ್ಬದಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ.

೫.೩. ಮಸೀದಿ ಮತ್ತು ಚರ್ಚ್‌ಗಳು

ಕಲೆಯು ಮಾನವನ ಅತಿಸೂಕ್ಷ್ಮ ಚೇತನದ ಫಲ. ಅದು ಸಮಾಜದ ಸಂಸ್ಕೃತಿಯ ಕನ್ನಡಿಯಾಗಿದ್ದರೂ ನಾವು ಅದನ್ನು ವಿಶಾಲಾರ್ಥದಲ್ಲಿ ಗಾಂಧಾರ ಶೈಲಿ, ಉತ್ತರ ಶೈಲಿ, ದಕ್ಷಿಣಾತ್ಯ ಶೈಲಿ, ಮುಸ್ಲಿಂ ಶೈಲಿ ಹಾಗೂ ಹಿಂದೂ-ಮುಸ್ಲಿಂ ಶೈಲಿ(ಇಂಡೋ-ಇಸ್ಲಾಮಿಕ್) ಎಂದು ಮುಂತಾದ ಪ್ರಾದೇಶಿಕ ಹಾಗೂ ಜನಾಂಗೀಯ, ಸಮುದಾಯಗಳಿಗೆ ತಕ್ಕಂತೆ ಬೇರೆ ಬೇರೆಯಾಗಿ ನೋಡುತ್ತೇವೆ. ಇಂತಹ ಪ್ರಾದೇಶಿಕ ಹಾಗೂ ಜನಾಂಗೀಯ ಭಿನ್ನತೆಯುಳ್ಳ ಒಂದು ಶೈಲಿಯಾಗಿ ಮುಸ್ಲಿಂ ಶೈಲಿ ರೂಪುಗೊಂಡಿತು. ಇದು ಭಾರತಕ್ಕೆ ಮೊದಲು ೧೧ ಮತ್ತು ೧೨ನೆಯ ಶತಮಾನದ ಸುಮಾರಿಗೆ ಇರಾನ್ ಮತ್ತು ಮಧ್ಯ ಏಷ್ಯಾದಿಂದ ದಕ್ಷಿಣ ಭಾರತಕ್ಕೆ ಹರಿದು ಬಂದಿತು.[೨೩] ನಂತರ ಈ ಶೈಲಿಯು ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೂ ಪ್ರಸರಣವಾಯಿತು. ಹೀಗೆ ಹೊರಗಿನಿಂದ ಬಂದು ಇಲ್ಲಿ ನೆಲೆಸಿ ಸ್ಥಳೀಯರೊಂದಿಗೆ ಬೆರೆತು ತಾವು ತಂದ ಕಲೆಯನ್ನು ಒಂದು ನೂತನ ವಿನ್ಯಾಸದಲ್ಲಿ ಭಾರತದ ಮುಸ್ಲಿಂ ಶೈಲಿಯನ್ನಾಗಿ ಇಲ್ಲಿನ ಮುಸ್ಲಿಮರು ಅರಳಿಸಿದರು. ಹೀಗಾಗಿ ಅದು ಹಲವು ದೃಷ್ಟಿಕೋನಗಳಿಂದ ನಮಗೆ ವಿಶೇಷವಾಗಿದೆ. ಸ್ಥಳೀಯರೊಂದಿಗೆ ಇಸ್ಲಾಮಿಕ್ ಸಮಾಜ ಬೆರೆತು ಹೋಗಿದ್ದರಿಂದ ಹಿಂದೂ ಕಲೆಯ ಅನೇಕ ಲಕ್ಷಣಗಳನ್ನು ಹೀರಿಕೊಂಡು ಇಸ್ಲಾಮಿಕ್ ವಾಸ್ತುಶೈಲಿಯು ಹಲವು ವಿಧವಾದ ಸ್ಥಳೀಯ ತಾಂತ್ರಿಕತೆಗಳನ್ನು ಹುಟ್ಟು ಹಾಕಿತು.

ಭಾರತೀಯ ಕಲೆಯೊಂದಿಗೆ ಬೆರೆತು ಹೊಸದಾಗಿ ಉದ್ಭವಿಸಿದ ಈ ಮುಸ್ಲಿಂ ಶೈಲಿಯು "ಇಂಡೋ-ಇಸ್ಲಾಮಿಕ್"(ಇಂಡೋ ಸಾರ್ಸೆನಿಕ್) ಶೈಲಿ ಎಂದು ಪ್ರಸಿದ್ಧಿ ಪಡೆಯಿತು.[೨೪] ಈ ಶೈಲಿಯು ಮೊಘಲರ ಕಾಲದಲ್ಲಿ ಪ್ರಗತಿ ಸಾಧಿಸಿದ್ದಲ್ಲದೇ, ದಕ್ಷಿಣದಲ್ಲಿ ಬಹುಮನಿ ಮತ್ತು ಆದಿಲ್‌ಶಾಹಿಗಳ ಆಳ್ವಿಕೆಯಲ್ಲಿನ ಉತ್ಸಾಹ ಪೋಷಣೆಯ ಮೂಲಕ ಅದರ ವೈಭವ ಹೆಚ್ಚಿಸಿತು. ಈ ಮೇಲಿನ ಶೈಲಿಯ ಕಟ್ಟಡಗಳ ವಿನ್ಯಾಸ ಭಾರತೀಯವಾಗಿದ್ದು ಗೋಡೆ, ಗುಮ್ಮಟ ಮತ್ತು ವಿಶಾಲವಾದ ಒಳ ಭಾಗಗಳು ಮುಸ್ಲಿಂ ವೈಶಿಷ್ಟ್ಯತೆಗಳನ್ನು ಪ್ರತಿಬಿಂಬಿಸುತ್ತಿದ್ದವು. ಮಧ್ಯಕಾಲೀನ ಸಂದರ್ಭಕ್ಕೆ ಇಲ್ಲಿ ನೆಲೆಸಿದ ಮುಸ್ಲಿಮರು ಗಾರೆಯ ಉಪಯೋಗವನ್ನು ಜನಪ್ರಿಯಗೊಳಿಸಿದರು. ಇಸ್ಲಾಂ ಶೈಲಿಯು ಗುಂಬಜ(ಗುಮ್ಮಟ), ಮಿನಾರ(ಗೋಪುರ) ಮತ್ತು ಸ್ತಂಭ ಗೋಪುರಗಳನ್ನು ಒಳಗೊಂಡಿದೆ. ವಿನ್ಯಾಸಗಳು ಮತ್ತು ಅಕ್ಷರಗಳ ಕೆತ್ತನೆಯ ಸಾಲುಗಳು ಮುಸ್ಲಿಂ ಕಟ್ಟಡಗಳ ಸೌಂದರ್ಯವನ್ನು ಅಧಿಕಗೊಳಿಸಿದವು.[೨೫] ಬಹುಮನಿ ಮತ್ತು ಆದಿಲ್‌ಶಾಹಿಗಳ ಆಳ್ವಿಕೆಯ ಕಾಲದಲ್ಲಿ ಅಭಿವೃದ್ಧಿಗೊಂಡ ಮುಸ್ಲಿಂ ವಾಸ್ತುಶಿಲ್ಪವು ವೈಶಿಷ್ಟ್ಯಪೂರ್ಣವಾಗಿದೆ. ದೆಹಲಿ ಸುಲ್ತಾನರ ವಾಸ್ತುಶಿಲ್ಪ ಶೈಲಿಗಿಂತ ವಿಭಿನ್ನ ರೀತಿಯಲ್ಲಿ ವಿಕಸಿತಗೊಂಡ ಬಹುಮನಿ ವಾಸ್ತುಶಿಲ್ಪ ಶೈಲಿಯು ತನ್ನದೇ ಆದ ಸ್ವಂತಿಕೆಯನ್ನು ಪ್ರಕಟಿಸಿ ಉಳಿದುಕೊಂಡಿತು. ಹಾಗೆಯೇ ಆದಿಲ್‌ಶಾಹಿಗಳ ಕಾಲದಲ್ಲಿ ಪರಿಪೂರ್ಣತೆಯನ್ನು ಪಡೆದುಕೊಂಡಿತು.

ಇಸ್ಲಾಮಿಕ್ ಕಲೆಯು ಮೂರ್ತಿಶಿಲ್ಪದ ಹೊರತಾದುದಾಗಿದೆ. ಆರಾಧನಾ ಮಂದಿರಗಳಾದ ಮಸೀದಿಗಳ ನಿರ್ಮಾಣದಲ್ಲಿ ಅದರ ಮುಖ್ಯ ರಚನಾ ವಿನ್ಯಾಸವನ್ನು ಕಾಣಬಹುದು. ಈ

ಕಟ್ಟಡಗಳು ಪರಮೋಚನ್ನತ ಭವ್ಯ ಭಗವತ ಶಕ್ತಿಯ ಅಮೂರ್ತ ನಿರಾಕಾರ ಪರಿಕಲ್ಪನೆಗೆ ಮೀಸಲಾದವು. ಮಸೀದಿಯ ಮೂಲ ವಿನ್ಯಾಸವು ಮುಸ್ಲಿಂ ಜಗತ್ತಿನಾದ್ಯಂತ ಒಂದೇ ಆಗಿದೆ. ಕಮಾನು, ಗುಮ್ಮಟ, ಸ್ತಂಭಗೋಪುರ, ಮಿಹ್ರಾಬ್‌ಗಳು ಎಲ್ಲಾ ಕಡೆಗೂ ಒಂದೇ ಬಗೆಯ ವಾಗಿರುತ್ತವೆ.[೨೬] ಇವುಗಳನ್ನು ನಿರ್ಮಿಸಲು ಆಯಾ ಪ್ರದೇಶಗಳಲ್ಲಿ ದೊರೆಯುವ ಅಮೃತಶಿಲೆ, ಗ್ರಾನೈಟ್‌ಶಿಲೆ, ಮರ ಮೊದಲಾದ ವಸ್ತುಗಳನ್ನು ಬಳಸಿಕೊಂಡು ಮಸೀದಿಗಳನ್ನು ನಿರ್ಮಿಸಲಾಗಿದೆ. ಆಗ್ರಾದಲ್ಲಿ ಅಮೃತಶಿಲೆ ದೊರೆತಿರುವುದರಿಂದ ತಾಜ್‌ಮಹಲನ್ನು ಅಮೃತಶಿಲೆಯಿಂದ ನಿರ್ಮಿಸ ಲಾಗಿದೆ. ಬಿಜಾಪುರದಲ್ಲಿ ಕಲ್ಲನ್ನು ಬಳಸಿ ನಿರ್ಮಿಸಿರುವ ಗೋರಿ, ಗುಮ್ಮಟ, ಮಸೀದಿಗಳು ಆಕರ್ಷಕವಾಗಿದ್ದು ಪ್ರವಾಸಿ ಮಂದಿರಗಳಾಗಿವೆ. ಆದರೆ ಕನಕಪುರ ಪಟ್ಟಣದಲ್ಲಿರುವ ಮಸೀದಿಗಳು ಇತ್ತೀಚಿನವುಗಳಾಗಿದ್ದು, ಅವುಗಳನ್ನು ಸಿಮೆಂಟ್, ಕಲ್ಲು ಮೊದಲಾದ ವಸ್ತುಗಳಿಂದ ನಿರ್ಮಿಸಿ ಕೊಳ್ಳಲಾಗಿದೆ. ಇವುಗಳು ಬಿಜಾಪುರ, ಶ್ರೀರಂಗಪಟ್ಟಣ ಇತ್ಯಾದಿ ಕಡೆಗಳಲ್ಲಿ ಇರುವ ಮಸೀದಿಗಳಷ್ಟು ಸುಂದರವಾಗಿಲ್ಲದಿದ್ದರೂ ಕೂಡ ಕನಕಪುರದ ಮುಸ್ಲಿಂ ಸಮುದಾಯಗಳ ಧಾರ್ಮಿಕ ಆಚರಣೆಯ ದೃಷ್ಟಿಯಿಂದ ನಿರ್ಮಿಸಿದುವುಗಳಾಗಿವೆ.

ಹೈದರ್ ಮತ್ತು ಟಿಪ್ಪು ಸುಲ್ತಾನನ ಕಾಲದಲ್ಲಿ ಮಸೀದಿಗಳ ನಿರ್ಮಾಣಕ್ಕೆ ಪ್ರೋತ್ಸಾಹವಿತ್ತು. ಇವರು ಇಂಡೋ-ಇಸ್ಲಾಮಿಕ್ ಶೈಲಿಯ ಮಸೀದಿಗಳನ್ನು ನಿರ್ಮಿಸುವ ಮತ್ತು ಬೆಳೆಸುವ ಉದ್ದೇಶ ಹೊಂದಿದ್ದರು. ಟಿಪ್ಪು ಸುಲ್ತಾನನ ಕಾಲದಲ್ಲಿ ಇಂಡೋ-ಇಸ್ಲಾಮಿಕ್ ಶೈಲಿಯ ಮಸೀದಿಗಳು ಶ್ರೀರಂಗಪಟ್ಟಣ, ಮೈಸೂರು, ರಾಮನಗರ, ಬೆಂಗಳೂರಿನಲ್ಲಿ ನಿರ್ಮಾಣಗೊಂಡಿವೆ. ಇಲ್ಲಿನ ಮಸೀದಿಗಳ ತಾಂತ್ರಿಕತೆ ಸಾಧಾರಣವಾಗಿದ್ದು ಅಷ್ಟೇನು ಸುಂದರವಾಗಿಲ್ಲ. ಅಂತಹ ಶ್ರೀಮಂತ ಹಾಗೂ ಪ್ರಭಾವಿ ಮುಸ್ಲಿಂ ಕಟ್ಟಡದ ನಿರ್ಮಾಣ ಇಲ್ಲಿ ಕಂಡು ಬರುವುದಿಲ್ಲ.[೨೭] ಈ ನಿಟ್ಟಿನಲ್ಲಿ ಬೆಂಗಳೂರಿಗೆ ಹಾಗೂ ರಾಮನಗರಕ್ಕೆ ಹತ್ತಿರವಾಗಿರುವ ಕನಕಪುರ ಪಟ್ಟಣದಲ್ಲೂ ಕೂಡ ಇಂತಹ ಸಾಧಾರಣ ಸೌಂದರ್ಯದ ಧಾರ್ಮಿಕ ಉದ್ದೇಶದಿಂದ ಕಟ್ಟಿರುವ ಮಸೀದಿಗಳಿವೆ.

ಜಾಮಿಯಾ ಮಸೀದಿ

ಕನಕಪುರ ಪಟ್ಟಣದಲ್ಲಿ ಮುಸ್ಲಿಂ ಸಮುದಾಯ ಹೆಚ್ಚಾದಂತೆಲ್ಲಾ ಮಸೀದಿಗಳು ಸಹ ಹೆಚ್ಚಾಗಿವೆ. ಅಕ್ಷ ಮಸೀದಿ ನಿರ್ಮಾಣಗೊಂಡು ಐದು ವರ್ಷಗಳ ನಂತರ ಪಟ್ಟಣದ "ಮುಸ್ಲಿಂ ಬ್ಲಾಕ್‌ನಲ್ಲಿ"(ಬಡಾವಣೆ) ಜಾಮಿಯಾ ಮಸೀದಿಯನ್ನು ಕಟ್ಟಲಾಯಿತು. ಈ ಮಸೀದಿಯನ್ನು ಟಿಪ್ಪು ಸುಲ್ತಾನನ ಕಾಲದಲ್ಲಿ ನಿರ್ಮಾಣ ಮಾಡಲಾಗಿದೆ.[೨೮] ಇದರ ಒಳಾಂಗಣವು ವಿಶಾಲವಾಗಿದ್ದು, ಸುಮಾರು ೨೦೦ ಜನರು ಕುಳಿತು ಪ್ರಾರ್ಥನೆ ಮಾಡಬಹುದು. ಸಾರ್ವಜನಿಕರು ಪ್ರಾರ್ಥನೆ ಮಾಡುವ ಎದುರಿಗೆ ಇರುವ ಗೋಡೆಯಲ್ಲಿ ಎರಡು ಕಮಾನುಗಳಿವೆ. ಪುಷ್ಪಗಳಂತೆ ಅಲಂಕೃತ ವಾಗಿರುವ ಮಿನಾರ್‌ಗಳು ಆಕರ್ಷಕವಾಗಿದ್ದು, ಮೇಲೆ ಹೋಗಲು ಮೆಟ್ಟಿಲುಗಳಿವೆ. ಇದು ಕನಕಪುರ ತಾಲೂಕಿಗೆ ದೊಡ್ಡ ಮಸೀದಿಯಾಗಿದ್ದರಿಂದ ಇದನ್ನು ಶುಕ್ರವಾರದ ಮಸೀದಿ ಎಂದೂ ಸಹ ಕರೆಯಲಾಗುತ್ತದೆ.

ಅಕ್ಷ ಮಸೀದಿ

ಕನಕಪುರ ಪಟ್ಟಣದ ರಾಮನಗರ ಮುಖ್ಯರಸ್ತೆಯ ಮೇಲುಕೋಟೆಯಲ್ಲಿ ಅಕ್ಷ ಮಸೀದಿಯಿದೆ. ಇದು ಮುಸ್ಲಿಂ ಸಾರ್ವಜನಿಕರ ಪ್ರಾರ್ಥನಾ ಮಂದಿರವಾದದ್ದು ಇದರಲ್ಲಿ "ಕುತ್ಬಾಪಠಣ" ಅಥವಾ ಶುಕ್ರವಾರದ ಪ್ರಾರ್ಥನೆ ನಡೆಯುವುದರಿಂದ "ಶುಕ್ರವಾರದ" ಮಸೀದಿ ಎಂದೂ ಸಹ ಕರೆಯಲಾಗುತ್ತದೆ.

ಕನಕಪುರ ಪರಿಸರದ ಮುಸ್ಲಿಮರು ತಮ್ಮ ಹಬ್ಬಗಳ ಆಚರಣೆ ಹಾಗೂ ಅಲ್ಲಾನ ಪ್ರಾರ್ಥನೆಗಾಗಿ ಇಲ್ಲಿನ ಮುಸ್ಲಿಂ ಸಂಘಟನೆಯವರು ೧೯೬೦ರಲ್ಲಿ ಈ ಮಸೀದಿಯನ್ನು ಸ್ಥಾಪನೆ ಮಾಡಿಕೊಂಡರು. ಇದು ಕನಕಪುರ ಪರಿಸರದಲ್ಲಿ ನೆಲೆಸಿರುವ ಮುಸ್ಲಿಮರಿಗೆ ಸಾರ್ವಜನಿಕ ಪ್ರಾರ್ಥನಾ ದೃಷ್ಟಿಯಿಂದ ನಿರ್ಮಾಣವಾಯಿತು. ಮಸೀದಿ ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿದ್ದು, ತಾಲೂಕಿನಲ್ಲಿ ಮುಸ್ಲಿಂ ಧಾರ್ಮಿಕ ವಾಸ್ತುಶಿಲ್ಪದ ಬೆಳವಣಿಗೆಯ ಸೂಚಿಸುತ್ತದೆ. ಇದು ಪೂರ್ವ ದಿಕ್ಕಿಗೆ ದ್ವಾರ ಹೊಂದಿದ್ದು, ಸುಮಾರು ೨೦೦ ಜನರು ಕೂತು ಪ್ರಾರ್ಥನೆ ಮಾಡುವಷ್ಟು ವಿಶಾಲ ಒಳಾಂಗಣವಿದೆ. ಮಸೀದಿಯ ಮೇಲೆ ನಾಲ್ಕು ಕಡೆಗಳಲ್ಲಿ ಪುಷ್ಪಗಳಿಂದ ಚಿತ್ರಿಸಿರುವ ಎತ್ತರವಾದ ಮಿನಾರ್‌ಗಳು ಇಂಡೋ-ಇಸ್ಲಾಮಿಕ್ ಶೈಲಿಗೆ ಸಾಕ್ಷಿಗಳಾಗಿವೆ. ಮಸೀದಿಯ ಒಳಭಾಗದಲ್ಲಿ ಎತ್ತರವಾದ ನಾಲ್ಕು ಕಂಬಗಳಿದ್ದು ಅವು ಮಸೀದಿಯನ್ನು ಹೊತ್ತು ನಿಂತಿವೆ. ಸಾರ್ವಜನಿಕರು ಕುಳಿತು ಪ್ರಾರ್ಥನೆ ಮಾಡುವ ಎದುರಿಗಿರುವ ಗೋಡೆಯಲ್ಲಿ ಎರಡು ಕಮಾನುಗಳನ್ನು ಕಾಣಬಹುದು. ಈ ಮಸೀದಿಯು ಕನಕಪುರ ತಾಲೂಕಿನಲ್ಲಿರುವ ಎಲ್ಲಾ ಮಸೀದಿಗಳ ಮುಖ್ಯ ಕೇಂದ್ರವಾಗಿದೆ. ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿದ್ದ ಈ ಅಕ್ಷ ಮಸೀದಿಯನ್ನು ಕೆಡವಿ ಅದೇ ಜಾಗದಲ್ಲಿ ಆಧುನಿಕ ಕಟ್ಟಗಳ ಮಾದರಿಯಲ್ಲಿ ಹೊಸ ಮಸೀದಿಯನ್ನು ನಿರ್ಮಿಸಲಾಗುತ್ತಿದೆ.

ನಮಾಜಿಬಾರೆ ಮಸೀದಿ

ಕನಕಪುರದಲ್ಲಿರುವ ಉಳಿದ ಮಸೀದಿಗಳಿಂಗಿಂತ ವಿಶೇಷವಾಗಿರುವ ನಮಾಜಿಬಾರೆ ಮಸೀದಿಯನ್ನು ೧೯೮೭ರಲ್ಲಿ ಇಲ್ಲಿನ ಸ್ಥಳೀಯ ಮುಸ್ಲಿಂ ಸಂಘಟನೆಯವರಿಂದ ನಿರ್ಮಾಣವಾಗಿದೆ. ಇದು ಮಸೀದಿ ಮತ್ತು ಮದರಸಗಳ ಎರಡೂ ಕಾರ್ಯಗಳನ್ನು ಒಟ್ಟಿಗೆ ನಿರ್ವಹಿಸುವುದರಿಂದ ಇದರಲ್ಲಿ ೧೫೦ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ವಸತಿ, ಊಟವನ್ನು ನೀಡಲಾಗುವುದು ಹಾಗೂ ಬೇರೆ ಕಡೆಗಳಿಂದ ಬರುವ ಸೂಫಿ ಸಂತರ ಆಶ್ರಯ ತಾಣವು ಆಗಿದೆ. ಈ ಮಸೀದಿಯಲ್ಲಿ ಮಿನಾರ್‌ಗಳು, ಗೋಪುರಗಳು, ಅಲಂಕಾರಿಕ ಚಿತ್ರಗಳು ಕಂಡುಬರುವುದಿಲ್ಲ. ಇದರ ಒಳಭಾಗದಲ್ಲಿ ಸುಮಾರು ೧೨೦ ಜನರು ಪ್ರಾರ್ಥನೆ ಮಾಡುವಷ್ಟು ವಿಶಾಲ ಅಂಗಳವಿದ್ದು ಕಟ್ಟಡ ಎರಡು ಹಂತಗಳಿಂದ ಶಾಲೆಯ ಕೊಠಡಿಗಳನ್ನೊಳಗೊಂಡಿದೆ.

ಈ ಪಟ್ಟಣದಲ್ಲಿ ಅಬುಸೂರ್ ಮತ್ತು ರೆಹಮಾನೆಯ ಎಂಬ ಮತ್ತೆರಡು ಸಣ್ಣ ಮಸೀದಿಗಳಿದ್ದು, "ಬೂದಿಕೇರಿಯಲ್ಲಿರುವ" ರೆಹಮಾನೆಯ ಮಸೀದಿಯಲ್ಲಿ ಎರಡು ಮಿನಾರ್‌ಗಳು ಹಾಗೂ

ಒಂದು ಗೋಪುರವಿದೆ. ಇವುಗಳಲ್ಲಿ ಸುಮಾರು ೨೦-೫೦ ಜನರು ಮಾತ್ರ ಪ್ರಾರ್ಥನೆ ಮಾಡಬಹುದು. ಇಷ್ಟಲ್ಲದೆ ಇಲ್ಲಿ ಬೇರೆ ವಿಶೇಷವಾದ ವಾಸ್ತು ಲಕ್ಷಣಗಳು ಇದರಲ್ಲಿ ಕಂಡು ಬರುವುದಿಲ್ಲ. ಪಟ್ಟಣದಲ್ಲಿ ಮುಸ್ಲಿಮರ ಪ್ರಾರ್ಥನಾ ಮಂದಿರಗಳಾದ ಮಸೀದಿಗಳು ಮಾತ್ರವಲ್ಲದೆ ಹಜರತ್ ಸಯ್ಯದ್, ಯಾಕುಬ್ ಆಲಿ, ಕಂಬ್ಲಿ ಪೀರ್, ಕಾನ್ ಕಾನ್ ಸಾಬ್ ಹೆಸರಿನ ದರ್ಗಾಗಳಿವೆ. ರಂಜಾನ್ ಹಬ್ಬದ ಸಂದರ್ಭದಲ್ಲಿ ಈ ದರ್ಗಾಗಳಲ್ಲಿ ಕಾನ್ ಕಾನ್ ಸಾಹೇಬರ ಉರುಸ್ ನಡೆಯುತ್ತದೆ. ಜನಸಾಮಾನ್ಯರೊಂದಿಗೆ ನಿಕಟ ಸಂಪರ್ಕ ಹೊಂದಿರುವ ಇವುಗಳಲ್ಲಿ ಬಕ್ರೀದ್, ರಂಜಾನ್, ಮೊಹರಂ ಮೊದಲಾದ ಹಬ್ಬಗಳನ್ನು ಆಚರಿಸಲಾಗುತ್ತದೆ.

ಪಾರಿಹಿಯಾ ಮಸೀದಿ

ಪಟ್ಟಣದ ಪೈಪ್‌ಲೈನ್ ರಸ್ತೆಯಲ್ಲಿರುವ ಈ ಮಸೀದಿಯನ್ನು ೧೯೮೬ರಲ್ಲಿ ಇಲ್ಲಿನ ಮುಸ್ಲಿಂ ಟ್ರಸ್ಟ್ ಅವರಿಂದ ನಿರ್ಮಿಸಲಾಗಿತ್ತು. ಆದರೆ ೨೦೦೬ರಲ್ಲಿ ಅದನ್ನು ಪುನರ್ನಿರ್ಮಿಸಿ ಹೊಸದಾಗಿ ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ಕಟ್ಟಲಾಗಿದೆ. ತಾಲೂಕಿನಲ್ಲಿ ಇರುವ ಎಲ್ಲಾ ಮಸೀದಿಗಿಂತಲೂ ಸುಂದರವಾಗಿರುವ ಇದನ್ನು ತಾಜ್‌ಮಹಲ್ ಎಂದೂ ಸಹ ಇಲ್ಲಿನ ಸ್ಥಳೀಯರು ಕರೆಯುತ್ತಾರೆ. ಈ ಮಸೀದಿಯ ಮುಂಭಾಗದ ಎರಡು ಕಡೆಗಳಲ್ಲಿ ಸುಮಾರು ೪೦ ಅಡಿ ಎತ್ತರದ ಮಿನಾರ್‌ಗಳಿವೆ ಹಾಗೂ ಮಸೀದಿಯ ಸುತ್ತಲೂ ಸಣ್ಣ ಸಣ್ಣ ಮಿನಾರ್‌ಗಳ ಮಧ್ಯದಲ್ಲಿ ಸುಂದರವಾದ ಗುಮ್ಮಟವಿದೆ. ಮಸೀದಿಯನ್ನು ಪ್ರವೇಶಿಸುತ್ತಿದ್ದಂತೆ ಐದು ಕಮಾನುಗಳು ಕಂಡು ಬರುತ್ತವೆ. ಇದರ ಒಳಾಂಗಣ ವಿಶಾಲವಾಗಿದ್ದು ಸುಮಾರು ೧೫೦೦ ಜನರು ಪ್ರಾರ್ಥನೆ ಮಾಡಬಹುದು. ಹೊರಗಿನಿಂದ ನೋಡಿದರೆ ಇದು ಅತ್ಯಂತ ಸುಂದರವಾಗಿ ಕಾಣುವುದರ ಜೊತೆಗೆ ಇಲ್ಲಿನ ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯನ್ನು ಶ್ರೀಮಂತಗೊಳಿಸಿದೆ.

ಚರ್ಚ್‌ಗಳು

ಭಾರತದ ಪ್ರಮುಖ ಧರ್ಮಗಳಲ್ಲಿ ಕ್ರೈಸ್ತ ಧರ್ಮ ಕೂಡ ಒಂದಾಗಿದೆ. ಕ್ರಿಸ್ತನ ಮರಣದ ನಂತರ ಅವನ ೧೨ ಮಂದಿ ಶಿಷ್ಯರಲ್ಲಿ ಒಬ್ಬನಾದ ಸಂತ ಥಾಮಸ್ ಕ್ರಿ.ಶ. ೫೨ರಲ್ಲಿ ಮಲಬಾರು ತೀರ ಪ್ರದೇಶಕ್ಕೆ ಬಂದು ಅಲ್ಲಿ ಕ್ರೈಸ್ತ ಧರ್ಮ ಪ್ರಚಾರ ಮಾಡಿದನು. ಇಲ್ಲಿ ಥಾಮಸ್ ಕಟ್ಟಿಸಿರುವ ಏಳು ಚರ್ಚ್‌ಗಳನ್ನು ಇತಿಹಾಸಕಾರರು ಇಂದಿಗೂ ಗುರುತಿಸುತ್ತಾರೆ. ಕ್ರಿ.ಶ. ೫ನೇ ಶತಮಾನದಲ್ಲೇ ಇವರ ಸಮುದ್ರ ಮಾರ್ಗದ ಮೂಲಕ ಭಾರತದ ಕಡಲ ತೀರಕ್ಕೆ ಬಂದು ಹೋಗಲು ಪ್ರಾರಂಭಿಸಿದರು. ಇದರಿಂದ ಥಾಮಸ್ ಹಾಗೂ ಕೆಲವು ಕ್ರೈಸ್ತ ಧರ್ಮ ಪ್ರಚಾರಕರು ಭಾರತಕ್ಕೆ ಬಂದಿರುವುದರಲ್ಲಿ ಅಚ್ಚರಿಯಿಲ್ಲ(ಸಂಶಯವಿಲ್ಲ.).

ಏಸುಕ್ರಿಸ್ತ ಸ್ಥಾಪಿಸಿದ್ದು ಒಂದೇ ಧರ್ಮವಾದರೂ ಅದು ಕಾಲಕ್ರಮೇಣ ಹಲವು ಪಂಥಗಳಾಗಿ ರೂಪುಗೊಂಡಿತು. ಕ್ರೈಸ್ತ ಧರ್ಮದ ಒಳಗಿನ ಭಿನ್ನಾಭಿಪ್ರಾಯಗಳಿಂದ ಹಾಗೂ ಹೊರಗಿನ ಆಚರಣೆಗಳಿಂದಾಗಿ ಇದರೊಳಗೆ ಭಿನ್ನ - ಭಿನ್ನ ಪಂಥಗಳು ಬೆಳೆದವು. ಇದರಲ್ಲಿ ರೋಮನ್

ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟೆಂಟ್ ಪಂಥ ಪ್ರಮುಖವಾದವು. ಇಂದು ಕರ್ನಾಟಕದಲ್ಲಿ ಸುಮಾರು "ಆರೂವರೆ" ಲಕ್ಷ ಕ್ರೈಸ್ತರಿದ್ದಾರೆ. ಇವರಲ್ಲಿ "ಐದೂವರೆ" ಲಕ್ಷ ಜನರು ಕ್ಯಾಥೋಲಿಕ್ ಪಂಥಕ್ಕೆ ಸೇರಿದವರು.[೨೯] ಕ್ರಿ.ಶ. ೧೩೨೪ರಲ್ಲಿ ಐದು ಮಂದಿ "ಡೊಮಿನಿಕನ್" ಪಾದ್ರಿಗಳ ಕರ್ನಾಟಕದಲ್ಲಿ ಮತಪ್ರಚಾರ ಕೈಗೊಂಡರು ಆಗ ಇಲ್ಲಿ ಸುಮಾರು ೧೦ ಸಾವಿರ ಕ್ರೈಸ್ತರಿದ್ದರು ಎಂದು ಹಯದನರಾಯರು ಮೈಸೂರು ಸಂಪುಟ-೨ರಲ್ಲಿ ಉಲ್ಲೇಖಿಸಿದ್ದಾರೆ. ವಿಜಯನಗರ ಅರಸರ ಕಾಲದಲ್ಲಿ ಯಹೂದಿಗಳು, ಮುಸ್ಲಿಮರು ಮಾತ್ರವಲ್ಲದೆ ಕ್ರೈಸ್ತರೂ ಕೂಡ ಇದ್ದರು. ಕ್ರಿ.ಶ. ೧೪೪೫ರಲ್ಲಿ ವಿಜಯನಗರ ಅರಸರ ಬಳಿ ಒಬ್ಬ ಕ್ರೈಸ್ತ ದಿವಾನ ಕೂಡ ಇದ್ದನೆಂದು ಹೇಳಲಾಗಿದ್ದು, ಇವನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿರುವ ಹಿಂದುಗಳ ವಂಶದವನು ಆಗಿರಬಹುದೆಂದು ಹಯದನರಾಯರು ಅಭಿಪ್ರಾಯ ಪಟ್ಟಿದ್ದಾರೆ.

ಕ್ರೈಸ್ತ ಧರ್ಮ ಕನ್ನಡ ನಾಡಿಗೆ ಹಲವು ಸುಂದರ ಚರ್ಚುಗಳನ್ನು ನೀಡಿದೆ. ಮಂಗಳೂರು, ಬೆಂಗಳೂರು, ಉಡುಪಿ, ಮೈಸೂರು ಹಾಗೂ ರಾಜ್ಯದ ಹಲವು ಕಡೆಗಳಲ್ಲಿ ಕ್ರೈಸ್ತರ ಪ್ರಾಚೀನ ದೇವಾಲಯಗಳಿವೆ. ಈ ಚರ್ಚ್‌ಗಳ ವೈಶಿಷ್ಟ್ಯವೆಂದರೆ ಭಾರತೀಯ ವಾಸ್ತುಶಿಲ್ಪ ಸಂಪ್ರದಾಯಕ್ಕಿಂತ ಭಿನ್ನವಾದ ರೀತಿಯಲ್ಲಿ ಕಟ್ಟಿರುವುದಾಗಿದೆ. ಆಕಾಶವನ್ನು ತಾಗುವಂತೆ ಕಟ್ಟಲಾದ ತ್ರಿಕೋನಾಕೃತಿಯ ಚೂಪು ಗೋಪುರಗಳು, ದಪ್ಪಕಂಬಗಳು, ಬಣ್ಣ ಬಣ್ಣದ ಗಾಜಿನ ಕಿಟಕಿಗಳು, ದೇವರ ಪೀಠ, ಪಾದ್ರಿಯ ಪ್ರವಚನಕ್ಕೆಂದೇ ಮಾಡಲಾದ ವಿಶೇಷ ವೇದಿಕೆ, ದೇವರ ಪಟಗಳು, ದೇವರ ಸಂತರ ವಿಗ್ರಹಗಳು ಚರ್ಚುಗಳ ಅಂದ ಚಂದವನ್ನು ಹೆಚ್ಚಿಸುತ್ತವೆ. ಮಂಗಳೂರಿನ ಸಂತ ಅಲೋಶಿಯಸ್ ಚರ್ಚಿನಲ್ಲಿ ಏಸುವಿನ ಜೀವನಕ್ಕೆ ಸಂಬಂಧಿಸಿದ ಚಿತ್ರಗಳನ್ನು ಬರೆಸಿದ್ದರೆ, ಬೆಂಗಳೂರಿನ ಹಡ್ಸನ್ ಸ್ಮಾರಕ ದೇವಾಲಯದಲ್ಲಿ ವೇದಿಕೆಯ ಹಿಂಬದಿಯಲ್ಲಿ ಯೇಸುವಿನ ಪುನರುತ್ಥಾನದ ದೃಶ್ಯವಿರುವ ಗಾಜಿನ ಕಿಟಕಿಯನ್ನು ಕಾಣಬಹುದು.

ಸ್ವಾಮಿ ಹೊಸ್ಟನ್ (Fr.H. Hosten, S.J.) ಅವರ ಅನಿಸಿಕೆಯಂತೆ ಕ್ರಿ.ಶ. ೧೧೪೫ರಲ್ಲಿ "ರಾಮಗಿರಿ"ಯಲ್ಲಿ ಕ್ರೈಸ್ತರಿದ್ದರು.[೩೦] ಅಂದು ಬೆಂಗಳೂರು ಜಿಲ್ಲೆಗೆ ಸೇರಿದ್ದ ರಾಮನಗರ(ರಾಮಗಿರಿ) ಯಲಹಂಕನಾಡ ಪ್ರಭುಗಳ ಪ್ರಮುಖ ಸ್ಥಳಗಳಲ್ಲಿ ಒಂದಾಗಿತ್ತು. ಬೆಂಗಳೂರು ಕೆಂಪೇಗೌಡನ ಮದ್ದುಗುಂಡಿನ ಮನೆ ರಾಮಗಿರಿಯಾಗಿತ್ತು. ರಾಮಗಿರಿಯನ್ನು 'ಕಾರ್ಖಾನೆ ಪಾಳ್ಯ' ಎಂದು ಕರೆಯುವುದು ವಾಡಿಕೆಯಾಗಿತ್ತು. ರಾಮನಗರಕ್ಕೆ ಹಾಗೂ ಬೆಂಗಳೂರಿಗೆ ಹತ್ತಿರವಿರುವ ಕನಕಪುರ ತಾಲೂಕಿಗೆ ಕ್ರೈಸ್ತ ಧರ್ಮೀಯರು ಕೆಂಪೇಗೌಡನ ಕಾಲದಲ್ಲೇ ಬಂದಿರಬಹುದು.

ಕ್ರಿ.ಶ. ೧೬೭೮ರಲ್ಲಿ ಸ್ವಾಮಿ ಚಿಮಾವೋ ರೋಮಿನಲ್ಲಿದ್ದ ತಮ್ಮ ಜೆಸುಯಿಟ್ ಸಭೆಯ ನಿರ್ದೇಶಕರಿಗೆ ಬರೆದ ಪತ್ರದಲ್ಲಿ ಕನಕಪುರದ ಪ್ರಸ್ತಾಪವಿದೆ. ಪೋರ್ಚುಗೀಸ್ ಭಾಷೆಯ ಈ ಪತ್ರದ ಮುನ್ನುಡಿಯಲ್ಲೇ ಕ್ರೈಸ್ತ ಧರ್ಮ ೧೬೪೮ರ ವೇಳೆಗೆ ಮೈಸೂರು ಸಂಸ್ಥಾನವನ್ನು ಮುಟ್ಟಿತ್ತು ಎಂಬುದಕ್ಕೆ ಸ್ಪಷ್ಟ ಸೂಚಕಗಳಿವೆ. ಮೈಸೂರು ಸಂಸ್ಥಾನಕ್ಕೆ ಸೇರಿದ್ದ ಕನಕಪುರದಲ್ಲಿ

ಕೂಡ ಈ ವೇಳೆಗೆ ಕ್ರೈಸ್ತರು ನೆಲೆಸಿದ್ದರು ಎಂದು ಸ್ಪಷ್ಟವಾಗಿ ಗೋಚರಿಸುತ್ತದೆ. ಯೇಸು ಸ್ವಾಮಿಯ ಸಂತರಾದ "ಸಂತ ತೋಮನ" ಕಾಲದಲ್ಲೇ ಕ್ರೈಸ್ತ ಧರ್ಮ ಇತ್ತ ಕಾಲಿಟ್ಟಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ ಎಂದಿದ್ದಾರೆ ಸ್ವಾಮಿ ಚಿಮಾವೊ. ಅವರು ತಮ್ಮ ಈ ಅನಿಸಿಕೆಯನ್ನು ಪುಷ್ಠೀಕರಿಸುತ್ತಾ ಜನರಿಗೆ ಶಿಲುಬೆ ಗುರುತಿನ ಬಗ್ಗೆ ಇದ್ದ ಶ್ರದ್ಧೆ ಹಾಗೂ ಅಭಿಮಾನವನ್ನು ಕೆಲವು ಉದಾಹರಣೆ ಸಮೇತ ತಿಳಿಸಿದ್ದಾರೆ. ೧೬೬೦-೬೨ರಲ್ಲಿ ಚಿಮಾವೊ ಕನಕಪುರ ತಾಲೂಕಿಗೆ ಭೇಟಿ ನೀಡಿದ್ದರು. ಹಾರೋ ಬೆಲೆಯಲ್ಲಿರುವ "ಕ್ರೈಸ್ತರು ಹಾಗೂ ಪ್ರಾಚೀನ ಚರ್ಚಿನ ಆಧಾರದಿಂದ ಕನಕಪುರ ತಾಲೂಕಿನಲ್ಲಿ ಕ್ರೈಸ್ತರು ಮೊದಲು ನೆಲೆಸಿರುವ ಸ್ಥಳ "ಹಾರೋಬೆಲೆ" ಎಂದು ಗುರುತಿಸಬಹುದು.

ಸಂತರೀತಮ್ಮ ದೇವಾಲಯ(ಚರ್ಚ್)

ಕನಕಪುರ ಪಟ್ಟಣ ಪರಿಸರದಲ್ಲಿ ಹೆಚ್ಚು ರೋಮನ್ ಕ್ಯಾಥೋಲಿಕ್ ಪಂಥದವರನ್ನು ಕಾಣಬಹುದು. ಇವರು ಇಲ್ಲಿ ಒಂದು ರೋಮನ್ ಕ್ಯಾಥೋಲಿಕ್ ಚರ್ಚನ್ನು ನಿರ್ಮಾಣ ಮಾಡಿಕೊಂಡು ಏಸುಕ್ರಿಸ್ತನನ್ನು ಆರಾಧನೆ ಮಾಡುತ್ತಾ ಬರುತ್ತಿದ್ದಾರೆ. ಕ್ರಿ.ಶ. ೧೬೭೬ರ ಜೆಸುಯಿಟ್ ಪತ್ರದಲ್ಲಿ ಕನಕಪುರ ಪಟ್ಟಣದಲ್ಲಿ ಮೊದಲು ನಿರ್ಮಾಣಗೊಂಡಿರುವ ಚರ್ಚಿನ ಉಲ್ಲೇಖವಿದೆ.[೬೧] ಮೈಸೂರು ಮಿಷನ್ ಸಂಸ್ಥಾಪಕರಾದ ಲಿಯೋನಾರ್ಡೆ ಚಿನ್ನಲು ಅವರ ನಿಧನ(೧೬೭೬)ದ ವಿವರಗಳಿಂದ ಆರಂಭವಾಗುವ ಈ ಪತ್ರದಲ್ಲಿ ಕನಕಪುರ ಹಾಗೂ ಕೆಳಮಂಗಳದ ಕ್ರೈಸ್ತ ವಿಚಾರಣೆಗಳಲ್ಲಿ ನಡೆದ ಆಗುಹೋಗುಗಳನ್ನು ಕಾಣಬಹುದು. ಇದರ ವಿಶೇಷತೆಯೆಂದರೆ ಕನಕಪುರ ತಾಲೂಕಿನ ಆಯಾಯಾ ಊರುಗಳಲ್ಲಿದ್ದ ಕ್ರೈಸ್ತ ದೇವಾಲಯಗಳನ್ನು ಹೆಸರಿಸಲಾಗಿದೆ.

೧೬೬೨-೧೬೭೬ರ ಅವಧಿಯಲ್ಲಿ ಕನಕಪುರದಲ್ಲಿ ಕ್ರೈಸ್ತ ದೇವಾಲಯ ಇತ್ತು ಎಂಬುದು ದಾಖಲೆಗಳಿಂದ ಖಚಿತಗೊಂಡಿದೆ. ಆದರೆ ಆ ದೇವಾಲಯದ ಹೆಸರಿನ ಉಲ್ಲೇಖ ಮಾಡಿಲ್ಲ. ಸ್ವಾಮಿ ರಾಯಿಸ್ ಈ ದೇವಾಲಯವನ್ನು "ಸಂತ ತೋಮರ ದೇವಸ್ಥಾನ" ಎಂದು ಜೆಸುಯಿಟ್ ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ. ಸಾಮಾನ್ಯವಾಗಿ ಕ್ರೈಸ್ತರು ತಮ್ಮ ಪ್ರಖ್ಯಾತ ಧಾರ್ಮಿಕ ಸಂತರ ಗೌರವಾರ್ಥವಾಗಿ ಅವರ ಹೆಸರುಗಳನ್ನೇ ಚರ್ಚುಗಳಿಗೆ ಇಡುವುದು ಸಂಪ್ರದಾಯ. ಆದ್ದರಿಂದ ಈ ಚರ್ಚಿಗೆ ಸಂತ ತೋಮರ ಹೆಸರು ಬಂದಿದ್ದು, ಅವರು ಇಲ್ಲಿ ಪ್ರಭಾವಿ ಸಂತರಾಗಿದ್ದರೆಂದು ತಿಳಿಯುತ್ತದೆ. "ಸಂತ ತೋಮನ ದೇವಾಲಯ" ಎಂಬ ಐತಿಹಾಸಿಕ ಹೆಸರನ್ನು ಇತ್ತೀಚೆಗೆ ಅದನ್ನು ಪುನರ್ನಿರ್ಮಿಸಲಾಗಿದೆ. ಈ ಹೊಸ ದೇವಾಲಯಕ್ಕೆ "ಸಂತ ರೀತಮ್ಮ ದೇವಾಲಯ" ಎಂದು ನಾಮಕರಣ ಮಾಡಲಾಗಿದೆ. ಇದರ ಹಳೆಯ ಹೆಸರು ಬದಲಾವಣೆಗೊಂಡಿರುವುದಕ್ಕೆ ಸ್ವಾಮಿ ಐ. ಅಂತಪ್ಪನವರು ಕನಕಪುರ ತಾಲೂಕಿನ ಸುತ್ತಮುತ್ತಲಲ್ಲಿ ಕ್ರೈಸ್ತ ಧರ್ಮದ ಉಗಮ ಎಂಬ ಕೃತಿಯಲ್ಲಿ ವಿಷದ ವ್ಯಕ್ತಪಡಿಸಿದ್ದಾರೆ.

೧೯೬೪ರಲ್ಲಿ ಸಂತರೀತಮ್ಮ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ.[೬೨] ಗಾಥಿಕ್ ಶೈಲಿಯಲ್ಲಿರುವ ಸಂತರೀತಮ್ಮನವರ ಚರ್ಚಿನ ದ್ವಾರದಲ್ಲಿ ಸುಮಾರು ನಲವತ್ತು ಅಡಿ ಎತ್ತರದ

ಗೋಪುರವಿದ್ದು ಅದರ ಅರ್ಧ ಕಂಬಗಳಲ್ಲಿ ತ್ರಿಕೋನಾಕಾರದ ಪಟ್ಟಿಗಳು ಹಾಗೂ ಗೋಪುರದ ತುದಿಯಲ್ಲಿ ಶಿಲುಬೆಯಿದೆ. ದ್ವಾರದ ಮೇಲೆ ಎರಡು ಕೈಗಳಿಂದ ಆಶೀರ್ವದಿಸುತ್ತಿರುವ ಯೇಸುವಿನ ಮೂರ್ತಿಯಿದೆ. ಚರ್ಚಿನ ಒಳಗೆ ವಿಶಾಲವಾದ ಪ್ರಾಂಗಣ, ಭಕ್ತರು ಕೂರಲು ಆಸನಗಳು, ವೇದಿಕೆ ಮತ್ತು ಬಲಿಪೀಠವಿದೆ. ಬಲಿಪೀಠದ ಹಿಂಬದಿಯಲ್ಲಿ ಚರ್ಚಿನ ಪಾದ್ರಿ ಧರ್ಮ ಬೋಧನೆ ಮಾಡಲು ಒಂದು ಆಸನ ಹಾಗೂ ಗೋಡೆಯ ಮೇಲೆ ಯೇಸುವಿನ ಶಿಲ್ಪವಿರುವ ಶಿಲುಬೆಯಿದೆ. ಚರ್ಚಿನ ಒಳಭಾಗದ ಗೋಡೆಗಳ ಮೇಲೆ ಯೇಸುವಿನ ಜನನದಿಂದ ಮರಣದವರೆಗಿನ ಜೀವನವನ್ನು ಪ್ರತಿಬಿಂಬಿಸುವ ಚಿತ್ರಗಳಿದ್ದು, ಮೇರಿ ದೇವತೆಗಳ ಮೂರ್ತಿಶಿಲ್ಪಗಳು ಕಂಡು ಬರುತ್ತವೆ.

ಕ್ರೈಸ್ತ ಧರ್ಮದಲ್ಲಿ ಪ್ರಾಟೆಸ್ಟೆಂಟ್ ಪಂಥವೂ ಕೂಡ ಒಂದಾಗಿದ್ದು ಕನಕಪುರ ಪರಿಸರದಲ್ಲಿ ಈ ಪಂಥದ ಹರಡಿರುವಿಕೆ ಕಂಡುಬರುತ್ತದೆ. ಯೇಸು ಕ್ರಿಸ್ತನ ಬೋಧನೆಯ ಮಾದರಿಯಲ್ಲೇ ಪ್ರಾಟೆಸ್ಟೆಂಟ್ ಮಿಷನರಿಗಳು ಕನಪುರ ಪರಿಸರದ ಜನರ ವಿದ್ಯಾಭ್ಯಾಸ, ರೋಗ ಚಿಕಿತ್ಸೆ ಎಂಬ ಮುಮ್ಮುಖ ಚಟುವಟಿಕೆಗಳಲ್ಲಿ ತೊಡಗಿದೆ. ಇವು ಪ್ರಜೆಗಳೊಂದಿಗೆ ಸಂಪರ್ಕವೇರ್ಪಡಿಸುವ ಕೊಂಡಿಗಳಾಗಿವೆ. ಸಾಮಾನ್ಯವಾಗಿ ಭಾರತದ, ವಿಶಿಷ್ಟವಾಗಿ ಕರ್ನಾಟಕದ ಜನತೆಯ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ಔದ್ಯೋಗಿಕ ಸುಕ್ಷೇಮಗಳನ್ನು ಅಭಿವೃದ್ಧಿಗೊಳಿಸಲು ಮಾಡಿದ ಪರೋಪಕಾರಿ ಚಟುವಟಿಕೆಗಳ ಪ್ರವರ್ತಕರು ಪ್ರಾಟೆಸ್ಟೆಂಟರೆಂದರೆ ಆಶ್ಚರ್ಯವಿಲ್ಲ. ಇಂತಹ ಹಿನ್ನೆಲೆಗಳಿಂದ ಕನಕಪುರದ ಜನ ಸಹಾಯದಲ್ಲಿ ತೊಡಗಿರುವ ಪ್ರಾಟೆಸ್ಟೆಂಟರ ಚರ್ಚುಗಳು, ಮಿಷನರಿಗಳು ಪಟ್ಟಣದಲ್ಲಿ ನಿರ್ಮಾಣದ ಹಂತದಲ್ಲಿವೆ.

ಅಡಿಟಿಪ್ಪಣಿಗಳು

೧. ಅನಂತ ರಂಗಾಚಾರ್ ಎನ್., **ಭಾರತೀಯ ಶಿಲ್ಪಶಾಸ್ತ್ರದ ಸಂಕ್ಷಿಪ್ತ ಪರಿಚಯ,** ಪು. ೩೦೮.

೨. ಅಂಬಳಿಕೆ ಹಿರಿಯಣ್ಣ(ಪ್ರ.ಸಂ.), **ಕನ್ನಡ ವಿಷಯ ವಿಶ್ವಕೋಶ,** ಇತಿಹಾಸ ಮತ್ತು ಪುರಾತತ್ವ, ಪು. ೯೪೧.

೩. ಪ್ರಭಾಕರ ಎಸ್., **ದೇವಾಲಯಗಳ ವಾಸ್ತುಚಂದ್ರಿಕೆ.** ಪು. ೨೭.

೪. ದೇವರಕೊಂಡಾರೆಡ್ಡಿ, **ಭಾರತೀಯ ವಾಸ್ತುವಿದ್ಯೆ,** ಪು. ೮.

೫. ಅದೇ., ಪು. ೩-೮.

೬. ರಾಮಚಂದ್ರರಾವ್ ಎಸ್.ಕೆ., **ಕೆಲವು ಧಾರ್ಮಿಕ ಕರ್ತವ್ಯಗಳು,** ಪು. ೮೦.

೭. ಅದೇ., ಪು. ೭೭.

೮. ಸುರೇಶ ಬಿ., **ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ದೇವಾಲಯಗಳು,** ಪು. ೪.

೯. Percy Brown, Indian Architecture, Page 140.

೧೦. ತಿಪ್ಪಣ್ಣ ಮರಿಕುಂಟೆ, **ಹರ್ತಿಕೋಟೆ ಸ್ಮಾರಕಗಳು,** ಲಕ್ಷ್ಮಣ್ ತೆಲಗಾವಿ(ಪ್ರ.ಸಂ.) **ಹರತಿಸಿರಿ(ಸಂ),** ಪು. ೫೧೩.

೧೧. ವೆಂಕಟಾಚಲಶಾಸ್ತ್ರೀ ಟಿ.ವಿ., **ಕನಕಪುರ ಎಂಬ ಕಾನಕಾನಹಳ್ಳಿ ಚರಿತ್ರೆ,** ಪು. ೧೩೯.

೧೨. ರಾಜಾರಾಂ ಹೆಗಡೆ, **ಭಾರತೀಯ ಮೂರ್ತಿಶಾಸ್ತ್ರ, ಅರಿವು ಬರಹ, ಸಂ. ೨, ಭಾಗ-೧,** ಪು. ೩೫.

೧೩. ಅದೇ., ಪು. ೩೬.

೧೪. ಅದೇ., ಪು. ೩೭.

೧೫. ಆಲ್ಚಿನ್ ಎಫ್.ಆರ್. **ದ ರೈಸ್ ಅಂಡ್ ಬರ್ತ್ ಆಫ್ ಇಂಡಿಯನ್ ಸಿವಿಲೈಜೇಷನ್,** ಪು. ೧೭೭.

೧೬. ರಾಮಚಂದ್ರರಾವ್ ಎಸ್.ಕೆ., **ಪ್ರತಿಮಾಕೋಶ, Voll-VI,** ಪು. ೨೧೩.

೧೭. ಷೇಕ್ ಅಲಿ, **ಕರ್ನಾಟಕ ಚರಿತ್ರೆ, ಸಂ. ೧,** ಪು. ೨೪೨.

೧೮. ಸುರೇಶ ಬಿ., **ಪೂರ್ವೋಕ್ತ,** ಪು. ೨೧೪.

೧೯. ಅದೇ., ಪು. ೨೧೪.

೨೦. ಅದೇ., ಪು. ೨೧೯.

೨೧. ರಾಮಚಂದ್ರರಾವ್ ಎಸ್.ಕೆ., **ಮೂರ್ತಿಶಿಲ್ಪಗಳ ನೆಲೆ-ಹಿನ್ನೆಲೆ,** ಪು. ೩೨೪.

೨೨. ಅದೇ., ಪು. ೩೨೫.

೨೩. ಪುಟ್ಟಪ್ಪ ಕೆ.ವಿ., **ಇಸ್ಲಾಂ ಸಂಸ್ಕೃತಿ,** ಪು. ೧೫೫.

೨೪. **ಕರ್ನಾಟಕ ಕೈಪಿಡಿ,** ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಇಲಾಖೆ, ಪು. ೭೭.

೨೫. ಎಚ್ಚೆಸ್ಕೆ, ಅವಲೋಕನ, **ಕರ್ನಾಟಕ ಪರಂಪರೆ ಸಮೀಕ್ಷೆ,** ಪು. ೧೨೨.

೨೬. ಪುಟ್ಟಪ್ಪ ಕೆ.ವಿ., **ಪೂರ್ವೋಕ್ತ,** ಪು. ೧೫೫.

೨೭. ಅಳವಂಡಿ ಲಕ್ಷ್ಮಣ್, **ಇತಿಹಾಸ ಕೋಶ,** ಪು. ೫೭-೫೯.

೨೮. ಸೂರ್ಯನಾಥ್ ಯು. ಕಾಮತ್, **ಬೆಂಗಳೂರು ಗ್ರಾಮಾಂತರ ಜಿಲ್ಲಾ ಗ್ಯಾಸೆಟಿಯರ್,** ಪು. ೮೨೮.

೨೯. ಅಂಬಳಿಕೆ ಹಿರಿಯಣ್ಣ, **ಪೂರ್ವೋಕ್ತ,** ಪು. ೨೯೫.

೩೦. ಸ್ವಾಮಿ ಐ. ಅಂತಪ್ಪ, ಕನಕಪುರ ತಾಲೂಕಿನಲ್ಲಿ ಮತ್ತು ಸುತ್ತಮುತ್ತಲಲ್ಲಿ ಕ್ರೈಸ್ತ ಧರ್ಮದ ಉಗಮ, ಪು. ೧೦.

೩೧. ಅದೇ., ಪು. ೧೦೫.

೩೨. ಸೂರ್ಯನಾಥ್ ಯು. ಕಾಮತ್, **ಪೂರ್ವೋಕ್ತ,** ಪು. ೮೨೮.

❖❖

ಅಧ್ಯಾಯ : ಐದು

ಆಚರಣೆಗಳು

ಅಧ್ಯಾಯ : ಐದು

ಆಚರಣೆಗಳು

೫.೧. ಜಾತ್ರೆ

ಜಾತ್ರೆಗಳು ಜನಪದರ ಜೀವನದ ಅವಿಭಾಜ್ಯ ಅಂಗವಾಗಿರುವುದರಿಂದ ಅವರ ಸಂಸ್ಕೃತಿಯ ವಿಕಾಸಕ್ಕೆ ಚೈತನ್ಯದಾಯಕವಾಗಿವೆ. ಆದಿಮಾನವನ ಕಾಲದಲ್ಲಿ ದೇವತಾರಾಧನೆ ಮೊದಲಾದ ಧಾರ್ಮಿಕ ಆಚರಣೆಗಳು ಸಾಮೂಹಿಕವಾಗಿ ನಡೆಯುತ್ತಿದ್ದವು ಎನಿಸುತ್ತದೆ. ಅಲೆಮಾರಿ ಜೀವನವನ್ನು ತೊರೆದ ಮಾನವನು ಒಂದು ಕಡೆ ಸ್ಥಿರವಾಗಿ ನೆಲೆಸಿ ಕೆಲವು ಸಂಪ್ರದಾಯಗಳನ್ನು ತನ್ನಲ್ಲಿ ರೂಢಿಸಿಕೊಂಡ ಸಂದರ್ಭದಲ್ಲಿ ಜಾತ್ರೆಗಳು ಸಹ ಆರಂಭವಾಗಿರಬಹುದು. ಮೊದಮೊದಲು ಕುಣಿತ, ಹಾಡು, ಬಲಿ, ಮಾಟ, ಮಂತ್ರ ಹಾಗೂ ಪೂಜಾ ವಿಧಿವಿಧಾನಗಳಲ್ಲಿ ತೊಡಗಿರಬೇಕು. ಕಾಲಕ್ರಮೇಣ ಸಮಾಜದ ರೀತಿ ನೀತಿಗಳು, ದೇವರ ಕಲ್ಪನೆ ಮತ್ತು ಮತೀಯ ತತ್ವಗಳು ವಿಕಾಸಗೊಂಡಂತೆ ಧಾರ್ಮಿಕ ಆಚರಣೆಗಳು ಸಂಕೀರ್ಣತೆಯ ಸ್ವರೂಪವನ್ನು ಪಡೆದುಕೊಂಡಿವೆ. ಈ ಹಿನ್ನೆಲೆಯಲ್ಲಿ ಜನಜೀವನದಲ್ಲಿ ಬದಲಾವಣೆಗಳು ಆದಂತೆ ಜಾತ್ರೆಗಳ ಪ್ರಾಚೀನ ಕಲ್ಪನೆಯ ಜೊತೆಗೆ ಹೊಸ ಹೊಸ ಸಂಗತಿಗಳು ಬೆಳೆಯುತ್ತಿವೆ.

ಜಗತ್ತಿನ ಎಲ್ಲಾ ಜನಾಂಗಗಳಲ್ಲಿಯೂ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಪ್ರಯೋಜನೆಗಳಿಗೆ ಕಾರಣವಾದ ಜಾತ್ರೆಗಳ ಪ್ರಾಬಲ್ಯವನ್ನು ಒಂದಲ್ಲಾ ಒಂದು ರೂಪದಲ್ಲಿ ಕಾಣಬಹುದು. ಜಾತ್ರೆಗಳು ಏಕಕಾಲದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಸ್ವತಂತ್ರವಾಗಿ ತಲೆಯೆತ್ತಿದ್ದರೂ, ಕೆಲವೊಮ್ಮೆ ಅನುಕರಣೆಯ ಮೂಲಕ ಸಾದೃಶ್ಯಗಳು ಎಣೆದುಕೊಂಡಿರಬಹುದು. ಮನುಷ್ಯನ ಮನಸ್ಸು ಈ ವಿಚಾರಗಳಲ್ಲಿ ಒಂದೇ ತೆರನಾಗಿ ಕೆಲಸ ಮಾಡಿದರೂ, ಜಾತ್ರೆಗಳ ಸ್ವರೂಪ, ರೀತಿ-ನೀತಿ ಹಾಗೂ ವಿಧಾನಗಳಲ್ಲಿ ಸಾಮ್ಯತೆಗಳು ಕಾಣಿಸಿಕೊಂಡರೆ ಆಶ್ಚರ್ಯವೇನಿಲ್ಲ. ಪರಿಸರದ ಸನ್ನಿವೇಶ, ಮತೀಯ ಶಕ್ತಿ, ಜನಾಭಿರುಚಿ ಮತ್ತು ಯುಗ ಧರ್ಮಗಳಿಗೆ ಅನುಗುಣವಾಗಿ ಅವುಗಳಲ್ಲಿ ವೈದೃಶ್ಯಗಳು ವಿಶೇಷವಾಗಿ ಗೋಚರಿಸುವುದುಂಟು.

ಕನ್ನಡ ನಾಡಿನಲ್ಲಿ ಜಾತ್ರೆಗಳು ಎಂದು ಆರಂಭಗೊಂಡಿವೆ ಎಂದು ಹೇಳಲಾಗದು. ಮೊಟ್ಟಮೊದಲು ಜನ್ನನ ಯಶೋಧರ ಚರಿತ್ರೆಯಲ್ಲಿ ಜಾತ್ರೆಗಳ ವಿವರಣೆ ಕಂಡುಬರುತ್ತದೆ.[೧]

'ಯಾತ್ರ' ಎಂಬ ಸಂಸ್ಕೃತ ಶಬ್ದವೇ ಕನ್ನಡದ 'ಜಾತ್ರೆ'ಯಾಗಿದೆ. ಯಾತ್ರೆ ಪದಕ್ಕೆ ಚಲನೆ, ಪಯಣ, ಸೈನ್ಯಾಕ್ರಮಣ, ತೀರ್ಥಯಾತ್ರೆ, ಹಬ್ಬ, ಸಂತೆ, ಮೆರವಣಿಗೆ, ಮನರಂಜನೆ ಇತ್ಯಾದಿ ಅರ್ಥಗಳಿವೆ. ಕನ್ನಡದಲ್ಲಿ ಯಾತ್ರೆ ಮತ್ತು ಜಾತ್ರೆ ಎಂಬ ಎರಡು ಶಬ್ದಗಳು ರೂಢಿಯಲ್ಲಿದ್ದು, 'ಯಾತ್ರ' ಪದದ ಮೂಲಾರ್ಥವನ್ನು ಇವೆರಡು ಹಂಚಿಕೊಂಡಿವೆ. ಕನಕಪುರ ಪಟ್ಟಣ ಪರಿಸರದಲ್ಲಿ ಪ್ರಮುಖವಾಗಿ ಕಲ್ಲಹಳ್ಳಿ, ಶಿವನಹಳ್ಳಿಗಳಲ್ಲಿ ದೇವರಜಾತ್ರೆ ಹಾಗೂ ದನಗಳ ಜಾತ್ರೆಗಳು ನಡೆಯುತ್ತವೆ.

೫.೧.೧. ಕಲ್ಲಹಳ್ಳಿ ಜಾತ್ರೆ

ಕನಕಪುರ ಪಟ್ಟಣದ ಉತ್ತರಕ್ಕೆ ಮೂರು ಕಿ.ಮೀ. ದೂರದಲ್ಲಿರುವ ಕಲ್ಲಹಳ್ಳಿ ಗ್ರಾಮವು ಈ ತಾಲೂಕಿನ ಪ್ರಸಿದ್ಧವಾದ ವೈಷ್ಣವ ಪಂಥಕ್ಕೆ ಸೇರಿದ ಧಾರ್ಮಿಕ ಕ್ಷೇತ್ರವಾಗಿದ್ದು, ಚಿಕ್ಕ ತಿರುಪತಿ(ಎರಡನೇ ತಿರುಪತಿ) ಎಂದು ಪ್ರಾಮುಖ್ಯತೆ ಪಡೆದಿದೆ. ಇಲ್ಲಿ ವೆಂಕಟರಮಣ ಸ್ವಾಮಿ ದೇವರಿಗೆ ಪ್ರತಿ ವರ್ಷ ಫೆಬ್ರವರಿ ತಿಂಗಳ ಪೌರ್ಣಿಮೆ ದಿನ ಈ ದೇವರ ಜಾತ್ರೆ ಆರಂಭವಾಗಿ ಒಂದು ವಾರ ನಡೆಯುತ್ತದೆ. ಧ್ವಜಾರೋಹಣ, ಕಲ್ಯಾಣೋತ್ಸವ, ಪುಷ್ಪ ಮಂಟಪೋತ್ಸವ, ಬ್ರಹ್ಮರಥೋತ್ಸವ, ಗರುಡ ಶೇಷವಾಹನೋತ್ಸವ ಇವೆಲ್ಲ ನಡೆದ ನಂತರ ಕೊನೆಯ ದಿವಸ ಪೂರ್ಣ ಕುಂಬಾಭಿಷೇಕ ನಡೆಯುತ್ತದೆ. ಮೇಲಿನ ಉತ್ಸವಗಳು ಮುಗಿದ ನಂತರ ಭಾನುವಾರ ಕನಕಪುರದ ಕೋಟೆ ಬೀದಿಯಲ್ಲಿ ಈ ದೇವರ 'ಪೇಟೆ ಉತ್ಸವ' ನಡೆಯುತ್ತದೆ. ಇಲ್ಲಿ ನಡೆಯುವ ಆಚರಣೆಗಳನ್ನು ಕೆಳಗೆ ವಿವರಿಸಲಾಗಿದೆ.

ಕಲ್ಯಾಣೋತ್ಸವ

ಇಲ್ಲಿ ವೆಂಕಟರಮಣ ಸ್ವಾಮಿ ದೇವರಿಗೆ ಕಲ್ಯಾಣ ಮಹೋತ್ಸವ ನಡೆಸುತ್ತಾರೆ. ದೇವರ ಮೂರ್ತಿಗೆ ಶೃಂಗಾರಿಸಿ ಪುಷ್ಪಾಭಿಷೇಕ ಮಾಡುವ ಮೂಲಕ ಅದರ ವಿವಾಹ ಮಹೋತ್ಸವ ನಡೆಯುತ್ತದೆ.

ಬ್ರಹ್ಮ ರಥೋತ್ಸವ

ಮಾಘ ಶುದ್ಧ ಪೌರ್ಣಿಮೆಯ ದಿನ ಈ ದೇವರಿಗೆ ಬ್ರಹ್ಮ ರಥೋತ್ಸವ ನಡೆಯುತ್ತದೆ. ಇಲ್ಲಿ ನಡೆಯುವ ಬ್ರಹ್ಮ ರಥೋತ್ಸವಕ್ಕೆ ತಿರುಪತಿಯಲ್ಲಿರುವ ವೆಂಕಟರಮಣ ಸ್ವಾಮಿ ದೇವರು ಬಂದು ಹೋಗುತ್ತದೆ ಎಂಬ ನಂಬಿಕೆಯಿದೆ. ಬ್ರಹ್ಮ ರಥೋತ್ಸವದ ಪೂಜಾ ಕಾರ್ಯಗಳು ಬ್ರಾಹ್ಮಣರ ನೇತೃತ್ವದಲ್ಲಿ ನಡೆಯುತ್ತವೆ. ದೇವರಿಗೆ ಮಹಾಮಂಗಳಾರತಿ ಆದ ಮೇಲೆ ಉತ್ಸವಮೂರ್ತಿಯನ್ನು ಅಲಂಕಾರಗೊಳಿಸಿ ರಥದ ಮೇಲೆ ಕೂರಿಸುತ್ತಾರೆ. ಅನಂತರ ಕೆಲವು ಪೂಜಾ ಕಾರ್ಯಗಳು ನಡೆದು ನೆರೆದಿರುವ ಜನರು ರಥವನ್ನು ಎಳೆಯುತ್ತಾರೆ.

ಶೇಷವಾಹನೋತ್ಸವ

ಸರ್ಪ ಸದೃಶ ವಾಹನವನ್ನು ಹಾವಿನ ಹೆಡೆಯಂತೆ ಶೃಂಗಾರ ಮಾಡಿ ಅದರಲ್ಲಿ ದೇವರ ಮೂರ್ತಿಯನ್ನು ಇಟ್ಟು ಮೆರವಣಿಗೆ ಮಾಡುವುದೇ ಶೇಷವಾಹನೋತ್ಸವ.

ಗರುಡೋತ್ಸವ

ದೇವಾಲಯದಲ್ಲಿರುವ ಗರುಡನ ಮೂರ್ತಿಯನ್ನು ಜಾತ್ರೆಯ ಕೊನೆಯ ದಿನ ಹೊರಗೆ ತಂದು ಅದರ ಮೇಲೆ ವೆಂಕಟರಮಣಸ್ವಾಮಿ ದೇವರ ಮೂರ್ತಿಯನ್ನು ಕೂರಿಸಿ ಗ್ರಾಮದಲ್ಲಿ ಮೆರವಣಿಗೆ ನಡೆಸುತ್ತಾರೆ. ಇದಕ್ಕೆ ಗರಡೋತ್ಸವ ಎಂಬುದಾಗಿ ಕರೆಯಲಾಗಿದೆ.

ಮದ್ದು ಗುಂಡು ಸುಡುವುದು

ಈ ಜಾತ್ರೆಯ ವಿಶೇಷತೆ ಎಂದರೆ 'ಮದ್ದು ಗುಂಡು ಸುಡುವುದು' ರಥೋತ್ಸವ ನಡೆದ ದಿನವೇ ರಾತ್ರಿ ದೇವಾಲಯದ ಮುಂದೆ ಮೂರು ಅಡಿಕೆ ಕಂಬಗಳನ್ನು ನೆಡುತ್ತಾರೆ. ಮದ್ದು ಗುಂಡು ತಯಾರು ಮಾಡುವವರನ್ನು ಶಿವಕಾಶಿಯಿಂದ[೨] ಕರೆಸಿ ಮದ್ದು ಗುಂಡನ್ನು ಮಣ್ಣಿನ ಸಣ್ಣ ಸಣ್ಣ ಕುಡಿಕೆಗಳಿಗೆ ತುಂಬಿ ಅಡಿಕೆ ಮರಕ್ಕೆ ಕಟ್ಟಿ ಸಿಡಿಸಲಾಗುತ್ತದೆ.

೫.೨. ಶಿವನಹಳ್ಳಿ ವೀರಭದ್ರಸ್ವಾಮಿ ಜಾತ್ರೆ

ಕನಕಪುರ ಪಟ್ಟಣಕ್ಕೆ ಹೊಂದಿಕೊಂಡಂತೆ ಮೈಸೂರು ಮಾರ್ಗದಲ್ಲಿರುವ ಶಿವನಹಳ್ಳಿಯ ವೀರಭದ್ರಸ್ವಾಮಿ ದೇವರು ಪಟ್ಟಣದ ಹಾಗೂ ತಾಲೂಕಿನ ಜನರ ಆರಾಧ್ಯ ದೈವವಾಗಿದೆ. ಇದು ತಾಲೂಕಿನ ಪ್ರಮುಖ ಶೈವ ಕ್ಷೇತ್ರಗಳಲ್ಲಿ ಒಂದಾಗಿದೆ. ಇಲ್ಲಿರುವ ವೀರಭದ್ರಸ್ವಾಮಿಯ ಕಲ್ಲಿನ ದೇವಾಲಯವನ್ನು ದ್ರಾವಿಡ ಶೈಲಿಯಲ್ಲಿ ನಿರ್ಮಾಣ ಮಾಡಲಾಗಿದೆ. ದೇವಾಲಯದ ಕಲ್ಲಿನ ಕಂಬಗಳಲ್ಲಿ ಶಿವ, ಪಾರ್ವತಿ, ಬಸವ ಮೊದಲಾದ ಉಬ್ಬುಶಿಲ್ಪಗಳ ಕೆತ್ತನೆಗಳನ್ನು ಕಾಣಬಹುದು. ಈ ತಾಲೂಕಿನಲ್ಲಿ ಅಪಾರ ಭಕ್ತರನ್ನು ಹೊಂದಿರುವ ವೀರಭದ್ರಸ್ವಾಮಿಗೆ ಪ್ರತಿ ವರ್ಷ ಜಾತ್ರೆ ಮಾಡಲಾಗುತ್ತದೆ.

ಶಿವನಹಳ್ಳಿಯ ಜಾತ್ರೆಯು ಪ್ರತಿವರ್ಷ ರಥಸಪ್ತಮಿಯ ಕಾಲದಲ್ಲಿ ಜರುಗುತ್ತದೆ. ಶುಕ್ರವಾರ ಪ್ರಾರಂಭವಾಗಿ ನಂತರ ಗುರುವಾರದವರೆಗೆ ಹಲವು ಆಚರಣೆಗಳಿಂದ ಶಾಸ್ತ್ರೋಕ್ತವಾಗಿ ನಡೆಯುತ್ತದೆ. ಇದರಲ್ಲಿ ಹೆಚ್ಚಾಗಿ ಕನಕಪುರ ಪಟ್ಟಣ ಹಾಗೂ ಸುತ್ತಮುತ್ತಲ ಹಳ್ಳಿಗಳ ಜನರು ಪಾಲ್ಗೊಳ್ಳುತ್ತಾರೆ. ಶುಕ್ರವಾರ ವೀರಭದ್ರ ಸ್ವಾಮಿಗೆ ಕುಂಭಾಭಿಷೇಕ, ಅಂಕುರಾರ್ಪಣೆ, ಪಂಚಕಳಸ ಸ್ಥಾಪನೆ ಮತ್ತು ಕಂಕಣಧಾರಣೆ ಕಾರ್ಯವನ್ನು ನೆರವೇರಿಸುತ್ತಾರೆ. ಇದೇ ದಿನ ಕೊಡಗಿನ ರಾಜ ಕೊಟ್ಟ ಎನ್ನಲಾದ ವೀರಭದ್ರನ ಹಲಗೆಯನ್ನು ಅರ್ಚಕರು ಮನೆಗೆ ತೆಗೆದುಕೊಂಡು ಹೋಗಿ ಪೂಜೆ ಸಲ್ಲಿಸುತ್ತಾರೆ. ಶನಿವಾರ ಮುಂಜಾನೆ ವೀರಭದ್ರಸ್ವಾಮಿಗೆ ರುದ್ರಾಭಿಷೇಖ ಮಾಡಿ, ಪುಷ್ಪಗಳಿಂದ ರಥವನ್ನು ಅಲಂಕಾರ ಮಾಡಿ ಪುಷ್ಪ ರಥೋತ್ಸವ ನಡೆಸುತ್ತಾರೆ. ಈ ರಥೋತ್ಸವದ ಸಂದರ್ಭದಲ್ಲಿ ಪೂಜಾ ಕುಣಿತ, ಪಟದ ಕುಣಿತ, ತಮಟೆ ಕುಣಿತ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಭಾನುವಾರ ಚಿಕ್ಕ 'ತೇರು'(ರಥ) ಉತ್ಸವ ನಡೆಯುತ್ತದೆ. ಸೋಮವಾರ ಸಂಜೆ ದೇಗುಲ ಮಠದವರು ಪಲ್ಲಕ್ಕಿ ಉತ್ಸವ ನಡೆಸುತ್ತಾರೆ. ಮಂಗಳವಾರ ನಡೆಯುವ ವೀರಭದ್ರ ದೇವರ ಅಗ್ನಿಕೊಂಡೋತ್ಸವ ಜನಪ್ರಿಯವಾಗಿದೆ. ಶಿವನಹಳ್ಳಿಯ ಸುತ್ತಮುತ್ತಲ ಜನರು ಈ

ಕೊಂಡಕ್ಕೆ "ಎಳವಾರಗಳನ್ನು" ಕಟ್ಟಿ "ಸೌದೆ" (ಕಟ್ಟಿಗೆ) ತಂದು ಹಾಕುತ್ತಾರೆ. ಮಂಗಳವಾರ ನಡೆಯುವ ಕೊಂಡೋತ್ಸವದಲ್ಲಿ ದೇವರನ್ನು ಹೊತ್ತುಕೊಂಡಿರುವ ಪೂಜಾರಿ ಕೊಂಡವನ್ನು ಹಾಯುತ್ತಾನೆ. ಅದೇ ಮಂಗಳವಾರ ಮಧ್ಯಾಹ್ನ ನಡೆಯುವ "ದೊಡ್ಡ ತೇರಿನ" (ರಥೋತ್ಸವ) ಉತ್ಸವದ ಸಮಯದ ಈ ಊರ ಗ್ರಾಮದೇವತೆಯಾದ "ಕ್ಯಾತಮ್ಮ" ದಲಿತರ ಕೇರಿಯಿಂದ ಇದೇ ಉತ್ಸವದ ಜೊತೆ ವೀರಭದ್ರಸ್ವಾಮಿ ದೇಗುಲಕ್ಕೆ ಬರುತ್ತಾಳೆ.[೩] ಬುಧವಾರ ಉಯ್ಯಾಲೋತ್ಸವ ಮತ್ತು ಗುರುವಾರ ದೀಪೋತ್ಸವ, ಮಹಾಮಂಗಳಾರತಿ ನಡೆಯುವುದರ ಮೂಲಕ ಈ ಜಾತ್ರೆ ಮುಕ್ತಾಯವಾಗುತ್ತದೆ.

ಜನಪದರು ರೂಪಿಸಿಕೊಂಡಿರುವ ಇಂತಹ ಆಚರಣೆ ಸಮಾಜದಲ್ಲಿ ನಿರ್ಲಕ್ಷಿತರ ಸಾಂಸ್ಕೃತಿಕ ಪ್ರತೀಕಗಳೂ ಆಗಿರುತ್ತವೆ. ಮಾನವನ ಎಲ್ಲಾ ಸಂಪ್ರದಾಯ ಮತ್ತು ಆಚರಣೆಗಳು ಶ್ರಮಿಕ ಜಗತ್ತಿನ ಆಧ್ಯಾತ್ಮಿಕ ರೂಪಗಳೆಂದು ನಾವು ಇಂದು ಅರ್ಥಮಾಡಿಕೊಳ್ಳಬೇಕಾಗಿದೆ. ಜನಪದರು ಹೇಗೆ ತಮ್ಮದೇ ಆದ ನಂಬಿಕೆ ಹಾಗೂ ಆಚರಣೆಗಳ ಮೂಲಕ ಸಾಂಸ್ಕೃತಿಕವಾಗಿ ಕ್ರಿಯಾಶೀಲರಾಗಿದ್ದಾರೆ ಎಂಬುದಕ್ಕೆ ಈ ಜಾತ್ರೆಗಳು ಸಾಕ್ಷಿಗಳಾಗಿವೆ. ಸಾಮಾಜಿಕವಾಗಿ ವಿಭಿನ್ನ ಸ್ತರಗಳಲ್ಲಿ ರೂಪಿತವಾಗಿರುವ ಹಿಂದೂ ಸಮಾಜದಲ್ಲಿ ಜಾತಿಗಳ ಭಾವೈಕ್ಯತೆ ಹಾಗೂ ಸಾಮಾಜಿಕ ಒಗ್ಗೂಡುವಿಕೆಗೆ ಇಂತಹ ಜಾತ್ರೆಗಳು ಕಾರಣವಾಗಿವೆ.

೫.೧.೩. ಕನಕಪುರ ಪಟ್ಟಣ ಪರಿಸರದಲ್ಲಿ ನಡೆಯುವ ದನಗಳ ಜಾತ್ರೆಗಳು

ಜಾತ್ರೆಗಳಲ್ಲಿ 'ಜನಗಳ ಜಾತ್ರೆ' ಹಾಗೂ 'ದನಗಳ ಜಾತ್ರೆ' ಎಂದು ಎರಡು ಬಗೆಗಳಿವೆ. ಜನಗಳ ಜಾತ್ರೆಯು ದೇವರ ಹೆಸರಿನಲ್ಲಿ ಒಂದು ಗೊತ್ತಾದ ಸ್ಥಳದಲ್ಲಿ ರಥ, ಉತ್ಸವ ಮೊದಲಾದ ಆಚರಣೆಗಳಿಂದ ನಡೆಯುತ್ತದೆ. ಊರಿನ ಹೊರಗೆ ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ದನಗಳ ಜಾತ್ರೆ ನಡೆಯುತ್ತದೆ. ಹಲವು ಪ್ರದೇಶಗಳಿಂದ ಬಂದಿರುವ ಜಾನುವಾರಗಳನ್ನು ಮಾರುವ ಮತ್ತು ಕೊಳ್ಳುವ ವ್ಯವಹಾರ ನಡೆಯುತ್ತದೆ. ಕೃಷಿ ಕೆಲಸಕ್ಕೆ ಬೇಕಾದ ಜಾನುವಾರುಗಳನ್ನು ವ್ಯಾಪಾರ ಮಾರಾಟ ಮಾಡುವವರಿಗೆ ಒಂದು ಸಮರ್ಥ ವೇದಿಕೆ ಇಲ್ಲದಿದ್ದ ಸಂದರ್ಭದಲ್ಲಿ ದನಗಳ ಜಾತ್ರೆ ಪ್ರಾರಂಭವಾಗಿರಬಹುದು. ಜಾತ್ರೆ ನಡೆಯುವ ಸ್ಥಳದಲ್ಲಿ ಜಾನುವಾರುಗಳು ತಂಗುವುದಕ್ಕೆ ಬೇಕಾದ ವಿಶಾಲ ಭೂಮಿ, ನೀರಿನ ವ್ಯವಸ್ಥೆ ಇರುವ ಪ್ರದೇಶಗಳಲ್ಲಿ ಮಾತ್ರ ದನಗಳ ಜಾತ್ರೆ ನಡೆಯುತ್ತದೆ. ಬೇರೆ ಬೇರೆ ಪ್ರದೇಶಗಳ ರೈತರ ಮತ್ತು ವ್ಯಾಪಾರಸ್ಥರ ಎತ್ತು, ಹೋರಿ ಹಾಗೂ ಹಸುಗಳು ಇಲ್ಲಿ ಸೇರುವುದರಿಂದ ದಷ್ಟ ಪುಷ್ಟವಾದ ಹೋರಿಗಳು ಮತ್ತು ಎತ್ತುಗಳನ್ನು ಸಾಕಿ ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಪ್ರತಿಷ್ಠೆ ಹೆಚ್ಚಿಸಿಕೊಳ್ಳುವ ರೈತರೂ ಉಂಟು. ಕನಕಪುರ ತಾಲೂಕು ದಟ್ಟವಾದ ಅರಣ್ಯ ಪ್ರದೇಶದಿಂದ ಕೂಡಿದ್ದು ಪ್ರಾಚೀನ ಕಾಲದಿಂದಲೂ ಪಶುಪಾಲನೆ ಹೆಚ್ಚಾಗಿ ಕಂಡು ಬಂದಿದ್ದು, ಇಲ್ಲಿಯ ಜನರು ಹೆಚ್ಚು ಕೃಷಿಯನ್ನು ಅವಲಂಬಿಸಿದ್ದಾರೆ.

ಕನಕಪುರ ಪಟ್ಟಣ ಪರಿಸರದಲ್ಲಿ ನಡೆಯುವ ಹಸುಗಳ ಜಾತ್ರೆಯನ್ನು 'ದನಗಳ ಪರಿಸೆ' ಎಂದೂ ಸಹ ಕರೆಯುತ್ತಾರೆ. ಇಲ್ಲಿ ಪ್ರಮುಖವಾಗಿ ಹೊಳೆ ಪರಿಸೆ, ಶಿವನಹಳ್ಳಿ, ಕಲ್ಲಹಳ್ಳಿ, ಚಿಕ್ಕ ಮದುವಾಡಿ ಪರಿಸೆಗಳನ್ನು ಕಾಣಬಹುದು. ಇವು ಡಿಸೆಂಬರ್ ತಿಂಗಳಿಂದ ಮಾರ್ಚ್ ತಿಂಗಳವರೆಗೆ ನಡೆಯುತ್ತವೆ. ಈ ಅವಧಿಯಲ್ಲಿ ರೈತರಿಗೆ ಹಾಗೂ ಜಾನುವಾರಗಳನ್ನು ಕೊಳ್ಳಲು ಮತ್ತು ಮಾರಾಟ ಮಾಡಲು ಇದು ಸೂಕ್ತ ಕಾಲವಾಗಿದೆ. ನೆರೆಯ ತಮಿಳುನಾಡು ಪ್ರದೇಶವಾದ ಡೆಂಕಣಿಕೋಟೆ, ಉರ್ಗ್ಯಾ ಹಾಗೂ ಕರ್ನಾಟಕದ ಮಂಡ್ಯ, ಚಾಮರಾಜನಗರ, ಮಳವಳ್ಳಿ, ಚನ್ನಪಟ್ಟಣ ಮೊದಲಾದ ಪ್ರದೇಶಗಳಿಂದ ಈ ಜಾತ್ರೆಗಳಿಗೆ ದನಗಳನ್ನು ಕೊಳ್ಳಲು, ಮಾರಾಟ ಮಾಡಲು ರೈತರು, ವ್ಯಾಪಾರಿಗಳು ಬರುತ್ತಾರೆ.

ಇತ್ತೀಚಿನ ದಶಕಗಳಲ್ಲಿ ಹಳ್ಳಿಯ ತಳಿಗಳ ಹಸುಗಳು ಕಡಿಮೆಯಾಗುತ್ತಿದ್ದು, ಸೀಮೆ ಹಸುಗಳು(ಹೈಬ್ರೀಡ್) ಹೆಚ್ಚಾಗುತ್ತಿವೆ. ಇವುಗಳಿಂದ ರೈತರ ಆರ್ಥಿಕತೆ ಹೆಚ್ಚಾಗುತ್ತಿದೆ. ಆದರೆ ರಾಸಾಯನಿಕ ಆಹಾರ ತಿಂದು ಹೆಚ್ಚು ಇವು ಕೊಡುತ್ತಿರುವ ಹಾಲು ಅಪೌಷ್ಠಿವಾಗಿದೆ. ಇದನ್ನು ದಿನನಿತ್ಯ ಸೇವಿಸುತ್ತಿರುವ ನಾವುಗಳು ಮುದೊಂದು ದಿನ ಅನಾರೋಗ್ಯಕ್ಕೆ ತುತ್ತಾಗಲೇ ಬೇಕಾಗುತ್ತದೆ. ಹೈಬ್ರಿಡ್ ತಳಿಯ ಹಸುಗಳ ವಾಣಿಜ್ಯೀಕರಣದಿಂದ ಹಳ್ಳಿ ತಳಿಯ ಹಸುಗಳು ನಮ್ಮಿಂದ ಕಣ್ಮರೆಯಾಗುತ್ತಿದ್ದು ಅವುಗಳನ್ನು ಮುಂದಿನ ತಲೆಮಾರಿನ ಜನರು ಕೇವಲ ಪೋಟೋಗಳಲ್ಲಿ ಮಾತ್ರ ನೋಡಿಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ.

ಹೊಳೆ ಪರಿಸೆ : ಕನಕಪುರ ಪಟ್ಟಣದ ಅರ್ಕಾವತಿ ಸೇತುವೆಯ ಪಕ್ಕದಲ್ಲಿ ಇರುವ ಆಂಜನೇಯ ಸ್ವಾಮಿ ದೇವಾಲಯದ ಬಳಿ ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ನಡೆಯುವ ದನಗಳ ಜಾತ್ರೆಯೇ 'ಹೊಳೆ ಪರಿಸೆ'. ತಾಲೂಕಿನ ಜಾತ್ರೆ ಈ ಪರಿಸೆಯಿಂದಲೇ ಆರಂಭವಾಗುವುದು. ಆಂಜನೇಯನ ದೇವಾಲಯದ ಹತ್ತಿರ ದನಗಳ ಜಾತ್ರೆ ನಡೆಯುವುದರಿಂದ ಕನಕಪುರದ ಆಂಜನೇಯಸ್ವಾಮಿ ಇದನ್ನು 'ಹೊಳೆ ಪರಿಸೆ' ಎಂದು ಕರೆಯುತ್ತಾರೆ. ಹಿಂದೆ ಈ ಪರಿಸೆಯು ಬೆಂಗಳೂರು ಮಾರ್ಗದಲ್ಲಿರುವ 'ವರ್ಗೇರಹಳ್ಳಿ' ಬಸ್‌ನಿಲ್ದಾಣದವರೆಗೂ ಸೇರುತ್ತಿತ್ತು ಎಂದು ಇಲ್ಲಿನ ರೈತ ಚನ್ನಮಲ್ಲಶೆಟ್ಟಿಯವರ ಮಾತನ್ನು ಕೇಳಿದರೆ ಈ ಜಾತ್ರೆಯಲ್ಲಿ ಸಾವಿರಾರು ಸಂಖ್ಯೆಯ ಹಸುಗಳನ್ನು ಕೊಳ್ಳುವುದು ಮತ್ತು ಮಾರಾಟ ಮಾಡುವುದು ನಡೆಯುತ್ತಿತ್ತು ಎಂದು ತಿಳಿದುಬರುತ್ತದೆ.

ಶಿವನಹಳ್ಳಿ ಪರಿಸೆ : ಪಟ್ಟಣದ ಸಮೀಪದಲ್ಲೇ ಮೈಸೂರು ಮಾರ್ಗದಲ್ಲಿ ಇರುವ ಶಿವನಹಳ್ಳಿಯ ವೀರಭದ್ರಸ್ವಾಮಿ ಜಾತ್ರೆ ಆರಂಭವಾಗುವುದಕ್ಕೂ ಮೊದಲು ಜನವರಿ ತಿಂಗಳ ಕೊನೆಯಲ್ಲಿ ಈ ಪರಿಸೆ ನಡೆಯುತ್ತದೆ. ಇದರಲ್ಲಿ ದನಗಳ ವ್ಯಾಪಾರ ಹೆಚ್ಚಾಗಿ ನಡೆಯುತ್ತದೆ ಹಾಗೂ ಹೊರ ರಾಜ್ಯವಾದ ತಮಿಳುನಾಡು, ಡೆಂಕಣಿಕೋಟೆ, ಅಲ್ಲದೇ ಕನಕಪುರ ತಾಲೂಕಿನ ಸುತ್ತಮುತ್ತಲ ರೈತರು, ವ್ಯಾಪಾರಿಗಳು ಸೇರುತ್ತಾರೆ.

ಕಲ್ಲಹಳ್ಳಿ ಪರಿಸೆ : 'ಚಿಕ್ಕ ತಿರುಪತಿ' ಎಂದು ಪ್ರಖ್ಯಾತವಾಗಿರುವ ವೆಂಕಟರಮಣಸ್ವಾಮಿ ದೇವರ ಜಾತ್ರೆಯ ಸಂದರ್ಭದಲ್ಲೂ ಸಹ ದನಗಳ ಜಾತ್ರೆ ಜರುಗುತ್ತದೆ. ಶಿವನಹಳ್ಳಿ ಜಾತ್ರೆ ಮುಗಿಯುತ್ತಿದ್ದಂತೆಯೇ ಕಲ್ಲಹಳ್ಳಿಯಲ್ಲಿ ದನಗಳ ಜಾತ್ರೆ ಆರಂಭವಾಗುತ್ತದೆ. ಇದರಲ್ಲೂ ಸಹ ನೆರೆರಾಜ್ಯರಿಂದ ಹಾಗೂ ತಾಲೂಕಿನಿಂದ ರೈತರು, ವ್ಯಾಪಾರಿಗಳು ಬಂದು ಹಸುಗಳ ವ್ಯಾಪಾರ ಮಾಡುತ್ತಾರೆ.

ರಾಮದೇವರ ಪರಿಸೆ : ಮಾರ್ಚ್ ತಿಂಗಳಲ್ಲಿ ಯುಗಾದಿ ಹಬ್ಬ ಮುಗಿದ ಮರುದಿನ ನಡೆಯುವ ಈ ಜಾತ್ರೆ ಅತೀ ಮಹತ್ವದ್ದು. ಏಕೆಂದರೆ ಇದು ಮುಂಗಾರು ಮಳೆ ಬೀಳುವ ಸಮಯವಾಗಿರುವುದರಿಂದ ಜಮೀನನ್ನು ಉಳುಮೆ ಮಾಡಲು ರಾಸುಗಳ ಅವಶ್ಯಕತೆ ಇರುತ್ತದೆ. ಇದು ಇತ್ತೀಚಿನ ವರ್ಷಗಳವರೆಗೂ ಗ್ರಾಮ ವಿದ್ಯಾ ಪ್ರಚಾರ - ಸಂಸ್ಥೆ(ಆರ್.ಇ.ಎಸ್.) ಮೈದಾನದಲ್ಲಿ ನಡೆಯುತ್ತಿದ್ದು, ಪ್ರಸ್ತುತ ವರ್ಷಗಳಲ್ಲಿ ದೇಗುಲ ಮಠದ ಬಳಿ ನಡೆಯುತ್ತದೆ. ಕೃಷಿಯ ಆರಂಭದ ಕಾಲದಲ್ಲಿ ಈ ಜಾತ್ರೆ ನಡೆಯುವುದರಿಂದ ಹಸುಗಳಿಗೆ ಉತ್ತಮವಾದ ಬೆಲೆ ಇರುತ್ತದೆ.

೫.೨. ಹಬ್ಬಗಳು

ಹಿಂದೂ ಧರ್ಮದ ಸಂಸ್ಕೃತಿಯಲ್ಲಿ ಹಬ್ಬಗಳು ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿವೆ. ಈ ಹಿನ್ನೆಲೆಯಲ್ಲಿ ಮಾನವನ ನಂಬಿಕೆ ಮತ್ತು ಸಂಪ್ರದಾಯಗಳು ಭಾರತೀಯ ಸಮಾಜದಲ್ಲಿ ಹಬ್ಬಗಳ ಸ್ವರೂಪವನ್ನು ಪಡೆದುಕೊಂಡಿವೆ. ಹೀಗೆ ಹಿಂದೂ ಧರ್ಮದಲ್ಲಿ ಕಂಡುಬರುವ ಹಲವಾರು ಸಂಪ್ರದಾಯ ಆಚರಣೆಗಳೇ ಇಂದು ಹಬ್ಬಗಳಾಗಿ ಪರಿವರ್ತನೆಗೊಂಡಿದ್ದು, ಅವುಗಳು ಜನಸಾಮಾನ್ಯರ ನಡುವೆ ಸಾಂಸ್ಕೃತಿಕ ಅಂಗಗಳಾಗಿ ಬೆಳೆದಿವೆ. ಇವು ಧಾರ್ಮಿಕ ಆಚರಣೆಗಳ ಜೊತೆಗೆ ಲೌಕಿಕ ಮತ್ತು ಕಲಾತ್ಮಕವಾದ ಆಚರಣೆಗಳಲ್ಲೂ ಬೆರೆತು ಹೋಗಿವೆ. ಹಬ್ಬಗಳು ಆಯಾ ನಾಡಿನ ಧಾರ್ಮಿಕ ಪ್ರತೀಕವೂ ಹೌದು, ಇವುಗಳು ಆಚರಿಸುವವರ ಮನೋಭಾವನೆಯನ್ನು ಅವಲಂಬಿಸಿರುತ್ತದೆ.

ಇಂಗ್ಲೀಷಿನ 'Festival' ಎಂಬುದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಹಬ್ಬ' ಎಂದು ಕರೆಯಲಾಗಿದೆ.[೪] ಆಯಾ ಪರಿಸರದ ಜನರ ಮನೋಧರ್ಮಗಳು ವಿಶೇಷ ಸಂದರ್ಭದಲ್ಲಿ ಅಥವಾ ನಿರ್ದಿಷ್ಟ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುತ್ತಿವೆ. ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಹಬ್ಬಗಳಿಗೆ ಮಹತ್ವದ ಸ್ಥಾನ ನೀಡಲಾಗಿದೆ. ವರ್ಷದ ಆರಂಭದ ಯುಗಾದಿ ಹಬ್ಬದಿಂದ ಮಹಾಶಿವರಾತ್ರಿಯವರೆಗೆ ಹಲವು ಹಬ್ಬಗಳನ್ನು ಆಚರಣೆ ಮಾಡಲಾಗುತ್ತದೆ. ಭಾರತೀಯ ಸಮಾಜದಲ್ಲಿ ಹಲವು ಹಬ್ಬಗಳಿದ್ದು ಅವುಗಳು ಆಚರಣೆಯಲ್ಲಿ ಭಿನ್ನತೆಯಿಂದ ಕೂಡಿವೆ.

ಮನುಷ್ಯ ತನ್ನ ಅವಿಶ್ರಾಂತ ದುಡಿಮೆಯ ನಡುವೆ ಬಿಡುವು ಮಾಡಿಕೊಂಡು ಸಂಬಂಧಿಕರೊಡನೆ ಕಲೆತು ಸಂತೋಷದಿಂದ ಕೂಡಿ ಬಾಳಲು ಹಬ್ಬ-ಹರಿದಿನಗಳು ಸಹಾಯಕವಾಗಿವೆ. ಕುಟುಂಬಗಳು ಬೆಳೆದು ವಿಭಜನೆಗೊಂಡು ಬದುಕಿನ ಅನಿವಾರ್ಯತೆಯ ದೃಷ್ಟಿಯಿಂದ ದೂರ

ಹೋಗಿ ಜೀವನ ನಡೆಸುತ್ತಿರುವ ರಕ್ತಸಂಬಂಧಿಗಳು ಹಬ್ಬಗಳಲ್ಲಿ ಒಂದೆಡೆ ಸೇರಿ ತಮ್ಮ ಕಷ್ಟ ಸುಖಗಳನ್ನು ಹಂಚಿಕೊಳ್ಳಲು ಸಹಕಾರಿಯಾಗುತ್ತಿವೆ. ಅಲ್ಲದೆ ಮನೆ ದೇವರುಗಳನ್ನು ಪೂಜಿಸು ವುದರಿಂದ ನಾಡಿಗೆ ಮತ್ತು ತಮ್ಮ ಕುಟುಂಬಕ್ಕೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆಗಳ ಹಿನ್ನೆಲೆಯಲ್ಲಿ ಹಬ್ಬಗಳು ಬೆಳೆದು, ಉಳಿದುಕೊಂಡು ಮುಂದುವರಿಯುತ್ತಿರುವುದನ್ನು ಕಾಣಬಹುದು.

ಭಾರತದಲ್ಲಿ ಇಂದು ಅನೇಕ ಧರ್ಮಗಳು ನೆಲೆಗೊಂಡಿವೆ. ಆಯಾ ಧರ್ಮಗಳಿಗೆ ಸಂಬಂಧಿಸಿದಂತೆ ಅನೇಕ ಹಬ್ಬಗಳು ಆಚರಣೆಯಲ್ಲಿವೆ. ಹಬ್ಬಗಳಲ್ಲಿ ಸಾರ್ವತ್ರಿಕವಾಗಿ ಮತ್ತು ಆಯಾ ಪ್ರದೇಶಗಳಿಗೆ ಸೀಮಿತವಾಗಿ ಆಚರಿಸುವ ಎರಡು ಸಂಪ್ರದಾಯಗಳನ್ನು ಕಾಣಬಹುದು. ಎಲ್ಲಾ ಹಬ್ಬಗಳನ್ನು ಸಾಮಾಜಿಕ ಒಳಿತಿಗಾಗಿ ಎಂಬ ನಂಬಿಕೆಯಿಂದ ದೈವದ ಹೆಸರಿನಲ್ಲಿ ಆಚರಿಸಲಾಗುವುದು. ಹಿಂದೂಗಳಲ್ಲಿ ಸಾರ್ವತ್ರಿಕವಾಗಿ ಆಚರಿಸುವ ಯುಗಾದಿ, ದೀಪಾವಳಿ, ಗೌರಿಗಣೇಶ, ಸಂಕ್ರಾಂತಿ, ಶಿವರಾತ್ರಿ ಇತ್ಯಾದಿ ಹಬ್ಬಗಳನ್ನು ಕಾಣಬಹುದು. ಗ್ರಾಮದೇವತೆಗಳ ಹಬ್ಬಗಳಲ್ಲಿ ಆಯಾ ಗ್ರಾಮಗಳಲ್ಲಿ ನೆಲೆಸಿ ಜನರ ಕಷ್ಟಗಳನ್ನು ಹೋಗಲಾಡಿಸಿ ಅವರಿಗೆ ನೆಮ್ಮದಿಯನ್ನು ನೀಡುತ್ತಾ ಊರನ್ನು ಕಾಯುತ್ತಿರುವ ಅನೇಕ ಗ್ರಾಮದೇವತೆಗಳ ಆಚರಣೆಗಳು ಕಂಡು ಬರುತ್ತವೆ. ಸಾರ್ವತ್ರಿಕ ಹಬ್ಬಗಳನ್ನು ನಿಗದಿಯಾದ ದಿನದಂದು ದೇಶದ ಎಲ್ಲಾ ಕಡೆಗಳಲ್ಲಿ ಏಕಕಾಲದಲ್ಲಿ ಆಚರಿಸಲಾಗುತ್ತದೆ. ಹಬ್ಬಗಳು ಮಾನವನ ಮನಸ್ಸಿಗೆ ಆನಂದವನ್ನು ಉಂಟುಮಾಡುವ ಪ್ರಮುಖ ಆಚರಣೆಗಳಾಗಿವೆ.

ಯುಗಾದಿ ಹಬ್ಬ

ಭಾರತದ ಹಿಂದೂ ಧರ್ಮದ ಅನೇಕ ಜಾತಿ, ಸಮುದಾಯಗಳ ಪ್ರಕಾರ ಯುಗಾದಿ ಹಬ್ಬವೇ ವರ್ಷದ ಮೊದಲ ಹಬ್ಬವಾಗಿದೆ. ಹಿಂದೂ ಸಂಪ್ರದಾಯದ ಪ್ರಕಾರ ಪಾಲ್ಗುಣ ಅಮವಾಸ್ಯೆಯ ದಿನ ಹಳೆಯ ವರುಷಕ್ಕೆ ವಿದಾಯ ಹೇಳಿ. ಮರುದಿನ ಚೈತ್ರ ಶುಕ್ಲ ಪಾಡ್ಯ ವಿಜಯೋತ್ಸವದ ಪ್ರತೀಕವಾಗಿ ಆಚರಿಸುವ ಸಂಭ್ರಮವೇ ಯುಗಾದಿ ಹಬ್ಬ. 'ಯುಗಾದಿ' ಎಂಬ ಸಂಸ್ಕೃತ ಪದದ ತದ್ಭವ ರೂಪ 'ಉಗಾದಿ'. ಸಂಸ್ಕೃತದಲ್ಲಿ ವರುಷ ಆದಿ, ಎಂದರೆ ಆರಂಭ ಎಂದರ್ಥ. ಒಟ್ಟಿನಲ್ಲಿ ವರುಷದ ಆರಂಭದ ದಿನ ಎಂದರ್ಥ. ಈ ಹಬ್ಬದ ದಿನದಂದು ಮನೆಯನ್ನೆಲ್ಲಾ ತಳಿರು ತೋರಣಗಳಿಂದ ಸಿಂಗರಿಸಿ ಪೂಜೆ ಮಾಡಿ ಊಟಕ್ಕೆ ಮೊದಲು ಬೇವು, ಬೆಲ್ಲ ತಿನ್ನುವುದು ವಾಡಿಕೆಯಾಗಿದೆ. ಸಿಹಿ ಮತ್ತು ಕಹಿ ಇವೆರಡೂ ಬದುಕಿನ ಪ್ರತೀಕ. ನೋವು-ನಲಿವಿನ ಸಂಕೇತ. ಇದನ್ನೇ ಚೆನ್ನವೀರ ಕಣಿವೆಯವರು 'ಜೀವನವೆಲ್ಲಾ ಬೇವು - ಬೆಲ್ಲ ಈ ಎರಡನ್ನೂ ಸವಿದವನೇ ಕವಿಮಲ್ಲ' ಎಂದಿದ್ದಾರೆ.[೫] ಯುಗಾದಿಯ ದಿನದಂದು ಅಭ್ಯಂಜನ ಸ್ನಾನ ಮಾಡಿ ದೇವರ ಪೂಜೆ ಮಾಡಿ ಗುರು ಹಿರಿಯರಿಗೆ ನಮಸ್ಕಾರ ಮಾಡುವ ಪದ್ಧತಿ ಈಗಲೂ ಗ್ರಾಮಗಳಲ್ಲಿ ಪ್ರಚಲಿತವಾಗಿದೆ.

ಕನಕಪುರ ಪರಿಸರದಲ್ಲಿ ಜನರು ಯುಗಾದಿ ಹಬ್ಬವನ್ನು ತಪ್ಪದೇ ಆಚರಣೆ ಮಾಡುತ್ತಾರೆ. ಪರಂಪರಾನುಗತವಾಗಿ ಬೆಳೆದುಕೊಂಡು ಬಂದಿರುವ ಅನೇಕ ಸಂಪ್ರದಾಯಗಳನ್ನು ಈ ಹಬ್ಬದಲ್ಲಿ

ಆಚರಣೆ ಮಾಡುವುದರಿಂದ ಹಬ್ಬದ ಮೊದಲ ದಿನ ಸಂಜೆ ಸಮಯದಲ್ಲಿ ಚಂದು (ಚಂದ್ರ) ನೋಡುತ್ತಾರೆ. ಚಂದ್ರನು ಆಗ ತಾನೇ ಚಿಕ್ಕದಾಗಿ ಮೂಡಿರುತ್ತಾನೆ ಅದನ್ನು ಮೊದಲು ನೋಡಿದವರಿಗೆ ಅದೃಷ್ಟ ಬರುತ್ತದೆ ಎಂದು ಹಿರಿಯರು ಹೇಳುತ್ತಾರೆ. ಆ ಸಮಯದಲ್ಲಿ ಚಂದ್ರನು ಯಾವ ಕಡೆ ಬಾಗಿರುವನೋ ಆ ಕಡೆ ಮಳೆ ಚೆನ್ನಾಗಿ ಆಗುವುದಿಲ್ಲ. ಚಂದ್ರನು ಮೇಲಿರುವ ದಿಕ್ಕಿನ ಭಾಗದಲ್ಲಿ ಮಳೆ, ಬೆಳೆ ಉತ್ತಮವಾಗಿದ್ದು, ಈ ಭಾಗದ ಜನರು ಸಂತೃಪ್ತಿ ಜೀವನ ನಡೆಸುತ್ತಾರೆ ಎಂಬ ನಂಬಿಕೆಯನ್ನು ಸ್ಥಳೀಯರಲ್ಲಿ ಕಾಣಬಹುದು. ಕೆಲವು ಕುಟುಂಬಗಳು ಅಂದು ತಮ್ಮ ಹಿರಿಯರ ಸಮಾಧಿ ಬಳಿ ಹೋಗಿ ಪೂಜೆ ಮಾಡುವ ಪದ್ಧತಿ ರೂಢಿಯಲ್ಲಿದೆ ಹಬ್ಬದ ಎರಡನೇ ದಿನವನ್ನು 'ಹೊಸ ತಡಕು' ಎಂದು ಕರೆಯುತ್ತಾರೆ.

ಬನ್ನಿಹಬ್ಬ

ವಿಜಯನಗರ ಕಾಲದಿಂದಲೂ ಆಚರಣೆಯಲ್ಲಿರುವ ಈ ಹಬ್ಬವನ್ನು ನವರಾತ್ರಿ ಹಬ್ಬ, ರಾಮಲೀಲಾ ಹಬ್ಬ, ವಿಜಯದಶಮಿ, ನಾಡಹಬ್ಬ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇದನ್ನು ಬಡವ ಶ್ರೀಮಂತರೆಲ್ಲರೂ ಆಚರಿಸುತ್ತಾರೆ. ಪಾಂಡವರು ವನವಾಸದ ವೇಳೆಯಲ್ಲಿ ಬನ್ನಿಮರದ ಕೆಳಗೆ ವಾಸವಾಗಿದ್ದರು ಎಂಬ ಪ್ರತೀತಿಯ ಆಧಾರದ ಮೇಲೆ ಈ ಹಬ್ಬವನ್ನು ಆಚರಿಸುತ್ತಾರೆ. ಬನ್ನಿಹಬ್ಬದ ವಿಶೇಷವಾದ ಸಂಪ್ರದಾಯವೆಂದರೆ ಆ ದಿನ ಆಯುಧಗಳನ್ನು ಶುದ್ಧ ಮಾಡಿ ಪೂಜೆ ಮಾಡಲಾಗುವುದು.

ಮಕರ ಸಂಕ್ರಾಂತಿ

ನಾಡಿಗೆಲ್ಲ ಸಂವೃದ್ಧಿಯನ್ನು ತರಲೆಂಬ ಪ್ರತೀತಿಯಿಂದ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಗುತ್ತದೆ. ಸಂಕ್ರಾಂತಿ ಎಂದರೆ ವಿಶಿಷ್ಟವಾದ ಬದಲಾವಣೆ ಹಾಗೂ ಉಜ್ವಲವಾದ ಬೆಳಕು ಎಂದರ್ಥ. ಬೆಳಕು ಎಂದರೆ ಬದಲಾವಣೆ ಎಂಬ ಅರ್ಥವನ್ನು ತರುತ್ತದೆ. ಮೂಲತಃ ಲಕ್ಷ್ಮಿಯ ಆಗಮನದ ತರುವಾಯ ಸೂರ್ಯನ ದ್ವಾದಶ ರಾಶಿಗಳಲ್ಲೊಂದಾದ ಮಕರ ರಾಶಿಗೆ ದಕ್ಷಿಣದಿಂದ ಉತ್ತರಾಭಿಮುಖವಾಗಿ ಆರು ತಿಂಗಳ ಕಾಲ ಪ್ರಯಾಣ ಬೆಳೆಸುವನು. ಈ ಬದಲಿಕೆಯ ದಿನವನ್ನು ಮಕರ ಸಂಕ್ರಮಣ ಅಥವಾ ಮಕರ ಸಂಕ್ರಾಂತಿ ಎಂದು ಕರೆಯುತ್ತಾರೆ. ಈ ಕಾಲವನ್ನು ಭಾರತೀಯರು ಉತ್ತರಾಯಣ ಪುಣ್ಯಕಾಲವೆಂದು ಕರೆಯುತ್ತಾರೆ.[೬] ಕನಕಪುರ ಪರಿಸರದ ಪ್ರತಿಯೊಂದು ಗ್ರಾಮದಲ್ಲೂ ಸಂಕ್ರಾಂತಿ ಹಬ್ಬದ ಆಚರಣೆಯನ್ನು ತುಂಬಾ ಸಡಗರರಿಂದ ಆಚರಿಸುವುದು ರೂಢಿಯಲ್ಲಿದೆ. ಈ ಕಾಲವು ಸುಗ್ಗಿಯ ಕಾಲವಾಗಿದ್ದು, ಆಮೋದ - ಪ್ರಮೋದಗಳ ಕಾಲವೇ ಸಂಕ್ರಾಂತಿ ಕಾಲವಾಗಿದೆ. ದುಡಿಮೆಯಿಂದ ಬಿಡುವಿನ ಎಡೆಗೆ ರೈತನ ಬದುಕು ಚಲಿಸುವ ಕಾಲ ಇದಾಗಿದೆ. ಸಂಕ್ರಾಂತಿ ಹಬ್ಬವು ವಿಶೇಷವಾಗಿ ಹಸುಗಳ ಆರಾಧನೆಗೆ ಸಂಬಂಧಿಸಿರುತ್ತದೆ. ಆ ದಿನ ಸಂಜೆ ಗ್ರಾಮದ ಹಸುಗಳನ್ನು ಊರಿನ ಹೊರೆಗೆ ನಿರ್ಮಿಸಿಕೊಂಡಿರುವ ಸಂಕ್ರಾಂತಿ ಗುಡಿಯ ಬಳಿಗೆ ಕರೆತಂದು ಕಿಚ್ಚಾಯಿಸುವ ಆಚರಣೆ ಮಾಡುತ್ತಾರೆ.

ದೀಪಾವಳಿ

'ತಮಸೋಮ ಜ್ಯೋತಿರ್ಗಮಯ ಮೃತ್ಯೋಮ ಅಮೃತಂಗಮಯ' ಎಂಬ ಉಪನಿಷತ್‌ನ ವಾಣಿಯಂತೆ ಕತ್ತಲೆಯಿಂದ ಬೆಳಕಿನೆಡೆಗೆ ಮೃತ್ಯುವಿನಿಂದ ಅಮೃತದೆಡೆಗೆ ಒಯ್ಯುವ ಬೆಳಕಿನ ಹಬ್ಬ ಇದಾಗಿದೆ.[೬] ಬೆಳಕೆಂಬುದು ಸಕಲಜೀವಿಗಳ ಪ್ರೇರಕ ಶಕ್ತಿ. ಬೆಳಕು ಇಲ್ಲದಿದ್ದರೆ ಪ್ರಪಂಚವೇ ಕತ್ತಲೆಯಲ್ಲಿ ತೊಳಲಾಡಬೇಕಿತ್ತು. ಈ ಬೆಳಕಿನ ಹಬ್ಬಕ್ಕೆ ದೀಪಾವಳಿ, ಹಟ್ಟಿ ಹಬ್ಬ, ದೀವಳಿಗೆ, ದೀವಾಲಿಕ ಎಂಬ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಜನರು ಆಚರಿಸುವ ನಾಡ ಹಬ್ಬಗಳಲ್ಲಿ ಇದೂ ಕೂಡ ಒಂದಾಗಿದೆ. ಮೊದಲನೇ ದಿನ ನರಕ ಚತುರ್ದಶಿ, ಎರಡನೆ ದಿನ ದೀಪಾವಳಿ ಅಮವಾಸ್ಯೆ, ಮೂರನೇ ದಿನ 'ಬಲಿಪಾಢ್ಯಮಿ' ಆಚರಣೆ ಮಾಡಲಾಗುತ್ತದೆ.

ಗಣೇಶ ಚತುರ್ಥಿ

ಭಾದ್ರಪದ ಶುದ್ಧ ಚತುರ್ಥಿಯ ದಿನದಂದು ಗಣೇಶ ಚತುರ್ಥಿ ಹಬ್ಬವನ್ನು ಆಚರಣೆ ಮಾಡಲಾಗುತ್ತದೆ. ಜಾತಿ ಭೇದವಿಲ್ಲದೆ ಎಲ್ಲಾ ಕೋಮಿನವರೂ ಗಣಪತಿಯನ್ನು ಆರಾಧನೆ ಮಾಡುತ್ತಾರೆ. ಈ ಹಬ್ಬ ವಿಶೇಷವಾಗಿ ವಾರ್ಷಿಕ ಪೂಜೆ ಸಲ್ಲಿಸುವ ಹಬ್ಬ, ಮಣ್ಣಿನಿಂದ ಗಣಪತಿ ಮೂರ್ತಿಯನ್ನು ನಿರ್ಮಿಸಿ, ವಿವಿಧ ಬಣ್ಣಗಳಿಂದ ಅಲಂಕರಿಸಿ ಮಂಟಪ ಕಟ್ಟಿ ಮೂರ್ತಿಗೆ ವಿಶೇಷವಾದ ಪೂಜೆ ಸಲ್ಲಿಸುವ ಪದ್ಧತಿ ರೂಢಿಯಲ್ಲಿದೆ. ಕನಕಪುರ ಪರಿಸರದ ಪ್ರತಿಯೊಂದು ಗ್ರಾಮಗಳಲ್ಲೂ ಗಣೇಶ ಚತುರ್ಥಿಯನ್ನು ಆಚರಣೆ ಮಾಡುವುದು ಕಂಡು ಬರುತ್ತದೆ. ಗಣಪತಿಗೆ ವಿಶಿಷ್ಟ ಪೂಜೆ, ಕಡುಬು, ಹೋಳಿಗೆ ಮೊದಲಾದ ಸಿಹಿ ತಿಂಡಿಗಳನ್ನು ಸಮರ್ಪಿಸಲಾಗುವುದು. ಗಣೇಶ ಎಂದರೆ ಗಣಗಳಿಗೆ ನಾಯಕ ಎಂದರ್ಥ.[೮] ಗಣೇಶ ಹಬ್ಬ ಸಾರ್ವಜನಿಕ ಹಬ್ಬ, ವಿಘ್ನಗಳನ್ನು ನಾಶ ಮಾಡುವ ಅಧಿದೇವ ಗಣೇಶ ಎಂಬ ನಂಬಿಕೆ ಇರುವುದರಿಂದ ಕಾಯ, ವಾಚ, ಮನಸಾ, ಭಕ್ತಿಯಿಂದ ಪೂಜಿಸುವ ಪದ್ಧತಿ ಹಿಂದೂ ಧರ್ಮದಲ್ಲಿ ಬೆಳೆದು ಬಂದಿದೆ.

ಕಾರಹುಣ್ಣಿಮೆ

ರೈತರ ಕುಟುಂಬದವರು ಮಾಡುವ ವೈಶಿಷ್ಟ್ಯಪೂರ್ಣವಾದ ಆಚರಣೆ ಇದಾಗಿದೆ. ಈ ಸಂಪ್ರದಾಯವನ್ನು ಹೆಚ್ಚಾಗಿ ಜೂನ್ ತಿಂಗಳ ಮಳೆಗಾಲದಲ್ಲಿ ಆಚರಣೆ ಮಾಡಲಾಗುವುದು. ಮಳೆ ಇಲ್ಲದಿದ್ದರೆ ಬೆಳೆ ಇಲ್ಲ, ಮಳೆಯೇ ಬೆಳೆಗೆ ಮೂಲ. ಅದಕ್ಕಾಗಿ ಕನಕಪುರ ಪರಿಸರದ ರೈತರು ಕಾರಹುಣ್ಣಿಮೆಯನ್ನು ಅತ್ಯಂತ ಗೌರವದಿಂದ ಆಚರಿಸುತ್ತಾರೆ.

೫.೨.೧. ಕನಕಪುರ ಪಟ್ಟಣದ ಗ್ರಾಮದೇವತೆಗಳ ಹಬ್ಬಗಳು

ಗ್ರಾಮೀಣ ಜನರ ಬದುಕಿನಲ್ಲಿ ಅನಾದಿಕಾಲದಿಂದಲೂ ಬೆರೆತು ಬಂದಿರುವ ಗ್ರಾಮ ದೇವತೆಗಳು, ಆಚರಣೆಗಳು ಜನಪದ ಬದುಕಿನ ಒಂದು ಭಾಗವಾಗಿವೆ. ಒಂದು ಪ್ರದೇಶದ ಸಾಂಸ್ಕೃತಿಕ ಅಧ್ಯಯನ ಮಾಡುವವರು ಗ್ರಾಮದೇವತೆಗಳ ಆಚರಣೆಯನ್ನು ಅಗತ್ಯವಾಗಿ

ಗಮನಿಸಬೇಕಾಗುತ್ತದೆ. ಒಂದು ದೇವತೆಗೆ ಸಂಬಂಧಿಸಿದ ಹಾಡು, ಕಥೆ, ಐತಿಹ್ಯ, ದಂತಕಥೆ, ಪುರಾಣದಲ್ಲಿ ಆಯಾ ಜನಾಂಗದ ಹಲವು ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಸಾಧ್ಯವಿದೆ.[8] ಒಂದು ದೇವತೆಯ ಸಮಗ್ರ ಅಧ್ಯಯನದಿಂದ ಆ ದೇವತೆಯನ್ನು ಪೂಜಿಸುವ ಜನರ ಜೀವನದ ರೀತಿ, ಚಿಂತನ ವಿಧಾನಗಳು ಅನಾವರಣಗೊಳ್ಳುತ್ತವೆ. ಮಾನವನ ವಿವಿಧ ಜ್ಞಾನಶಾಖೆಗಳಾದ ಇತಿಹಾಸ, ಮನಃಶಾಸ್ತ್ರ, ಭಾಷಾಶಾಸ್ತ್ರ, ಸಮಾಜಶಾಸ್ತ್ರ ಇತ್ಯಾದಿ ಶಿಸ್ತುಗಳು ಈ ಬಗೆಯ ಅಧ್ಯಯನದಿಂದ ನೆರವನ್ನು ಪಡೆಯಬಹುದಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಕನಕಪುರ ಪಟ್ಟಣದಲ್ಲಿರುವ ಗ್ರಾಮದೇವತೆಗಳ ಹಬ್ಬದ ಆಚರಣೆಯಲ್ಲಿ ವಿವರಿಸಲಾಗಿದೆ.

ಕನಕಪುರ ಪಟ್ಟಣದಲ್ಲಿ ವಳಕೋಟಮ್ಮ, ಕೆಂಕೇರಮ್ಮ, ಬಾಣಂತಿಮಾರಮ್ಮ, ಮರಸನಾಡಮ್ಮ, ಕೊಲ್ಲಾಪುರದಮ್ಮ ಎಂಬ ಗ್ರಾಮದೇವತೆಗಳಿವೆ. ಈ ಎಲ್ಲಾ ದೇವತೆಗಳ ಹಬ್ಬಗಳಲ್ಲಿ ಸಾಮಾನ್ಯವಾಗಿ ಒಂದೇ ರೀತಿಯ ಆಚರಣೆಗಳನ್ನು ಕಾಣಬಹುದು. ಮಳೆಗಾಳಿನ ಮರಸನಾಡಮ್ಮ ದೇವತೆಯ ಹಬ್ಬದಲ್ಲಿ ಮಾತ್ರ ಶಿಷ್ಟ ಆಚರಣೆಯ ವಿಶೇಷತೆಯನ್ನು ಗಮನಿಸಬಹುದು. ಉಳಿದ ನಾಲ್ಕು ದೇವತೆಗಳಲ್ಲಿ ಹಬ್ಬವನ್ನು ಪರಿಶಿಷ್ಟ ಆಚರಣೆಯ ಹಿನ್ನೆಲೆಯಲ್ಲಿ ಆಚರಿಸಲಾಗುವುದು. ಕನಕಪುರ ಪರಿಸರದಲ್ಲಿ ಈ ಐದು ಜನ ಗ್ರಾಮದೇವತೆಯರನ್ನು ಅಕ್ಕ-ತಂಗಿಯರು ಎಂಬ ಭಾವನೆಯನ್ನು ಕಾಣಬಹುದು. ಇಲ್ಲಿ ಹಿರಿಯ ದೇವತೆಯಾದ ವಳಕೋಟಮ್ಮನ ಹಬ್ಬವನ್ನು ಮೊದಲು ಆಚರಿಸಿ ನಂತರ ಕೆಂಕೇರಮ್ಮ, ಬಾಣಂತಿ ಮಾರಮ್ಮ, ಮರಸನಾಡಮ್ಮ, ಕೊಲ್ಲಾಪುರದಮ್ಮ ದೇವಿಯ ಹಬ್ಬಗಳ ಆಚರಣೆ ಮಾಡುತ್ತಾರೆ. ಮೇಲಿನ ಐದೂ ಗ್ರಾಮದೇವತೆಗಳ ಹಬ್ಬದಲ್ಲಿ ಸಾರುವುದು, ಎಳವಾರ, ಕೊಂಡಹಾಯುವುದು, ಸಿಡಿ ಆಚರಣೆ, ದೇವರ ಉತ್ಸವ ಮೊದಲಾದ ಆಚರಣೆಗಳು ಕಂಡುಬರುತ್ತವೆ. ಆದರೆ ಮರಸನಾಡಮ್ಮನ ಹಬ್ಬದಲ್ಲಿ ಬಲಿ ಆಚರಣೆ ಇರುವುದಿಲ್ಲ. ಉಳಿದ ದೇವತೆಗಳ ಹಬ್ಬದಲ್ಲಿ ಬಲಿ ಆಚರಣೆ ರೂಢಿಯಲ್ಲಿದೆ. ಈ ಪಟ್ಟಣದ ಗ್ರಾಮದೇವತೆಗಳ ಆಚರಣೆಗಳಲ್ಲಿ ಏಕರೂಪತೆ ಇರುವುದರಿಂದ ಅವೆಲ್ಲವನ್ನು ಒಟ್ಟಾರೆಯಾಗಿ ಈ ಕೆಳಕಂಡಂತೆ ವಿವರಿಸಲಾಗಿದೆ.

ಸಾರುವುದು

ಕನಕಪುರ ಪರಿಸರದಲ್ಲಿ ಗ್ರಾಮದೇವತೆಗಳ ಹಬ್ಬಗಳು ಸಾರುವಿಕೆಯಿಂದ ಪ್ರಾರಂಭವಾಗುತ್ತವೆ. 'ಸಾರಣಿ' ಎಂತಲೂ ಸಹ ಇದನ್ನು ಕರೆಯುತ್ತಾರೆ. ಇಲ್ಲಿನ ದೇವತೆಗಳ ಹಬ್ಬಕ್ಕೆ ಗ್ರಾಮದ ಜನರನ್ನು ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಸಿದ್ಧಗೊಳಿಸುವ ಆರಂಭದ ಆಚರಣೆ ಇದಾಗಿದೆ. ಜನರಿಗೆ ಹಬ್ಬದ ಸೂಚನೆಯನ್ನು ನೀಡುವುದರ ಜೊತೆಗೆ ಅವರು ಪಾಲಿಸಬೇಕಾದ ವಿಧಿ ನಿಷೇಧಗಳನ್ನು ಈ ಸಮಯದಲ್ಲಿ ತಿಳಿಸಲಾಗುವುದು. ಇದರಿಂದ ಪ್ರತಿ ಮನೆಯ ಒಬ್ಬೊಬ್ಬ ವ್ಯಕ್ತಿಯು ಒಂದು ಸಾಮೂಹಿಕ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾರೆ. ಇದು ಹಬ್ಬ ನಡೆಸಲು ಸುಲಭವಾಗುತ್ತದೆ. ಗ್ರಾಮದ ಮುಖಂಡರು, ಪೂಜಾರಿ ಮತ್ತು ಗ್ರಾಮಸ್ಥರು ಸೇರಿ ಹಬ್ಬ ಮಾಡಲು ಒಂದು ನಿರ್ದಿಷ್ಟವಾದ ದಿನವನ್ನು ಗೊತ್ತುಪಡಿಸಿ ಸಾರುವಯ್ಯನನ್ನು ನೇಮಿಸುವರು.

ಸಾರುವ ವ್ಯಕ್ತಿಯನ್ನು ಸಾರುವಯ್ಯ, 'ಗುರಿಕಾರ' ಎಂದು ಕರೆಯುವರು. ಸಾರುವ ವ್ಯಕ್ತಿ ತಳಸಮುದಾಯದವನೇ ಆಗಿರುತ್ತಾನೆ. ಅದರಲ್ಲೂ ಅಸ್ಪೃಶ್ಯ ಪಂಗಡಕ್ಕೆ ಸೇರಿದವನಾಗಿರುತ್ತಾನೆ.

ಹೊಳೆಗೆ ಹೋಗುವುದು

ಕನಕಪುರ ಪಟ್ಟಣದಲ್ಲಿ ಗ್ರಾಮದೇವತೆಗಳ ಹಬ್ಬಗಳು ಮೂರು ಅಥವಾ ನಾಲ್ಕು ದಿನಗಳು ನಡೆಯುತ್ತವೆ. ಈ ಆಚರಣೆಯನ್ನು ಹಬ್ಬದ ಮೊದಲ ದಿನ ಆಚರಿಸಲಾಗುತ್ತದೆ. ಇದನ್ನು ದೇವರು ತರುವ ಆಚರಣೆ ಎಂದು ಕರೆಯುತ್ತಾರೆ. ದೇವರ ಮೂರ್ತಿಗೆ ಸ್ನಾನ ಮಾಡಿಸುವ(ಮಜ್ಜನ) ಪದ್ಧತಿಯನ್ನು ಕಾಣಬಹುದು. ಪಟ್ಟಣದ ಗ್ರಾಮದೇವತೆಯರನ್ನು ಅವರ ತವರು ಮನೆ ಎಂದು ನಂಬಲಾಗಿರುವ ದೇಗುಲ ಮಠದ ಬಳಿ ತೆಗೆದುಕೊಂಡು ಹೋಗಿ ನದಿ ನೀರಿನಿಂದ ದೇವತೆಗಳ ಮೂರ್ತಿಗಳನ್ನು ಶುಚಿಗೊಳಿಸಿ ಪೂಜೆ ಮಾಡಿ ಮಡಿಲು ತುಂಬುವ ಸಂಪ್ರದಾಯವಿದೆ. ನಂತರ ದೇವತೆ ದೇವಾಲಯಕ್ಕೆ ಹಿಂದಿರುವಾಗ ಮಡಿವಾಳ ಜನಾಂಗದವರು ದೇವತೆಗೆ ನಡೆ ಮಡಿಯನ್ನು ಹಾಸುತ್ತಾರೆ. ಇದೇ ಜನಾಂಗದ ಮತ್ತೊಬ್ಬ ವ್ಯಕ್ತಿ ಪಂಜನ್ನು(ದೀವಟಿಗೆ) ಹಿಡಿದಿರುತ್ತಾನೆ. ಹೀಗೆ ಆಚರಣೆಯೊಂದಿಗೆ ದೇವತೆಯನ್ನು ದೇವಾಲಯಕ್ಕೆ ತಂದು ಗದ್ದುಗೆಯ ಮೇಲೆ ಪ್ರತಿಷ್ಠಾಪಿಸಲಾಗುವುದು.

ಎಳವಾರ ಆಚರಣೆ

ಎಳವಾರದ ಆಚರಣೆ ಹಬ್ಬದ ಎರಡನೇ ದಿನ ನಡೆಯುತ್ತದೆ. ಕೊಂಡಕ್ಕೆ ಗ್ರಾಮದ ಮನೆ ಮನೆಯಿಂದಲೂ ಸೌದೆ ತರುವುದಕ್ಕೆ 'ಎಳವಾರ' ಎನ್ನುವರು. ಬನ್ನಿಮರವನ್ನು ಬಿಟ್ಟು ಉಳಿದ ಎಲ್ಲಾ ಜಾತಿಯ ಮರಗಳಿಂದ ಸೌದೆಯನ್ನು ತಂದು ಕೊಂಡದಲ್ಲಿ ಜೋಡಿಸುವರು. ದೇವತೆಯ ಮೂರ್ತಿಗೆ ಒಂಬತ್ತು ಕಳಸಕಟ್ಟಿ, ಸೀರೆ ಉಡಿಸಿ ಅದನ್ನು ಪೂಜಾರಿ ಹೊತ್ತುಕೊಂಡು ಬರುತ್ತಾನೆ. ವಾದ್ಯಸಮೇತ ದೇವತೆ ಕೊಂಡದ ಬಳಿ ಬಂದಾಗ ಅದನ್ನು ಪೂಜಿಸಿಕೊಂಡಕ್ಕೆ ಒಕ್ಕಲಿಗ ಪಂಗಡದ ವ್ಯಕ್ತಿಯೊಬ್ಬ ಬೆಂಕಿ ಹಚ್ಚುತ್ತಾನೆ.

ಪಟ್ಟಣದ ಕೊಲ್ಲಾಪುರದಮ್ಮನ ಹಬ್ಬದಲ್ಲಿ ಕೊಂಡ ತೆಗೆಯುವ ವಿಧಾನ ಸರಳವಾದದು. ಮನೆಗೊಬ್ಬ ವ್ಯಕ್ತಿ ಬಂದು ದೇವಾಲಯದ ಮುಂದೆ ಕಾಲುವೆಯಂತೆ ಎಂಟು, ಹತ್ತು ಅಡಿ ಉದ್ದದ ಹಳ್ಳವನ್ನು ತೆಗೆಯುವರು. ಸಂಜೆ ಆರು ಗಂಟೆಗೆ ಎತ್ತಿನಗಾಡಿಗಳಿಗೆ ಸೌದೆ ತುಂಬಿ ಎತ್ತುಗಳಿಗೆ ಶೃಂಗಾರ ಮಾಡಿ ಮನೆಗಳ ಮುಂದೆ ಮೆರವಣಿಗೆ ಮೂಲಕ ಸೌದೆಗಳಿಗೆ ಪೂಜೆ ಮಾಡಿ ಕೊಂಡಕ್ಕೆ ತಂದು ಹಾಕುವರು. ಇಲ್ಲಿ ಪುರೋಹಿತರು ಒಂಬತ್ತು ಬಗೆಯ ಕಡ್ಡಿ, ಧಾನ್ಯ ಮತ್ತು ಹಾಲು ತುಪ್ಪವನ್ನು ಬೆಂಕಿಗೆ ಹಾಕಿ ಕೊಂಡದ ಸುತ್ತ ತೀರ್ಥ ಹಾಕುವರು.[೧೦]

ಕೊಂಡ ಹಾಯುವುದು

ಈ ಆಚರಣೆಯನ್ನು 'ಕೆಂಡ ಹಾಯುವುದು' ಎಂದೂ ಸಹ ಕರೆಯುವರು. ಕೆಲವು ಕಡೆ ಅಗ್ನಿಕೊಂಡ ಎನ್ನುವರು. ಇದು ಕನಕಪುರ ಪಟ್ಟಣದ ಗ್ರಾಮದೇವತೆಗಳ ಹಬ್ಬದ ಮೂರನೇ

ದಿನ ನಡೆಯುವ ಆಚರಣೆಯಾಗಿದೆ. ಇಲ್ಲಿ ದೇವರನ್ನು ಹೊತ್ತ ಪೂಜಾರಿ ಒಬ್ಬನೇ ಕೆಂಡ ತುಳಿಯುವ ಸಂಪ್ರದಾಯ ಕಂಡು ಬರುತ್ತದೆ. ತಮಿಳುನಾಡಿನ ನಂದನಾರ್ ತನ್ನ ಶಿವಭಕ್ತಿಯನ್ನು ಪರೀಕ್ಷಿಸಲು ಅಗ್ನಿಪರೀಕ್ಷೆ ಮಾಡಿ ಶಿವ ಸಾಕ್ಷಾತ್ಕಾರ ಮಾಡಿಕೊಂಡ ಕಡೆಯೂ ಪ್ರಸಿದ್ಧವಾಗಿದೆ.[೧೧]

ಕನಕಪುರ ಪಟ್ಟಣದ ಕೆಂಕೇರಮ್ಮನ ಹಬ್ಬದಲ್ಲಿ ನಾಲ್ಕು ಅಡಿ ಅಗಲ, ಐದು ಅಡಿ ಆಳ, ಇಪ್ಪತ್ತು ಅಡಿ ಉದ್ದದ ಕೊಂಡವನ್ನು ದೇವತೆಯನ್ನು ಹೊತ್ತ ಪೂಜಾರಿ ಹಾಯುತ್ತಾನೆ. ಪೂಜಾರಿಯ ಕಣ್ಣಿಗೆ ದಿವ್ಯಜ್ಯೋತಿ ಕಾಣುತ್ತದೆ. ಆದ್ದರಿಂದ ಕೊಂಡ ಹಾಯುತ್ತಾರೆ ಎಂಬುದು ಇಲ್ಲಿನ ನಂಬಿಕೆ ಸಂಪ್ರದಾಯವಾಗಿದೆ. ಕೊಂಡ ಹಾಯುವ ಪೂಜಾರಿ ಉಪವಾಸವಿದ್ದು, ಒಂದು ಲೋಟ ಹಾಲನ್ನು ಮಾತ್ರ ಸ್ವೀಕರಿಸಬಹುದು. ಕೊಂಡ ತುಳಿದ ನಂತರ ದೇವಾಲಯಕ್ಕೆ ಹೋಗಿ ದೇವತೆಯನ್ನು ಗರ್ಭಗೃಹದಲ್ಲಿ ಇಟ್ಟು ಪೂಜೆ ಮಾಡಲಾಗುವುದು. ಇದೇ ರೀತಿಯ ಕೊಂಡ ಹಾಯುವ ಸಂಪ್ರದಾಯವನ್ನು ವಳಕೋಟಮ್ಮ, ಬಾಣಂತಿ ಮಾರಮ್ಮ, ಮರಸನಾಡಮ್ಮ, ಕೊಲ್ಲಾಪುರದಮ್ಮ ದೇವತೆಗಳ ಹಬ್ಬದಲ್ಲೂ ಕೂಡ ಕಾಣಬಹುದು.

ಬಲಿ ಆಚರಣೆ

ಬಲಿ ಆಚರಣೆಯು ಪಟ್ಟಣದ ಮರಸನಾಡಮ್ಮ ದೇವತೆಯನ್ನು ಹೊರತುಪಡಿಸಿದರೆ, ಉಳಿದ ನಾಲ್ಕು ದೇವತೆಯರಲ್ಲಿ ಕಂಡು ಬರುತ್ತದೆ. ಈ ಗ್ರಾಮದೇವತೆಯ ಹಬ್ಬಗಳು ಬಲಿ ಪ್ರಧಾನವಾದ ಆಚರಣೆಯಾಗಿವೆ. ಕೊಂಡ ಹಾಯುವ ಮುನ್ನ ಅಥವಾ ಸಿಡಿ ಆಡುವ ಮುನ್ನ ಮೇಕೆಗಳನ್ನು ಅಥವಾ ಕುರಿಗಳನ್ನು ಬಲಿ ಕೊಡುವ ಪದ್ಧತಿ ಸಾಮಾನ್ಯವಾಗಿದೆ. ಮೇಕೆಯನ್ನು ಬಲಿ ಕೊಡುವ ಮೊದಲು ಅದರ ಕೊರಳಿಗೆ ಹೂವಿನಹಾರವನ್ನು ಹಾಕಿರುತ್ತಾರೆ. ಮೇಕೆಯ ತಲೆ ಮೇಲೆ ನೀರು ಹಾಕಿದಾಗ ಅದು ತಲೆಯನ್ನು ಒದರುತ್ತದೆ. ಆಗ ದೈವದ ಅಪ್ಪಣೆ ಆಯಿತೆಂದು ಅದನ್ನು ಬಲಿ ಕೊಡಲಾಗುವುದು. ಬಾಣಂತಿ ಮಾರಮ್ಮ ದೇವತೆಯ ಮೆರವಣಿಗೆ ಯನ್ನು ಕೊಂಡದ ಆಚರಣೆ ಮುಗಿದ ನಂತರ ಮಾಡಲಾಗುವುದು. ಆಗ ಪ್ರತಿ ಮನೆಯವರು ಮೇಕೆಯನ್ನು ಬಲಿ ಕೊಡುತ್ತಾರೆ.

ಸಿಡಿ ಆಚರಣೆ

ಸಿಡಿ ಆಚರಣೆಯಲ್ಲಿ ವಿವಿಧ ಬಗೆಗಳಿವೆ. ತೊಟ್ಟಿಲು ಸಿಡಿ, ಬೆನ್ನು ಸಿಡಿ, ಗೊಂಬೆ ಸಿಡಿ ಮೊದಲಾದ ವೈವಿಧ್ಯತೆಯನ್ನು ಕಾಣಬಹುದು. ಉದ್ದವಾಗಿರುವ ಸರ್ವೆ ಮರ ಅಥವಾ ನೀಲಗಿರಿ ಮರಕ್ಕೆ ಅಡ್ಡ ಕಂಬವನ್ನು ಹಾಕಿ ಆಟ ಆಡುವ ವ್ಯವಸ್ಥೆಯನ್ನೇ ಸಿಡಿ ಆಚರಣೆ ಎನ್ನುವರು. ಕನಕಪುರ ಪಟ್ಟಣದಲ್ಲಿ ಗ್ರಾಮದೇವತೆ ಹಬ್ಬಗಳಲ್ಲಿ ತೊಟ್ಟಿಲು ಸಿಡಿಯ ಆಚರಣೆ ನಡೆಯುತ್ತದೆ.

ಈ ಪಟ್ಟಣದ ಕೊಲ್ಲಾಪುರದಮ್ಮನ ಹಬ್ಬದಲ್ಲಿ ಏತದ ರೀತಿಯಲ್ಲಿ ಸಿಡಿಯನ್ನು ಅಲಂಕರಿಸಿ, ಒಂದು ಕಡೆ ತೊಟ್ಟಿಲು ಮತ್ತೊಂದು ಕಡೆ ಹಗ್ಗ ಇರುತ್ತದೆ. ಪುರೋಹಿತನು ಹೋಮ ಮಾಡಿ

ನಂತರ ಬಲಿ ಅನ್ನವನ್ನು ಊರಿನ ಎಲ್ಲಾ ಭಾಗದಲ್ಲೂ ಮೆರವಣಿಗೆ ಮಾಡುವರು. ಅನಂತರ ಬಲಿಯ ಅನ್ನವನ್ನು ಸಿಡಿಯ ಸುತ್ತ ಕಟ್ಟುವರು. ಈ ಊರಿನಲ್ಲಿ ಹರಕೆ ಕಟ್ಟಿಕೊಂಡವರು ಕೊಡುವ ಕಾಣಿಕೆಯನ್ನು ಪಡೆಯಲು ಸಿಡಿಯನ್ನು ಹರಾಜು ಹಾಕುವರು. ಮೊದಲು ದೇವತೆ ವಿಗ್ರಹವನ್ನು ತೊಟ್ಟಿಲಿನಲ್ಲಿ ಇಟ್ಟು ಸಿಡಿ ಆಡಿಸುವರು. ನಂತರ ಪೂಜಾರಿ ಮತ್ತು ಊರಿನ ಯಜಮಾನರು ಸಿಡಿ ಆಡುವರು. ಆಮೇಲೆ ಹರಸಿಕೊಂಡ ಭಕ್ತರು ಸಿಡಿ ಆಡುವರು.

ಐತಿಹ್ಯಗಳು

ಕಲಿಕೆ ಮತ್ತು ಕಲಿಸುವುದು ಕೇವಲ ಆಧುನಿಕ ಯುಗಕ್ಕೆ ಸೀಮಿತಗೊಂಡಿರುವ ಸಾಧನಗಳಲ್ಲ. ಅವು ಪ್ರಾಚೀನ ಕಾಲದಿಂದಲೂ ಬೆಳೆದುಬಂದುವುಗಳಾಗಿವೆ. ಇಂದಿನ ಸಂಸ್ಕೃತಿ ಹಾಗೂ ನಾಗರಿಕತೆಗಳ ಮೂಲವು ಆದಿ ಮಾನವನ ಚಿಂತನೆ, ಭಾವನೆ ಹಾಗೂ ಕಲ್ಪನೆಗಳ ಜೊತೆಗೆ ಅವನ ಆಚರಣೆಗಳವರೆಗೂ ವ್ಯಾಪಿಸಿವೆ ಎಂಬುದನ್ನು ಮರೆಯಲಾಗದು. ವ್ಯಕ್ತಿಗಳ, ಸ್ಥಳಗಳ ಮತ್ತು ಘಟನೆಗಳಿಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕಥೆಗಳನ್ನು ಐತಿಹ್ಯಗಳು ಎಂದು ಕರೆಯುತ್ತಾರೆ.[೧೨] ಐತಿಹ್ಯಗಳು ಪರಂಪರಾನುಗತವಾಗಿ ಬೆಳೆದುಬಂದಿರುವ ಕಥೆಗಳಾಗಿರುತ್ತವೆ. ಈ ಕಥೆಗಳಲ್ಲಿ ಬರುವ ಘಟನೆಗಳು ಕಾಲ್ಪನಿಕವಾಗಿರಬಹುದು ಅಥವಾ ನಿಜವಾಗಿರಬಹುದು.[೧೩] ಒಂದು ಘಟನೆ ಖಚಿತವಾಗಿ ನಡೆದಿದೆ ಎಂದು ನಂಬಿಕೊಂಡು ಬಂದಿರುವ ಅಸಾಮಾನ್ಯ ಘಟನೆಯ ಸುತ್ತ ಹೆಣೆದಿರುವ ಕಥೆಯೇ ಐತಿಹ್ಯಗಳು. ಸೃಷ್ಟಿ ಮತ್ತು ಅದರ ಹಿಂದಿರುವ ಸ್ವರ್ಗ, ನರಕ ಮೊದಲಾದ ಶಕ್ತಿಗಳ ಬಗ್ಗೆ ಮಾನವನು ಕಥೆ ಸೃಷ್ಟಿಸಿ ಅಕ್ಕಪಕ್ಕದವರಿಗೆ ನಿರೂಪಿಸುತ್ತಾ ಬಂದಿದ್ದಾನೆ.

ಐತಿಹ್ಯಗಳಿಂದ ಇತಿಹಾಸ ಅಧ್ಯಯನದ ತೊಡಕುಗಳನ್ನು ಪರಿಹರಿಸಿಕೊಳ್ಳಬಹುದು. ಇತ್ತೀಚಿಗೆ ಇತಿಹಾಸ ಅಧ್ಯಯನಗಳಲ್ಲಿ ಐತಿಹ್ಯಗಳ ಬಳಕೆ ಹೆಚ್ಚಾಗುತ್ತಿದ್ದು, ಮೌಖಿಕ ಇತಿಹಾಸದ ಬಗೆಗಿನ ಒಲವುಗಳು ಹೆಚ್ಚುತ್ತಿವೆ. ಇತಿಹಾಸ ರಚನೆಯಲ್ಲಿ ಐತಿಹ್ಯಗಳ ಕಾಣಿಕೆ ಅಪಾರವಾಗಿದೆ. ಪ್ರಸ್ತುತ ಕನಕಪುರ ಪಟ್ಟಣ ಪರಿಸರದ ಇತಿಹಾಸಕ್ಕೆ ಸಂಬಂಧಿಸಿದಂತೆ ಜನರ ಸಾಮಾಜಿಕ ಜೀವನದ ಆಚರಣೆ ಮತ್ತು ನಂಬಿಕೆಗಳನ್ನು ಆಧರಿಸಿದ ಕೆಲವು ಐತಿಹ್ಯಗಳು ಪ್ರಚಲಿತವಾಗಿವೆ.

ಬಾಣಂತಿ ಮಾರಮ್ಮನ ಐತಿಹ್ಯ

ಬಾಣಂತಿ ಮಾರಮ್ಮ ಕನಕಪುರ ಪಟ್ಟಣದ ಗ್ರಾಮದೇವತೆ. ಈ ದೇವತೆ ಮೊದಲು ಬಾಣಂತಿ ಮಾರಮ್ಮನ ಬೆಟ್ಟದಲ್ಲಿ ನಂತರ ಕನಕಪುರ ಪಟ್ಟಣದಲ್ಲಿ ಬಂದು ನೆಲೆನಿಂತ ವಿವರಗಳನ್ನು ದೇವಾಲಯದ ಪೂಜಾರಿ ವಕ್ತೃ ಗುಂಡೇಗೌಡರು(೫೪) ಎಂಬುವರು ತಮ್ಮ ಹಿರಿಯರಿಂದ ಕೇಳಿ ತಿಳಿದ ವಿವರಗಳನ್ನು ತಮ್ಮದೇ ಆದ ಧಾಟಿಯಲ್ಲಿ ಈ ಮುಂದಿನಂತೆ ವಿವರಿಸುತ್ತಾರೆ.

ಶಕ್ತಿ ಸ್ವರೂಪಿಣಿ ಪಾರ್ವತಿ ದೇವಿಯು ತನ್ನ ಭಕ್ತರನ್ನು ಕಾಪಾಡಿ, ರಾಕ್ಷಸರನ್ನು ನಾಶ ಮಾಡಲು ಹಲವು ರೂಪಗಳಲ್ಲಿ ಬಂದಿದ್ದಾಳೆ. ಮೂಡಲು ಸೀಮೆಯ ಕೊಂಗನಾಡಿನಲ್ಲಿ

'ಕೈಲಾಸಗಿರಿ' ಎಂಬ ಪಟ್ಟಣವೊಂದಿತ್ತು. ಆ ಪಟ್ಟಣದ ದೊರೆ ಶಿವನಾಂಕಾರರಾಯ ಮಹಾದೇವಿ ಆತನ ಪತ್ನಿ ಹಾಗೂ ಮಹಾಮುನಿ ನಾರದನೇ ಆತನ ಮಂತ್ರಿ, ಮಾದೇವಿಯೊಂದಿಗೆ ಕಾಲ ಕಳೆಯುತ್ತಿದ್ದ ಶಿವನಾಂಕಾರರಾಯನಿಗೆ ಬಹುದಿನಗಳವರೆಗೆ ಮಕ್ಕಳಿರಲಿಲ್ಲ. ಒಂದು ದಿನ ದೊರೆಯ ಕನಸ್ಸಿನಲ್ಲಿ ಶಿವನು ಪ್ರತ್ಯಕ್ಷವಾಗಿ 'ನೀನು ಅನುರೂಪದ ಇಬ್ಬರು ಮಕ್ಕಳನ್ನು ಪಡೆಯುವೆ' ಎಂದು ಹೇಳಿ ಮಾಯವಾದ. ಅದರಂತೆ ಮಹಾದೇವಿ ಇಬ್ಬರು ಮಕ್ಕಳಿಗೆ ಜನ್ಮ ನೀಡಿದಳು. ಗಂಡು ಮಗುವಿಗೆ ಮುತ್ತುರಾಯ, ಹೆಣ್ಣು ಮಗುವಿಗೆ ಭಾಗೀರತಿ ಎಂದು ನಾಮಕರಣ ಮಾಡುತ್ತಾರೆ. ಆನಂತರ ಹುಟ್ಟಿದ ಹೆಣ್ಣುಮಗುವಿಗೆ ಚಿಕ್ಕ ತಾಯಿ ಎಂದು ನಾಮಕರಣ ಮಾಡಿದರು. ಹತ್ತು, ಹನ್ನೆರಡು ವರ್ಷದ ಆ ಮುದ್ದು ಬಾಲೆಯರು ಶಿವಧ್ಯಾನದಲ್ಲಿ ಕಾಲ ಕಳೆಯುತ್ತಿದ್ದರು.

ದಕ್ಷಿಣ ನಾಡಿನ ಮುಡುಕುತೊರೆಯ ಮಲ್ಲರಾಯ, ತನ್ನ ತಮ್ಮನಾದ ತಲಕಾಡು ಪಂಚಲಿಂಗಯ್ಯನಿಗೆ ಮದುವೆ ಮಾಡಲು, ಮಂತ್ರಿ ಸಿದ್ಧರಾಮನಿಗೆ ತಮ್ಮನನ್ನು ಕರೆದುಕೊಂಡು ಹೋಗಿ ಹೆಣ್ಣು ನೋಡಿ ಬಾ ಎಂದು ಆಜ್ಞಾಪಿಸುತ್ತಾನೆ. ಅದರಂತೆ ಸಿದ್ಧರಾಮ ಮತ್ತು ಪಂಚಲಿಂಗಯ್ಯ ಇಬ್ಬರು ಕುದುರೆ - ಹುಲಿಗಳ ಮೇಲೆ ಕುಳಿತು ದೇಶ - ವಿದೇಶಗಳನ್ನು ಸಂಚರಿಸಿ ಕೊನೆಗೆ ಕೊಂಗನಾಡು ದೇಶದ ಕೈಲಾಸಗಿರಿ ಪಟ್ಟಣಕ್ಕೆ ಬರುತ್ತಾರೆ. ಶಿವನಾಂಕರರಾಯ್ಯ ಗುರುಮಠದಲ್ಲಿ ಪಂಚಲಿಂಗಯ್ಯನ ಕಣ್ಣಿಗೆ ಸೌಂದರ್ಯವತಿಯಾದ ಭಾಗೀರತಿ ಕಾಣಿಸುತ್ತಾಳೆ. ಅವಳ ರೂಪಕ್ಕೆ ಮೋಹಿತನಾಗಿ ಪಂಚಲಿಂಗಯ್ಯ ಸಿದ್ಧರಾಮನಿಗೆ ಹೇಳುತ್ತಾನೆ. ಸಿದ್ಧರಾಮನ ಮಧ್ಯಸ್ಥಿಕೆಯಲ್ಲಿ ಶಿವನಾಂಕಾರರಾಯ, ಮಲ್ಲರಾಯ, ಮುತ್ತುರಾಯ ಎಲ್ಲರೂ ಸೇರಿ ಇವರ ಮದುವೆ ಮಾಡಿಸುತ್ತಾರೆ.

ಕೊಂಗನಾಡಿನ ಕೈಲಾಸಗಿರಿಯಲ್ಲಿ ಪಂಚಲಿಂಗಯ್ಯ ತನ್ನ ಹೆಂಡಿತಿ ಭಾಗೀರತಿಯೊಂದಿಗೆ ಸುಖದಿಂದ ಕಾಲಕಳೆಯುತ್ತಿರುವಾಗ ಭಾಗೀರತಿ ಗರ್ಭವತಿಯಾಗುತ್ತಾಳೆ. ಗರ್ಭವತಿಯಾದ ಭಾಗೀರತಿಯನ್ನು ತನ್ನ ದಕ್ಷಿಣ ನಾಡಿಗೆ ಕರೆದುಕೊಂಡು ಹೋಗಬೇಕಾಗುತ್ತದೆ. ದೇಶ-ದೇಶಗಳನ್ನು ನೋಡಿಕೊಂಡು ಬೆಟ್ಟ, ಪರ್ವತ, ಶಿಖರದ ಸಾಲುಗಳನ್ನು ನೋಡುತ್ತಾ ಪ್ರಕೃತಿಯ ಸೌಂದರ್ಯವನ್ನು ಕಂಡು ದೇವರ ಬೆಟ್ಟದ ತಪ್ಪಲಿನ ಸೌಂದರ್ಯಕ್ಕೆ ಆಕರ್ಷಿತಳಾಗಿ ಅಲ್ಲಿನ ರಮಣೀಯ ಸೌಂದರ್ಯ ನೋಡಬೇಕೆಂದು ತನ್ನ ಇಚ್ಛೆಯನ್ನು ಪತಿಯೊಂದಿಗೆ ಹೇಳಿಕೊಂಡಳು. ಅವಳ ಇಚ್ಛೆಯಂತೆ ಬಸುರಿ ಬಯಕೆಯನ್ನು ಈಡೇರಿಸಲು ಪಂಚಲಿಂಗಯ್ಯ ಕೆಲವು ದಿನ ಅಲ್ಲೇ ನೆಲೆಸುವಂತೆ ಹೇಳಿ ಹೊರಡುತ್ತಾನೆ.[೧೪]

ದೇವರ ಬೆಟ್ಟದ ಸೌಂದರ್ಯವನ್ನು ಸವಿಯುತ್ತಾ ಕಾಲ ಕಲೆಯುತ್ತಿದ್ದ ತುಂಬು ಗರ್ಭಿಣಿ ಭಾಗೀರತಿಗೆ ಹೆರಿಗೆ ನೋವು ಕಾಣಿಸುತ್ತದೆ. ಆಗ ಸೂಲಗಿತ್ತಿ ಮಡಿವಾಳಮ್ಮನ ಸಹಾಯದಿಂದ ಹೆರಿಗೆಯಾಗಿ ಅವಳಿ - ಜವಳಿ ಗಂಡು ಮಕ್ಕಳಿಗೆ ಜನ್ಮ ನೀಡಿದಳು. ಬಾಣಂತಿಯಾದ ಭಾಗೀರತಿ

ಸ್ನಾನ ಮಾಡಿ ಎಳೆಯ ಬಿಸಿಲಿನಲ್ಲಿ ಸರ್ಪದ ಕಲ್ಲಿನ ಬಳಿ ತನ್ನ ಕೂದಲನ್ನು ಒಣಗಿಸುತ್ತಿರುತ್ತಾಳೆ. ಬೆಟ್ಟದ ಕೆಳಗಿದ್ದ ಹೊಲೆ ರಾವಣನಿಗೆ ಯಾರೋ ಸುಂದರಿ ಬೆಟ್ಟದಲ್ಲಿ ನೆಲೆಸಿದ್ದಾಳೆ ಎಂದು ತಿಳಿಯುತ್ತದೆ. ಆಗ ಅವನು ಅವಳನ್ನು ಹಿಡಿಯಲು ಹೊಲೆ ರಾವಣ ಬೆಟ್ಟ ಹತ್ತಿ ಬರುತ್ತಿರುವುದನ್ನು ಗಮನಿಸಿದ ಸೂಲಗಿತ್ತಿ ಭಾಗೀರತಿ ಹೇಳುತ್ತಾಳೆ. ಭಾಗೀರತಿ ಶಿವನಾಮ ಪಠಿಸಿ ತನ್ನ ಗಂಡನನ್ನು ನೆನೆದು "ಹಂಡೆಯಲ್ಲಿ" ತುಂಬಿಟ್ಟಿದ ಎಣ್ಣೆಯನ್ನು ಬೆಟ್ಟದ ನೆತ್ತಿಯ ಮೇಲೆ ಸುರಿಯುತ್ತಾಳೆ. ಎಣ್ಣೆಯಿಂದ ಬೆಟ್ಟ ಹತ್ತಲು ಕಷ್ಟವಾದರೂ ಕಲ್ಲಿನ ಮೆಟ್ಟಿಲು ಕಟ್ಟಿಕೊಂಡು ಬೆಟ್ಟ ಹತ್ತಿ ಬಾಣಂತಿ ಮಾರಮ್ಮ ಇರುವ ಕಡೆ ಬರುತ್ತಿರುವಾಗ ತನ್ನ ಅಣ್ಣನಾದ ಮುತ್ತುರಾಯನನ್ನು ಕೂಗಿಕೊಳ್ಳುತ್ತಾಳೆ. ತನ್ನ ಪತಿಯನ್ನು ನೆನೆದು ಮಕ್ಕಳನ್ನು ಬೆಟ್ಟದಿಂದ ಕೆಳಗೆ ಎಸೆಯುತ್ತಾಳೆ. ಆಗ ಮುತ್ತುರಾಯ ಬಂದು ಮಕ್ಕಳನ್ನು ಕಾಪಾಡುತ್ತಾನೆ.[೧೫]

ಮುತ್ತುರಾಯನಿಗೂ ಹೊಲೆರಾವಣನಿಗೂ ಯುದ್ಧ ನಡೆಯುತ್ತದೆ. ಆಯುಧದಲ್ಲಿ ಹೊಲೆರಾವಣ ಸಂಹಾರವಾಗುತ್ತಾನೆ. ನಂತರ ತಂಗಿಗೆ ನೀನು "ಧೂಪದ ಮರದ" ಕೆಳಗೆ ಕುಳಿತುಕೋ ಅದೇ ನಿನ್ನ ದೇವಸ್ಥಾನ. ನೀನು ಇಲ್ಲಿ ಕುಳಿತುಕೊಂಡಿದ್ದರಿಂದ "ಕೂತಗೊಂಡನಹಳ್ಳಿ" ಎಂದು ಹೆಸರಾಗಿ ಸುತ್ತಮುತ್ತಲ ಹಳ್ಳಿಗೆ ದೇವತೆಯಾಗುತ್ತಿತ್ತು ಎಂದು ಹೇಳುತ್ತಾನೆ. ಇಲ್ಲಿಂದ ಮುಂದೆ ನಿನ್ನ ಹೆಸರು "ಬಾಣಂತಿ ಮಾರಮ್ಮ" ಎಂದಾಗಲಿ, ನೀನು ಪಾದವಿಟ್ಟು ತಳವೂರಿದ ಸರ್ಪದ ಕಲ್ಲಿಗೆ "ಕಂಚಿನಕಲ್ಲು" ಎಂದು ಪ್ರಸಿದ್ಧಿಯಾಗುತ್ತದೆ. ಹೀಗೆ "ಕೂತಗೊಂಡನಹಳ್ಳಿ"ಯಲ್ಲಿ ನೆಲೆಸಿದ ಬಾಣಂತಿ ಮಾರಮ್ಮನಿಗೆ ಇಲ್ಲಿನ ಇರುಳಿಗರು ಪೂಜೆಯನ್ನು ಸಾಂಗಿಕವಾಗಿ ನೆರವೇರಿಸಿಕೊಂಡು ಬರುತ್ತಿದ್ದಾರೆ.

ಈ ಪಟ್ಟಣದಲ್ಲಿ ಕೆಲವು ಸಂಪನ್ಮೂಲ ವಕ್ತೃಗಳು ಕಥೆಯನ್ನು ಹೆಣೆಯುವ ಕಲೆಯನ್ನು ಕರಗತ ಮಾಡಿಕೊಂಡು ತಮ್ಮ ಕಲ್ಪನೆಯನ್ನು ನಿರೂಪಿಸುವುದು ಗೋಚರವಾಗುತ್ತದೆ. ಇವರು ಹೇಳುವ ಮುಡುಕುತೊರೆ ತಲಕಾಡನ್ನು ನಿರ್ದೇಶಿಸಿದರೆ, ಕೊಂಗನಾಡು ದಕ್ಷಿಣದ ಕಡೇ ಭಾಗದ ಸೂರ್ಯೋದಯ ಕಡೆಗಿರುವ ಪ್ರದೇಶವನ್ನು ಸೂಚಿಸುತ್ತದೆ.

ಹೀಗೆ ಕೂತಗೊಂಡನಹಳ್ಳಿಯಲ್ಲಿ ನೆಲೆಸಿದ ಬಾಣಂತಿ ಮಾರಮ್ಮ ಕನಕಪುರ ಪಟ್ಟಣಕ್ಕೆ ಬಂದು ನೆಲೆಸಿರುವ ಕಥೆಯನ್ನು ವಕ್ತೃ ಗುಂಡೇಗೌಡ ಹೇಳುತ್ತಾರೆ. ಹಿಂದೆ ಇಲ್ಲಿನ ಜನರು ಬಾಣಂತಿಮಾರಮ್ಮನ ಬೆಟ್ಟಕ್ಕೆ ಕಟ್ಟಿಗೆ ತರಲು ಹೋಗುತ್ತಿದ್ದರು. ಅವರು ಕಟ್ಟಿಗೆ ತೆಗೆದುಕೊಂಡು ಊರಿಗೆ ಹಿಂದಿರುವಾಗ "ನಾನು ಬರುತ್ತೇನೆ" ಎಂಬ ಶಬ್ದ ಕೇಳಿ ಬರುತ್ತಿತ್ತು. ಆ ಜನರು ಯಾರು ನೀನು ಎಂದು ಪ್ರಶ್ನೆ ಮಾಡಿದಾಗ ನಾನು ದೇವತೆ ನಿಮ್ಮ ಊರಿಗೆ ಬಂದು ನೆಲೆಸಬೇಕು ಎಂದು ಬಾಣಂತಿ ಮಾರಮ್ಮ ಹೇಳುತ್ತಾಳೆ. ಆಗ ಕಟ್ಟಿಗೆಯ ಮೇಲೆ ಬಂದು ಕನಕಪುರ ಪಟ್ಟಣದ ಮೇಗಳ ಬೀದಿಯಲ್ಲಿ ನೆಲೆಸಿದ್ದಾಳೆ. ಈ ಊರಿನ ಜನರು ಬಾಣಂತಿ ಮಾರಮ್ಮ ನೆಲೆಸಿರುವ ಸ್ಥಳದಲ್ಲಿ ದೇವಾಲಯ ಕಟ್ಟಿಕೊಂಡು ಗ್ರಾಮದೇವತೆಯಾಗಿ ಆರಾಧಿಸುತ್ತಾ ಬಂದಿದ್ದಾರೆ.

ಕೆಂಕೇರಮ್ಮನ ಐತಿಹ್ಯ

ಕನಕಪುರ ಪಟ್ಟಣದ ಗ್ರಾಮದೇವತೆಗಳಲ್ಲಿ ಕೆಂಕೇರಮ್ಮ ದೇವತೆಯೂ ಒಂದಾಗಿದೆ. ಈ ದೇವತೆ ಪಟ್ಟಣದ "ಹಲಸಿನ ಮರದದೊಡ್ಡಿ"ಯಲ್ಲಿ ಬಂದು ನೆಲೆಸಿರುವ ಕಥೆಯನ್ನು ಕೆಂಕೇರಮ್ಮ ದೇವಾಲಯ ಪೂಜಾರಿ ವಕ್ತೃ ಶಿವಣ್ಣ(೮೦) ಮತ್ತು "ಹಲಸಿನ ಮರದದೊಡ್ಡಿ" ಗ್ರಾಮದ ಹಿರಿಯ ವ್ಯಕ್ತಿಗಳು ಪರಂಪರಾನುಗತವಾಗಿ ತಿಳಿದುಕೊಂಡು ಬಂದಿರುವ ವಿವರಗಳು ಐತಿಹ್ಯಗಳ ರೂಪ ಪಡೆದುಕೊಂಡಿವೆ. ಅವುಗಳನ್ನು ಈ ರೀತಿಯಾಗಿವೆ.

ಬಿಡದಿ ಕೆಂಗೇರಿಯಲ್ಲಿದ್ದ ಕೆಂಕೇರಮ್ಮ ಬಿದಿರು ಬುಟ್ಟಿಯೊಳಗೆ ಕನಕಪುರಕ್ಕೆ ಬಂದು ನೆಲೆಸುತ್ತಾಳೆ. ವೀಳ್ಯದ ಎಲೆಯಲ್ಲಿ ಬಂದಿರುವ ಕೆಂಕೇರಮ್ಮ ಲಕ್ಷ್ಮಿ ರೂಪದವಳು. ವೀಳ್ಯದೆಲೆ ಮಾರುವವರು ಎಲೆಯ ಬುಟ್ಟಿಯನ್ನು ಹೊತ್ತುಕೊಂಡು ಬರುವಾಗ ತೂಕ ಹೆಚ್ಚಾಗಿ ಕನಕಪುರ ಪಟ್ಟಣದ "ಹಲಸಿನ ಮರದ ದೊಡ್ಡಿ" ಬಳಿ ಆ ಬುಟ್ಟಿಯನ್ನು ಕೆಳಗಿಟ್ಟರು. ಆಗ ಕೆಂಕೇರಮ್ಮ ಇಲ್ಲೇ ನೆಲೆಗೊಂಡಳು. ಎಲೆ ಮಾರುವವರು ತಮ್ಮ ಬುಟ್ಟಿಯನ್ನು ತೆಗೆದುಕೊಂಡು ಹೋದರು. ಇಲ್ಲಿ ಅಮ್ಮ ನೆಲೆಸಿರುವ ಸೂಚನೆಯನ್ನು "ಬುಡು ಬುಡುಕೆ"ಯವನ ಮಗನ ಕನಸಿನಲ್ಲಿ ಪ್ರತ್ಯಕ್ಷಗೊಂಡು "ನಾನು ಬಿಡದಿ ಕೆಂಗೇರಿಯಿಂದ ಬಂದು ಇಲ್ಲಿ ನೆಲೆಸಿದ್ದೀನಿ. ಇನ್ನು ಮುಂದೆ ನನಗೆ ಒಂದು ಅಂಕಣದ ಗರ್ಭಗುಡಿ ಮಾಡಿ ಪೂಜೆ ಮಾಡಬೇಕು ಎಂದು ಹೇಳಿದಳು". ಆಗ ನಿನಗೆ ಯಾರು ಪೂಜೆ ಮಾಡಬೇಕೆಂದು ಕೇಳಿದಾಗ ಮೊರಳೇಬೇಕುಪ್ಪೆಯಲ್ಲಿ ಆರು ಏರಿನ ಜೊತೆ ಬಂದು ಕೋಣನ ಏರು ಕಟ್ಟಿಕೊಂಡು "ಹೊಲ ಉಳುತ್ತಿರುವ" ಚೆನ್ನಗೌಡ ಬಂದು ಪೂಜೆ ಮಾಡಿದರೆ ಒಪ್ಪುತ್ತೇನೆ ಎಂದಳು. ಹಲಸಿನ ಮರದ ದೊಡ್ಡಿಯ ಜನರು ಮೊರಳೇಬೇಕುಪ್ಪೆಗೆ ಹೋಗಿ ಚೆನ್ನೇಗೌಡನನ್ನು ಕರೆದುಕೊಂಡು ಬಂದು ಪೂಜಾರಿಯಾಗಿ ಮಾಡಿದರು. ಅಮ್ಮನ ಆಜ್ಞೆಯಂತೆ ಗುಡಿಕಟ್ಟಿಸಿ ಜಾತ್ರೆ, ಕೊಂಡ, ಸಿಡಿ, ಬಲಿ ಮೊದಲಾದ ಆಚರಣೆಗಳನ್ನು ಮಾಡುತ್ತಾ ಗ್ರಾಮದೇವತೆಯಾಗಿ ಆರಾಧಿಸುತ್ತಿದ್ದಾರೆ.

ಕನಕಪುರ ಪಟ್ಟಣದ ಗ್ರಾಮದೇವತೆಗಳ ಕುರಿತ ಐತಿಹ್ಯಗಳು

ಈ ಪಟ್ಟಣದ ಗ್ರಾಮದೇವತೆಗಳ ಮೂಲದ ಕುರಿತು ಇಲ್ಲಿ ವಾಸಿಯಾಗಿರುವ ವಕ್ತೃ ತಾಟಗಣ್ಣ(೫೫) ಅವರು ತಮ್ಮ ಹಿರಿಯರಿಂದ ತಿಳಿದುಕೊಂಡಿರುವ ಕಥೆಯನ್ನು ಮುಂದಿನಂತೆ ವಿವರಿಸಿದ್ದಾರೆ.

ತಮಿಳುನಾಡಿನಿಂದ ಐದು ಜನ ಮಾರಮ್ಮಗಳು ಕನಕಪುರಕ್ಕೆ ಬಂದರು. ಅಲ್ಲಿಂದ ಬಂದು ಆಯಾಸಗೊಂಡಿದ್ದ ಇವರಿಗೆ ಹಸಿವಾಯಿತು. ಆಗ ಇವರು ಅಡುಗೆ ಮಾಡಲು ಬೇಕಾದ ವಸ್ತುಗಳನ್ನು ತರಲು ಒಬ್ಬೊಬ್ಬರು ಒಂದೊಂದು ಕಡೆಗೆ ಹೋಗಿ ಆ ಸ್ಥಳಗಳಲ್ಲೇ ನೆಲೆಸಿದರು. ಬೆಂಕಿ ತರಲು ಹೋದ ಕೊಲ್ಲಾಪುರದಮ್ಮ - ಕುರುಪೇಟೆಯಲ್ಲಿ, "ಬೆಣ್ಣೆ"(ತೊಪ್ಪೆ) ತರಲು ಹೋದ ಮರಸನಾಡಮ್ಮ ಮಳಗಾಳಿನಲ್ಲಿ, ಹೊಳೆಯಲ್ಲಿ ನೀರು ತರಲು ಹೋದ ಮಳಕೋಟಮ್ಮ ಕೋಟೆಯ ಒಳಗೆ, "ಸೌದೆ"(ಕಟ್ಟಿಗೆ) ತರಲು ಬೆಟ್ಟಕ್ಕೆ ಹೋದ ಬಾಣಂತಿ ಮಾರಮ್ಮ ಬೆಟ್ಟದಲ್ಲಿ ನೆಲೆಸಿದರು. ಇವರ ನೆಲೆಸಿದ ಪ್ರದೇಶಗಳಲ್ಲಿ ಜನರ ಕಷ್ಟಗಳನ್ನು ದೂರ ಮಾಡುತ್ತಾ

ಗ್ರಾಮದೇವತೆಗಳಾಗಿ ಪ್ರಸಿದ್ಧಿಯಾದರು. ಇದರಿಂದ ಅವರಿಗೆ ಜಾತ್ರೆ, ಕೊಂಡ, ಬಲಿ ಮೊದಲಾದ ಆಚರಣೆಗಳು ಹುಟ್ಟಿಕೊಂಡು ಪ್ರತಿವರ್ಷ ಹಬ್ಬಗಳು ನಡೆಯುತ್ತವೆ.

ಈ ಗ್ರಾಮದೇವತೆಗಳು ತಮಿಳುನಾಡಿನಿಂದ ಬಂದು ಕನಕಪುರದಲ್ಲಿ ನೆಲೆಸಿದ್ದಾರೆ ಎಂದು ಹೇಳುವ ಕಥೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ದ್ರಾವಿಡ ಜನಾಂಗದ ಮಾತೃದೇವತೆಗಳ ಆರಾಧನೆಗೆ ಹೆಚ್ಚು ಒತ್ತು ಕೊಟ್ಟಿರುವ ತಮಿಳುನಾಡಿನಲ್ಲಿ ಇಂತಹ ಮಾರಮ್ಮಗಳ ಆಚರಣೆ, ಆರಾಧನೆ ಹೆಚ್ಚಾಗಿರುವುದನ್ನು ಕಾಣಬಹುದು. ಕನಕಪುರಕ್ಕೆ ಹತ್ತಿರವಿರುವ ತಮಿಳುನಾಡಿನ ಮಾರಮ್ಮಗಳ ಆಚರಣೆಯ ಪ್ರಭಾವ ಇಲ್ಲಿನ ಸಂಸ್ಕೃತಿಯ ಮೇಲೆ ಹೆಚ್ಚಾಗಿ ಬೀರಿ ಇಲ್ಲಿನ ಮಾತೃದೇವತೆಗಳು ಗ್ರಾಮದೇವತೆಗಳ ರೂಪವನ್ನು ಪಡೆದುಕೊಂಡಿವೆ. ದಕ್ಷಿಣ ಭಾರತದ ದ್ರಾವಿಡ ಸಂಸ್ಕೃತಿಯ ಮಾತೃದೇವತಾ ಆರಾಧನೆ, ಆಚರಣೆಗಳು ಈ ರೀತಿ ಮಾರಮ್ಮಗಳ ಆರಾಧನೆ ಮೂಲಕ ಗ್ರಾಮದೇವತೆಗಳ ರೂಪ ಪಡೆದು ಅಸ್ತಿತ್ವದಲ್ಲಿವೆ ಎನಿಸುತ್ತದೆ.

ಅಡಿಟಿಪ್ಪಣಿಗಳು

೧. ವಾಗೀಶ್ವರಿ ಶಾಸ್ತ್ರಿ, **ಕರ್ನಾಟಕದ ಹಬ್ಬಗಳು,** ಪು. ೩೧.

೨. ಜ್ಯೋತಿಲಿಂಗಯ್ಯ ಆರ್., **ಜಾನಪದ ಹಿನ್ನೆಲೆಯಲ್ಲಿ ಕನಕಪುರ ತಾಲ್ಲೂಕಿನ ಸಾಂಸ್ಕೃತಿಕ ಅಧ್ಯಯನ,** ಪು. ೨೭೭.

೩. ಅದೇ, ಪು. ೨೭೯.

೪. ರಂಗಸ್ವಾಮಿ ಡಿ.ಟಿ., **ಭಾರತೀಯ ಹಬ್ಬಗಳು,** ಪು. ೨೫.

೫. ಮಂಜುನಾಥ ಬೇವಿನಕಟ್ಟಿ, **ಕನ್ನಡ ಜಾನಪದ ನಂಬಿಕೆಗಳು,** ಪು. ೧೩೬.

೬. ರಮೇಶ ಬಿ.ಜಿ., **ನಮ್ಮ ಹಬ್ಬಗಳು,** ಪು. ೩.

೭. ಅದೇ, ಪು. ೩.

೮. ಸಿದ್ಧಲಿಂಗಯ್ಯ, **ಗ್ರಾಮದೇವತೆಗಳು,** ಪು. ೮೧.

೯. ಅದೇ, ಪು. ೮೭.

೧೦. ಅದೇ, ಪು. ೮೮.

೧೧. ಜ್ಯೋತಿಲಿಂಗಯ್ಯ ಆರ್., **ಪೂರ್ವೋಕ್ತ,** ಪು. ೩೩೭.

೧೨. ಸಿದ್ಧಲಿಂಗಯ್ಯ, **ಪೂರ್ವೋಕ್ತ,** ಪು. ೪೨.

೧೩. ಬೈರೇಗೌಡ ಎಂ., ಇರುಳಿಗರು : **ಜಾನಪದ ಅಧ್ಯಯನ,** ಪು. ೨೮೮.

೧೪. ಅದೇ, ಪು. ೨೮೮.

೧೫. ಜ್ಯೋತಿಲಿಂಗಯ್ಯ ಆರ್., **ಪೂರ್ವೋಕ್ತ,** ಪು. ೩೩೮.

❖❖

ಅಧ್ಯಾಯ : ಆರು

ಸಮಾರೋಪ

ಅಧ್ಯಾಯ : ಆರು

ಸಮಾರೋಪ

ಕನಕಪುರ ಪಟ್ಟಣ ಪರಿಸರದ ಇತಿಹಾಸ ಮತ್ತು ಸಂಸ್ಕೃತಿ ಕುರಿತು ಪ್ರಸ್ತುತ ಸಂಪ್ರಬಂಧದಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಒಟ್ಟು ಆರು ಅಧ್ಯಾಯಗಳನ್ನು ರಚಿಸಿಕೊಳ್ಳಲಾಗಿದೆ. ಪ್ರತಿಯೊಂದು ಅಧ್ಯಾಯದಲ್ಲಿ ನಿರ್ದಿಷ್ಟ ವಿಷಯಗಳ ಕುರಿತು ಆ ಪ್ರದೇಶದಲ್ಲಿ ಲಭ್ಯವಿರುವ ಆಕರಗಳ ಹಿನ್ನೆಲೆ ಹಾಗೂ ಬಳಕೆ ಮಾಡಿಕೊಂಡಿರುವ ಸಂಗತಿಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಅರ್ಕಾವತಿ ನದಿಯ ಬಲ ದಂಡೆಯ ಮೇಲಿರುವ ಈ ಊರಿಗೆ ಪ್ರಾಕೃತಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವಿರುವುದನ್ನು ಈ ಅಧ್ಯಯನದಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೆ ಇನ್ನಿತರ ಮಹತ್ವದ ವಿಷಯಗಳಾದ ಟಿಪ್ಪು ಮತ್ತು ಬ್ರಿಟೀಷ್ ಕಂಪನಿ ಸರ್ಕಾರದ ನಡುವೆ ಯುದ್ಧಗಳು ಘಟಿಸಿದಾಗ ಈ ಮಾರ್ಗವು ಬ್ರಿಟೀಷ್ ಸೈನ್ಯಕ್ಕೆ ಹೇಗೆ ಗುಪ್ತ ಮಾರ್ಗವಾಗಿ ಬಳಕೆಯಾಯಿತು. ಈ ಪ್ರದೇಶದ ಕುರಿತು ತುಂಬಾ ಮಹತ್ವ ವಿಷಯಗಳನ್ನು ಫ್ರಾನ್ಸಿಸ್ ಬುಕನನ್ ಅವರ ವರದಿಯಲ್ಲಿ ದಾಖಲಿಸಲಾಗಿದೆ. ಟಿಪ್ಪುವಿನ ಮರಣದ ನಂತರ ಬ್ರಿಟಿಷರ ಅಧೀನದಲ್ಲಿದ್ದ ಪ್ರದೇಶಗಳಲ್ಲಿನ ಚಟುವಟಿಕೆಗಳ ವಸ್ತುಶಃ ವರದಿ ಮಾಡಲು ೧೮೦೦ರಲ್ಲಿ ಪ್ರವಾಸ ಕೈಗೊಂಡ ಬುಕನನ್ ಎರಡು ದಿನಗಳ ಕಾಲ ಕನಕಪುರದಲ್ಲಿ ನೆಲೆಸಿದನು. ಆ ಸಂದರ್ಭದಲ್ಲಿ ತಾನು ಕಂಡಂತಹ ಇಲ್ಲಿರುವ ಜನರ ಜೀವನ, ಬೆಟ್ಟ-ಗುಡ್ಡ, ಜಮೀನು, ಕೃಷಿ ಪದ್ಧತಿ ಮೊದಲಾದ ವಿಷಯಗಳ ಕುರಿತು ಮಹತ್ವದ ವಿಷಯಗಳನ್ನು ತನ್ನ ವರದಿಯಲ್ಲಿ ದಾಖಲಿಸಿದ್ದಾನೆ. ಪ್ರಕಟಿತ ಆ ವರದಿಯ ಸಂಪೂರ್ಣ ಸಹಾಯ ಪಡೆದು ಈ ಸಂಪ್ರಬಂಧಲ್ಲಿ ಕೆಲವು ಸಂಗತಿಗಳನ್ನು ದಾಖಲಿಸುವ ಪ್ರಯತ್ನ ಮಾಡಲಾಗಿದೆ.

ಕನಕಪುರ ಪಟ್ಟಣ ಪ್ರದೇಶದ ಭೌಗೋಳಿಕ ಪರಿಸರವು ವೈಶಿಷ್ಟ್ಯತೆಯಿಂದ ಕೂಡಿದ್ದು ಇಲ್ಲಿನ ಚರಿತ್ರೆಯನ್ನು ರೂಪಿಸುವಲ್ಲಿ ವಹಿಸಿರುವ ಪಾತ್ರವನ್ನು ಪಟ್ಟಣ ಪ್ರದೇಶಕ್ಕೆ ಸಂಬಂಧಿಸಿದಂತೆ ಭೌತಿಕವಾಗಿ ವಿವರಿಸಲಾಗಿದೆ. ಪ್ರಾಗಿತಿಹಾಸಿದ ಮಾನವನು ಈ ಪ್ರದೇಶದ ಸುತ್ತಮುತ್ತ ಜೀವನ ನಡೆಸಿದ್ದಾನೆ ಎಂಬ ಸಂಗತಿಯನ್ನು ದೊರೆತಿರುವ ಪ್ರಾಚ್ಯ ಅವಶೇಷಗಳು ಹಾಗೂ ಶಿಲಾಯುಗದ

ನೆಲೆಗಳಿಂದ ತಿಳಿಯಬಹುದಾಗಿದೆ. ಶಿಲಾಯುಗಗಳ ಚರಿತ್ರೆಯಿರುವ ನಾಡಿನಲ್ಲಿ ಒಂದು ನಿರ್ದಿಷ್ಟ ಪ್ರದೇಶದ ಚಾರಿತ್ರಿಕ ಸಂಗತಿಯನ್ನು ಅಗತ್ಯವೆಂಬ ಕಾರಣಕ್ಕೆ ಕನಕಪುರ ಪರಿಸರದ ಚಾರಿತ್ರಿಕ ವಿಷಯಗಳನ್ನು ಒಂದೆಡೆ ಚರ್ಚಿಸಲಾಗಿದೆ.

ಕರ್ನಾಟಕದ ಚರಿತ್ರೆಯಲ್ಲಿ ಕನಕಪುರವು ಸುಮಾರು ಎರಡು ಸಾವಿರ ವರ್ಷಗಳಷ್ಟು ಪುರಾತನ ಇತಿಹಾಸ ಹೊಂದಿದೆ. ಭೌಗೋಳಿಕವಾಗಿ ವಿಪುಲವಾಗಿ ಹರಡಿರುವ ಸಂಪನ್ಮೂಲಗಳು ಇಲ್ಲಿನ ಜನರ ಚರಿತ್ರೆಯನ್ನು ರೂಪಿಸಲು ಸಹಕಾರಿಯಾಗಿವೆ. ಇತಿಹಾಸದ ಕಾಲಚಕ್ರಕ್ಕೆ ಸಿಕ್ಕಿರುವ ಈ ಪ್ರದೇಶದ ಚರಿತ್ರೆಯಲ್ಲಿರುವ ಪರಂಪರಾನುಗತ ಆದರ್ಶ ಗುಣಗಳು ಇಂದಿನ ಜನರ ಸಹಬಾಳ್ವೆಗೆ ಮಾದರಿಯಾಗಿವೆ. ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ವಿವಿಧ ಅರಸುಮನೆತನಗಳಿಂದ ಆಳ್ವಿಕೆಗೊಳಪಟ್ಟು ತನ್ನ ಐತಿಹಾಸಿಕ ಶ್ರೀಮಂತಿಕೆಯನ್ನು ಮೈಗೂಡಿಸಿಕೊಂಡು ಈ ಪ್ರದೇಶವು ಇಂದಿಗೂ ಸಂಶೋಧಕರ ಗಮನವನ್ನು ಸೆಳೆಯುವಲ್ಲಿ ಸಫಲವಾಗಿದೆ.

ಈ ಪ್ರದೇಶದಲ್ಲಿ ಸಾಮಾಜಿಕ ಸಂಬಂಧಗಳು ಅನ್ಯೋನ್ಯವಾಗಿ ಕಂಡು ಬಂದರೂ ಮೇಲು-ಕೀಳು, ಬಡವ-ಶ್ರೀಮಂತ ಎಂಬ ಅಂಶಗಳು ಗೋಚರವಾಗುತ್ತವೆ. ಅಲ್ಲದೆ ಇಲ್ಲಿನ ಕೆಲವು ಪ್ರಬಲ ವರ್ಗದವರಿಂದ ಜನಸಾಮಾನ್ಯರ ಮೇಲಾಗುವ ದೌರ್ಜನ್ಯಗಳು ಬೆಳಕಿಗೆ ಬರದೆ ಗೌಣವಾಗುವುದರಿಂದ, ಜನಸಾಮಾನ್ಯರ ಜೀವನ ಸುಧಾರಣೆಗೆ ತೊಡಕಾಗಿದೆ ಎನ್ನಬಹುದು. ಇಲ್ಲಿ ನೆಲೆಸಿರುವ ಎಲ್ಲಾ ಸಮುದಾಯಗಳು ತಮ್ಮದೇ ಆದ ಸಂಸ್ಕೃತಿಗಳನ್ನು ಹೊಂದಿವೆ. ಆದರೆ ಮಹಿಳೆಯರ ಸ್ಥಾನಮಾನಗಳು ನಿರ್ದಿಷ್ಟ ಮಿತಿಯ ಗಡಿಯಲ್ಲೇ ಇಂದಿಗೂ ಉಳಿದುಕೊಂಡು ಬಂದಿವೆ.

ಧಾರ್ಮಿಕ ಸಂಗತಿಗಳನ್ನು ವಿವರಿಸುವ ಕೆಲಸವನ್ನು ಪೂರೈಸಲು ಈಗಾಗಲೇ ನಡೆದಿರುವ ಅಧ್ಯಯನಗಳ ತಳಹದಿಯ ಮೇಲೆ ಹೊಸ ಬಗೆಯ ತಿರುವುಗಳನ್ನು ಗಮನಿಸಲು ಸಾಧ್ಯತೆಗಳಿವೆ ಎಂಬ ವಿಷಯವನ್ನು ಈ ಅಧ್ಯಯನದಲ್ಲಿ ಸಾಬೀತುಗೊಳಿಸುವ ಪ್ರಯತ್ನ ಮಾಡಲಾಗಿದೆ. ಹೊಯ್ಸಳರ ಕಾಲಕ್ಕೂ ಮೊದಲಿನಿಂದ ಇಲ್ಲಿ ಇದ್ದಂತ ಶೈವ ಪರಂಪರೆಯ ಮೇಲೆ ವೈಷ್ಣವ ಪಂಥ ಮಾಡಿರಬಹುದಾದ ಶೀತಲ ದಾಳಿಯ ಪ್ರಭಾವಗಳು ಬೂದಿ ಮುಚ್ಚಿದ ಕೆಂಡಗಳಂತಿದ್ದು ಅವುಗಳನ್ನು ಸೂಕ್ಷ್ಮ ಗ್ರಹಿಕೆಯಲ್ಲಿ ಕಂಡುಕೊಳ್ಳಲು ಪ್ರಯತ್ನ ಮಾಡಿರುವ ಸಮಾಧಾನವಿದೆ. ಅಧ್ಯಯನಗಳಲ್ಲಿ ಊಹಾತ್ಮಕ ಸತ್ಯಗಳಿಗೆ ಅಲ್ಪಮಟ್ಟಿಗೆ ಅವಕಾಶವಿದೆ. ಆ ಹಿನ್ನೆಲೆಯಿಂದ ಈ ಧಾರ್ಮಿಕ ಪ್ರಭಾವದ ವಿಚಾರಗಳನ್ನು ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಧಾರ್ಮಿಕ ಮನೋಭಾವನೆಯನ್ನು ಉಂಟುಮಾಡುವ ದೇವರ, ಭಯ, ಭಕ್ತಿಗಳು ಮಠ ಮತ್ತು ದೇವಾಲಯಗಳ ವರ್ಣಾತ್ಮಕ ನಿರ್ಮಾಣಕ್ಕೆ ಕಾರಣವಾಗಿವೆ. ಈ ದೃಷ್ಟಿಯಿಂದ ಕನಕಪುರ ಪಟ್ಟಣದಲ್ಲಿರುವ ದೇವಾಲಯಗಳ ಕಡೆ ಗಮನ ಹರಿಸಿದರೆ ಅವುಗಳ ಸ್ಥಾಪನೆಯ ಕುರಿತು

ಯಾವುದೇ ಮೂಲ ದಾಖಲೆಗಳು ಲಭ್ಯವಿಲ್ಲದಿದ್ದರೂ ಕೂಡ ಇಂತಹ ಸಮಸ್ಯೆಯನ್ನು ಜನಪದರಲ್ಲಿರುವ ಮೌಖಿಕ ದಾಖಲೆಗಳಿಂದ ಪರಿಹರಿಸಿಕೊಳ್ಳಬಹುದಾಗಿದೆ. ಹಾಗಾಗಿ ಜನಪದರಿಂದ ಇಲ್ಲಿ ಗ್ರಾಮದೇವತೆಗಳ ನೆಲೆಸುವಿಕೆ, ಆ ದೇವತೆಗಳಿಗೆ ನಿರ್ಮಾಣಗೊಂಡ ದೇವಾಲಯಗಳ ಕುರಿತ ಅಂಶಗಳನ್ನು ಐತಿಹ್ಯಗಳ ಮೂಲಕ ನಿರೂಪಿಸುವ ಪ್ರಯತ್ನ ಮಾಡಲಾಗಿದೆ.

ಕನಕಪುರ ಪಟ್ಟಣದ ಚರಿತ್ರೆಯನ್ನು ರಚಿಸಲು ಸ್ಥಳೀಯವಾಗಿ ಲಭ್ಯವಿರುವ ಶಾಸನಗಳು, ದೇವಾಲಯಗಳು, ಮಸೀದಿ ಮತ್ತು ಚರ್ಚ್‌ಗಳು ಹಾಗೂ ಕಥೆ, ಕಾವ್ಯ, ಲಾವಣಿ, ಐತಿಹ್ಯ ಮೊದಲಾದ ಮೌಖಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಆ ಮೂಲಕ ಚರಿತ್ರೆ ಬರವಣಿಗೆಯಲ್ಲಿ ಅಷ್ಟೇನು ಪ್ರಮುಖವಾಗಿ ಪರಿಗಣಿಸಲ್ಪಡದ ಸ್ಥಳೀಯ ಚರಿತ್ರೆಯ ವಿವಿಧ ಆಯಾಮಗಳನ್ನು ಚರ್ಚಿಸಿ, ಕನಕಪುರ ಪಟ್ಟಣದ ಚರಿತ್ರೆಯನ್ನು ಪುನಾರಚಿಸುವ ಪ್ರಯತ್ನ ಮಾಡಲಾಗಿದೆ. ಇದರ ಮೂಲಕ ಕನಕಪುರ ಪಟ್ಟಣದ ಸ್ಥಿತಿಗತಿಗಳನ್ನು ವಿಶ್ಲೇಷಿಸುವ ಪ್ರಯತ್ನ ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಈ ಅಧ್ಯಯನವು ಇತಿಹಾಸದ ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ರೂಪುಗೊಂಡಿದ್ದರೂ ಅವುಗಳನ್ನು ಮೀರಿ ಕನಕಪುರ ಪಟ್ಟಣದ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಸಾಂಸ್ಕೃತಿಕ ಆಚರಣೆಯ ನೆಲೆಗಳು ಪ್ರಮುಖ ಪಾತ್ರವಹಿಸುತ್ತವೆ. ಅವುಗಳಿಗೆ ಭೂತ, ವರ್ತಮಾನ ಹಾಗೂ ಭವಿಷ್ಯದ ಕಾಲಗಳ ಮಿತಿಯ ಅಗತ್ಯವಿರುವುದಿಲ್ಲ. ಹಾಗಾಗಿ ಅದರ ಆದಿ ಮತ್ತು ಅಂತ್ಯವನ್ನು ಗುರುತಿಸುವುದು ಕಷ್ಟವಾಗಿದೆ. ಪ್ರತಿಯೊಂದು ಕಾಲಘಟ್ಟಗಳ ಆಗು-ಹೋಗುಗಳ ಅನುಭವಗಳನ್ನು ತನ್ನೊಳಗೆ ನಿರ್ಣಯ ಮಾಡುತ್ತಾ ಹೊಸ ಬಗೆಯ ಅಂಶಗಳನ್ನು ಕಂಡುಕೊಳ್ಳುವತ್ತ ಸಾಗಲು ಇಂಥ ನೆಲೆಗಳ ಕುರಿತು ಅಲ್ಲಿರುವ ಭೌತಿಕ ಆಯಾಮಗಳ ಹಿನ್ನೆಲೆಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಕನಕಪುರ ಪಟ್ಟಣದ ಚರಿತ್ರೆಯನ್ನು ಕಟ್ಟುವ ಕಿರುಪ್ರಯತ್ನ ಮಾಡಲಾಗಿದೆ. ಈ ಅಧ್ಯಯನವು ಹೆಚ್ಚು ಕ್ಷೇತ್ರಕಾರ್ಯ ಆಧಾರಿತವಾಗಿದ್ದು, ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಿ ದಾಖಲಿಸಿಕೊಂಡಿರುವ ವಿವರಗಳನ್ನು ಸ್ಥಳೀಯ ಚರಿತ್ರೆಯ ಹಿನ್ನೆಲೆಯಲ್ಲಿ ಸಮೀಕರಿಸಿಕೊಂಡು ಪ್ರಸ್ತುತಪಡಿಸುವ ಪ್ರಯತ್ನ ಮಾಡಲಾಗಿದೆ.

ಒಟ್ಟಾರೆಯಾಗಿ ಕನಕಪುರ ಪಟ್ಟಣ ಪರಿಸರವು ಇತಿಹಾಸ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ ಬೆಳೆದುಬಂದಿದೆ. ಈ ಪಟ್ಟಣದ ಪರಿಸರ ಕುರಿತಿರುವ ಸಮಗ್ರ ಮಾಹಿತಿಗಳನ್ನು ಹಲವು ಬಗೆಯ ಚರ್ಚೆಗಳಿಗೆ ಒಳಪಡಿಸಿ ಈ ಪ್ರದೇಶದ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನವನ್ನು ಸಂಪ್ರಬಂಧದಲ್ಲಿ ಮಾಡಲಾಗಿದೆ.

❖❖

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು
೨. ನಕ್ಷೆ ಮತ್ತು ಛಾಯಾಚಿತ್ರಗಳು
೩. ವಕ್ತೃಗಳ ವಿವರ

೧. ಪರಾಮರ್ಶನ ಗ್ರಂಥಗಳು

೧. ಅಪರ್ಣ ಕೂ.ಸ., **ದೇವಾಲಯ ವಾಸ್ತುಶಿಲ್ಪ ಪರಿಚಯ,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೨. ಅಮರೇಶ ಆಲ್ಕೋಡ, **ದೇವದುರ್ಗದ ಚಾರಿತ್ರಿಕ ಅಧ್ಯಯನ,** ಚಿಂತನ ಪುಸ್ತಕ, ಬೆಂಗಳೂರು, ೨೦೧೨.

೩. ಅಂಕನಹಳ್ಳಿ ಪಾರ್ಥ, **ರಾಮನಗರ : ಒಂದು ಸಾಂಸ್ಕೃತಿಕ ಅಧ್ಯಯನ,** ಅಂಕನಹಳ್ಳಿ ಪ್ರಕಾಶನ, ರಾಮನಗರ, ೨೦೦೮.

೪. ಅಂಬಳಿಕೆ ಹಿರಿಯಣ್ಣ(ಸಂ), **ಕನ್ನಡ ವಿಷಯ ವಿಶ್ವಕೋಶ,** ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೯.

೫. ಆಸಿಫ್ ಷರೀಫ್, **ರೇಷ್ಮೆ ನಗರ,** ಅಂಕನಹಳ್ಳಿ ಪ್ರಕಾಶನ, ರಾಮನಗರ, ೨೦೦೬.

೬. ಇರ್ಫಾನ್ ಹಬೀಬ್(ಮೂ), ಪ್ರತೀಪ್ ಬೆಳಗಲ್(ಅ), **ಪೂರ್ವೇತಿಹಾಸ,** ಚಿಂತನ ಪುಸ್ತಕ, ಶಿರಸಿ, ೨೦೦೮.

೭. ಎಚ್ಚೆಸ್ಕೆ(ಸಂ), **ಅವಲೋಕನ,** ಕರ್ನಾಟಕದ ಪರಂಪರೆ ಸಮೀಕ್ಷೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫.

೮. ಕಲಬುರ್ಗಿ ಎಂ.ಎಂ., **ಮಾರ್ಗ ಸಂಪುಟಗಳು ೧, ೨, ೩,** ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೧೦.

೯. ಕ್ಯಾತನಹಳ್ಳಿ ರಾಮಣ್ಣ(ಸಂ), **ಕಬ್ಬಾಳ ಕುಳಿಯಲ್ಲಿ ಹುಲಿ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಮೈಸೂರು ವಿಶ್ವವಿದ್ಯಾನಿಲಯ, ೧೯೮೦.

೧೦. ಗದ್ದಿಮಠ ಜಿ.ಎಸ್., **ಗದ್ದಿಮಠ ಬರಹಗಳು,** ಕನ್ನಡ ಅಧ್ಯಯನ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೮.

೧೧. ಗೋಪಾಲರಾವ್ ಎಚ್.ಎಸ್.(ಸಂ), **ಕರ್ನಾಟಕ ಏಕೀಕರಣ ಇತಿಹಾಸ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೪.

೧೨. ತರೀಕೆರೆ ರಹಮತ್, **ಕರ್ನಾಟಕದ ಸೂಫಿಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೧೩. ತಾರಿಹಳ್ಳಿ ಹನುಮಂತಪ್ಪ(ಸಂ), **ನಾಯಕರ ಮಹಾಸಂಸ್ಥಾನ ಸುರಪುರ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

೧೪. ದಿವಾಕರ ಆರ್.ಆರ್., **ಕರ್ನಾಟಕದ ಪರಂಪರೆ, ಸಂ. ೧, ೨.,** ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೪.

೧೫. ನರಸಿಂಹಮೂರ್ತಿ ಎ.ವಿ., **ಕರ್ನಾಟಕ ಪುರಾತತ್ವ ಕೆಲವು ಅಧ್ಯಯನಗಳು,** ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, ೨೦೧೦.

೧೬. ಪ್ರಭಾಕರ ಎಂ.ಎನ್., **ದೇವಾಲಯಗಳ ವಾಸ್ತು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೧೭. ಪಾರ್ಥಸಾರಥಿ ಟಿ.ಎ.(ಮು.ಸಂ), **ಮಂಡ್ಯ ಜಿಲ್ಲೆ ಗ್ಯಾಸೆಟಿಯರ್,** ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೩.

೧೮. ಪಾಟೀಲ ಎಂ.ಬಿ.,(ಮು.ಸಂ.), **ಕರ್ನಾಟಕ ಕೈಪಿಡಿ,** ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೯೬.

೧೯. ಪುಟ್ಟಪ್ಪ ಕೆ.ವಿ.(ಪ್ರ.ಸಂ), **ಇಸ್ಲಾಂ ಸಂಸ್ಕೃತಿ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೦.

೨೦. ಬಡಿಗೇರ ವಾಸುದೇವ, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಭಾಗ-೧,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

೨೧. ಭಟ್‌ಸೂರಿ(ಸಂ), **ಕರ್ನಾಟಕ ಶಾಸನ ಸಂಶೋಧನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೨೨. ಮಂಜುನಾಥ ಬೇವಿನಕಟ್ಟಿ, **ಕನ್ನಡ ಜನಪದ ನಂಬಿಕೆಗಳು,** ಜ್ಯೋತಿ ಪ್ರಕಾಶನ, ಮೈಸೂರು, ೨೦೦೭.

೨೩. ಮುನಿರಾಜಪ್ಪ(ಸಂ), **ಕರ್ನಾಟಕ ಕೆರೆ ನೀರಾವರಿ ಅಧ್ಯಯನ,** ಇತಿಹಾಸ ಮತ್ತು ಪ್ರವಾಸೋದ್ಯಮ ವಿಭಾಗ, ರೂರಲ್ ಕಾಲೇಜು, ಕನಕಪುರ, ೨೦೦೯.

೨೪. ಮುನಿರಾಜಪ್ಪ, **ಹರಿಣಾತವಿ,** ಸ್ಫೂರ್ತಿ ಪ್ರಕಾಶನ, ಹೊಸಪಾಳ್ಯ, ೨೦೧೦.

೨೫. ಮುನಿರಾಜಪ್ಪ, **ಮಾಗಡಿ ಸೀಮೆ ಇತಿಹಾಸ ಸಂಸ್ಕೃತಿ,** ಸ್ಫೂರ್ತಿ ಪ್ರಕಾಶನ, ರಾಮನಗರ, ೨೦೦೫.

೨೬. **ಮೈಸೂರು ಪ್ರಜಾಪ್ರತಿನಿಧಿ ಸಭೆಯ ನಡೆವಳಿಕೆಗಳು,** ಮೈಸೂರು ಸರ್ಕಾರದ ಮುದ್ರಣಾಲಯ, ಬಡ್ಜೆಟ್ ಅಧಿವೇಶನ - ಜೂನ್ ೧೯೪೦, ಮೈಸೂರು, ೧೯೪೦.

೨೭. ರಮೇಶ ನಾಯಕ(ಸಂ), **ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೮. ರಾಮನಾಥ ಶಾಸ್ತ್ರಿ, **ಕಾನಕಾನಹಳ್ಳಿ ಪರಿಚಯ,** ವೆಸ್ಲಿಯನ್ ಪ್ರೆಸ್, ಮೈಸೂರು, ೧೯೮೭.

೨೯. ರೈಸ್ ಬಿ.ಎಲ್., **ಎಪಿಗ್ರಾಫಿಯಾ ಆಫ್ ಕರ್ನಾಟಕ, ಶಾಸನ ಸಂಪುಟ-೯,** ಬೆಂಗಳೂರು ಗ್ರಾಮಾಂತರಜಿಲ್ಲೆ, ಮೈಸೂರು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್, ಬೆಂಗಳೂರು, ೧೯೦೫.

೩೦. ಲಕ್ಷ್ಮಣ್ ತೆಲಗಾವಿ, **ಎಪ್ಪತ್ತೇಳು ಪಾಳೆಯಗಾರರು,** ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೧೦.

೩೧. ಲಕ್ಷ್ಮಣ್ ತೆಲಗಾವಿ(ಸಂ), **ಸ್ಥಳೀಯ ಚರಿತ್ರೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೩೨. ವಸು ಎಂ.ವಿ., **ದಕ್ಷಿಣ ಭಾರತದ ಅರಸು ಮನೆತನಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೩೩. ವೆಂಕಟಾಚಲಶಾಸ್ತ್ರೀ ಟಿ.ವಿ., **ಕನಕಪುರ ಎಂಬ ಕಾನಕಾಹಳ್ಳಿ ಚರಿತ್ರೆ,** ಪುಸ್ತಕ ಶಕ್ತಿ ಪ್ರಕಾಶನ, ಬೆಂಗಳೂರು, ೨೦೦೭.

೩೪. ವೆಂಕಟಾಚಲಶಾಸ್ತ್ರೀ ಟಿ.ವಿ., **ಪ್ರಾಕ್ತನ(ರಾ. ನರಸಿಂಹಾಚಾರ್ಯರ ಲೇಖನಗಳು ಭಾಷಣಗಳು),** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೬.

೩೫. ವೇಣುಗೋಪಾಲ ಸೊರಬ, **ಕನಕಪುರ ತಾಲೂಕು ದರ್ಶನ,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೪.

೩೬. ಶರ್ಮಾ ಆರ್.ಎಸ್., **ಪ್ರಾಚೀನ ಭಾರತ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೨.

೩೭. ಶಿವರುದ್ರಪ್ಪ ಎಸ್.ಎನ್., **ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ,** ಪೌರಸ್ತ್ಯ ಪ್ರಕಾಶನ, ಮೈಸೂರು, ೨೦೦೯.

೩೮. ಶಿವತಾರಕ್ ಕೆ.ಜಿ., **ಕರ್ನಾಟಕದ ಪುರಾತತ್ವ ನೆಲೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೩೯. ಶ್ರೀನಿವಾಸ ಪಾಡಿಗಾರ, **ಭಾರತೀಯ ಇತಿಹಾಸದ ಶಾಸನ ಆಕರಗಳು,** ರಾಮಾಶ್ರಯ ಪಬ್ಲಿಕೇಶನ್ಸ್, ಧಾರವಾಡ, ೨೦೦೪.

೪೦. ಶೇಷಗಿರಿ ರಾವ್ ಎಲ್.ಎಲ್.(ಪ್ರಸಂ.), ಸೂರ್ಯನಾಥ್ ಯು. ಕಾಮತ್(ಸಂ), **ಬೆಂಗಳೂರು ದರ್ಶನ, ಸಂ. ೧,** ಉದಯಭಾನು ಕಲಾ ಸಂಘ, ಬೆಂಗಳೂರು, ೨೦೦೫.

೪೧. ಷೇಕ್ ಅಲಿ(ಪ್ರಸಂ.), ಸುಂದರ ಅ.(ಸ.ಸಂ.), **ಕರ್ನಾಟಕ ಚರಿತ್ರೆ, ಸಂ. ೧,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೪೨. ಸ್ವಾಮಿ ಐ. ಅಂತಪ್ಪ, **ಕನಕಪುರ ತಾಲೂಕಿನಲ್ಲಿ ಮತ್ತು ಸುತ್ತಮುತ್ತಲಲ್ಲಿ ಕ್ರೈಸ್ತ ಧರ್ಮದ ಉಗಮ,** ಕಥೋಲಿಕ್ ಕ್ರೈಸ್ತರ ಕನ್ನಡ ಸಾಹಿತ್ಯ ಸಂಘ, ಬೆಂಗಳೂರು, ೧೯೯೭.

೪೩. ಸ್ವಾಮಿ ಐ. ಅಂತಪ್ಪ, **ಬ್ರಿಟೀಷರು ಬರುವುದಕ್ಕೆ ಮುಂಚೆ ಬೆಂಗಳೂರು ಮತ್ತು ಸುತ್ತಮುತ್ತಲಲ್ಲಿ ಕ್ರೈಸ್ತ ಧರ್ಮದ ಉಗಮ,** ಕಥೋಲಿಕ ಕ್ರೈಸ್ತರ ಕನ್ನಡ ಸಾಹಿತ್ಯ ಸಂಘ, ಬೆಂಗಳೂರು, ೨೦೦೦.

೪೪. ಸ್ವಾಮಿ ಐ. ಅಂತಪ್ಪ, **ಆನೇಕಲ್ಲು ತಾಲೂಕಿನಲ್ಲಿ ಮತ್ತು ಸುತ್ತಮುತ್ತಲಲ್ಲಿ ಕ್ರೈಸ್ತ ಧರ್ಮದ ಉಗಮ,** ಕಥೋಲಿಕ ಕ್ರೈಸ್ತರ ಕನ್ನಡ ಸಾಹಿತ್ಯ ಸಂಘ, ಬೆಂಗಳೂರು, ೧೯೯೩.

೪೫. ಸುಂದರರಾವ್ ಬ.ನ., **ಬೆಂಗಳೂರಿನ ಇತಿಹಾಸ,** ಸ್ಥಾಪನೆಯಿಂದ ಹಿಡಿದು ಸ್ವರಾಜ್ಯ ಲಭಿಸುವವರೆಗೆ, ಅಂಕಿತ ಪುಸ್ತಕ, ಬೆಂಗಳೂರು, ೨೦೧೧.

೪೬. ಸುಧಾಮಣಿ ಬಿ.ವಿ., **ದಳವಾಯಿ ನಂಜರಾಜಯ್ಯನ ಕಾಲದ ಮೈಸೂರು,** ಅನನ್ಯ ಪ್ರಕಾಶನ, ಮೈಸೂರು, ೨೦೦೯.

ಪಿಎಚ್.ಡಿ. ಮಹಾಪ್ರಬಂಧಗಳು(ಅಪ್ರಕಟಿತ)

೧. ಕೃಷ್ಣಪ್ಪ ಕೆ., **ಹೊಸಕೋಟೆ ತಾಲೂಕು ಒಂದು ಸಾಂಸ್ಕೃತಿಕ ಅಧ್ಯಯನ,** ಪಿಎಚ್.ಡಿ. ಮಹಾಪ್ರಬಂಧ(ಅಪ್ರಕಟಿತ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೭.

೨. ಚಿಕ್ಕಚನ್ನಯ್ಯ, **ಜಾನಪದ ನೆಲೆಯಲ್ಲಿ ಕರ್ನಾಟಕ ಸಾಂಸ್ಕೃತಿಕ ಚರಿತ್ರೆ,** ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟಿತ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೧೨.

೩. ಜ್ಯೋತಿಲಿಂಗಯ್ಯ ಆರ್., **ಜಾನಪದ ಹಿನ್ನೆಲೆಯಲ್ಲಿ ಕನಕಪುರ ತಾಲೂಕಿನ ಸಾಂಸ್ಕೃತಿಕ ಅಧ್ಯಯನ,** ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟಿತ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೧೦.

೪. ಪ್ರಕಾಶ್ ಕೆ.ಪಿ., **ಕನಕಪುರ ಪ್ರದೇಶದ ಸಾಂಸ್ಕೃತಿಕ ಚರಿತ್ರೆ,** ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

೫. ಪುಟ್ಟಸ್ವಾಮಿ ಬಿ., **ಕನಕಪುರ ಪಟ್ಟಣ : ಒಂದು ಸಮಾಜಶಾಸ್ತ್ರೀಯ ಅಧ್ಯಯನ,** ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟಿತ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೩.

೬. ಬಸವರಾಜು ಬಿ., **ಕಬ್ಬಾಳು : ಸಂಕಥನ,** ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲ, ಹಂಪಿ, ೨೦೧೪.

೭. ಸುರೇಶ ಕೆ.ಸಿ., **ರಾಮನಗರ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ,** ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

ಸಂಚಿಕೆಗಳು

೧. ಸೂರ್ಯನಾಥ ಕಾಮತ್, ಕೃಷ್ಣಮೂರ್ತಿ ಪಿ.ವಿ.(ಸಂ), **ಇತಿಹಾಸ ದರ್ಶನ ಸಂಪುಟ-೧೦,** ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೫.

೨. ಸೂರ್ಯನಾಥ ಕಾಮತ್, ಕೃಷ್ಣಮೂರ್ತಿ ಪಿ.ವಿ.(ಸಂ), **ಇತಿಹಾಸ ದರ್ಶನ ಸಂಪುಟ-೧೧,** ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೬.

೩. ನಾಗರಾಜ್ ಎಂ.ಜಿ, ಕೃಷ್ಣಮೂರ್ತಿ ಪಿ.ವಿ.(ಸಂ), **ಇತಿಹಾಸ ದರ್ಶನ ಸಂಪುಟ- ೧೨,** ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೭.

೪. ನಾಗರಾಜ್ ಎಂ.ಜಿ, ಕೃಷ್ಣಮೂರ್ತಿ ಪಿ.ವಿ.(ಸಂ), **ಇತಿಹಾಸ ದರ್ಶನ ಸಂಪುಟ- ೧೩,** ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೮.

೫. ನಾಗರಾಜ್ ಎಂ.ಜಿ, ಕೃಷ್ಣಮೂರ್ತಿ ಪಿ.ವಿ.(ಸಂ), **ಇತಿಹಾಸ ದರ್ಶನ ಸಂಪುಟ- ೧೫,** ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೨೦೦೦.

೬. ಗೋಪಾಲರಾವ್ ಎಚ್.ಎಸ್., ಅಬ್ದುಲ್ ಬಷೀರ್ ಜಿ., **ಕನಕಸಿರಿ,** ಅಖಿಲ ಭಾರತ ೬೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯.

೭. ತಿಮ್ಮಯ ತಾ.ಸಿ.(ಸಂ), **ಅಂತರಗಂಗೆ,** ಕನಕಪುರ ತಾಲೂಕು ೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಕನಕಪುರ, ೨೦೦೦.

೮. ಬಸವಾರಾಧ್ಯ ಎನ್.(ಪ್ರ.ಸಂ.), ಮಹದೇವಯ್ಯ ಟಿ.ಆರ್., **ನಿರ್ವಾಣ ಶ್ರೀ,** ಶ್ರೀ ಮುಮ್ಮಡಿ ನಿರ್ವಾ ಮಹಾಸ್ವಾಮಿಗಳವರ ಪಟ್ಟಾಧಿಕಾರ ರಜತ ಮಹೋತ್ಸವ ಅಭಿನಂದನ ಸಂಪುಟ, ಕನಕಪುರ, ೨೦೦೫.

೯. ಭೈರೇಗೌಡ ಎಂ., ತಿಮ್ಮಯ್ಯ ತಾ.ಸಿ., **ಅರ್ಕಾವತಿ,** ಅಖಿಲಭಾರತ ೬೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯.

೧೦. ಮಿತ್ರ ಅ.ರಾ.(ಸಂ), **ಅಂಬಾರಿ,** ಬೆಂಗಳೂರು ಗ್ರಾಮಾಂತರ ಜಿಲ್ಲಾ ೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ, ಆನೇಕಲ್, ೧೯೮೧.

೧೧. ವೀರಭದ್ರಯ್ಯ ಹೆಚ್.ವಿ.(ಸಂ), **ದೇಗುಲ ಸಿರಿ,** ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ನೆನಪಿನ ಸಂಚಿಕೆ, ಕನಕಪುರ, ೧೯೯೮.

ಇಂಗ್ಲೀಷ್ ಕೃತಿಗಳು

1. Benjamin Lewis Rice (Ed), **Mysore Gazetteer, Vol.-2,** A Government of Karnataka Publication, Bangalore, 2004.

2. Francis - Buchanan, **A Journey From Madras Through The Countries of Mysore,** Canara and Malabar, Vol-3, London, 1807.

3. Hayavadana Rao C., **Mysore Gazetteer, Vol-2,** Karnataka Gazetteer Department, Press, Bangalore, 1980.

4. Neela Majunatha(Ed), **Tipu Sulthan - A Crusader of Change,** Karnataka Gazetteer Department, Bangalore, 2014.

5. Thurston E., **Cast and Tribs of South India, Vol-2 of 7,** Madaras, 1909.

6. Suryanath U. Kamath, **Bangalore Rural District,** Government of Karnataka Publication, Banglore, 1989.

❖❖

೨. ನಕ್ಷೆ ಮತ್ತು ಛಾಯಾಚಿತ್ರಗಳು


೨. ನಕ್ಷೆ ಮತ್ತು ಛಾಯಾಚಿತ್ರಗಳು

೧. ರಾಮನಗರ ಜಿಲ್ಲೆಯ ಹಾಗೂ ಕನಕಪುರ ತಾಲೂಕು ನಕ್ಷೆ




ಕೃಪೆ: ಗೂಗಲ್ ಇಮೇಜಸ್

೨. ಕನಕಪುರ ತಾಲೂಕು ನಕ್ಷೆ




ಕೃಪೆ: ಗೂಗಲ್ ಇಮೇಜಸ್

೩. ಕನಕಪುರ ಪಟ್ಟಣದ ನಕ್ಷೆ




ಕೃಪೆ: ಗೊಗಲ್ ಇಮೇಜಸ್


೪. ಮಳಗಾಳು ಮಹದೇಶ್ವರ ದೇವಾಲಯ



೫. ಕೋದಂಡ ರಾಮಸ್ವಾಮಿ ದೇವಾಲಯ



ಛಾಯಾಚಿತ್ರಗಳು



ರಂಗನಾಥಸ್ವಾಮಿ ದೇವಾಲಯದ ಮುಖಮಂಟಪ



ರಂಗನಾಥಸ್ವಾಮಿ ದೇವಾಲಯದ ಮುಂಭಾಗದ ಗರಡು ಸ್ತಂಭ



ಗರ್ಭಗೃಹದಲ್ಲಿರುವ ರಂಗನಾಥಸ್ವಾಮಿಯ ಮೂರ್ತಿ



ಮಳಗಾಳು ಮಹದೇಶ್ವರ ದೇವಾಲಯದ ಪಾರ್ಶ್ವನೋಟ



ಮಹದೇಶ್ವರ ದೇವಾಲಯದ ಮುಂಭಾಗದ ನೋಟ





ಮಹದೇಶ್ವರ ದೇವಾಲಯದ ಗರ್ಭಗೃಹದಲ್ಲಿರುವ ಶಿವಲಿಂಗ ಮತ್ತು ಪಾರ್ವತಿ ಮೂರ್ತಿ



ಕೋದಂಡರಾಮ ದೇವಾಲಯದ ತೆರೆದ ಮಂಟಪ






ಕೋದಂಡರಾಮ ದೇವಾಲಯದ ಗರ್ಭಗೃಹ ಮತ್ತು ಗರ್ಭಗೃಹದ ಮೇಲಿನ ಶಿಖರ




ಕೆಂಕೇರಮ್ಮ ದೇವಾಲಯದ ಗೋಪುರ



ಗರ್ಭಗೃಹದಲ್ಲಿನ ಕೆಂಕೇರಮ್ಮ ದೇವಿಯ ಮೂರ್ತಿ





ಬಾಣಂತಿ ಮಾರಮ್ಮನ ದೇವಾಲಯ

ಗರ್ಭಗೃಹದಲ್ಲಿನ ಬಾಣಂತಿ ಮಾರಮ್ಮನ ಮೂರ್ತಿ





ಬಾಣಂತಿ ಮಾರಮ್ಮ ದೇವಾಲಯದ ಆವರಣದಲ್ಲಿರುವ ನಾಗಶಿಲ್ಪಗಳು
ಮತ್ತು ಬಾಣಂತಿ ಮಾರಮ್ಮನ ಕೊಂಡ



ದೇಗುಲ ಮಠದ ಮುನ್ನೋಟ





ದೇಗುಲ ಮಠದ ಪಕ್ಕದ ಮಂಟಪದಲ್ಲಿನ ನಂದಿ ಸ್ತಂಭ ಹಾಗೂ ನಂದಿ ವಿಗ್ರಹ





ಇಮ್ಮಡಿ ಹರಿಹರನ ಕಾಲದ ಶಾಸನ
(ಕ್ರಿ.ಶ. ೧೩೭೫)

ದೇವರಾಜ ಒಡೆಯರ ಕಾಲದ ಶಾಸನ
(ಕ್ರಿ.ಶ. ೧೬೬೨)






ದೇವರಾಜ ಒಡೆಯರ ಕಾಲದ ಶಾಸನ
(ಕ್ರಿ.ಶ. ೧೬೬೭)

ಹೆಂಚು ಕಾರ್ಖಾನೆಯ ಚಿಮಣಿ





ಆರ್.ಇ.ಎಸ್. ಕಾಲೇಜು ಬಳಿಯಿರುವ ಗಣೇಶ ಮತ್ತು ಕಾಳಿಕಾಂಬ ಮೂರ್ತಿಗಳು





ಆರ್.ಇ.ಎಸ್.ಕಾಲೇಜು ಬಳಿಯಿರುವ ಕಾಲಭೈರವ ಹಾಗೂ ಕೆಂಕೇರಮ್ಮ ದೇವಾಲಯದಲ್ಲಿರುವ ಆಂಜನೇಯನ ಮೂರ್ತಿ



ಪಾರಿಹಿಯಾ ಮಸೀದಿ



ಜಾಮಿಯಾ ಮಸೀದಿ



ನವಾಜಿಬಾರೆ ಮಸೀದಿ ಮತ್ತು ಮದರಸಾ



ಸಂತರೀತಮ್ಮ ಚರ್ಚ್‌ನ ಹೊರನೋಟ



ಸಂತರೀತಮ್ಮ ಚರ್ಚ್ ಒಳಗಿನ ಬಲಿಪೀಠ



ಸಂತರೀತಮ್ಮ ಚರ್ಚ್ ಒಳಗಿನ ಪ್ರಾರ್ಥನಾ ಮಂದಿರ

೩. ವಕ್ತೃಗಳ ವಿವರ

ಕನಕಪುರ ಪಟ್ಟಣದ ಸಾಂಸ್ಕೃತಿಕ ಅಧ್ಯಯನ ಕ್ಷೇತಕಾರ್ಯ ಸಂದರ್ಭದಲ್ಲಿ ಈ ಕೆಳಕಂಡ ವಕ್ತೃಗಳನ್ನು ಸಂದರ್ಶಿಸಿ ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಪಡೆಯಲಾಗಿದೆ.

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಸ್ಥಳ
೧.	ಡಾ. ಮುನಿರಾಜಪ್ಪ	೬೫	ಪ್ರಾಧ್ಯಾಪಕರು	ರೂರಲ್ ಕಾಲೇಜು
೨.	ಡಾ. ವೆಂಕಟೇಶ್ ಟಿ.ಎಸ್.	೩೭	ಉಪನ್ಯಾಸಕರು	ರೂರಲ್ ಕಾಲೇಜು
೩.	ವೆಂಕಟೇಶ್‌ಮೂರ್ತಿ	೭೮	ಉಪನ್ಯಾಸಕರು	ರೂರಲ್ ಕಾಲೇಜು
೪.	ಡಾ. ಜೋತಿಲಿಂಗಯ್ಯ ಆರ್.	೩೯	ಉಪನ್ಯಾಸಕರು	ರೂರಲ್ ಕಾಲೇಜು
೫.	ತಾಟಗಣ್ಣ	೫೦	ಕೃಷಿ	ಕುರುಪೇಟೆ
೬.	ಲೋಕೇಶ್	೪೫	ನಗರಸಭೆ ಸದಸ್ಯರು	ಕುರುಪೇಟೆ
೭.	ನಟರಾಜ್	೪೧	ವ್ಯಾಪಾರ	ಕುರುಪೇಟೆ
೮.	ಗಿರೀಶ್	೪೩	ಕೃಷಿ	ಕುರುಪೇಟೆ
೯.	ಕೆಂಪಾಚಾರಿ	೭೫	ಕಮ್ಮಾರಿಕೆ ವೃತ್ತಿ	ವಾಜರಬೀದಿ
೧೦.	ಜಗದೀಶ್ವರಾಚಾರ್	೭೦	ಶಿಕ್ಷಕರು	ವಾಜರಬೀದಿ
೧೧.	ಮಂಜು	೨೯	ಕೂಲಿ	ಹಲಸಿನಮರದ ದೊಡ್ಡಿ
೧೨.	ಕುಮಾರ	೨೯	ಮಡಿವಾಳ	ಕೆಂಕೇರಮ್ಮ ಬಡಾವಣೆ
೧೩.	ಶಿವಣ್ಣ	೭೫	ಅರ್ಚಕರು	ಕೆಂಕೇರಮ್ಮ ಬಡಾವಣೆ
೧೪.	ಸತೀಶ್	೫೦	ಪತ್ರಕರ್ತರು	ರಾಜಾರಾವ್ ಬೀದಿ
೧೫.	ಚನ್ನಮಲ್ಲ ಶೆಟ್ಟರು	೮೫	ಕೃಷಿ	ಮೇಗಳ ಬೀದಿ
೧೬.	ನಾಗಣ್ಣ	೭೨	ಕೃಷಿ	ಕೋಟೆ
೧೭.	ಎಲ್ಲೇಗೌಡ್ರು	೫೫	ಶಿಕ್ಷಕರು	ಬಾಣಂತಿ ಮಾರಮ್ಮನ ರಸ್ತೆ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಸ್ಥಳ
೧೮.	ಗುಂಡೇಗೌಡ್ರು	೫೪	ಅರ್ಚಕರು	ಬಾಣಂತಿ ಮಾರಮ್ಮನ ದೇವಾಲಯ
೧೯.	ಹುಮಾಯುನ್	೨೪	ವಿದ್ಯಾರ್ಥಿ	ಮೇಳೇಕೋಟೆ
೨೦.	ಕುನ್ನಯ್ಯ	೭೦	ಕೂಲಿ	ಮೇಳೇಕೋಟೆ
೨೧.	ಮುದ್ದಯ್ಯ	೭೫	ಕೂಲಿ	ಮೇಳೇಕೋಟೆ
೨೨.	ಗೋವಿಂದಯ್ಯ	೬೦	ಕೂಲಿ	ಮೇಳೇಕೋಟೆ
೨೩.	ಗಣೇಶಯ್ಯ ಕೆ.ಪಿ.	೬೦	ಶಿಕ್ಷಕರು	ಪೇಟೆಬೀದಿ
೨೪.	ಚೆಲುವಯ್ಯ	೭೩	ಕೂಲಿ	ಅಂಬೇಡ್ಕರ್ ನಗರ
೨೫.	ಕಾಳಮ್ಮ	೫೪	ಕೂಲಿ	ಅಂಬೇಡ್ಕರ್ ನಗರ
೨೬.	ಸತೀಶ್	೩೩	ಶಿಕ್ಷಕರು (ಅರ್ಚಕರು)	ಮಳಗಾಳು
೨೭.	ಚಿಕ್ಕೇಗೌಡ	೬೦	ಅರ್ಚಕರು	ಮಳಗಾಳು
೨೮.	ಸಮಿ ಉಲ್ಲಾ	೫೦	ಜವಾನ	ಮುಸ್ಲಿಂ ಬ್ಲಾಕ್
೨೯.	ನಾರಾಯಣ್	೪೭	ಕ್ಷೌರಿಕ ವೃತ್ತಿ	ಮುಸ್ಲಿಂ ಬ್ಲಾಕ್
೩೦.	ಪುಟ್ಟಸ್ವಾಮಿ	೫೦	ಕ್ಷೌರಿಕ ವೃತ್ತಿ	ಕಾಲಕ್‌ನಗರ
೩೧.	ಗೌಲ್ ಸಾಬ್	೫೦	ವ್ಯಾಪಾರ	ನವಾಜಿಬಾರೆ
೩೨.	ಗ್ರಿಗೋರಿ ಮರಿಯಪ್ಪ	೫೦	ಚರ್ಚ್ ಫಾದರ್	ಚರ್ಚ್ ಸ್ಟ್ರೀಟ್ ರೋಡ್
೩೩.	ಮಹದೇವಯ್ಯ	೭೦	ವ್ಯಾಪಾರ	ಟೀಚರ್ಸ್ ಕಾಲೋನಿ
೩೪.	ರಾಜು	೩೩	ಸ್ವಂತ ಉದ್ಯೋಗ	ಟೀಚರ್ಸ್ ಕಾಲೋನಿ
೩೫.	ಮಹೇಶ್	೩೫	ವಿದ್ಯಾಭ್ಯಾಸ	ಟೀಚರ್ಸ್ ಕಾಲೋನಿ
೩೬.	ಅಂತೋಣಿ ರಾಜ್	೪೭	ವಿದ್ಯಾಭ್ಯಾಸ	ಟೀಚರ್ಸ್ ಕಾಲೋನಿ
೩೭.	ನಾಗರಾಜು	೩೦	ಕೂಲಿ	ಬೂದಿಕೇರಿ

❖❖

ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ